ಕಲ್ಲಿನ ಕಾಮಣ್ಣ

ಜಿ. ಪಿ. ರಾಜರತ್ನಂ.

ಕಾಮದೇವನ ಕಾಮಿನಿ

೧

ಹಿಂದೆ ಒಂದಾನೊಂದು ಕಾಲದಲ್ಲಿ ಒಬ್ಬ ರಾಜ, ಒಬ್ಬಳು ರಾಣಿ. ಅವರಿಗೆ ಮೂರು ಮಂದಿ ಹೆಣ್ಣುಮಕ್ಕಳು, ಬಲು ಚೆಲುವೆಯರು. ಏನಾದರೂ ಕಷ್ಟಪಟ್ಟು ಮಾತುಗಳನ್ನು ಹುಡುಕಿ, ಮೊದಲನೆಯ ಇಬ್ಬರನ್ನು ವರ್ಣಿಸಿ ಹೊಗಳುವುದು ಸಾಧ್ಯವಾದರೂ ಆಗಬಹುದಾಗಿತ್ತು; ಆದರೆ ಕೊನೆಯವಳ ಅಪೂರ್ವವಾದ ಸೌಂದರ್ಯವನ್ನು ಹೀಗೆಂದು ಹೇಳಲು ಮಾತಿಗೆ ಬಲ ಸಾಲದಾಗಿತ್ತು.

ಪ್ರತಿದಿನವೂ ಸಾವಿರಾರು ಪ್ರಜೆಗಳು ಆ ಮೂರನೆಯವಳ ದರ್ಶನಕ್ಕಾಗಿ ಕಿಕ್ಕಿರಿದು ಬರುವರು. ವಿದೇಶಗಳಿಂದ ಕೂಡ ಜನ ಬರುವರು. ಸೌಂದರ್ಯದ ಅಧಿದೇವತೆಯಾದ ವೀನಸ್ಸಿಗೆ ಮಾತ್ರ ಸಲ್ಲಿಸುವಂಥ ಪೂಜೆಯನ್ನು ಅವಳಿಗೆ ಸಲ್ಲಿಸುವರು. ತಮ್ಮ ಬಲಗೈಯ ಹೆಬ್ಬೆರಳು ತೋರಬೆರಳುಗಳನ್ನು ಒಟ್ಟಿಗೆ ಜೋಡಿಸಿ, ಅದನ್ನು ತಮ್ಮ ತುಟಿಗೆತ್ತಿ, ಆ ಮಗುವಿನ ಕಡೆಗೆ ಮುತ್ತುಗಳನ್ನು ತೂರುವರು.

ಅವಳ ನಿರುಪಮವಾದ ಸೌಂದರ್ಯದ ವಾರ್ತೆ ಸುತ್ತುಮುತ್ತಿನ ನಗರಗಳಲ್ಲೂ ದೇಶಗಳಲ್ಲೂ ಹರಡಿಕೊಂಡಿತು. ಕೆಲವರೆಂದರು: "ಅಮೃತದೇವತೆಯಾದ ವೀನಸ್ ಹಿಂದೆ ನೀಲವಾದ ಸಮುದ್ರದ ಹಾಲುನೊರೆಯಿಂದ ಜನ್ಮತಾಳಿ ಬಂದು, ಸ್ವರ್ಗಕ್ಕೆ ಹೋಗಿ ಸೇರಿದಳು. ಈಗ ಆ ದೇವತೆಯೇ ಸ್ವರ್ಗದಿಂದ ಇಳಿದು ಬಂದಿದ್ದಾಳೆ, ಜನರಿಗೆ ದರ್ಶನ ಕೊಡುವುದಕ್ಕಾಗಿ ಮಾನವರೂಪವನ್ನು ಧರಿಸಿದ್ದಾಳೆ." ಮತ್ತೆ ಕೆಲವರೆಂದರು: "ಅಲ್ಲ, ಈ ಬಾರಿ ಸೌಂದರ್ಯಾಭಿಮಾನಿದೇವತೆಯನ್ನು ಸಮುದ್ರ ಪ್ರಸವಿಸಿಲ್ಲ, ಭೂಮಿ ಪ್ರಸವಿಸಿದೆ. ಆ ವೀನಸ್ ದೇವತೆಗಾದರೋ ಒಬ್ಬ ಮಗನುಂಟು. ಆದರೆ

ಈಕೆ ಇನ್ನೂ ಕನ್ಯಕೆಯಾದದ್ದರಿಂದ, ವೀನಸ್‌ಗಿಂತ ಈಕೆ ಇನ
ಸೊಗಸು.''

ಮೂರನೆಯ ರಾಜಕುಮಾರಿಯ ಕೀರ್ತಿ ಹೀಗೆ ದೂರದೂರದ ದೇ
ವಿದೇಶಗಳಿಗೆಲ್ಲಾ ಕರ್ಣಾಕರ್ಣಿಯಾಗಿ ಬೆಳೆದುಕೊಂಡು ಹೋಯಿತ
ತಮ್ಮ ಕಾಲದಲ್ಲಿ ಕೆಳಗಿಳಿದು ಬಂದ ಆ ಮಹಾದ್ಭುತ ಸೌಂದರ್ಯದ ರಾಶಿಯನ
ಕಂಡು ಕಣ್ಣುಗಳನ್ನು ಸಾರ್ಥಕಮಾಡಿಕೊಳ್ಳಬೇಕೆಂದು ಎಷ್ಟೋ ಜ
ಅದಕ್ಕಾಗಿ ಯಾತ್ರೆಮಾಡಿದರು. ನೆಲದ ಮೇಲೆ ನಡೆದುಬಂದರು, ಸೀರ
ಮೇಲೆ ಹಡಗುಗಳಲ್ಲಿ ಬಂದರು.

ಅದರ ಪರಿಣಾಮವಾಗಿ ವೀನಸ್ ದೇವತೆಯ ವಿಗ್ರಹವಿದ್ದ ದೇವಾಲಯ
ಗಳಲ್ಲೆಲ್ಲ ಆಕೆಯ ಪೂಜೆ ನಿಂತುಹೋಯಿತು. ಯಾವ ಸ್ಥಳದಲ್ಲಿ
ದೇವತೆ ತಾನು ಹುಟ್ಟಿದ ಸಮುದ್ರವನ್ನು ಬಿಟ್ಟು ಮೊದಲು ನೆಲದ ಮೇ
ಕಾಲಿಟ್ಟಳೋ ಆ ಪವಿತ್ರಸ್ಥಳವನ್ನೂ ಜನ ಮರೆತರು. ವೀನಸ್ಸಿನ ಉತ್ಸ
ಗಳನ್ನು ಅಲಕ್ಷ್ಯಮಾಡಿದರು, ಅರ್ಚನೆಗಳನ್ನು ಬಿಟ್ಟುಬಿಟ್ಟರು, ವಿಗ್ರಹ
ಸುತ್ತಿನ ಒರಗುದಿಂಬುಗಳು ನೆಲದ ಮೇಲೆಲ್ಲಾ ಚೆಲ್ಲಿಬಿದ್ದುವು, ವಿಗ್ರಹಗಳಿ
ಎಂದಿನ ಮಾಲೆಗಳು ತಪ್ಪಿಹೋದುವು, ದೇವತೆಯ ಬಲಿಪೀಠಗಳನ್ನು
ಗುಡಿಸುವವರಿಲ್ಲದೆ ಒಪ್ಪಿಸಿದ ಹಿಂದಿನ ಬಲಿಗಳು ಕೊಳೆತು ನಾರುತ್ತಿದ್ದುವು
ದೇವಾಲಯಗಳನ್ನು ನೋಡಿಕೊಳ್ಳುವವರಿಲ್ಲದೆ ಎಲ್ಲವೂ ಹಾಳ
ಹಾಳಾಯಿತು.

ರಾಜಕುಮಾರಿ ಬೆಳಗಿನ ಹೊತ್ತು ವಿಹಾರಕ್ಕಾಗಿ ನಗರದ ಬೀದಿಗಳ
ಹೊರಟರೆ, ಊರಿನವರೆಲ್ಲ ಆಕೆಗೆ ಬಲಿಗಳನ್ನು ಅರ್ಪಿಸುವರು, ಆಕೆಯ ಹೆಸ
ನಲ್ಲಿ ಹಬ್ಬ ಹರಿದಿನಗಳನ್ನು ಆಚರಿಸುವರು, ಆಕೆ ನಡೆಯುವ ಮಾರ್ಗದಲ್ಲಿ
ಪುಷ್ಪಗಳನ್ನು ಕೆದರುವರು, ವೀನಸ್ ದೇವತೆಗೆ ಯಾವ ಯಾವ ಬಿರುದ
ಗಳುಂಟೋ ಅವನ್ನೆಲ್ಲಾ ಆಕೆಗೆ ಅನ್ವಯಿಸಿ ಕರೆದು ಗುಲಾಬಿ ಹೂವಿನ ಹಾ
ಗಳನ್ನು ಆಕೆಗೆ ಸಮರ್ಪಿಸಿ ವರಗಳನ್ನು ಬೇಡಿಕೊಳ್ಳುವರು.

ಹೀಗೆ, ದೇವತೆಗೆ ಸಲ್ಲಬೇಕಾದ ಸತ್ಕಾರಗಳೆಲ್ಲವೂ ಒಬ್ಬ ಸಾಮಾನ್ಯ
ಮಾನವಿಗೆ ಸಲ್ಲುತ್ತಿರುವುದನ್ನು ಕಂಡು, ನಿಜವಾದ ವೀನಸ್ಸಿಗೆ ಸಹಜವಾಗಿಯೇ

ಕೋಪಬಂತು. ತನ್ನ ಕೋಪವನ್ನು ಅಡಗಿಸಿಕೊಳ್ಳಲಾರದೆ ಆಕೆ "ಇರಲಿ! ಇರಲಿ!" ಎಂದು ತಲೆಯಾಡಿಸಿಕೊಳ್ಳುತ್ತ, ತನಗೆ ತಾನೇ ಹೀಗೆ ಹೇಳಿಕೊಂಡಳು :

"ನಿಜವಾಗಿಯೂ, ನನಗೆ ಇಂಥ ದುರವಸ್ಥೆ ಬರುವುದೆಂದು ಯಾರು ತಾನೆ ತಿಳಿದಿದ್ದರು? ನನಗೆ, ಜಗತ್ತಿನ ಸೌಂದರ್ಯಾಧಿದೇವತೆಯಾದ ವೀನಸ್ಸಿಗೆ, ತತ್ತ್ವಜ್ಞರು ಯಾರನ್ನು 'ಜಗದ್ಧಾತ್ರಿ' ಎಂದು ಕೊಂಡಾಡುವರೋ ಆ ನನಗೆ, ಪಂಚಭೂತಗಳಿಗೂ ಮಾತೃಪ್ರಾಯಳಾದ ನನಗೆ ಈ ಸ್ಥಿತಿ ಬರಬಹುದೆ? ಓಹೋ, ಹಾಗಾದರೆ, ನನ್ನ ಈ ಸಂರಾಜ್ಞೀಪದವಿಯನ್ನು ನಾನು ಈ ಒಬ್ಬ ಸಾಮಾನ್ಯ ಮರ್ತ್ಯರ ಹುಡುಗಿಗೆ ಹಂಚಿಕೊಡಬೇಕಲ್ಲವೆ! ಸ್ವರ್ಗಲೋಕದಲ್ಲಿ ಎಲ್ಲರ ಮನ್ನಣೆಗೂ ಪಾತ್ರವಾಗಿರುವ ನನ್ನ ದಿವ್ಯವಾದ ಹೆಸರು ಈ ಹುಡುಗಿಯ ದೆಸೆಯಿಂದಾಗಿ ಅವರಿವರ ನಾಲಗೆಯ ಮೇಲೆ ಸ್ವೇಚ್ಛೆಯಾಗಿ ಮಲಿನವಾಗುತ್ತಿರುವುದನ್ನು ನೋಡಿಕೊಂಡು ತೆಪ್ಪಗಿರುವುದು ನನ್ನಿಂದ ಆಗದು. ಈ ಹೆಣ್ಣನ್ನು ವೀನಸ್ಸೆಂದು ಕರೆದು ಮರ್ಯಾದೆ ಮಾಡುವುದರಿಂದ ಪರೋಕ್ಷವಾಗಿಯಾದರೂ ನನಗೆ ಮನ್ನಣೆ ಸಂದಿತೆಂದು ನಾನು ತೃಪ್ತಿಪಡಬೇಕೇನು? ಹಿಂದೆ, ದೇವಲೋಕದ ಇಬ್ಬರು ಮಹಾದೇವಿಯರು ನನ್ನೊಡನೆ ಸ್ಪರ್ಧಿಸಿ ನಿಂತಾಗ, ಆ ಪ್ಯಾರಿಸ್ ಎಂಬುವನು ನನ್ನ ಪರವಾಗಿ ತೀರ್ಪುಕೊಟ್ಟಾಗ, ಸಾಕ್ಷಾತ್ ಜ್ಯೂಪಿಟರ್ ಮಹಾದೇವನೇ ಆ ತೀರ್ಪನ್ನು ಮೆಚ್ಚಿಕೊಂಡನಲ್ಲವೆ? ಬರಿಯ ಮೆಚ್ಚಿಕೊಂಡದ್ದು ಮಾತ್ರವಲ್ಲ, ಸ್ಪರ್ಧೆಯಲ್ಲಿ ಬಹುಮಾನವಾಗಿ ಬರಬೇಕಾಗಿದ್ದ ಸೌಂದರ್ಯದ ಸೇಬಿನಹಣ್ಣನ್ನು ನನಗೇ ಕೊಡಲಿಲ್ಲವೆ? ಛೆ! ಇನ್ನು ಈ ಅಭಾಸವನ್ನು ಸಹಿಸಿಕೊಂಡು ಇರುವುದು ನನ್ನಿಂದ ಆಗದು. ಈ ಹುಡುಗಿ ಯಾರೇ ಆಗಲಿ, ಹೇಗೇ ಇರಲಿ, ಇವಳು ನನ್ನ ಸ್ಥಾನವನ್ನು ಆಕ್ರಮಿಸುವುದು ಎಂದರೇನು? ಇದು ಶುದ್ಧ ತಪ್ಪು. ತನಗೇಕೆ ಈ ಸೌಂದರ್ಯ ಬಂದಿತು, ಎಂದು ಅವಳೇ ಅಸಹ್ಯಪಡುವ ಹಾಗೆ ಮಾಡದಿದ್ದರೆ, ನನ್ನ ಹೆಸರು ವೀನಸ್ ಅಲ್ಲವೇ ಅಲ್ಲ."

ಆ ಕೂಡಲೆ ವೀನಸ್ ತನ್ನ ಮಗನನ್ನು ಕರೆದಳು. ಆತನಿಗೆ ಈರಾಸ್ ಅಥವಾ ಕ್ಯುಪಿಡ್ ಎಂದು ಹೆಸರು. ಬಹು ತುಂಟ ಹುಡುಗ. ಬೆನ್ನಮೇಲೆ ಎರಡು ಮುದ್ದಾದ ರೆಕ್ಕೆ. ಸಭ್ಯವಾದ ಆಚಾರಗಳಿಗೂ ನಡತೆಗಳಿಗೂ ಅವನಿಗೂ ಎಂದೆಂದಿಗೂ ದೂರ. ಒಂದು ಕೈಯಲ್ಲಿ ಪಂಜು, ಒಂದು ಕೈಯಲ್ಲಿ ಬಿಲ್ಲು ಬಾಣ, ಇವನ್ನು ಹಿಡಿದು ಮನೆಯಿಂದ ಮನೆಗೆ ಅಲೆಯುತ್ತ, ಸಭ್ಯರ ಸಂಸಾರಗಳನ್ನು ಮುರಿಯುತ್ತಾ ರಾತ್ರಿಯೆಲ್ಲಾ ತಿರುಗುತ್ತಿರುವುದೆಂದರೆ ಅವನಿಗೆ ತುಂಬ ಇಷ್ಟ. ಆದರೆ, ಅದೇನೋ, ಅವನು ಇಷ್ಟೆಲ್ಲಾ ಹಾನಿಯನ್ನು ಮಾಡುವನಾದರೂ ಅವನಿಗೆ ಎಂದೂ ಶಿಕ್ಷೆಯಾದದ್ದಿಲ್ಲ.

ಮೊದಲೇ ಅವನು ತುಂಟ ಎಂಬುದನ್ನು ತಿಳಿದಿದ್ದರೂ, ವೀನಸ್ ಅವನ ತುಂಟಾಟವನ್ನು ಇನ್ನಷ್ಟು ಅಧಿಕಮಾಡುವುದಕ್ಕಾಗಿ ಅವನನ್ನು ಆ ರಾಜಕುಮಾರಿ ಇದ್ದ ಊರಿಗೆ ಕರೆದುತಂದಳು.—ಎಂದ ಹಾಗೆ, ಹೇಳುವುದು ಮರೆತಿದ್ದೆ. ಆ ರಾಜಕುಮಾರಿಯ ಹೆಸರು, ಸೈಕೆ ಎಂದು.— ಅಲ್ಲಿ ಅವನಿಗೆ ಆ ಹೊಸದಾಗಿ ಹುಟ್ಟಿಕೊಂಡ ಅರ್ಚನಾವಿಧಾನವನ್ನು ವಿವರಿಸಿದಳು. ಕ್ರೋಧದಿಂದ ಬುಸುಗುಡುತ್ತ ಹೇಳಿದಳು : " ನಿನಗೆ ದಮ್ಮಯ್ಯ ಎನ್ನುತ್ತೇನೆ, ಮಗು. ನಿನಗೆ ನಿನ್ನ ತಾಯಿಯ ಮೇಲೆ ಏನಾದರೂ ಪ್ರೀತಿಯಿರುವುದಾದರೆ ನಿನ್ನ ಈ ಬಾಣಗಳನ್ನೂ ಈ ಬೆಳಕಿನ ಪಂಜನ್ನೂ ಈ ಉದ್ಧಟಕನ್ಯೆಯ ಮೇಲೆ ಪ್ರಯೋಗಿಸು. ನನ್ನನ್ನು ಕುರಿತು ನಿನಗೇನಾದರೂ ಗೌರವ ಇರುವುದಾದರೆ, ನನ್ನ ಪರವಾಗಿ ಈ ಹುಡುಗಿಯ ಮೇಲೆ ಪೂರ್ಣವಾದ ಪ್ರತೀಕಾರವನ್ನು ತೀರಿಸು. ಈ ರಾಜಕುಮಾರಿಯು ಯಾವನಾದರೂ ಕುಲಹೀನನ ಮೇಲೆ, ದರಿದ್ರನ ಮೇಲೆ, ಕುರೂಪಿಯ ಮೇಲೆ, ಮಾನಹೀನನ ಮೇಲೆ, ಜೀವಭೀತನ ಮೇಲೆ ಮೋಹಗೊಳ್ಳುವಂತೆ ಮಾಡು, ಮಗುವೆ "

ವೀನಸ್ ಮಗನನ್ನು ಹೀಗೆಲ್ಲಾ ಬೇಡಿಕೊಂಡು, ಆತನನ್ನು ವಾತ್ಸಲ್ಯದಿಂದ ಮುದ್ದಾಡಿ, ಸಮೀಪದಲ್ಲಿದ್ದ ಸಮುದ್ರತೀರಕ್ಕೆ ಹೋದಳು. ತನ್ನ ಕಡೆಗೆ ನೊರೆಗರೆಯುತ್ತಾ ಬಂದ ಅಲೆಗಳ ತುದಿಗಳನ್ನು ಮೃದುವಾಗಿ ತುಳಿಯುತ್ತ ಓಡಿದಳು. ಅವಳ ಗುಲಾಬಿಬಣ್ಣದ ಪಾದಗಳ ಸ್ಪರ್ಶದಿಂದ ಸಮುದ್ರ

ಡನೆ ಶಾಂತವಾಯಿತು. ಆಕೆಯ ಸಂಕಲ್ಪಮಾತ್ರದಿಂದಲೇ, ಆಕೆ ತಮ್ಮನ್ನು ಸರು ಹಿಡಿದು ಕರೆದಳೋ ಎಂಬ ಹಾಗೆ, ಸಮುದ್ರದ ಒಳಗಿನಿಂದ ದೇವ ೇವಿಯರು ಹೊರಗೆದ್ದು ಬಂದರು. ಜಲದೇವರುಗಳು, ಜಲದೇವಿಯರುಗಳು ಾತ್ರವಲ್ಲದೆ ಜಲಾಧಿಪತಿಯಾದ ನೆಪ್‌ಚ್ಯೂನ್ ತಾನೇ ತನ್ನ ನೀಲಿಯ ಡ್ಡವನ್ನು ಸೀವುತ್ತ ಬಂದನು. ಕೆಲವರು ಶಂಖಗಳನ್ನು ಊದುತ್ತ ಬಂದರು, ಲವರು ವೀನಸ್ಸಿಗೆ ಬಿಸಲಿನ ತಾಪ ತಟ್ಟದಿರಲಿ ಎಂದು ರೇಶಿಮೆಯ ಕೊಡೆ ಡಿದುಬಂದರು. ಕೆಲವರು ವೀನಸ್ ತನ್ನ ಸೌಂದರ್ಯವನ್ನು ನೋಡಿಕೊಳ್ಳಲಿ ಂದು ಕನ್ನಡಿ ಹಿಡಿದುಬಂದರು. ಇನ್ನು ಕೆಲವರು ವೀನಸ್ಸಿಗಾಗಿ ಸಿದ್ಧವಾಗಿ ಂದ ರಥಕ್ಕೆ ತಮ್ಮನ್ನೇ ತಾವು ಹೂಡಿಕೊಂಡರು.

೨

ಆದರೆ, ಇತ್ತ, ಸೈಕೆಗಾದರೋ ಜನರು ತನಗೆ ಒಪ್ಪಿಸುತ್ತಿದ್ದ ಗೌರವ ಂದ ತೃಪ್ತಿಯಾಗಲಿಲ್ಲ. ಎಲ್ಲರೂ ಆಕೆಯನ್ನು ಕುರಿತುನೋಡುವವರೇ, ಲ್ಲರೂ ಆಕೆಯನ್ನು ಸ್ತುತಿಮಾಡುವವರೇ; ಯಾವ ದೊರೆಗಾಗಲಿ, ಯಾವ ಾಜಕುಮಾರನಿಗಾಗಲಿ, ಯಾವ ಸಾಮಾನ್ಯ ಪ್ರಜೆಗಾಗಲಿ ಆಕೆಯನ್ನು ್ರೀತಿಯಿಂದ ಮಾತನಾಡಿಸುವ ಧೈರ್ಯವಿರಲಿಲ್ಲ. ಯಾವುದಾದರೂ ಒಂದು ರಮೋತ್ಕೃಷ್ಟವಾದ ಶಿಲ್ಪವನ್ನು ಕಂಡರೆ, ಅದನ್ನು ಮುಟ್ಟಲು ಧೈರ್ಯವಿಲ್ಲದೆ ೀಗೆ ದೂರದಲ್ಲಿಯೇ ನಿಂತು ಮೆಚ್ಚಿಕೊಳ್ಳುವರೋ ಹಾಗೆ, ಎಲ್ಲರೂ ಆಕೆಯ ೌಂದರ್ಯವನ್ನು ಕಂಡು ಆಶ್ಚರ್ಯಪಡುವವರೇ. ಅವಳಿಗಿಂತ ಅವಳ ಕ್ಕಂದಿರೇ ವಾಸಿ: ತಂಗಿಯಷ್ಟು ಸೌಂದರ್ಯವಿರದಿದ್ದರೂ, ತಂಗಿಯಷ್ಟು ೀರ್ತಿ ಬಾರದಿದ್ದರೂ, ಇಬ್ಬರು ರಾಜರು ತಾವಾಗಿಯೆ ಬಂದು, ಕೇಳಿಕೊಂಡು ವರ ಪಾಣಿಗ್ರಹಣಮಾಡಿದ್ದರು. ಸೈಕೆ ಮಾತ್ರ ಇನ್ನೂ ಒಂಟಿಯಾಗಿಯೇ ದ್ದಳು. ದುಃಖಪಡುತ್ತ ದುಮ್ಮಾನದಿಂದ ಮನೆಯಲ್ಲಿಯೇ ಇದ್ದು, ಮಿಕ್ಕವ ಲ್ಲರಿಗೂ ಅಚ್ಚುಮೆಚ್ಚಾಗಿದ್ದ ತನ್ನ ಸೌಂದರ್ಯವನ್ನು ತಾನೇ ದ್ವೇಷಿಸ ೊಡಗಿದಳು.

ತನ್ನ ಪ್ರಜೆಗಳು ತನ್ನ ಮಗಳನ್ನು ಹೀಗೆ ದೇವತೆಗೆ ಸಮನಾ
ಸಂಭಾವಿಸುವುದನ್ನು ಕಂಡು, ದೇವತೆಗಳಿಗೆ ತನ್ನ ಮೇಲೆ ಏನು ಕೋ
ಬಂದೀತೋ ಎಂದು ಸೈಕೆಯ ತಂದೆ ಹೆದರಿದನು. ಅದಕ್ಕಾಗಿ ಪ್ರ
ಕೇಳೋಣವೆಂದು ಮಿಲೀಟಸ್ ನಗರದಲ್ಲಿದ್ದ ಅಪಾಲೋವಿನ ದೇವಸ್ಥಾನ
ಹೋದನು. ಅಲ್ಲಿ ಎಂದಿನ ಪೂಜೆಪುರಸ್ಕಾರಗಳು ಆದಮೇಲೆ 'ನನ
ಮೂರನೇ ಮಗಳನ್ನು ಯಾರೂ ಒಲ್ಲರಲ್ಲ. ಅವಳಿಗೆ ಗಂಡನನ್ನು ಎ
ಹುಡುಕಲಿ?' ಎಂದು ಪ್ರಶ್ನೆ ಕೇಳಿದನು. ಅಪಾಲೋದೇವತೆಯು ತನ
ಅರ್ಚಕನ ಮೂಲಕ ಪದ್ಯರೂಪದಲ್ಲಿ ಹೀಗೆಂದು ಉತ್ತರವನ್ನು ಅಪ್ಪ
ಕೊಡಿಸಿದನು.

"ಬೆಟ್ಟದ ನೆತ್ತಿಯ ಬಂಡೆಯ ತುದಿಗೆ
ಮದುಮಗಳು—ಹೊಸ ಮದುವಣಗಿತ್ತಿ;
ಮಾನವ ಜಾತಿಯ ಮದುಮಗನಿಲ್ಲ—
ತುಂಟೋ ತುಂಟು, ಹರಿವುದು, ಕ್ರೂರ,
ಕತ್ತಿ, ಬೆಂಕಿ, ಗಾಳಿಯ ಹಾದಿ;
ದೇವತೆಗಳಿಗೂ ಗಡಗಡ ನಡುಕ;
ಜ್ಯೂಪಿಟರನಿಗೇ ಕಂಡರೆ ಭೀತಿ;
ತ್ರಾಣವೆಲ್ಲ ತಾ ನಿತ್ರಾಣಗೈಯುವ."

ದೊರೆ, ಅದುವರೆಗೆ ಸುಖವಾಗಿದ್ದವನು, ದೇವತೆಯ ಉತ್ತರವನ್ನು
ಕೇಳಿದಮೇಲೆ ತುಂಬ ಕುಗ್ಗಿಹೋಗಿ, ಮನೆಗೆ ಬಂದನು. ಎಂಥ ಅನುಕೂ
ವಲ್ಲದ ಉತ್ತರ ಬಂದಿತೆಂಬುದನ್ನು ರಾಣಿಗೆ ಹೇಳಿದನು. ಮಗಳ ಗ
ಹೀಗಾಯಿತಲ್ಲಾ ಎಂದು ಅವರಿಬ್ಬರೂ ಬಹುದಿವಸ ತಲೆಯ ಮೇಲೆ ಕೈಯಿಟ್ಟು
ಕೊಂಡು ಕುಳಿತರು. ಆದರೆ, ಎಷ್ಟು ಗೋಳಾಡಿದರೆ ತಾನೆ ಏನು? ದೈವ
ವಾಣಿಯನ್ನು ನಡಸಲೇಬೇಕು, ಅದನ್ನು ಪಾಲಿಸಲೇಬೇಕು.

ಸೈಕೆಯ ಭಯಂಕರವಾದ ಮದುವೆಗಾಗಿ ಮೆರೆವಣಿಗೆ ಸಿದ್ಧವಾಗು
ಹೊತ್ತು ಬಂತು. ಪ್ರಜ್ವಲಿಸುತ್ತ ಉರಿಯುವ ಪಂಜುಗಳಿಗೆ ಬದಲಾಗಿ

ಯನ್ನು ಕೆದರುತ್ತಾ ಹೊಗೆಯನ್ನು ಕಾರುವ ಪಂಜುಗಳನ್ನು ಹಚ್ಚಿಸಿದರು; ರುವೆಯ ಉಲ್ಲಾಸದ ವಾದ್ಯಗಳಿಗೆ ಬದಲಾಗಿ ಗೋಳುಕರೆಯುವ ಹಾಡು ನ್ನು ಹಾಡಿದರು ; ಸತ್ತವರಿಗಾಗಿ ಅಪಸ್ವರದಲ್ಲಿ ಅರಚುವ ಹಾಗೆ ಮಂಗಲ ನ್ನು ಹೇಳಿದರು. ಪಾಪ, ಮದುವಣಗಿತ್ತಿ ತನ್ನ ಮೇಲುಮುಸುಕಿನ ಗಿನಿಂದ ಕಣ್ಣಿನ ನೀರನ್ನು ಒರಸಿಕೊಂಡಳು.

ಊರಿಗೆ ಊರೇ ಬೀದಿಗೆ ಬಂತು. ರಾಜನ ಮನೆಗೆ ಇಂಥ ದುಃಖ ತಲ್ಲಾ ಎಂದು ಎಲ್ಲರಿಗೂ ಕರುಳು ಕುದಿಯಿತು. ಆ ದಿನವನ್ನು ಸಾರ್ವ ಕ ಸಂತಾಪದ ದಿವಸವೆಂದು ಡಂಗುರ ಹಾಕಿದರು. ಆದರೆ, ಏನು ತಾನೆ ಡಲಾದೀತು ? ಅಪಾಲೋದೇವತೆಯ ಆಜ್ಞೆಯನ್ನು ನಡಸದೆ ತೀರದು. ರಿಂದ ಹೆಣ್ಣನ್ನು ಕಳುಹಿಸಿಕೊಡುವ ಮಂಗಲಕಾರ್ಯವನ್ನು ಮಹಾದುಃಖ ದ ನೆರವೇರಿಸಿ, ಮೆರೆವಣಿಗೆ ಹೊರಟಿತು. ಸಮಸ್ತ ನಗರವೂ ಹಿಂಬಾ ತು. ಮುಂದೆ ಎಲ್ಲರಿಗಿಂತ ಮೊದಲಲ್ಲಿ, ಸೈಕೆ, ಮದುವಣಿಗನ ಮನೆಗೆ ೀಗುವಂತಲ್ಲ, ಸತ್ತು ಶ್ಮಶಾನಕ್ಕೆ ಹೋಗುವವಳ ಹಾಗೆ, ಹೋದಳು.

ಅವಳ ತಾಯಿತಂದೆಗಂತೂ ಭೀತಿಯಿಂದ ದುಃಖದಿಂದ ಜೀವವೇ ೀಗಿತ್ತು. ಆದಷ್ಟು ಕಾಲ ಮೆರೆವಣಿಗೆಯನ್ನು ತಡಮಾಡೋಣವೆಂದು ರ ಮನಸ್ಸು. ಆದರೆ ಸೈಕೆ ತಾನೇ ಅವರಿಗೆ ಸಮಾಧಾನ ಹೇಳಿದಳು.

"ಅಪ್ಪಾ, ಅಮ್ಮಾ, ಸುಮ್ಮನೆ ಅನಾವಶ್ಯಕವಾಗಿ ಏಕೆ ದುಃಖವನ್ನು ಗೆ ಹೆಚ್ಚಿಸಿಕೊಳ್ಳುತ್ತೀರಿ ? ವಯಸ್ಸಾದವರಿಗೆ ನಿಮಗೆ ಉಚಿತ ಯಾವುದು ಬುದು ತಿಳಿದಿರಬೇಕು. ನನಗೆ ಬಹು ಪ್ರೀತಿಪಾತ್ರವಾದ ಈ ನಿಮ್ಮ ಡು ಸುಂದರ ಮುಖಗಳನ್ನು, ಹೀಗೆ ಅತ್ತು ಅತ್ತು, ಏಕೆ ಕೆಡಿಸಿ ಳ್ಳುತ್ತೀರಿ ? ಕಣ್ಣುಗಳನ್ನು ಹೀಗೆ ಹೊಸಗಬೇಡಿ, ತಲೆಗೂದಲನ್ನು ಗೆ ಹಿಡಿಹಿಡಿ ಕಿತ್ತುಕೊಳ್ಳಬೇಡಿ. ಹೀಗೇಕೆ ಎದೆ ಎದೆ ಬಡಿದುಕೊಂಡು ನ್ನು ಕೊರಗಿಸುವಿರಿ ? ನನ್ನ ಸೌಂದರ್ಯದಿಂದ ನಿಮಗೆ ಎಂಥ ಶಿಕ್ಷೆ ಾಯಿತೆಂಬುದು ಇಷ್ಟು ತಡವಾಗಿ ತಿಳಿದುಬಂದಿತಲ್ಲ. ಮಿತಿಮೀರಿ ನನಗೆ ರ್ಪಿಸಿದ ಗೌರವಗಳ ಪರಿಣಾಮವಾಗಿ ದೇವತೆಗಳ ಈರ್ಷ್ಯೆ ಹೇಗೆ ನನ್ನಕಡೆ ಂಗಿತು ಎಂಬುದನ್ನು ಈಗ ಕಂಡೆನಲ್ಲ ಜಗತ್ತಿನ ನಾನಾ ಭಾಗಗಳಿಂದ

ಜನರು ಬಂದು, ನನ್ನನ್ನು ಅಭಿನವ ವೀನಸ್ ಎಂದು ಕೊಂಡಾಡಿ ಕೀರ್ತ
ಮಾಡಿದಾಗಲೇ ನೀವು ನನಗಾಗಿ ಗೋಳಾಡಬೇಕಾಗಿತ್ತು. ಈಗ ಅತ್ತ
ಏನು ಪ್ರಯೋಜನ? ಆ ದೇವತೆಯ ಹೆಸರನ್ನು ಹೀಗೆ ದೂಷಣೆ ಮಾ
ನನಗೆ ಪ್ರಯೋಗಿಸಿದ್ದರಿಂದಲೇ ಇಷ್ಟೆಲ್ಲಾ ದುಃಸ್ಥಿತಿ ನಮಗೆ ಪ್ರಾಪ್ತವಾ
ತೆಂದು ನನಗೆ ಈಗ ಬೆಳ್ಳಂಬೆಳಕಾಗಿದೆ. ಆದ್ದರಿಂದ, ಇವಕ್ಕೆ ಪ್ರಾಯಶ್ಚಿತ್ತ
ಶಿಕ್ಷೆಯ ರೂಪದಲ್ಲಿ ನನ್ನನ್ನು ಆ ದೇವವಾಣಿ ಹೇಳಿದ ಕೋಡುಗಲ್ಲಿಗೆ ಒಯ್ದು
ತೊರೆದುಬಿಡಿರಿ. ಎಂದಿಗೆ ರಾತ್ರಿಯಾದೀತೋ, ಎಂದಿಗೆ ನನ್ನ ಮದುವಣಿ
ಬಂದಾನೋ, ಎಂದು ನಾನು ನಿರೀಕ್ಷಿಸುತ್ತಿದ್ದೇನೆ. ಇಷ್ಟು ಏಕೆ ತಡಮಾ
ಬೇಕು? ಆತನಿಂದ ನಾನು ಏಕೆ ಹಿಂಜರಿಯಬೇಕು? ಆತನು ಸಮ
ಜಗತ್ತನ್ನೇ ನಾಶ ಮಾಡತಕ್ಕವನು ಆದರೂ ನನ್ನ ಮದುವಣಿ
ನಲ್ಲವೆ?"

ಸೈಕೆ ಧೈರ್ಯದಿಂದ ಸ್ಥಿರವಾಗಿ ಹೆಜ್ಜೆಯಿಡುತ್ತ ಮುಂದೆ ಹೋದಳು
ಜನರ ಅಸಾಧ್ಯವಾದ ಗುಂಪು ಆಕೆಯ ಹಿಂದೆ, ಬೆಟ್ಟದ ತುದಿಯ ಬಂಡೆಯ
ವರೆಗೂ ಹೋಯಿತು. ಅಲ್ಲಿ ಅವಳನ್ನು ಬಿಟ್ಟು, ಹಿಂದಕ್ಕೆ ಬಂದಿತು
ಎಲ್ಲರೂ ಕುಗ್ಗಿಹೋಗಿ, ತಮ್ಮ ತಮ್ಮ ಮನೆಗಳಿಗೆ ಹಿಂದಿರುಗಿದರು. ತಮ
ಕಣ್ಣೀರಿನಿಂದ ಕೈಯ ಪಂಜುಗಳನ್ನು ನಂದಿಸಿ, ಆಚೆಗೆ ಎಸೆದರು. ಸೈಕೆಯ
ತಾಯಿತಂದೆಯಂತೂ ಎದೆಯೊಡೆದು, ಅರಮನೆಯಲ್ಲಿ ಬಾಗಿಲುಗಳನ್ನು
ಮುಚ್ಚಿ, ಕಿಟಕಿಗಳಿಗೆ ತೆರೆಯನ್ನು ಎಳೆದು, ಕೊರಗುತ್ತ ಕುಳಿತರು.

೩

ಅಲ್ಲಿ, ಆ ಬೆಟ್ಟದ ತುದಿಯ ಮೇಲೆ, ಸೈಕೆ ತಾನು ಒಬ್ಬೊಂಟಿ
ಅಳುತ್ತಾ ನಡುಗುತ್ತಾ ಕುಳಿತಿದ್ದಾಳೆ. ಆಗ ಪಶ್ಚಿಮದ ದಿಕ್ಕಿನಿಂದ ಒಂದು
ಅನುಕೂಲವಾದ ಗಾಳಿ ಇದ್ದಕ್ಕಿದ್ದಂತೆ ಮೃದುವಾಗಿ ಬೀಸತೊಡಗಿತು. ಆಕೆಯ
ಸುತ್ತಲೂ ಆಡಿತು; ಉಟ್ಟ ಲಂಗ, ಹೊದ್ದ ಹೊದಿಕೆ, ಇಕ್ಕಿದ ಮುಸುಕು
ಇವುಗಳೊಳಗೆ ಹೊಕ್ಕು, ಆಕೆಯನ್ನು ಮೃದುವಾಗಿ ನೆಲದಿಂದ ಎತ್ತಿತು;

ಟ್ಟದ ಬುಡದಲ್ಲಿದ್ದ ಕಣಿವೆಗೆ ಅಷ್ಟೇ ಮೃದುವಾಗಿ ಹೊತ್ತುತಂದಿತು ; ಅಲ್ಲಿನ ೃದುಲತಮವಾದ ಹಸಿರು ಹುಲ್ಲಿನ ಹಾಸಿಗೆಯ ಮೇಲೆ ಹೂವಿನಿಂದ ನಕ್ಷತ್ರ ಗಳ ಅಲಂಕಾರ ಮಾಡಿದ್ದ ಕಡೆ ಆಕೆಯನ್ನು ಇಳಿಸಿ ಮಲಗಿಸಿತು.

ಸ್ಥಳ ಅಷ್ಟು ತಂಪಾಗಿತ್ತು, ಅಷ್ಟು ಅನುಕೂಲವಾಗಿತ್ತು – ಮಲಗಿ ೊಡನೆ ಸೈಕೆಯ ಮನಸ್ಸಿನ ಕಳವಳ ಹೋಗಿ, ಅವಳು ಶಾಂತಳಾದಳು. ಳುವು ನಿಂತಿತು, ನಿದ್ರೆ ಹತ್ತಿತು.

ಎಚ್ಚರವಾದಾಗ, ಹೊಸ ಚೈತನ್ಯ ಬಂದಿತ್ತು. ಆಗ ಇನ್ನೂ ಹಗಲು ೆಳಕು. ಸೈಕೆ ಎದ್ದು, ಸಮಾಧಾನದಿಂದ ಸುತ್ತ ತಿರುಗಾಡಿದಳು. ಬಳಿಯಲ್ಲೇ ಂದು ವನ, ಅದರಲ್ಲಿ ಎತ್ತರದ ವೃಕ್ಷಗಳು, ನಡುವೆ ಒಂದು ತಿಳಿಯ ಹೊಳೆ ರಿಯುತ್ತಿತ್ತು. ಆ ಹೊಳೆಯನ್ನು ಅನುಸರಿಸಿ ಹೋದಳು. ವನದ ನಡುವೆ ಂದು ಅರಮನೆ ಸಿಕ್ಕಿತು. ಅದು ಎಷ್ಟು ಅದ್ಭುತವಾಗಿತ್ತೆಂದರೆ — ದೇವತೆ ಗಳಿಗಲ್ಲದೆ ಬೇರೆ ಯಾರಿಗೂ ಇದರ ರಚನೆ ಸಾಧ್ಯವಿಲ್ಲ ಎಂಬ ಹಾಗಿತ್ತು. ಅದರ ಬಾಗಿಲ ಬಳಿ ಬಂದಾಗಲಂತೂ, 'ಇಲ್ಲಿ ಖಂಡಿತವಾಗಿಯೂ ಯಾರೋ ೇವತೆಯೇ ವಾಸಿಸುತ್ತಿರಬೇಕು' ಎಂದು ಅವಳಿಗೆ ಎನ್ನಿಸಿತು.

ಒಳಗೆ ಬಂದು, ತಲೆಯೆತ್ತಿ ಮೇಲುಛಾವಣಿಯನ್ನು ಗಮನಿಸಿದಳು. ೊಗಸಾದ ಹೊಂಬಣ್ಣದ ಮರ, ದಂತದ ಕೆತ್ತನೆಯ ಕೆಲಸ, ಚಿನ್ನದ ಕಂಬಗಳ ಮೇಲೆ ನಿಂತಿತ್ತು. ಗೋಡೆಗಳಿಗೆಲ್ಲ ಬೆಳ್ಳಿಯ ತಗಡು ಹಾಕಿದ್ದರು, ಅದರಲ್ಲಿ ಜಗತ್ತಿನ ಎಲ್ಲಾ ಪ್ರಾಣಿಗಳ ರೂಪನ್ನೂ ಉಬ್ಬಿಸಿ ತೋರಿಸಿದ್ದರು. ಅವು ಎಲ್ಲವೂ ಸೈಕೆಯನ್ನು ಎದುರುಗೊಳ್ಳಲು ಎದ್ದುಬರುತ್ತಿರುವಂತೆ ಕಾಣಿಸುತ್ತಿತ್ತು. ಸ್ಪಷ್ಟವಾಗಿ ಅದು ಸಂಪೂರ್ಣದೇವತೆಯ ಕೈವಾಡವಲ್ಲ ದ್ದರೂ ಅರ್ಧದೇವತೆಯ ಕೆಲಸವಾದರೂ ಆಗಿರಬೇಕು, ಎನ್ನಿಸಿತು. ೆಲಕ್ಕೆಲ್ಲ ನಾನಾವರ್ಣದ ರತ್ನಗಳನ್ನು ಚಿತ್ತಾರಚಿತ್ತಾರವಾಗಿ ಹಾಸಿದ್ದರು. ಅಂತಹ ಮಣಿಖಚಿತವಾದ ನೆಲದಮೇಲೆ ನಡೆದಾಡುವುದಕ್ಕೆ ಪುಣ್ಯಮಾಡಿರ ೇಕು, ಎನ್ನಿಸಿತು. ಅರಮನೆಯ ಇತರ ಭಾಗಗಳಾದರೂ ಅಷ್ಟೇ ವಿಶಾಲ ಾಗಿ, ಅಷ್ಟೇ ಸುಂದರವಾಗಿ, ಅಷ್ಟೇ ಅನರ್ಘ್ಯವಾಗಿದ್ದುವು. ಗೋಡೆಗಳಿಗೆ ಉಪಯೋಗಿಸಿದ್ದ ಚಿನ್ನದ ಭಾರಿ ಇಟ್ಟಿಗೆಗಳು ಫಳಫಳನೆ ಹೊಳೆಯುತ್ತ,

ಸೂರ್ಯನ ಬೆಳಕು ಇಲ್ಲದಾಗ ಕೂಡ, ತನ್ನಿಂದೇ ಹಗಲನ್ನು ಸೃಷ್ಟಿಮಾಡಿ ಬೀರುತ್ತಿದ್ದುವು. ಪ್ರತಿಯೊಂದು ಕೊಠಡಿಯೂ ಪ್ರತಿಯೊಂದು ನಡುವೆಯೂ ಬೆಳಕಿನಿಂದ ತುಂಬಿ ತುಳುಕುತ್ತಿತ್ತು. ಆಯಾ ಕೊಠಡಿಗೆ ಹೊಂದಿಕೊಳ್ಳುವಂಥ ಕುರ್ಚಿ, ಮೇಜು, ಮಂಚ ಮುಂತಾದುವು ಮನೋಹರವಾಗಿದ್ದುವು. ಸಾಕ್ಷಾತ್ ಜ್ಯೂಪಿಟರ್ ದೇವತೆಯೇ ತನ್ನ ಭೂಲೋಕದ ವಾಸಕ್ಕೋಸ್ಕರ ಈ ಅರಮನೆಯನ್ನು ನಿರ್ಮಿಸಿಕೊಂಡಿದ್ದರೂ ಏನೂ ಆಶ್ಚರ್ಯವಿಲ್ಲ, ಎಂಬಂತಿತ್ತು.

ಸೈಕೆ ಮೋಹಪರವಶಳಾದಳು. ಸ್ವಲ್ಪ ಹೆದರಿಕೊಂಡೇ ಮೆಟ್ಟಲು ಹತ್ತಿದಳು, ಕೊಂಚ ಹೊತ್ತಾದಮೇಲೆ ಧೈರ್ಯ ತಂದುಕೊಂಡು ಹೊಸಿಲನ್ನು ದಾಟಿದಳು. ಮೊದಲಿನ ಸಭಾಂಗಣದ ಸೌಂದರ್ಯ ಅವಳನ್ನು ಆಕರ್ಷಿಸಿತು; ಅನಂತರ ಒಂದೊಂದು ಹೊಸಲನ್ನು ಕಂಡಹಾಗೆಲ್ಲ ಅವಳ ಆಶ್ಚರ್ಯವೂ ಮೆಚ್ಚುಗೆಯೂ ಮೀರುತ್ತ ಬಂತು. ಅರಮನೆಯ ಅಂತರ್ಗೃಹಗಳನ್ನು ಹೊಕ್ಕರೆ — ಅಲ್ಲಿನ ಬೊಕ್ಕಸಗಳಲ್ಲಿ ನಂಬಲಾರದ ನಿಧಿನಿಕ್ಷೇಪಗಳನ್ನು ಕಂಡಳು. ಕಲ್ಪನೆಯಲ್ಲಿ ಏನೇನು ಸುವಸ್ತುಗಳನ್ನು ಸಂಭಾವಿಸಿಕೊಳ್ಳ ಬಹುದೋ ಅದೆಲ್ಲ ಅಲ್ಲಿತ್ತು.

ಆದರೆ ಅವಳಿಗೆ ಇವೆಲ್ಲಕ್ಕಿಂತ ಇನ್ನೊಂದು ಸಂಗತಿ ಅತ್ಯಂತ ಆಶ್ಚರ್ಯ ವನ್ನು ಉಂಟುಮಾಡಿತು. ಅದು ಏನೆಂದರೆ: ಜಗತ್ತಿನ ಐಶ್ವರ್ಯದ ಭಂಡಾರವೇ ಅಲ್ಲಿ ಬಂದು ಬಿದ್ದಿದ್ದಹಾಗಿದ್ದರೂ ಎಲ್ಲಿಯೂ ಒಂದು ಸರಪಣಿ ಯಾಗಲಿ, ಅಡ್ಡಮರವಾಗಲಿ, ಬೀಗವಾಗಲಿ, ಒಬ್ಬ ಕಾವಲುಗಾರ ನಾಗಲಿ ಕಣ್ಣಿಗೆ ಬೀಳಲಿಲ್ಲ.

ಸೈಕೆ ಸಂತೋಷದಿಂದ ಮೈಮರೆತು ಹಾಗೇ ಬಿಟ್ಟ ಕಣ್ಣು ಬಿಟ್ಟ ಹಾಗೆ ನಿಂತಿರಬೇಕಾದರೆ; ಅದು ಎಲ್ಲಿಂದಲೋ ಕಾಣೆ, ಇದ್ದಕ್ಕಿದ್ದಂತೆ ಒಂದು ಅಶರೀರವಾಣಿ ಮಾತನಾಡಿತು: "ರಾಜಕುಮಾರಿ, ಈ ಐಶ್ವರ್ಯವನ್ನು ಕಂಡು ನಿನಗೇಕೆ ಅಚ್ಚರಿ? ಇದು ಎಲ್ಲಾ ನಿನ್ನದೇ, ನಿನ್ನ ಶಯನಗೃಹಕ್ಕೆ ಮೊದಲು ಹೋಗಿ, ಆಯಾಸಗೊಂಡಿರುವ ನಿನ್ನ ದೇಹಕ್ಕೆ ವಿಶ್ರಾಂತಿಕೊಡು. ಸ್ನಾನಮಾಡಬೇಕು ಎನ್ನಿಸಿದಾಗ, ನಿನ್ನ ಸಹಾಯಕ್ಕೆ ನಾವು ಇದ್ದೇವೆ.

ಈಗ ಮಾತನಾಡುತ್ತಿರುವವಳು ನಿನ್ನ ದಾಸಿಯರಲ್ಲಿ ಒಬ್ಬಳು. ಅನಂತರ ನಿನ್ನ ಮದುವೆಯ ಊಟವೂ ಸಿದ್ಧವಾಗಿರುತ್ತದೆ, ಬರಬಹುದು.''

ತನ್ನನ್ನು ಇಷ್ಟು ಚೆನ್ನಾಗಿ ನೋಡಿಕೊಂಡು ಆರೈಕೆ ಮಾಡಿದ ಆ ಅದೃಷ್ಟವಾದ ದೈವಕ್ಕೆ ಸೈಕೆ ಮನಸ್ಸಿನಲ್ಲಿಯೇ ವಂದಿಸಿದಳು. ಆ ಅಶರೀರ ವಾಣಿಯ ಮಾತಿನಂತೆ ನಡೆದುಕೊಂಡಳು. ಮೊದಲು, ಶಯನಗೃಹವನ್ನು ಹುಡುಕಿ, ಸ್ವಲ್ಪ ಹೊತ್ತು ಮಲಗಿ ವಿಶ್ರಮಿಸಿಕೊಂಡಳು. ಅನಂತರ ಸ್ನಾನದ ಮನೆಗೆ ಹೋದಳು, ಅಲ್ಲಿ, ಕಣ್ಣಿಗೆ ಕಾಣದ ಕೈಗಳು ಆಕೆಯ ವಸ್ತ್ರಗಳನ್ನು ತೆಗೆದಿರಿಸಿ, ಸ್ನಾನಮಾಡಿಸಿ, ಲೇಪನವನ್ನು ಹಚ್ಚಿ, ಮದುವಣಿಗೆಯ ಮಂಗಳ ವಸ್ತ್ರಗಳಿಂದ ಸಿಂಗರಿಸಿದುವು.

ಸ್ನಾನದ ಮನೆಯಿಂದ ಹಾಗೇಬಂದರೆ; ಒಂದು ಕಡೆ ಅರ್ಧವೃತ್ತಾಕಾರದ ಒಂದು ಮೇಜು, ಅದರ ಮುಂದೆ ಒಳ್ಳೆಯ ಅನುಕೂಲವಾದ ಕುರ್ಚಿ. ಊಟಕ್ಕೆ ಸಿದ್ಧವಾಗಿದೆ ಎಂಬಂತೆ ಎನಿಸುತ್ತಿದ್ದರೂ, ತಿನ್ನುವುದಕ್ಕಾಗಲಿ ಕುಡಿಯುವುದಕ್ಕಾಗಲಿ ಅಲ್ಲಿ ಏನೂ ಕಾಣಲಿಲ್ಲ. ಸೈಕೆ ನಿರೀಕ್ಷಿಸುತ್ತ ಕುಳಿತಳು. ಕೂಡಲೆ, ಅಮೃತಕ್ಕೆ ಸಮಾನವಾದ ರುಚಿಯ ಮದ್ಯಗಳೂ ಕಂಡೊಡನೆಯೇ ಬಾಯಲ್ಲಿ ನೀರೂರುವ ತಿನಿಸುಗಳೂ ತಟಕ್ಕನೆ ಮಾಂತ್ರಿಕನ ಮಾತಿನಿಂದ ಬಂದಂತೆ ತಮ್ಮಷ್ಟಕ್ಕೆ ತಾವೇ ತೇಲುತ್ತ ಬಂದುವು. ಸೈಕೆ ಯಾರನ್ನೂ ಕಾಣಲಿಲ್ಲ; ಪರಿಚರ್ಯೆ ಮಾಡುತ್ತಿದ್ದವರು ಶರೀರವಿಲ್ಲದ ಬರಿಯ ಶಾರೀರಗಳು ಮಾತ್ರ. ಯಾರೋಬರುವರು, ತಂತ್ರೀವಾದ್ಯವನ್ನು ನುಡಿಸುವರು; ಆದರೆ, ವಾದ್ಯ ಕೇಳಿಸುತ್ತಿತ್ತೇ ಹೊರತು, ನುಡಿಸುವವರು ಕಾಣಿಸುತ್ತಿರಲಿಲ್ಲ, ವಾದ್ಯವು ಗೋಚರಿಸುತ್ತಿರಲಿಲ್ಲ. ಬಳಿಕ ಒಂದು ಅದೃಷ್ಟವಾದ ಮೇಳ ಒಟ್ಟಿಗೆ ಹಾಡಿತು. ಹೀಗೆ ಆ ಸಂತೋಷದ ಸವಿಯೂಟ ಮುಗಿದ ಮೇಲೆ, ಸೈಕೆ, ಮಲಗುವ ವೇಳೆಯಾಯಿತೆಂದು ಎದ್ದಳು. ಮಲಗುವ ಮನೆಗೆ ಹೋಗಿ, ವಸ್ತ್ರಗಳನ್ನು ತೆಗೆದಿರಿಸಿ, ಬಹುಹೊತ್ತು ಎಚ್ಚರವಾಗಿ ಮಲಗಿದ್ದಳು.

ಅರ್ಧರಾತ್ರಿಯ ಹೊತ್ತಿಗೆ ಯಾರೋ ಮೃದುವಾಗಿ ಪಿಸುಮಾತು ಆಡಿದರು. ಒಂಟಿಯಾಗಿದ್ದ ಸೈಕೆಗೆ ಸ್ವಲ್ಪ ದಿಗಿಲಾಯಿತು. ಜನರು ಯಾರೂ ವಾಸವಿಲ್ಲದಿದ್ದ ಅಂಥ ವಿಶಾಲವಾದ ಅರಮನೆಯಲ್ಲಿ ಏನಾದರೂ ಆಗಬಹುದು.

ಎಲ್ಲಿ ತನ್ನ ಶೀಲಕ್ಕೆ ಏನು ಚ್ಯುತಿಯಾದೀತೋ ಎಂದು ಆಕೆಗೆ ಅಂಜಿಕೆ. ಆದರೆ, ಆಕೆ ಅಂಜಲು ಕಾರಣವಿರಲಿಲ್ಲ. ಬಂದು, ಪಿಸುಮಾತು ಆಡಿದವನು ಆಕೆಯ ಅಜ್ಞಾತನಾದ ಪತಿಯೇ.

ಅದೋ, ಅವನು ಆಕೆಯ ಹಾಸಿಗೆಯನ್ನು ಏರಿದನು. ಅದೋ, ಆಕೆಯನ್ನು ತನ್ನ ತೋಳುಗಳಲ್ಲಿ ಒಳಕೊಳಿಸಿಕೊಂಡು, ಆಕೆಯನ್ನು ತನ್ನ ಪತ್ನಿಯನ್ನಾಗಿ ಮಾಡಿಕೊಂಡನು.

ಮಾರನೆಯ ದಿನ ಬೆಳಕು ಹರಿಯುವ ಮೊದಲೇ ಅವಸರವಸರವಾಗಿ ಎದ್ದು ಹೊರಟುಹೋದನು. ಆ ಕೂಡಲೆ, ಆಕೆಯ ಆ ಅದೃಶ್ಯರಾದ ದಾಸಿಯರು ಬಂದು, "ನಿನ್ನ ಕನ್ಯಾಭಾವ ಕಳೆದುಹೋಗಿದ್ದರೂ ನಿನ್ನ ಪಾತಿವ್ರತ್ಯಕ್ಕೆ ಚ್ಯುತಿಬಂದಿಲ್ಲ." ಎಂದು ಭರವಸೆ ಹೇಳಿದರು.

ಸೈಕೆ ಸಮಾಧಾನದಿಂದ ಮತ್ತೆ ನಿದ್ರೆಹೋದಳು.

ಆ ದಿವಸ ಸೈಕೆಗೆ ಆ ಮನೆ ತನ್ನ ಸ್ವಂತ ಮನೆಯಂತೆಯೇ ಒಗ್ಗಿಹೋಯಿತು. ಆ ರಾತ್ರೆ ಆಕೆಯ ಅಜ್ಞಾತನಾದ ಪತಿ ಮತ್ತೆ ಮಡದಿಯ ಬಳಿಗೆ ಬಂದ. ಮಾರನೆಯ ಹಗಲೂ ಮಾರನೆಯ ರಾತ್ರಿಯೂ ಹಾಗೆಯೇ ಆಯಿತು. ಅದೃಶ್ಯರಾದ ಪರಿಚಾರಕರು ಮಾಡುವ ಸೇವೆ ಮೊದಲು ಮೊದಲು ವಿಚಿತ್ರವಾಗಿದ್ದಿತಾದರೂ ಬರುತ್ತ ಬರುತ್ತ ಅದೇ ರೂಢಿಯಾಗಿಬಿಟ್ಟಿತು. ಸುತ್ತಾಮುತ್ತ ಅಷ್ಟೊಂದು ಧ್ವನಿಗಳನ್ನು ಕೇಳಿ ಕೇಳಿ, ಸೈಕೆಗೆ ತಾನು ಒಂಟಿಯಾಗಿದ್ದೇನೆ ಎಂಬ ಭಾವ ಮರೆಯಾಗಿಹೋಯಿತು.

೪

ಈ ಮಧ್ಯೆ ಆ ಮುದುಕ ರಾಜನೂ ಮುದುಕಿ ರಾಣಿಯೂ ಏನು ಮಾಡುತ್ತಿದ್ದರು? ಸೈಕೆ, ಏನು ಮಾಡಬೇಡಿ ಎಂದು ಬೇಡಿಕೊಂಡಿದ್ದಳೋ ಅದನ್ನೇ ಮಾಡುತ್ತಿದ್ದರು. ಅನಾವಶ್ಯಕವಾಗಿ ದುಃಖಪಟ್ಟು, ಅತ್ತು, ಕರೆದು ಅರೆಯಾಗುತ್ತಿದ್ದರು.

ಸೈಕೆಗೆ ಸಂಭವಿಸಿದ ದುರವಸ್ಥೆ ಕಾಲಾನುಕ್ರಮದಲ್ಲಿ ದೇಶದಿಂದ ದೇಶಕ್ಕೆ ಹರಡಿ, ಅದೆಲ್ಲವೂ ಸವಿಸ್ತರವಾಗಿ ಆಕೆಯ ಅಕ್ಕಂದಿರ ಕಿವಿಗೂ ಬಿತ್ತು. ಅವರು ತಮ್ಮ ಅರಮನೆಗಳನ್ನು ತೊರೆದು, ತಾಯಿತಂದೆಯರನ್ನು ಸಂತೈಸುವುದಕ್ಕಾಗಿ ದಡದಡನೆ ತಮ್ಮ ತವರುಮನೆಗೆ ಓಡಿಬಂದರು.

ಅದೇ ದಿನ ರಾತ್ರಿ, ಸೈಕೆಯ ಗಂಡ ಆಕೆಗೆ ಎಚ್ಚರಕೊಟ್ಟ : “ ಚೆಲುವೆ ಸೈಕೆ, ನನ್ನ ಮುದ್ದಿನ ಮಡದಿ, ವಿಧಿ ನಿನಗೆ ಕ್ರೂರವಾಗಿದೆ. ದೊಡ್ಡದೊಂದು ಅಪಾಯ ನಿನಗಾಗಿ ಕಾದಿದೆ. ಎಚ್ಚರ ತಪ್ಪದೆ ನಿನ್ನ ಜೋಕೆಯಲ್ಲಿ ನೀನಿರು. ನಿನ್ನ ಅಕ್ಕಂದಿರು ನಿನ್ನ ಮರಣದ ವಾರ್ತೆಯನ್ನು ಕೇಳಿ ಗಾಬರಿಗೊಂಡಿದ್ದಾರೆ. ಇಷ್ಟರಲ್ಲಿಯೇ, ಪಶ್ಚಿಮಾನಿಲನು ನಿನ್ನನ್ನು ಈ ಕಣಿವೆಗೆ ಒಯ್ದು ತಂದಿತಲ್ಲಾ ಅದೇ ಬಂಡೆಯ ಬಳಿಗೆ ಬರುತ್ತಾರೆ—ನೀನು ಏನಾದೆ ಎಂದು ಏನಾದರೂ ಗುರುತು ಸಿಕ್ಕುವುದೋ ನೋಡೋಣವೆಂದು. ಅವರು ಅಲ್ಲಿ ಮೇಲುಗಡೆ ಗೋಳಾಡುವ ಧ್ವನಿ ಏನಾದರೂ ನಿನಗೆ ಕೇಳಿಸಿದರೂ, ಅದಕ್ಕೆ ಗಮನ ಕೊಡಬೇಡ, ಅವರಿಗೆ ಉತ್ತರ ಕೊಡಬೇಡ, ಅವರ ಕಡೆ ಕಣ್ಣೆತ್ತಿ ಕೂಡ ನೋಡಬೇಡ. ಹಾಗೇನಾದರೂ ಮಾಡಿದಲ್ಲಿ, ನನಗೆ ತುಂಬ ಅಸುಖ ವಾಗುತ್ತದೆ. ನಿನಗೂ ಸರ್ವನಾಶ ತಂದುಕೊಳ್ಳುತ್ತೀಯೆ. ”

ಸೈಕೆ, ತನ್ನ ಗಂಡನನ್ನು ಮುಟ್ಟಬಲ್ಲಳು, ಆತನ ಧ್ವನಿಯನ್ನು ಕೇಳಿ ಬಲ್ಲಳು, ಆತನನ್ನು ಇನ್ನೂ ಕಂಡದ್ದಿಲ್ಲ,

ಆತನು ಹೇಳಿದಂತೆ ಕೇಳುವೆನೆಂದು ವಚನ ಕೊಟ್ಟಳು. ಆದರೆ, ಆ ರಾತ್ರಿ ಕರಗಿಹೋಗಿ, ಹಗಲಾದ ಮೇಲೆ, ಒಂದೇ ಸಮನೆ ಕಣ್ಣೀರು ಹರಿಸಿದಳು. ‘ ನಾನು ಇಲ್ಲಿ ಸೆರೆಯಾಳು. ಜೊತೆಗೆ ಮಾತನಾಡಲು ಒಂದೂ ಪ್ರಾಣಿಯಿಲ್ಲ. ಈಗ ನನ್ನ ಅಕ್ಕಂದಿರ ಕೊರಗನ್ನು ಕಳೆಯಬಾರದೆಂದು ನನ್ನ ಪತಿಯ ಆಜ್ಞೆಯಾಗಿದೆ. ಅವರನ್ನು ಕಣ್ಣೆತ್ತಿಕೂಡ ನೋಡಬಾರದಂತೆ.’ ಎಂದು ಕೊರಗಿದಳು. ಆ ದಿನವೆಲ್ಲ ಸ್ನಾನಮಾಡದೆ, ಊಟಮಾಡದೆ, ಹಾಗೇ ಹೋಗಿ ಮಲಗಿ, ತಲೆದಿಂಬನ್ನು ಕಣ್ಣೀರಿನಿಂದ ತೋಯಿಸಿದಳು.

ಸೈಕೆಯ ಗಂಡ ಆ ರಾತ್ರಿ ಎಂದಿಗಿಂತ ಮುಂಚಿತವಾಗಿಯೇ ಬಂದನು. ಅಳುತ್ತಿದ್ದ ಸೈಕೆಯನ್ನು ಬಳಿಗೆ ಕರೆದುಕೊಂಡು “ ಓ, ಸೈಕೆ! ನೀನು ನನಗೆ

ಏನು ವಾಗ್ದಾನಮಾಡಿದೆ? ಈಗಲೇ ಹೀಗಾದರೆ, ನಾಳೆ ನೀನು ಏನು ಮಾಡ ದಿರುವೆ? ಹಗಲೆಲ್ಲಾ ಅತ್ತಿರುವೆ, ಸಂಜೆಯೆಲ್ಲಾ ಅತ್ತಿರುವೆ. ಈಗ ನಾನು ಬಂದು ನಿನ್ನನ್ನು ಬಿಗಿದಪ್ಪಿರುವಾಗಲೂ ಇನ್ನೂ ಅಳುತ್ತಿರುವೆ. ಒಳ್ಳೆಯದು; ಹಾಗಾ ದರೆ, ನಿನ್ನ ಇಷ್ಟಬಂದಹಾಗೆ ಮಾಡಿಕೊ, ಮನಸ್ಸಿಗೆ ಬಂದಹಾಗೆ ಮಾಡಿಕೊ. ಆದರೆ ಮಾತ್ರ, ಜೋಕೆ, ನನ್ನ ಮಾತಿಗೆ ಕಿವಿ ಕೊಡಲಿಲ್ಲವಲ್ಲಾ ಎಂದು ಕೊಳ್ಳುವಹೊತ್ತಿಗೆ, ಆಗಬೇಕಾದ ಅನಾಹುತ ಅದು ಆಗಿಯೇಹೋಗಿರು ತ್ತದೆ." ಎಂದು ಮೃದುವಾಗಿ ಅವಳ ಮನಸ್ಸನ್ನು ತಿದ್ದಲು ಮಾತ ನಾಡಿದನು.

ಸೈಕೆ ಎಷ್ಟೆಷ್ಟೋ ಅಂಗಲಾಚಿದಳು. ತನ್ನ ಅಕ್ಕಂದಿರನ್ನು ಕಾಣದೆ, ಅವರೊಡನೆ ಮಾತನಾಡದೆ, ಅವರ ದುಃಖವನ್ನು ಕಳೆದು ಸಂತೈಸದೆ, ತಾನು ಜೀವಸಹಿತ ಉಳಿಯುವುದು ಸಾಧ್ಯವಿಲ್ಲ, ಎಂದು ಬೇಡಿದಳು.

ಕಡೆಗೆ, ಆಕೆಯ ಬಲವಂತಕ್ಕಾಗಿ ಅವನು ಒಪ್ಪಬೇಕಾಯಿತು. "ನಿನಗೆ ತೃಪ್ತಿಯಾಗುವಷ್ಟು ಆಭರಣಾದಿಗಳನ್ನು ಬೇಕಾದರೆ ಅವರಿಗೆ ಕೊಡು. ಆದರೆ, ನೋಡು, ಈಗಲೇ ಹೇಳಿದ್ದೇನೆ: ನಿನ್ನ ಅಕ್ಕಂದಿರು ಇಬ್ಬರೂ ಬಲು ದುಷ್ಟ ಸ್ವಭಾವದವರು, ನನ್ನ ನಿಜವಾದ ಸ್ವರೂಪವೇನೆಂಬುದನ್ನು ಕಂಡುಕೋ ಎಂದು ನಿನ್ನನ್ನು ಎತ್ತಿಕಟ್ಟುವರು; ನೀನೇನಾದರೂ ಅವರ ಮಾತಿನಂತೆ ನಡೆದುಕೊಂಡರೆ, ಆ ಕುತೂಹಲದ ಪರಿಣಾಮದಿಂದ ನಿನಗೆ ಶ್ರೇಯಸ್ಸಾಗು ವುದಿಲ್ಲ. ಈಗ ನಿನಗಿರುವ ಸುಖ ಮಾಯವಾಗುತ್ತದೆ, ಅಲ್ಲದೆ ನನ್ನ ತೋಳಿನ ಸಂಬಂಧ ನಿನಗೆ ತಪ್ಪಿಹೋಗುತ್ತದೆ. ಜೋಕೆ!"

ಸೈಕೆ ಅವನ ದಯೆಗಾಗಿ ತನ್ನ ಕೃತಜ್ಞತೆಯನ್ನು ಅರ್ಪಿಸಿದಳು, ಎಂದಿನಂತೆ ಶಾಂತವಾದಳು. "ಖಂಡಿತವಾಗಿಯೂ ಇಲ್ಲ. ನಿನ್ನನ್ನು ಕಳೆದುಕೊಳ್ಳುವುದಕ್ಕಿಂತ ನಾನು ನೂರು ಸಲ ಸತ್ತರೂ ಸತ್ತೇನು. ನೀನು ಯಾರೋ ನಾನು ಕಾಣೆ, ಆದರೂ ನೀನೆಂದರೆ ನನಗೆ ತುಂಬ ಪ್ರೀತಿ. ನೀನು ನನ್ನ ಪ್ರಾಣಕ್ಕಿಂತ ಪ್ರಿಯನಾದವನು. ಕ್ಯುಪಿಡ್ ದೇವತೆ ತಾನೇ ಸಾಕ್ಷಾತ್ತಾಗಿ ಬಂದು ತನ್ನ ಮುತ್ತುಗಳನ್ನು ನೀಡಿದರೂ ನಿನ್ನ ಮುತ್ತುಗಳ ಬದಲಿಗೆ ಅವು ನನಗೆ ಬೇಡ. ಆದ್ದರಿಂದ ದಯವಿಾಡಿ, ಇನ್ನು ಒಂದೇ

ನುಗ್ರಹ ಮಾಡು. ನಿನ್ನ ಸೇವಕನಾದ ಪಶ್ಚಿಮಾನಿಲನಿಗೆ ಹೇಳು: ನ್ನನ್ನು ಇಲ್ಲಿಗೆ ಕರೆದುತಂದ ಹಾಗೆಯೇ ನನ್ನ ಅಕ್ಕಂದಿರನ್ನೂ ಇಲ್ಲಿಗೆ ರೆದು ತಾ, ಎಂದು."

ಸೈಕೆ ಪತಿಯನ್ನು ಒಲಿಸಿಕೊಳ್ಳಲು ಮುದ್ದಿಸಿದಳು, ಕಿವಿಯಲ್ಲಿ ್ರಣಯದ ಪಿಸುಮಾತು ಹೇಳಿದಳು, ತನ್ನ ತೋಳುಗಳನ್ನೂ ತೊಡೆಗಳನ್ನೂ ತನ ಸುತ್ತ ಬಳ್ಳಿಯಂತೆ ಬಿಗಿದು "ನನ್ನ ಮುದ್ದೇ, ನನ್ನ ಪತಿಯೇ, ನನ್ನ ೀವದ ಜೀವವೇ" ಎಂದು ಉಸುರ್ಗರೆದಳು.

ಸೈಕೆಯ ಪ್ರಣಯದ ಪ್ರಭಾವಕ್ಕೆ ಆತನು ವಶನಾಗಿ ಹೋದನು. ುನಸ್ಸಿಗೆ ಇಷ್ಟವಿಲ್ಲದಿದ್ದರೂ, ಇಲ್ಲವೆನಲಾರದೆ, ಆಕೆಯ ಪ್ರಾರ್ಥನೆಗೆ ಮ್ಮತಿಸಿದನು. ಮತ್ತೆ, ಮಾರನೆಯ ದಿನ ಬೆಳಗು ಹರಿಯುವುದರೊಳಗಾಗಿ ಾಯವಾದನು.

೫

ಈ ಮಧ್ಯೆ, ಸೈಕೆಯ ಅಕ್ಕಂದಿರು ತಮ್ಮ ತಂಗಿಯನ್ನು ತೊರೆದ ಂಡೆಯ ಬಳಿಗೆ ದಾರಿಯನ್ನು ವಿಚಾರಿಸಿಕೊಂಡು ಬಂದರು. ಗುಡುಗುಡನೆ ಲ್ಲಿಗೆ ಬಂದು ಗೋಳಾಡಿದರು, ಸುತ್ತಿನ ಕಲ್ಲುಗಳು ಪ್ರತಿಧ್ವನಿ ಕೊಡುವ ರೆಗೂ ಎದೆಎದೆ ಚಚ್ಚಿಕೊಂಡರು. "ಸೈಕೇ! ಸೈಕೇ!" ಎಂದು ಅರಚಿದರು. ವರು ಕಿರಿಚಿದ ಕೂಗು ಕೆಳಗಿನ ಕಣಿವೆಯವರೆಗೂ ಮುಟ್ಟಿತು. ಸೈಕೆ ಡೆಯಲಾರದ ಸಡಗರದಿಂದ ಅರಮನೆಯ ಹೊರಗೆ ಓಡಿಬಂದು, "ಅಕ್ಕಂ ರಾ, ಅಕ್ಕಂದಿರಾ, ನನಗಾಗಿ ಏಕೆ ಗೋಳಾಡುತ್ತಿದ್ದೀರಿ? ಗೋಳಿಡುವ ಗತ್ಯವಿಲ್ಲ. ಇದೋ ಇಲ್ಲಿದ್ದೇನೆ. ನಾನೇ, ಸೈಕೆ! ದಯೆಮಾಡಿ ನಿಮ್ಮ ುಃಖವನ್ನು ತಡೆದುಕೊಳ್ಳಿ. ಇನ್ನೊಂದು ಕ್ಷಣ, ಬಂದು ನನ್ನನ್ನು ಆಲಂಗಿಸಿ ಾಳ್ಳುವಿರಂತೆ." ಎಂದಳು.

ಕೂಡಲೆ, ಒಂದು ಸಲ ಸೀಟಿ ಹಾಕಿ, ಪಶ್ಚಿಮಾನಿಲನನ್ನು ಕರೆದಳು. ದಕ್ಕೆ ತನ್ನ ಗಂಡನ ಆಜ್ಞೆಯನ್ನು ತಿಳಿಸಿದಳು. ಕೂಡಲೇ ಆ ಗಾಳಿ,

ಮೃದುವಾಗಿ ಊದಿ, ಅವನನ್ನು ಅವಳ ಬಳಿಗೆ ಸುಖವಾಗಿ ಕರೆದುತಂದಿತು. ಅಕ್ಕ ತಂಗಿಯರು ಮೂವರೂ ಒಬ್ಬರನ್ನೊಬ್ಬರು ಸಂತೋಷದ ಅತಿರೇಕದಿಂದ ತಬ್ಬಿಕೊಂಡು, ಮುದ್ದಾಡಿದರು. ಅವರ ದುಃಖದ ಕಣ್ಣೀರು ಆನಂದ ಬಾಷ್ಪವಾಗಿಹೋಯಿತು.

"ಬನ್ನಿ ಒಳಗೆ. ಬಂದು, ನನ್ನ ಹೊಸ ಮನೆಯನ್ನು ನೋಡಿ. ನಿಮ್ಮಿಬ್ಬರಿಗೂ ಖಂಡಿತ ಸಂತೋಷವಾಗುತ್ತದೆ." ಎಂದು ಸೈಕೆ ಅವರಿಬ್ಬರನ್ನೂ ಮನೆಯೊಳಗೆ ಕರೆದುಕೊಂಡು ಹೋದಳು. ತನ್ನ ನಿಧಿ ನಿಕ್ಷೇಪಗಳ ಭಂಡಾರವನ್ನು ತೋರಿಸಿದಳು. ಕಣ್ಣಿಗೆ ಕಾಣಿಸದ ದಾಸದಾಸಿಯರು ಕೆಲಸ ಕಾರ್ಯ ಮಾಡುವುದನ್ನು ನೋಡಿದರು. ಸೈಕೆ ಅವರಿಗೆ ಸ್ನಾನ ಮಾಡಿಸಿದಳು, ತನ್ನ ಆ ಮಾಯಾಮಂತ್ರದ ಮೇಜಿನ ಬಳಿ ಅವರಿಗೆ ಸೊಗಸಾದ ಊಟ ಮಾಡಿಸಿದಳು.

ಆದರೆ, ಸೈಕೆ ಸಂಪಾದಿಸಿದ್ದ ಆ ದೈವೀಸಂಪತ್ತನ್ನು ಕಂಡು ಅವರಿಬ್ಬರಿಗೂ ಹೊಟ್ಟೆಯುರಿದುಹೋಯಿತು. ಅದರಲ್ಲೂ ಆ ಎರಡನೆಯವಳಿಗಂತೂ ತುಂಬಾ ಹಿಡಿಸಲಾರದ ಕುತೂಹಲ: ಸೈಕೆಗೆ ಈ ನಂಬಲಾಗದ ಸಂಪತ್ತು ಎಲ್ಲಿಂದ ಬಂತು, ತಿಳಿಯಬೇಕೆಂದು. "ನಿನ್ನ ಗಂಡ ಎಂಥವನು ? ನಿನ್ನೊಡನೆ ಹೇಗೆ ನಡೆದುಕೊಳ್ಳುತ್ತಾನೆ? ಹೇಳು" ಎಂದು ತಂಗಿಯನ್ನು ಪೀಡಿಸಿದಳು.

ಸೈಕೆ ತಾನು ಕೊಟ್ಟ ವಾಗ್ದಾನವನ್ನು ಪರಿಪಾಲಿಸಿಕೊಂಡಳು, ಯಾವ ಗುಟ್ಟನ್ನೂ ಬಿಟ್ಟುಕೊಡಲಿಲ್ಲ. "ಓ, ನನ್ನ ಪತಿ ತುಂಬ ಸುಂದರ, ಯುವಕ. ಆತನಿಗೆ ಮೃದುವಾದ ಪುಟ್ಟ ಗಡ್ಡವಿದೆ. ಆತ ಹಗಲೆಲ್ಲಾ ಇಲ್ಲಿನ ಗುಡ್ಡಗಳಲ್ಲೂ ಕಣಿವೆಗಳಲ್ಲೂ ಬೇಟೆಯಾಡುತ್ತಾ ಹೊತ್ತು ಕಳೆಯುತ್ತಾನೆ." ಎಂದು ಮಾತು ತೇಲಿಸಿದಳು.

ಆದರೆ ಅಕ್ಕಂದಿರು ಅಷ್ಟಕ್ಕೆ ಬಿಡಲಿಲ್ಲ. ಕುತ್ತಿ ಕುತ್ತಿ ಪ್ರಶ್ನಿಸಲಾರಂಭಿಸಿದರು. ಸೈಕೆಗೆ ಕೊಂಚ ದಿಗಿಲಾಯಿತು. ತಾನು ಆಡಿದ ಮಾತುಗಳಲ್ಲಿ ಏನಾದರೂ ವಿರೋಧ ತೋರಿಬಂದರೆ? ತಾನು ತಪ್ಪು ಹೇಳಿದರೆ? ಅಥವಾ ನಿಜವನ್ನು ಹೇಳಿ, ತನ್ನ ಪತಿಗೆ ಮಾಡಿದ ವಾಗ್ದಾನ ಭಂಗವಾದರೆ?

ಅಕ್ಕಂದಿರಿಗೆ ರತ್ನಖಚಿತವಾದ ಉಂಗುರಗಳನ್ನು ತೊಡಿಸಿ, ರತ್ನದ ಪಿನ್ನುಗಳನ್ನು ಸಿಕ್ಕಿಸಿ, ರತ್ನದ ಹಾರಗಳನ್ನು ಮಾಲೆಹಾಕಿ, ಪಶ್ಚಿಮಾನಿಲನನ್ನು ಕರೆದು ಅವರನ್ನು ಮತ್ತೆ ಬೆಟ್ಟದ ತುದಿಗೆ ಕರೆದುಕೊಂಡುಹೋಗಿ ಬಿಡುವಂತೆ ಆಜ್ಞೆಮಾಡಿದಳು. ಆ ಗಾಳಿ ವಿಧೇಯನಾಗಿ ಅವರನ್ನು ಮೇಲಕ್ಕೆ ಕರೆದೊಯ್ದಿತು.

ಬೆಟ್ಟದಿಂದ ಊರಿಗೆ ಹಿಂದಿರುಗುವಾಗ ಅವರ ಹೃದಯದಲ್ಲಿದ್ದ ಅಸೂಯೆಯ ವಿಷ ಕುದಿಯತೊಡಗಿತು.

ದೊಡ್ಡವಳು ಹೇಳಿದಳು : “ ನೋಡಿದೆಯೇನೆ ? ಅದೃಷ್ಟ ಕಣ್ಣುಮುಚ್ಚಿಕೊಂಡು ಕ್ರೂರವಾಗಿ ನಮಗೆ ಏನು ಅನ್ಯಾಯಮಾಡಿದೆ ? ನಾವು ಮೂರು ಜನ ಅಕ್ಕತಂಗಿಯರು—ಹೀಗೆ ಒಬ್ಬರಿಗೊಂದು, ಒಬ್ಬರಿಗೊಂದು ಆಗಬಹುದೇನೆ ? ನಾವು ಇಬ್ಬರೂ ಹಿರಿಯರಾದವರು ಹೀಗೆ ದೇಶಭ್ರಷ್ಟರಾಗಿ, ತಾಯಿತಂದೆಯರಿಂದ ದೂರರಾಗಿ, ಪರದೇಶದವರನ್ನು ಮದುವೆಯಾಗಿ, ಅವರ ಮನೆಗಳಲ್ಲಿ ದಾಸಿಯರಂತೆ ದುಡಿಯುವುದು ; ಇಲ್ಲಿ, ಈ ಸೈಕೆಯಾದರೋ, ಅಮ್ಮನ ಕಟ್ಟಕಡೆಯ ಮಗಳು, ಇಲ್ಲಿಯೇ ಹತ್ತಿರ ಪರಮೋತ್ಕೃಷ್ಟವಾದ ಮಹಲು, ಗಂಡನೋ ದೇವತೆ, ಅವಳಿಗೋ ತನ್ನ ಅಪಾರವಾದ ಐಶ್ವರ್ಯವನ್ನು ಏನು ಮಾಡಬೇಕೆಂಬುದುಕೂಡ ಗೊತ್ತಿಲ್ಲ ! ಅಲ್ಲಿ ನೋಡಲಿಲ್ಲವೇನೆ ? ಅದೇನು ರಾಶಿರಾಶಿ ರತ್ನಾಭರಣಗಳು, ಅದೇನು ಅಲಮಾರುಗಳ ತುಂಬ ದಿವ್ಯವಾದ ಪಟ್ಟೆಪೀತಾಂಬರಗಳು ! ನೆಲವೆಲ್ಲಾ ನವರತ್ನಖಚಿತವಾದ ಗಟ್ಟಿ ಚಿನ್ನ ! ಅವಳು ಹೇಳುವ ಹಾಗೆ ಅವಳ ಗಂಡನೇನಾದರೂ ಅಷ್ಟು ಸುಂದರನಾಗಿದ್ದರೆ, ಅವಳಂತಹ ಅದೃಷ್ಟಶಾಲಿ ಇಹಲೋಕದಲ್ಲಿ ಇನ್ನು ಯಾರೂ ಇಲ್ಲ. ಅವಳೇನಾದರೂ ಈಗ ಇರುವ ಹಾಗೆಯೇ ಇನ್ನು ಮುಂದೆಯೂ ತನ್ನ ಗಂಡನಲ್ಲಿ ಏಕರೀತಿಯಿಂದ ಅನುರಾಗವನ್ನು ಇರಿಸಿರುವಳಾದರೆ, ಖಂಡಿತ, ಅವಳನ್ನು ದೇವತೆಯನ್ನಾಗಿ ಮಾಡಿಕೊಂಡು ಬಿಡುತ್ತಾನೆ. ಮಾಡಿಕೊಂಡುಬಿಡುತ್ತಾನೆ ಎಂಬುದೇಕೆ ? ಈಗಾಗಲೇ ತಾನೊಬ್ಬ ದೇವತೆಯೋ ಎಂಬಂತೆ ಆಡುತ್ತಿದ್ದಾಳೆ ! ಅಬ್ಬಬ್ಬಾ, ಅದೇನು ದುರಹಂಕಾರ, ಅದೇನು ಮಹಾ ಅನುಗ್ರಹಬುದ್ಧಿ ! ನಮ್ಮಂತೆಯೇ ಅವಳೂ

ಮಾಂಸ ರಕ್ತಗಳಿಂದಾದ ಮನುಷ್ಯಳೇ ಆದರೂ, ಗಾಳಿಗಳಿಗೆ ಆಜ್ಞೆಮಾಡು ತ್ತಾಳೆ! ಅರಮನೆಯ ತುಂಬ ಅದೃಶ್ಯರಾದ ದಾಸಿಯರಿಂದ ದುಡಿಸಿಕೊಳ್ಳು ತ್ತಾಳೆ; ಓ, ಅವಳನ್ನು ಕಂಡರೆ ನನಗೆ ಆಗುವುದಿಲ್ಲ. ನನ್ನ ಗಂಡನಂತೂ ನಮ್ಮ ತಂದೆಗಿಂತ ವಯಸ್ಸಾದವನು, ತಲೆಯೆಲ್ಲಾ ಕುಂಬಳಕಾಯಂತೆ ನುಣು ಬೋಳು, ಮೈಯೋ ಮುಕ್ಕಳಂತೆ ಪೀಚುಪೀಚು; ಮನೆಯಲ್ಲಿ ಇರುವ ಅಲ್ಪ ಸ್ವಲ್ಪವನ್ನು ಪೆಟ್ಟಿಗೆಯಲ್ಲಿಟ್ಟು, ಬೀಗ ಹಾಕಿ, ಮುದ್ರೆ ಮಾಡಿದ್ದೂ ಮಾಡಿದ್ದೇ!"

ಅದಕ್ಕೆ ಚಿಕ್ಕವಳು ಹೇಳಿದಳು: "ನಿನ್ನ ಗಂಡನಾದರೂ ವಾಸಿ. ನನ್ನ ಗಂಡನಿಗೋ ಮೈಯೆಲ್ಲ ವಾತರೋಗ. ಅಮಾವಾಸ್ಯೆಗೊಮ್ಮೆ ಹುಣ್ಣಿಮೆ ಗೊಮ್ಮೆ ಆತನಿಗೆ ನಿದ್ರೆಬಂದರೆ, ಅದೇ ಹೆಚ್ಚು. ಗಂಟುಗಂಟಾದ ಅವನ ಬೆರಳುಗಳನ್ನು ತೈಲ ಹಾಕಿ ತಿಕ್ಕಿ ತಿಕ್ಕಿ ನನ್ನ ಕೈಯೆಲ್ಲ ತೇದುಹೋಯಿತು. ನನ್ನ ಕೈ ಎಷ್ಟು ಬೆಳ್ಳಗೆ, ಹೇಗೆ ನುಣುಪಾಗಿತ್ತು, ಜ್ಞಾಪಕವಿದೆಯೆ ನಿನಗೆ? ಈಗ ನೋಡು, ಅವನಿಗೆ ಕಾಪಟ ಕೊಡುವುದಕ್ಕೆ ಕಷಾಯ ಕಾಯಿಸಿ, ಕಟ್ಟುವುದಕ್ಕೆ ಪೋಟಲೀಸು ಬೇಯಿಸಿ, ನನ್ನ ಕೈಗೆ ಆಗಿರುವ ಗತಿ ನೋಡು! ನಾನೇನು ರಾಣಿಯೋ, ಅಲ್ಲವೇ ವೈದ್ಯನ ಪರಿಚಾರಕಿಯೋ? ಇದನ್ನೆಲ್ಲ ನೆನೆಸಿಕೊಂಡರೆ,—ನೀನು ಹೇಗೆತಾನೆ ಇದನ್ನು ಸಹಿಸಿಕೊಂಡು ಸುಮ್ಮನಿರು ವೆಯೋ ನಾ ಬೇರೆ ಕಾಣೆ—ಆದರೆ, ನನಗಂತೂ ನಮ್ಮ ತಂಗಿಗೆ ಪ್ರಾಪ್ತ ವಾಗಿರುವುದನ್ನು ಕಂಡು ಮೈಯೇ ಉರಿದುಹೋಗುತ್ತದೆ. ಅವಳ ದುರಹಂ ಕಾರವನ್ನು ನೀನೂ ಗಮನಿಸಿದೆಯಲ್ಲ! ತನ್ನ ಸಂಪತ್ತನ್ನು ಹೇಗೆ ಮೆರೆದಾಡಿ ಸಿದಳು, ನೋಡು! ಆದರೂ ನಮ್ಮನ್ನು ಕಳುಹಿಸಿಕೊಟ್ಟಾಗ ಆಭರಣಗಳನ್ನು ಕೊಟ್ಟಳಲ್ಲ, ಅದು ಏನು ಕೈಹಿಡಿತ! ಅದೆಷ್ಟು ಬೇಗನೆ ನಮ್ಮ ಸಹವಾಸಕ್ಕೆ ಬೇಜಾರು ಪಟ್ಟುಕೊಂಡು, ತನ್ನ ಗಾಳಿಯನ್ನು ಕೂಗಿ ಕರೆದು ನಮ್ಮನ್ನು ತೊಲಗಿಸಿಬಿಟ್ಟಳು! ಅವಳನ್ನು ಈ ಸೌಭಾಗ್ಯದ ಉನ್ನತ ಶಿಖರದಿಂದ ಕೆಳಗುರುಳಿಸಿ, ತಿಪ್ಪೆಯ ತೊಟ್ಟಿಯಲ್ಲಿ ಅವಳನ್ನು ಕೆಡವದಿದ್ದರೆ, ನಾನಂತೂ ಹೆಂಗಸೇ ಅಲ್ಲ! ನಮ್ಮಿಬ್ಬರಿಗೂ ಅವಳು ಮಾಡಿದ ಅವಮಾನವನ್ನು ನೀನೂ

ಮರೆತಿಲ್ಲದಿದ್ದರೆ, ಅವಳ ಕೊಬ್ಬನ್ನು ಇಳಿಸುವ ಕಾರ್ಯದಲ್ಲಿ ನೀನು ನನಗೆ ಸಹಾಯಮಾಡಬೇಕು."

"ನೀನು ಹೇಳಿದ್ದು ಒಪ್ಪಿದೆ." ಎಂದಳು ಹಿರಿಯಕ್ಕ. "ಮೊದಲು, ನನ್ನದೊಂದು ಸಲಹೆ: ಏನೆಂದರೆ, ಅವಳು ನಮಗೆ ಕೊಟ್ಟಿರುವ ಈ ರತ್ನಾಭರಣಗಳನ್ನು ತಾಯಿಗಾಗಲಿ ತಂದೆಗಾಗಲಿ ತೋರಿಸುವುದು ಬೇಡ. ಅವಳು ಬದುಕಿದ್ದಾಳೆ ಎಂಬುದನ್ನು ಯಾರಿಗೂ ತಿಳಿಸುವುದೂ ಬೇಡ. ಅವಳ ಸಮಸ್ತ ಸೌಭಾಗ್ಯವನ್ನು ನಾವು ಕಂಡಿರುವುದಿಷ್ಟೇ ಸಾಕು; ಅದನ್ನು ಅರಮನೆಯಲ್ಲೆಲ್ಲ ಹರಡುವುದು ಬೇಡ. ಏಕೆಂದರೆ, ಇತರರಿಗೆ ತಿಳಿಯದ ಹಾಗೆ ಯಾರಿಗೆ ಏನು ಸಂಪತ್ತಿದ್ದರೆ ತಾನೆ ಏನು ಸುಖ? ನಾವೇನೂ ಸೈಕೆಯ ಸಂಪತ್ತನ್ನು ಪ್ರಸಿದ್ಧಪಡಿಸಲು ಅವಳ ಸೇವಕಿಯರಲ್ಲ. ನಾವು ಅವಳಿಗೆ ಹಿರಿಯ ಅಕ್ಕಂದಿರು ಎಬುದು ಅವಳಿಗೂ ತಿಳಿಯಲಿ."

"ನೀನು ಹೇಳಿದ್ದು ಸರಿ, ಅಕ್ಕ. ನಾವು ನಮ್ಮ ನಮ್ಮ ದರಿದ್ರಮನೆಗಳಿಗೂ ನಮ್ಮ ನಮ್ಮ ದರಿದ್ರ ಮುದಿಗಂಡಂದಿರ ಬಳಿಗೂ ಹಿಂದಿರುಗೋಣ. ತಾಯಿತಂದೆಗೆ ಏನೂ ಹೇಳುವುದು ಬೇಡ. ಮತ್ತೆ, ಸೈಕೆಯನ್ನು ಹಾಳು ಮಾಡುವುದಕ್ಕೆ ನಮ್ಮಿಬ್ಬರಲ್ಲಿ ಯಾರಿಗೆ ಮೊದಲು ಒಂದು ಉಪಾಯ ಹೊಳೆದರೂ, ಇಬ್ಬರೂ ಒಟ್ಟಿಗೆ ಇಲ್ಲಿಗೆ ಬಂದು, ಅದನ್ನು ನಡೆಸಿಯೇಬಿಡೋಣ." ಎಂದು ಚಿಕ್ಕವಳು ಒಪ್ಪಿದಳು.

ಆ ದುಷ್ಟ ಸಹೋದರಿಯರು ಒಬ್ಬರನ್ನು ಒಬ್ಬರು ಬಿಟ್ಟುಕೊಡುವುದಿಲ್ಲವೆಂದು ಕೈಮೇಲೆ ಕೈಯಿಟ್ಟು ಆಣೆ ಹಾಕಿದರು. ಸೈಕೆ ತಮಗೆ ಕೊಟ್ಟಿದ್ದ ಅಮೂಲ್ಯವಾದ ಆಭರಣಗಳನ್ನೆಲ್ಲ ಬಚ್ಚಿರಿಸಿಕೊಂಡರು. ತಂದೆಯ ಅರಮನೆಯನ್ನು ಸಮೀಪಿಸಿದಾಗ, ತಂಗಿಯು ದೊರಕದೆ ಹೋದದ್ದರಿಂದ ತಾವು ದುಃಖವನ್ನು ಸಹಿಸಲಾರೆವೋ ಎಂಬುದನ್ನು ಸೂಚಿಸಲೋಸುಗ, ಒಬ್ಬರ ಮುಖವನ್ನು ಒಬ್ಬರು ಪರಚಿ, ಕೂದಲು ಕಿತ್ತು ಗಾಯಪಡಿಸಿಕೊಂಡು ಬಂದರು. ಅದರಿಂದ ಅವರ ತಾಯಿತಂದೆ ಇನ್ನೂ ಖಿನ್ನರಾದರು.

ಅನಂತರ ಆ ಅಕ್ಕತಂಗಿಯರು ತಮ್ಮತಮ್ಮ ಗಂಡಂದಿರ ಮನೆಗೆ ಹೋದರು. ಹೃದಯದ ತುಂಬ ಹೊಟ್ಟೆಯುರಿಯ ರೋಷವನ್ನು ತುಂಬಿ

ಕೊಂಡು, ಏನೂ ಅರಿಯದ ಆ ಹಸುತಂಗಿಯಾದ ಸೈಕೆಯನ್ನು ಹಾಳು ಮಾಡುವುದು ಹೇಗೆ ಎಂದು ದುರಾಲೋಚನೆಮಾಡುತ್ತಾ, ತಮ್ಮ ತಮ್ಮ ದಾರಿ ಹಿಡಿದರು. ಅಗತ್ಯ ಬಿದ್ದರೆ, ತಂಗಿಯನ್ನು ಕೊಲ್ಲುವುದಕ್ಕೂ ಅವರು ಹೇಸುತ್ತಿರಲಿಲ್ಲ.

೬

ಈ ನಡುವೆ, ಒಂದು ರಾತ್ರಿ ಸೈಕೆಯ ಅದೃಶ್ಯನಾದ ಪತಿಯು ಆಕೆಗೆ ಇನ್ನೊಂದು ಬಾರಿ ಎಚ್ಚರಿಕೆ ಕೊಟ್ಟನು: "ಸೈಕೆ! ಆ ದೂರದ ದಿಗಂತದಲ್ಲಿ ಎಂತಹ ಅಪಾಯಕರವಾದ ಮಳೆಯ ಬಿರುಗಾಳಿ ಬೀಸಿಬರುತ್ತಿದೆ, ಗೊತ್ತೇ? ಇಷ್ಟರಲ್ಲಿಯೇ ಅದು ನಿನ್ನ ಮೇಲೆ ಬರುತ್ತದೆ; ನೀನು ಮುನ್ನೆಚ್ಚರಿಕೆಗಳನ್ನು ಕೈಕೊಳ್ಳದಿದ್ದರೆ, ನಿನ್ನನ್ನು ಕೊಚ್ಚಿಕೊಂಡು ಹೋಗುತ್ತದೆ. ನಾಯಿ ತೋಳಗಳಂಥ ನಿನ್ನ ದ್ರೋಹಿ ಸಹೋದರಿಯರು ನಿನ್ನ ನಾಶಕ್ಕಾಗಿ ಮಂತ್ರಮಾಡುತ್ತಿದ್ದಾರೆ. ಏನಾದರೂ ಮಾಡಿ ನನ್ನ ಮುಖವನ್ನು ನೋಡು, ಎಂದು ನಿನ್ನನ್ನು ಒತ್ತಾಯಪಡಿಸುತ್ತಾರೆ. ನಿನಗೆ ಅನೇಕ ಬಾರಿ ಹೇಳಿದ್ದೇನೆ, ಸೈಕೆ: ನೀನೇನಾದರೂ ನನ್ನ ಮುಖವನ್ನು ನೋಡಿದೆಯಾದರೆ, ಖಂಡಿತ ನನ್ನನ್ನು ಎಂದೆಂದಿಗೂ ಕಳೆದುಕೊಳ್ಳುವೆ. ಆದ್ದರಿಂದ, ಈ ಶಾಕಿನಿಢಾಕಿನಿಗಳೇನಾದರೂ ಮತ್ತೊಮ್ಮೆ ನಿನ್ನನ್ನು ನೋಡಲು ಬಂದರೆ,—ಅವರು ಬಂದೇ ಬರುವರೆಂದು ನನಗೆ ಚೆನ್ನಾಗಿ ಗೊತ್ತು—ನೀನು ಅವರೊಡನೆ ಮಾತನಾಡಲು ನಿರಾಕರಿಸಬೇಕು. ಅಥವಾ, ನಿನ್ನಂಥ ಮುಚ್ಚುಮರೆಯಿಲ್ಲದ ಹಸುಹುಡುಗಿಗೆ ಇದು ತುಂಬ ಕಷ್ಟವಾಗುವುದಾದರೆ, ನನ್ನನ್ನು ಕುರಿತು ಅವರು ಏನು ಪ್ರಶ್ನೆ ಕೇಳಿದರೂ ಉತ್ತರ ಕೊಡದಂತೆ ಎಚ್ಚರದಿಂದಿರು. ಅವರು ಹೇಳಿದ್ದು ಕಿವಿಗೆ ಬೀಳಲಿಲ್ಲವೆಂದು ನಟಿಸು. ಇದು ಬಹು ಮುಖ್ಯ, ಸೈಕೆ. ಏಕೆಂದರೆ, ನೀನು ಈಗ ಗರ್ಭಿಣಿ. ನೀನು ಇನ್ನೂ ಮಗುವಿನಂತೆ ಇದ್ದರೂ, ಇಷ್ಟರಲ್ಲೇ ನಿನ್ನ ಮಗುವನ್ನು ಕೈಗೆತ್ತಿಕೊಳ್ಳುವೆ. ನೀನು ನನ್ನ ರಹಸ್ಯವನ್ನು ಕಾಪಾಡಿದರೆ, ಆ ಮಗು ದೇವತೆಯಾಗುವುದು; ಗುಟ್ಟನ್ನು ರಟ್ಟು ಮಾಡಿದರೆ, ಅದು ಮರ್ತ್ಯನಾಗುವುದು."

ತನ್ನ ಮಗು ದೇವತೆಯಾಗುವುದೆಂಬ ಮಾತು ಕೇಳಿ, ಸೈಕೆಗೆ ಪರಮಾನಂದವಾಯಿತು. ಸಡಗರದಿಂದ, ಮಗು ಪ್ರಸವವಾಗಲು ಎಷ್ಟು ತಿಂಗಳು ಎಷ್ಟು ದಿನ ಇನ್ನೂ ಇದೆ ಎಂದು ಲೆಕ್ಕಮಾಡಿದಳು. ಆದರೆ ಅವಳಿಗೆ ಜೀವನದ ವಿಚಾರ ಏನೂ ಗೊತ್ತಿಲ್ಲ; ತನ್ನ ಕನ್ಯಾಭಾವ ನಷ್ಟವಾದದ್ದರಿಂದ ತನ್ನ ಆಚಾರ ಏಕೆ ವ್ಯತ್ಯಾಸವಾಗುತ್ತಿದೆ ಎಂದು ಅವಳಿಗೆ ಅರ್ಥವಾಗದ ಆಶ್ಚರ್ಯ.

ಅತ್ತ, ತಪ್ಪುಮಾಡಿದವರ ಬೆನ್ನ ಹಿಂದೆ ಬಿಡದೆ ಅಟ್ಟಿಬರುವ ದಂಡಾಧಿದೇವತೆಗಳ ಹಾಗೆ, ಸೈಕೆಯ ದುಷ್ಟ ಅಕ್ಕಂದಿರು ಅವಳ ಅರಮನೆಗೆ ಧಾವಿಸಿ ಬರುತ್ತಿದ್ದರು. ಅದನ್ನು ಸೈಕೆಯ ಗಂಡನು ಅರಿತು, ಮತ್ತೆಯೂ ಒಮ್ಮೆ ಎಚ್ಚರಿಸಿದನು : "ಈ ದಿನವೇ ಬಹು ಕ್ರೂರವಾದ ದಿನವು. ನಿನ್ನ ಶತ್ರುಗಳು ಹತ್ತಿರ ಬರುತ್ತಿದ್ದಾರೆ. ಪಾಳೆಯವನ್ನು ಸ್ಥಾಪಿಸಿ, ಬಲಗಳನ್ನೆಲ್ಲ ಜೊತೆಗೂಡಿಸಿಕೊಂಡು, ಯುದ್ಧಕ್ಕೆ ನಡೆಯಲು, ತುತ್ತೂರಿಯೂದಿದ್ದಾರೆ. ಆ ಶತ್ರುಗಳು ನಿನ್ನಂತೆ ಹೆಂಗಸರೇ, ನಿನ್ನ ರಕ್ತಸಂಬಂಧಿಗಳೇ, ನಿನ್ನ ಸ್ವಂತ ಅಕ್ಕಂದಿರೇ, ಕತ್ತಿಗಳನ್ನು ಹಿರಿದು, ನಿನ್ನ ಕೊರಳಿಗೆ ಗುರಿಯಿಟ್ಟು ನುಗ್ಗುತ್ತಿದ್ದಾರೆ. ಓ, ಪ್ರಿಯೆ ಸೈಕೆ! ನಮಗೆ ಏನೇನು ಅಪಾಯ ಸುತ್ತಿಮುತ್ತಿಕೊಂಡಿವೆ! ನಿನಗಾಗಿ ಮರುಕಪಡು, ನನಗಾಗಿ ಮರುಗು, ಇನ್ನೂ ಹುಟ್ಟಿಲ್ಲದ ನಮ್ಮ ಮಗುವಿಗಾಗಿ ಮರುಗು. ನನ್ನ ರಹಸ್ಯವನ್ನು ಬಿಟ್ಟುಕೊಡದೆ ಕಾಪಾಡಿಕೊಂಡು, ನಮ್ಮನ್ನು ಧ್ವಂಸಮಾಡಲು ಹೆದರಿಸುತ್ತಿರುವ ಸರ್ವನಾಶವನ್ನು ನಿವಾರಿಸಿಡು. ಆ ದುಷ್ಟ ಸ್ತ್ರೀಯರನ್ನು ನೋಡುವುದಿಲ್ಲವೆಂದು ನಿರಾಕರಿಸು. ನಿನ್ನ ವಿಷಯವಾಗಿ ಅಷ್ಟೊಂದು ದ್ವೇಷದ ವಿಷವನ್ನು ಅವರು ವೃದ್ಧಿಮಾಡಿಕೊಂಡು, ನಿನ್ನ ಅಕ್ಕಂದಿರೆಂದು ಕರೆದುಕೊಳ್ಳುವ ಹಕ್ಕನ್ನೂ ಅವರು ಕಳೆದುಕೊಂಡಿದ್ದಾರೆ. ಅವರನ್ನು ಇಲ್ಲಿಗೆ ಬಾರಗೊಡದಿರು, ಅವರನ್ನು ನೋಡದೆ ಬಿಡು, ಅವರ ಮಾತಿಗೆ ಕಿವಿಕೊಡಬೇಡ. ಮೌನವನ್ನು ತಾಳಿದ್ದು, ನಮ್ಮ ಕ್ಷೇಮವನ್ನು ಕಾಪಾಡಿಕೊಡು."

ಸೈಕೆ ಬಿಕ್ಕಿ ಬಿಕ್ಕಿ ಅಳುತ್ತಾ ಹೇಳಿದಳು : "ಖಂಡಿತವಾಗಿಯೂ ನೀನು ನನ್ನನ್ನು ನಂಬಬಹುದು. ನಾನು ಆಡಿದ ಮಾತನ್ನು ಉಳಿಸಿಕೊಂಡು, ಹೇಳಿದ ಗುಟ್ಟನ್ನು ರಕ್ಷಿಸಿಕೊಳ್ಳಬಲ್ಲೆನೆಂಬುದಕ್ಕೆ ಹೋದ ಸಲ ನನ್ನ ಅಕ್ಕಂದಿರು

ಬಂದಾಗಲೇ ನಾನು ಸಾಕಷ್ಟು ಸಾಕ್ಷಿ ತೋರಿರುವೆನಲ್ಲವೆ? ನಾಳೆಯೂ ಹಾಗೆಯೇ ನಡೆದುಕೊಳ್ಳುವೆನು. ಮೊದಲಿನಂತೆಯೇ ಪಶ್ಚಿಮಾನಿಲನಿಗೆ ಆಜ್ಞೆಮಾಡಿ ಹೋಗು. ಒಂದೇ ಒಂದು ಸಲ, ನನ್ನ ಅಕ್ಕಂದಿರನ್ನು ನೋಡುವೆನು, ಅಷ್ಟೆ. ನಿನ್ನನ್ನು ಹೇಗೂ ನಾನು ಎಂದೂ ನೋಡುವಂತಿಲ್ಲ ವಲ್ಲಾ. ನಿನ್ನ ತಲೆಯ ಸುತ್ತ ಗೊಂಚಲಾಡುವ ಈ ಗುಂಗುರು ಕೂದಲಿನ ಸೌರಭವೋ! ನನ್ನ ಕೆನ್ನೆಗಳಂತೆಯೇ ಕೋಮಲವೂ ಮೃದುವೂ ಆದ ನಿನ್ನ ಕೆನ್ನೆಗಳೋ! ಅಷ್ಟು ಅತಿಶಯವಾದ ಕಾವನ್ನು ತಾಳುವ ನಿನ್ನ ವಕ್ಷಸ್ಥಲವೋ! ಓ, ನೀನು ಹೇಗಿರುವೆ ಎಂಬುದನ್ನು ನನ್ನ ಮಗುವಿನ ಮುಖವನ್ನಾದರೂ ನೋಡಿ, ಮುಂದೆ ಕಂಡುಕೊಳ್ಳುವೆನು. ಆದ್ದರಿಂದ, ದಯೆಮಾಡಿ ನನ್ನ ಬಯಕೆಯನ್ನು ನಡಸಿಕೊಡು, ನಲ್ಲ. ನಡಸದೆ ಹೋದೆಯೋ, ಅದರಿಂದ ಮಗುವಿಗೆ ಊನ; ನಡಸಿದೆಯೋ, ಅದರಿಂದ ನನಗೆ ಸಂತೋಷ. ನನಗೂ ನಿನಗೂ ಅಪಾರವಾದ ಪ್ರೇಮವಲ್ಲವೆ, ಪ್ರಿಯ? ಅವರನ್ನು ಒಮ್ಮೆ ನೋಡಲು ನನಗೆ ಅವಕಾಶ ಮಾಡಿಕೊಡು; ಅನಂತರ ನಾನು ಈ ಕತ್ತಲಿಗೆ ಹೆದರುವುದೂ ಇಲ್ಲ, ನಿನ್ನನ್ನು ಬಿಗಿದಪ್ಪಿಡುವಾಗ ನಿನ್ನನ್ನು ಕಾಣಬೇಕೆಂದು ಬಯಸುವುದೂ ಇಲ್ಲ. ನನ್ನ ಜೀವದ ಜೀವ ನೀನು.''

ಸೈಕೆಯ ಮಧುರವಾದ ವಾಣಿಯೂ ಮೃದುವಾದ ಲಲ್ಲೆಮಾತೂ, ಅವನ ವಿರೋಧವನ್ನು ಒಡೆದುವು. ತನ್ನ ತಲೆಗೂದಲಿನಿಂದ ತನ್ನ ಕಣ್ಣಿನ ನೀರನ್ನು ಒರಸಿಕೊಂಡು, ಆಕೆ ಕೇಳಿದುದಕ್ಕೆ ಒಪ್ಪಿದನು. ಮತ್ತೆ, ಎಂದಿನ ಹಾಗೆಯೇ, ಬೆಳಕು ಹರಿಯುವುದಕ್ಕೆ ಮೊದಲೇ ಅದೃಶ್ಯನಾದನು.

೭

ಆ ದುಷ್ಟಸೋದರಿಯರು ಅಲ್ಲಿಗೆ ಅತಿ ಸಮೀಪವಾದ ರೇವುಪಟ್ಟಣದಲ್ಲಿ ಹಡಗಿನಿಂದ ಇಳಿದರು. ತಮ್ಮ ತಾಯಿತಂದೆಗಳನ್ನು ಕೂಡ ಹೋಗಿ ನೋಡದೆ, ನೇರವಾಗಿ ಆ ಕಣಿವೆಯ ಮೇಲಿನ ಬಂಡೆಗೆ ಓಡಿದರು. ಅದೇನು

ಅಸಾಧ್ಯವಾದ ಧೈರ್ಯವೋ, ಗಾಳಿ ಬಂದು ತನ್ನ ವಸ್ತ್ರಗಳಲ್ಲಿ ತುಂಬಿಕೊಳ್ಳು ವುದಕ್ಕೂ ಮೊದಲೇ ಅಲ್ಲಿಂದ ಕಣಿವೆಗೆ ಧುಮುಕಿದರು. ಆದರೆ ಅವರ ಪುಣ್ಯ: ಆಜ್ಞೆಯನ್ನು ಪಾಲಿಸುವುದಕ್ಕಾಗಿ ಪಶ್ಚಿಮಾಸಿಲನು ಸಿದ್ಧವಾಗಿ ನಿಂತಿತ್ತು. ಅದಕ್ಕೆ ಮನಸ್ಸು ಇತ್ತೋ ಇಲ್ಲವೋ, ಅಂತೂ ಅವರು ಧುಮುಕಿದಾಗ ಅವರ ವಸ್ತ್ರಗಳನ್ನು ಆತುಕೊಂಡು, ಕ್ಷೇಮವಾಗಿ ಅವರನ್ನು ಕೆಳಗಿಳಿಸಿ ತಂದಿತು.

ಕೂಡಲೆ ಅವರು "ತಂಗಿ! ಸೈಕೇ! ಎಲ್ಲಿದ್ದೀಯೆ?" ಎಂದು ಕೂಗಿಕೊಂಡು, ಅರಮನೆಯೊಳಗೆ ನುಗ್ಗಿದರು. ಇವಳನ್ನು ಬಲಿಹಾಕುತ್ತೇವೆ, ಎಂದು ಗಾಢವಾಗಿ ಬಿಗಿದಪ್ಪಿಕೊಂಡರು. ಸೈಕೆ ಅದನ್ನು ಗಾಢವಾದ ಪ್ರೀತಿ ಎಂದುಕೊಂಡಳು. ಅನಂತರ, ತಮ್ಮ ಮನಸ್ಸಿನೊಳಗಿನ ದ್ರೋಹವನ್ನು ಮುಚ್ಚಿಡುವುದಕ್ಕಾಗಿ ಹುಸಿನಗು ನಗುತ್ತಾ ಹೇಳಿದರು: "ಏನೇ ಇದು, ಸೈಕೆ? ನೀನು ಮೊದಲಿನ ಹಾಗೆ ಕೃಶವಾಗಿಲ್ಲ. ಇಷ್ಟರಲ್ಲಿಯೇ ನೀನು ತಾಯಿಯಾಗುವೆ, ಎಂದು ಕಾಣುತ್ತದೆ. ಅದೆಂಥ ಮಗುವನ್ನು ಪಡೆಯು ವೆಯೋ ನೋಡಬೇಕೆಂದು ನಮಗೆ ಕಾತರ. ಅಪ್ಪ ಅಮ್ಮನಿಗೆ ಅದು ತಿಳಿದರೆ, ಎಷ್ಟು ಹಿಗ್ಗಿಹೋಗುವರೊ! ನಿನ್ನ ಚಿನ್ನದ ಮುದ್ದುಮಗುವನ್ನು ಲಾಲಿಸಿ ಪಾಲಿಸಿ ಆರೈಕೆಮಾಡಲು ನಮಗೆ ತುಂಬ ಇಷ್ಟ. ಸೈಕೆ, ಮಗು ತಾಯಿತಂದೆಯರ ಹಾಗಿದ್ದರೆ, — ಇದ್ದರೆ ಎಂಬುದೇನು, ಹಾಗೆ ಇರಲೇ ಬೇಕು — ಅದು ಒಂದು ಪುಟಾಣಿ ಕ್ಯುಪಿಡ್ ಆಗುವುದು.

ಕೊಂಚಕೊಂಚವಾಗಿ ಆ ಮಾಯಾಂಗನೆಯರು ಸೈಕೆಯ ವಿಶ್ವಾಸವನ್ನು ಸಂಪಾದಿಸಿಕೊಂಡರು. ಅವರಿಗೆ ಆಯಾಸವಾಗಿದೆಯೆಂದು, ಸೈಕೆ, ಅವರನ್ನು ಮಲಿತುಕೊಳ್ಳಹೇಳಿ, ಅವರಿಗಾಗಿ ಬಿಸಿನೀರು ಸಿದ್ಧಮಾಡಿಸಿದಳು. ಅವರಿಗೆ ಸ್ನಾನವಾದ ಮೇಲೆ, ರುಚಿರುಚಿಯಾದ ಭಕ್ಷ್ಯಭೋಜ್ಯಗಳನ್ನು ಒಂದಾದ ಮೇಲೆ ಒಂದರಂತೆ, ಸಾಕು ಎನ್ನುವವರೆಗೂ ಬಡಿಸಿಸಿ, ತೃಪ್ತಿಪಡಿಸಿದಳು. ಊಟವಾಗುವಾಗ, ಅದೃಶ್ಯರಾದ ವಾದಕರು ಅದೃಶ್ಯವಾದ ವಾದ್ಯಗಳನ್ನು ಬಡಿಸುತ್ತಿದ್ದರು. ಅನಂತರ ಮೇಳವಾಗಿ ಗಾಯನವಾಯಿತು.

ಆದರೂ, ಏನೇ ದೇವಸಂಗೀತ ಅವರ ಕಿವಿಗೆ ಬಿದ್ದರೂ ಆ ಅಕ್ಕಂದಿರ ಕಲ್ಲಿನ ಹೃದಯ ಮೃದುವಾಗಲಿಲ್ಲ. ಒಳಗೊಳಗೇ ವಿಷ ಕಾರುತ್ತ, ಮಾತು

ಮಾತಿನ ನಡುವೆ "ನಿನ್ನ ಗಂಡ ಎಂಥವನು? ಅವನು ಯಾರು? ಯಾ
ವಂಶದಲ್ಲಿ ಹುಟ್ಟಿದವನು?" ಎಂದು ಕೇಳಿದರು.

ಸೈಕೆ, ಪಾಪ, ಮರೆ ಮೋಸ ಅರಿಯಳು. ಮೊದಲು ಏನು ಹೇ
ದ್ದಳೋ ಅದನ್ನು ಮರೆತು, ಹೊಸದೊಂದು ಕಥೆ ಕಟ್ಟಿದಳು. ತನ
ಗಂಡನು ಒಬ್ಬ ಮಧ್ಯಮವಯಸ್ಸಿನ ವ್ಯಾಪಾರಿ, ಪಕ್ಕದ ಪ್ರಾಂತದ ನಿವಾಸಿ
ತುಂಬ ಧನಾಢ್ಯ, ಸ್ವಲ್ಪ ಕರಡಿಕೂದಲು, ಎಂದು ಹೇಳಿದಳು. ಅಷ್ಟರಲ್ಲಿ
ಮಾತುಕತೆಯನ್ನು ಅಲ್ಲಿಗೇ ಮೊಟಕುಮಾಡಿ, ಅವರಿಗೆ ಅನೇಕ ಅಮೂಲ್ಯ
ಭರಣಗಳನ್ನು ಕಟ್ಟಿಕೊಟ್ಟು, ಪಶ್ಚಿಮಾನಿಲನನ್ನು ಕರೆದು, ಅವರನ್ನು ಬೆಟ್ಟ
ತುದಿಗೆ ಕಳುಹಿಸಿಬಿಟ್ಟಳು.

ಮನೆಗೆ ಹೋಗುವಾಗ ಚಿಕ್ಕವಳು ಹೇಳಿದಳು: "ಅಬ್ಬಬ್ಬ! ಅದೇನ
ಸುಳ್ಳು ಹೇಳುತ್ತಾಳೆ, ನೋಡಿದೆಯ? ಮೊದಲಬಾರಿ ತನ್ನ ಗಂಡ ಯುವಕ
ಮೃದುವಾದ ಗಡ್ಡ, ಎಂದಳು; ಈಗ ಮಧ್ಯಮವಯಸ್ಸಿನವನಂತೆ, ಕರಡಿ
ಕೂದಲಂತೆ! ಚೆನ್ನಾಗಿದೆಯಲ್ಲಾ! ನೋಡೆ: ಆ ಹಾಳುಮೂಳಿ ಸುಳ್ಳು
ಹೇಳುತ್ತಿದ್ದಾಳೆ; ಇಲ್ಲವೆ, ತನ್ನ ಗಂಡ ಹೇಗಿದ್ದಾನೆ ಎಂಬುದನ್ನು ಅವಳ
ಕಂಡಿಲ್ಲ. ಏನು ಹೇಳುತ್ತೀ?"

"ನಿಜಸ್ಥಿತಿ ಏನೇ ಇರಲಿ, ನಾವಂತೂ ಆದಷ್ಟು ಶೀಘ್ರವಾಗಿ ಅವ
ನಾಶಕ್ಕೆ ಏನಾದರೂ ಮಾಡಬೇಕು. ಅವಳು ದಿಟವಾಗಿಯೂ ತನ್ನ ಗಂಡ
ನನ್ನು ನೋಡಿಲ್ಲವಾದರೆ, ಅವನು ದೇವತೆಯೇ ಇರಬೇಕು. ಎಂದರೆ
ಅವಳ ಮಗುವೂ ಒಂದು ದೇವತೆಯೇ ಆಗಿಬಿಡುತ್ತದೆ." ಎಂದಳು
ದೊಡ್ಡವಳು.

"ಹಾಗೇನಾದರೂ ಆದ ಪಕ್ಷದಲ್ಲಿ, ನಾನು ಖಂಡಿತ ಮೊದಲು ನೇಣು
ಹಾಕಿಕೊಂಡುಬಿಡುತ್ತೇನೆ. ಸೈಕೆ ಅಮೃತನಾದವನ ತಾಯಾಗುವುದನ್ನು
ನಾನು ಎಂದಿಗೂ ಸಹಿಸಿಕೊಂಡಿರಲಾರೆ. ಅವಳಿಗೆ ಮೋಸಮಾಡುವುದಕ್ಕೆ
ತಕ್ಕ ಒಂದು ಉಪಾಯ ನನಗೆ ಸೂಚನೆಯಾಗುತ್ತಿದೆ. ಅದು ಹಾಗಿರಲಿ
ಹೋಗಿ, ತಾಯಿತಂದೆಯನ್ನು ನೋಡಿಕೊಂಡು ಬರೋಣ, ಬಾ." ಎಂದಳ
ಚಿಕ್ಕವಳು.

ಅವರಿಬ್ಬರೂ ಅರಮನೆಗೆ ಹೋದರು. ತಾಯಿತಂದೆಯನ್ನು ಮಾತನಾಡಿಸಿದ ಶಾಸ್ತ್ರಮಾಡಿದರು. ದ್ವೇಷಾಸೂಯೆಗಳಿಂದ ಆ ರಾತ್ರಿ ಅವರಿಗೆ ಒಂದು ಕ್ಷಣವೂ ನಿದ್ರೆ ಹತ್ತಲಿಲ್ಲ. ಬೆಳಗಾಗುವುದನ್ನೇ ಕಾಯುತ್ತಿದ್ದು, ಆದ ಒಡನೆ ಬೆಟ್ಟದ ಮೇಲಿನ ಬಂಡೆಗೆ ಓಡಿಹೋಗಿ, ಪಶ್ಚಿಮಾನಿಲನ ಕೃಪೆಯಿಂದ ಕ್ಷೇಮವಾಗಿ ಕಣಿವೆಗೆ ಇಳಿದುಬಂದರು.

ಕಣ್ಣುಗಳನ್ನು ಅಮುಕಿ ಹಿಸುಕಿ, ನಾಲ್ಕುಹನಿ ನೀರು ತಂದುಕೊಂಡು, ಸೈಕೆಯ ಬಳಿಗೆ ಬಂದು ಹೇಳಿದರು: "ಏನೆ, ತಂಗಿ? ಅಜ್ಞಾನಕ್ಕಿಂತ ಹೆಚ್ಚಿನ ಸುಖ ಇನ್ನಿಲ್ಲ. ನಿನಗೆ ಎಂತಹ ಭಯಂಕರವಾದ ದೌರ್ಭಾಗ್ಯ ಪ್ರಾಪ್ತವಾಗಿದೆ ಎಂಬುದರ ಅರಿವೇ ಇಲ್ಲದೆ, ಇಷ್ಟು ನಿಶ್ಚಿಂತೆಯಿಂದ ಶಾಂತಳಾಗಿ ಕುಳಿತಿರುವಿಯಲ್ಲೆ! ನೋಡು, ನಾವು ನಿನ್ನ ಅಕ್ಕಂದಿರು; ನಿನ್ನ ಹಾನಿವೃದ್ಧಿ ನಮ್ಮ ಹಾನಿವೃದ್ಧಿ. ನಾವು ಮೂವರೂ ನಮ್ಮ ಸುಖದುಃಖಗಳಲ್ಲಿ ಸಹಭಾಗಿಗಳು ಅಲ್ಲವೇನೆ? ಆದ್ದರಿಂದ ನಿನಗಾಗಿ ಕಾದಿರುವ ಅಪಾಯವನ್ನು ನಿನಗೆ ತಿಳಿಸದಿರುವುದು ತಪ್ಪು, ಎಂದು ಬಂದಿದ್ದೇವೆ. ವಿಷಯ ಏನೆಂದರೆ: ಪ್ರತಿದಿನ ರಾತ್ರಿ ನಿನ್ನ ಹಾಸಿಗೆಗೆ ನುಸುಳಿಕೊಂಡು ಬರುವ ನಿನ್ನ ಗಂಡನು ದಿಟವಾಗಿಯೂ ಒಂದು ಮಹಾ ಘಟಸರ್ಪ. ತನ್ನ ದೊಡ್ಡಬಾಯನ್ನು ತೆರೆದು, ನಿನ್ನನ್ನು ಒಮ್ಮೆಗೇ ನುಂಗಬಲ್ಲನು, ತನ್ನ ದೀರ್ಘವಾದ ದೇಹದಿಂದ ನಿನ್ನ ಮೈಯನ್ನು ಹತ್ತು ಹನ್ನೆರಡು ಬಾರಿ ಸುತ್ತಬಲ್ಲನು, ಕೋರೆಗಳಲ್ಲಿ ಕಠೋರವಾದ ವಿಷವನ್ನು ಧರಿಸಿರುವನು. ನಿನ್ನ ಮದುವೆಯ ಕಾಲದಲ್ಲಿ ಅಪಾಲೋ ದೇವತೆಯ ಅರ್ಚಕ ಹೇಳಿದ್ದನ್ನು ಜ್ಞಾಪಿಸಿಕೊ: ನೀನು ಒಂದು ಕ್ರೂರ ಪ್ರಾಣಿಯನ್ನು ಮದುವೆಯಾಗುವೆ ಎಂದು ಹೇಳಲಿಲ್ಲವೆ! ಇಲ್ಲಿ ಸುತ್ತಮುತ್ತಲಿನ ಕಾಡುಗಳಲ್ಲಿ ಬೇಟೆಗಾರರು ಕೆಲವರು ಸಂಜೆಯ ಹೊತ್ತು ಆಹಾರ ಮುಗಿಸಿಕೊಂಡು ಬರುವಾಗ ಅದನ್ನು ಕಂಡಿದ್ದಾರೆ, ಇಲ್ಲಿನ ಸಮೀಪದ ಹಳ್ಳಿಯವರು ಅದು ನದಿಯಲ್ಲಿ ಈಜಿಕೊಂಡುಬರುವುದನ್ನು ಕಂಡಿದ್ದಾರೆ; 'ಇನ್ನೇನು ಹೆಚ್ಚುದಿವಸ ಅದು ಅವಳನ್ನು ಮುದ್ದು ಮಾಡುವುದಿಲ್ಲ. ಒಂಬತ್ತು ತಿಂಗಳು ತುಂಬಿದೊಡನೆ ಅವಳನ್ನು ಭಕ್ಷಿಸಿಬಿಡುತ್ತದೆ. ಅದಕ್ಕೆ ತುಂಬುಗರ್ಭಿಣಿಯೆಂದರೆ ತುಂಬ ಇಷ್ಟ.' ಎಂದು ಅವರೆಲ್ಲ ಹೇಳುತ್ತಾರೆ. ಆದ್ದರಿಂದ

ನೋಡು : ಮನಸ್ಸು ಗಟ್ಟಿಮಾಡಿಕೊಂಡು ನೆಟ್ಟನೆ ನಮ್ಮೊಡನೆ ಬಂದುಬಿಡ
ವೆಯೊ? ಅಥವಾ, ಈ ಘಟಸರ್ಪದ ಜೊತೆಯಲ್ಲೆ ಇದ್ದು, ಜೀವಸಹಿತವಾ
ಅದಕ್ಕೆ ಗ್ರಾಸವಾಗುವೆಯೊ? ನಮ್ಮೊಡನೆ ಬಂದರೆ, ನಮ್ಮ ಜೀವವನ್ನು
ತೆತ್ತಾದರೂ ನಿನ್ನನ್ನು ಕಾಪಾಡುವೆವು. ನಿನಗೇನೋ ಇದೇ ಜೀವನವೆ
ಇಷ್ಟವೆಂದು ಕಾಣುತ್ತದೆ: ಹಗಲು ಹೊತ್ತಿನಲ್ಲಿ ಈ ಅದೃಶ್ಯವಾದ ಧ್ವನಿ
ಗಳನ್ನು ಕೇಳುತ್ತಿರುವುದು, ರಾತ್ರಿ ಹೊತ್ತಿನಲ್ಲಿ ಆ ವಿಷಸರ್ಪದೊಡನೆ ಮಲಗಿ
ಕೊಳ್ಳುವುದು! ನಮಗೇನಮ್ಮ? ಏನೋ, ತಂಗಿ ಎಂದುಕೊಂಡು, ನಾವು
ಪ್ರೀತಿಯಿಂದ ಬಂದು ಮೊದಲೇ ಎಚ್ಚರಿಕೆ ಕೊಟ್ಟಿದ್ದೇವೆ, ಅಷ್ಟೆ."

ಅವರ ಆ ಭಯಂಕರ ವಾರ್ತೆಯನ್ನು ಕೇಳಿ, ಸೈಕೆ ನಡುಗಿಹೋದಳು.
ಚಿತ್ತದ ಸ್ತಿಮಿತತೆಯನ್ನು ಕಳೆದುಕೊಂಡಳು, ಮೈಯೆಲ್ಲ ರಕ್ತಹೀನವಾಯಿತು.
ತನ್ನ ಗಂಡನು ತನಗೆ ಹೇಳಿದ್ದ ಜೋಪಾನದ ಮಾತುಗಳನ್ನೆಲ್ಲ ಮರೆತಳು,
ತಾನು ಕೊಟ್ಟಿದ್ದ ವಾಗ್ದಾನಗಳನ್ನು ಮರೆತಳು, ಬುದ್ಧಿಯಿಲ್ಲದೆ ದೌರ್ಭಾಗ್ಯದ
ಕಮರಿಗೆ ಕಣ್ಣುಮುಚ್ಚಿ ಧುಮುಕಿದಳು.

"ಅಕ್ಕಂದಿರಾ, ನಿಮ್ಮ ದಯೆಗಾಗಿ ನಾನು ತುಂಬ ಋಣಿಯಾಗಿದ್ದೇನೆ.
ನೀವು ನನಗೆ ಎಚ್ಚರಕೊಟ್ಟದ್ದು ಸರಿ. ಆ ಜನಗಳು ಬರಿಯ ಕಥೆ ಕಟ್ಟುತ್ತಿಲ್ಲ
ಎಂದುಕೊಂಡಿದ್ದೇನೆ. ನಿಜಸ್ಥಿತಿ ಏನೆಂದರೆ — ನಾನು ನನ್ನ ಗಂಡನ
ಮುಖವನ್ನು ಇದುವರೆಗೂ ನೋಡಿಲ್ಲ: ಆತನು ಹೇಗಿದ್ದಾನೆ, ಎಲ್ಲಿಂದ
ಬಂದವನು, ಇದೊಂದೂ ನನಗೆ ಗೊತ್ತಿಲ್ಲ. ರಾತ್ರಿಕಾಲದಲ್ಲಿ ಆತ ಪಿಸುಮಾತು
ಆಡುವುದು ಮಾತ್ರ ಗೊತ್ತು. ನಿಜವಾಗಿಯೂ, ಹಗಲನ್ನು ಕಂಡರೆ
ಇಷ್ಟು ಮಟ್ಟಿಗೆ ದ್ವೇಷಿಸುವಂತಹವನನ್ನು ಮದುವೆ ಮಾಡಿಕೊಂಡು
ಮನೆವಾರ್ತೆ ನಡೆಸುವುದು ನನಗೂ ಕಠಿಣವಾಗಿದೆ. ಆದ್ದರಿಂದ,
ನೀವು ಹೇಳಿದಂತೆ, ಅವನು ಯಾವುದೋ ರೀತಿಯ ವಿಕಾರ
ಜಂತುವೇ ಇರಬೇಕೆಂದು ನನಗೂ ಎನಿಸುತ್ತದೆ. ಅದೂ ಅಲ್ಲದೆ, ತಾನು
ಹೇಗಿರುವೆನೆಂಬುದನ್ನು ನೋಡಲು ಪ್ರಯತ್ನಿಸಿದೆನಾದರೆ ನನ್ನಗತಿ ನೆಟ್ಟಗಾಗು
ವುದಿಲ್ಲವೆಂದು ಆಗಿಂದಾಗ್ಗೆ ನನ್ನನ್ನೂ ಹೆದರಿಸಿದ್ದಾನೆ. ಎಂತಹ ಭಯಂಕರ
ಸನ್ನಿವೇಶಕ್ಕೆ ಸಿಕ್ಕಿಕೊಂಡೆನೇ ನಾನು! ಅಕ್ಕಂದಿರಾ, ನಾನು ಏನು

ಮಾಡಬೇಕು, ಹೇಳಿ. ಇಲ್ಲದೆ ಹೋದರೆ, ನೀವು ನನಗಾಗಿ ಇಷ್ಟೆಲ್ಲಾ ಶ್ರಮ ವಹಿಸಿದ್ದೂ ವ್ಯರ್ಥವಾಗುತ್ತದೆ." ಎಂದು ಬಿಕ್ಕಿ ಬಿಕ್ಕಿ ಅತ್ತಳು.

ಸೈಕೆ ಸೋತಳೆಂಬುದನ್ನು ಆ ದುಷ್ಟ ಹೆಂಗುಸರು ಕಂಡರು. ಕೂಡಲೆ, ಸ್ವಲ್ಪವೂ ಅವಕಾಶ ಕೊಡದೆ, ಅವಳ ಹೃದಯಕ್ಕೆ ಮುತ್ತಿಗೆ ಹಾಕಿದರು.

ಚಿಕ್ಕವಳು ಹೇಳಿದಳು: "ಎಷ್ಟೇ ಆದರೂ ನಾವು ನಿನ್ನ ಅಕ್ಕಂದಿರಲ್ಲವೇನೆ! ನಿನಗೆ ಅಪಾಯವೆಂದರೆ, ಅದು ನಮಗೆ ಅಪಾಯವಾದಂತೆಯೇ. ನಾವಿಬ್ಬರೂ ನಿನ್ನೆಯಿಂದ ಲೆಕ್ಕವಿಲ್ಲದಷ್ಟು ಬಾರಿ ಮಾತನಾಡಿಕೊಂಡಿದ್ದೇವೆ, ನೀನು ಉಳಿಯುವುದಕ್ಕೆ ಇದೊಂದೇ ಉಪಾಯವೆಂದು ನಿರ್ಧರಿಸಿದ್ದೇವೆ. ಆ ಉಪಾಯ ಏನೆಂದರೆ, ಇದು: ಒಂದು ಹರಿತವಾದ ಮಚ್ಚನ್ನು ಸಂಪಾದಿಸಿಕೊ, ಅಂಗೈಯ ಮೇಲೆ ಅದನ್ನು ಸಾಣೆ ಹಿಡಿದು ಮತ್ತಷ್ಟು ಹರಿತ ಮಾಡಿಕೊ. ಅದನ್ನು ಎಲ್ಲಿಯಾದರೂ ಹಾಸಿಗೆಯ ಬಳಿ ಬಚ್ಚಿಡು. ಮತ್ತೆ, ಒಂದು ದೀಪವನ್ನು ಸಿದ್ಧಪಡಿಸಿಕೊ, ಅದರ ತುಂಬ ಎಣ್ಣೆ ತುಂಬು, ಬತ್ತಿಯನ್ನು ಚೆನ್ನಾಗಿ ತಿದ್ದು; ಅದನ್ನು ಹತ್ತಿಸಿ, ಮಲಗುವ ಮನೆಯ ತೆರೆಯ ಹಿಂದೆ ಇರಿಸು. ಇದೆಲ್ಲವನ್ನೂ ಅತ್ಯಂತ ಗೋಪ್ಯವಾಗಿ ನಡೆಸಬೇಕು. ರಾತ್ರಿ ಆ ಭೂತ ಎಂದಿನಂತೆ ಬಂದು, ಹಾಸಿಗೆಯಲ್ಲಿ ಮಲಗಲಿ. ಅದಕ್ಕೆ ನಿದ್ರೆ ಬಂದಿದೆಯೆಂದು ಅದರ ಉಸಿರಾಟದಿಂದ ತಿಳಿದುಬಂದಾಗ, ಮೆಲ್ಲನೆ ಹಾಸಿಗೆಯಿಂದ ಏಳು. ಒಂದು ಕೈಯಲ್ಲಿ ಮಚ್ಚನ್ನು ಹಿಡಿದು, ಬರಿಗಾಲಿನಿಂದ ಸದ್ದು ಮಾಡದೆ ಹೋಗಿ, ತೆರೆಯ ಮರೆಯ ದೀಪವನ್ನು ಕೈಗೆತ್ತಿಕೊ. ಕಡೆಗೆ, ದೀಪದ ಬೆಳಕಿನ ಸಹಾಯದಲ್ಲಿ ಆ ಮಚ್ಚನ್ನು ಎತ್ತಿ, ಗುರಿಯಿಟ್ಟು ಅದರ ವಿಷದ ಕುತ್ತಿಗೆಯನ್ನು ಕತ್ತರಿಸಿಬಿಡು. ನಾವು ಇಲ್ಲೇ ಬಳಿಯಲ್ಲೇ ನಿಂತು, ನಿನ್ನ ರಕ್ಷಣೆಗೆ ಸಿದ್ಧರಾಗಿರುತ್ತೇವೆ. ನೀನು ಅದನ್ನು ಕೊಂದು ಹಾಕಿದ ಗಳಿಗೆಯೇ ನಾವು ಒಳಗೆ ಓಡಿಬಂದು ಜೊತೆಗಾಗುತ್ತೇವೆ. ಇಲ್ಲಿನ ಐಶ್ವರ್ಯವನ್ನೆಲ್ಲಾ ಎತ್ತಿಕೊಂಡು ಹೋಗೋಣ. ಆಮೇಲೆ ಯಾವನಾದರೂ ಸಭ್ಯನಾದ ಮನುಷ್ಯನನ್ನು ನೋಡಿ ನಿನಗೆ ಮತ್ತೆ ಮದುವೆಮಾಡೋಣ."

ತಮ್ಮ ಸೂಚನೆಯನ್ನು ಸೈಕೆ ಅನುಸರಿಸಿ ನಡೆಯುವಳು ಎಂಬುದು ತಮಗೆ ಮನದಟ್ಟಾದ ಮೇಲೆ, ಅವರಿಬ್ಬರೂ ಅಲ್ಲಿಂದ ಮೆಲ್ಲನೆ ಸದ್ದಿಲ್ಲದೆ

ಜಾರಿದರು. ತಂಗಿಗೆ ತಾವು ಹೇಳಿಕೊಟ್ಟ ದುಷ್ಕೃತ್ಯ ನಡೆದುಹೋಗುವಾಗ ಅಲ್ಲಿರಲು ಅವರಿಗೆ ಧೈರ್ಯವಿರಲಿಲ್ಲ. ಆದ್ದರಿಂದ, ಪಶ್ಚಿಮಾನಿಲನ ಬೆಂಬಲದಿಂದ ಮೇಲುಗಡೆಯ ಬಂಡೆಯನ್ನು ಸೇರಿ, ತಮ್ಮ ಹಡಗುಗಳನ್ನು ಹತ್ತಿಕೊಂಡು, ತಮ್ಮ ತಮ್ಮ ಊರುಗಳಿಗೆ ಓಡಿದರು.

೮

ತನ್ನ ಗಂಡನನ್ನು ಕೊಲೆ ಮಾಡಬೇಕೆಂದು ಉದ್ದೇಶಿಸಿದ ಹೆಂಗಸಿನ ಬೆನ್ನು ಹತ್ತುವ ಕ್ರೂರ ದಂಡಾಧಿದೇವತೆಗಳನ್ನು ಬಿಟ್ಟರೆ, ಸೈಕೆ ಒಂಟಿಯಾಗಿ ಇದ್ದಳೆಂದು ಹೇಳಬಹುದು. ಆಕೆಯ ಮನಸ್ಸು ಬಿರುಗಾಳಿ ಬೀಸಿದ ಕಡಲಿನಂತೆ ಕಲಕಿಹೋಗಿತ್ತು. ಕೊಲೆಮಾಡುವುದಕ್ಕೆ ಬೇಕಾದ ಸಿದ್ಧತೆಗಳಿಗೆ ತೊಡಗಿದ್ದಾಗ ಅವಳ ನಿರ್ಧಾರ ದೃಢವಾಗಿತ್ತು; ಆದರೆ, ಸ್ವಲ್ಪ ಹೊತ್ತಿನಲ್ಲಿಯೇ, ತಾನು ಕೈಕೊಂಡದ್ದು ಏನಾದರೂ ತಪ್ಪಾದರೆ ಏನು ಗತಿ, ಎಂದು ಪೇಚಾಟ ಪ್ರಾರಂಭವಾಯಿತು. ತಾನು ಮಾಡುತ್ತಿದ್ದುದು ಸರಿಯೋ ತಪ್ಪೋ ಎಂದು ಅವಳಿಗೇ ಸಂಶಯ. ತನ್ನ ಆ ನಿಶ್ಚಯವನ್ನು ಕಂಡು, ತನಗೇ ತನ್ನ ಮೇಲೆ ಕೋಪ. ವಿಷಮಯವಾದ ಘಟಸರ್ಪದೊಂದಿಗೆ ಮಲಗುವುದು ಅವಳಿಗೆ ಅಸಹ್ಯವೆನಿಸಿತಾದರೂ, ತನ್ನ ಗಂಡನ ಮೇಲಿನ ಪ್ರೇಮ ಏನೂ ಕಡಿಮೆಯಾಗಿರಲಿಲ್ಲ. ಕಡೆಗೆ, ಸಂಜೆ ಮುಗಿದು ರಾತ್ರಿಯಾಗುವ ಹೊತ್ತಿಗೆ, ಹಾಗೂ ಹೀಗೂ ಹೊಯ್ದಾಡಿ, ಗಂಡನನ್ನು ಕೊಲ್ಲುವುದೇ ಸರಿಯೆಂದು ಮನಸ್ಸು ಗಟ್ಟಿಮಾಡಿಕೊಂಡಳು. ಅವಸರವಸರವಾಗಿ ದೀಪವನ್ನೂ ಮಚ್ಚನ್ನೂ ಸಿದ್ಧಪಡಿಸಿಕೊಂಡಳು.

ರಾತ್ರಿಯಾಯಿತು- ಸೈಕೆಯ ಗಂಡ ಎಂದಿನಂತೆ ಹಾಸಿಗೆಗೆ ಬಂದ. ಚುಂಬನವಾಯಿತು, ಆಲಿಂಗನವಾಯಿತು, ಅವನಿಗೆ ಗಾಢನಿದ್ರೆ ಬಂತು. ಸೈಕೆ ಸಹಜವಾಗಿ ಶಕ್ತಿವಂತಳಲ್ಲ, ಧೈರ್ಯಶಾಲಿಯೂ ಅಲ್ಲ. ಆದರೆ ಯಾವುದೋ ಕ್ರೂರವಾದ ಅದೃಷ್ಟದ ಕೈಗೆ ಸಿಕ್ಕಿ, ಆ ರಾತ್ರಿ ಗಂಡುಬೀರಿಯಾದಳು. ಮಚ್ಚನ್ನು ಒಂದು ಕೈಯಲ್ಲಿ ಬಿಗಿಯಾಗಿ ಹಿಡಿದು, ಇನ್ನೊಂದು

ಕೈಯಲ್ಲಿ ದೀಪವನ್ನು ತಂದು, ಮಲಗಿದ ಅವನ ಮುಖದ ಮೇಲೆ ಬೆಳಕು ಚೆಲ್ಲಿದಳು.

ಕೂಡಲೇ ಗುಟ್ಟು ರಟ್ಟಾಯಿತು. ಅಲ್ಲಿ ಮಲಗಿದ್ದುದು ಬೇರೆ ಯಾರೂ ಅಲ್ಲ; ಕೋಮಲತೆಗೆ ಕೋಮಲತೆಯನ್ನು ಕಲಿಸಿಕೊಡುವ, ಮಾರ್ದವಕ್ಕೆ ಮೃದುತ್ವವನ್ನು ಕೂಡಿಸಿಕೊಡುವ ಸಾಕ್ಷಾತ್ ಕ್ಯುಪಿಡ್ ದೇವತೆಯೇ ಅಲ್ಲಿ ಮಲಗಿದ್ದನು. ದೀಪದ ಬೆಳಕು ಅವನ ಮುಖದ ಮೇಲೆ ಕುಣಿದು ನಲಿದಾಡಿತು, ಮಚ್ಚು ನಾಚಿಕೊಂಡು ತನ್ನ ಅಲಗನ್ನು ಓರೆಮಾಡಿಕೊಂಡಿತು.

ಸೈಕೆ ಹೆದರಿದಳು. ಅಂಗಾಂಗಗಳ ಸ್ವಾಧೀನ ತಪ್ಪಿತು, ಸತ್ತವಳಂತೆ ಕಳೆಗುಂದಿ, ನಡುನಡುಗುತ್ತ ಕುಸಿದಳು. ಮಚ್ಚನ್ನು ತನ್ನ ಎದೆಯಲ್ಲಿ ಹುದುಗಿಸಿ ಅಡಗಿಸಬೇಕೆಂದು ಪ್ರಯತ್ನಿಸಿದಳು. ಹಾಗೂ ಆಗಿಬಿಟ್ಟಿರುವುದೋ ಹೇಗೋ; ಆದರೆ ಆ ಮಚ್ಚು ಅಂತಹ ಅಕಾರ್ಯಕ್ಕೆ ನಾಚಿಕೊಂಡು ಅವಳ ಕೈಯಿಂದ ನುಣುಚಿಕೊಂಡಿತು. ಎಷ್ಟೇ ನಿಶ್ಶಕ್ತಿಯಾಗಿದ್ದರೂ, ಸೈಕೆ, ಕ್ಯುಪಿಡ್ ದೇವತೆಯ ಆ ದೈವೀಸೌಂದರ್ಯವನ್ನು ಕುರಿತು ನೋಡಿದ ಹಾಗೆಲ್ಲ ಚೇತರಿಸಿಕೊಂಡಳು.

ಅಮೃತದಲ್ಲಿ ಸ್ನಾನ ಮಾಡಿ, ಅಮೃತದ ಪರಿಮಳವನ್ನು ಸೂಸುತ್ತಿದ್ದ ಅವನ ಹೊಂಗುರುಳು ಗೊಂಚಲುಗೊಂಚಲಾಗಿ ತಲೆಯಿಂದ ಬಿಳಿಯ ಕೊರಳಿನ ಮೇಲೆ ಸುಳಿದಾಡಿ, ನಸುಕೆಂಪಿನ ಆ ಮುದ್ದುಕೆನ್ನೆಗಳ ಪಕ್ಕದಲ್ಲಿ ಚೆಲುವಾಗಿ ಮಲಗಿತ್ತು. ಆ ಚಿನ್ನದ ಕೂದಲಿನಿಂದ ಪ್ರತಿಫಲಿತವಾದ ಕಾಂತಿಯಲ್ಲಿ ದೀಪದ ಕುಡಿ ಮಸುಕಾಗಿ ಮಿನುಗುತ್ತಿತ್ತು. ಅವನ ಎರಡೂ ತೋಳುಗಳ ಮೇಲೆ, ಭುಜದ ಬಳಿ, ಶುದ್ಧ ಶ್ವೇತವರ್ಣದ ಎರಡು ಮೃದುವಾದ ರೆಕ್ಕೆಗಳು ಬೆಳೆದಿದ್ದುವು. ಅವು ಚಲನೆಯಿಲ್ಲದೆ ಮುಡಿಚಿಕೊಂಡು ಮಲಗಿದ್ದರೂ, ಅದರೊಳಗಿನ ಮೃದುವಾದ ತುಪ್ಪುಳು ತುಂಟತನದಿಂದ ಅದಿರುತ್ತಿತ್ತು. ಅವನ ಸರ್ವಾಂಗ ಎಷ್ಟು ನುಣುಪಾಗಿ, ಎಷ್ಟು ಸುಂದರವಾಗಿ ಇದ್ದಿತೆಂದರೆ—ಅವನನ್ನು ತನ್ನ ಮಗನೆಂದು ಹೇಳಿಕೊಳ್ಳುವುದಕ್ಕೆ ವೀನಸ್ ದೇವತೆ ಏನೂ ಹಿಂದುಮುಂದು ನೋಡಬೇಕಾದ್ದಿರಲಿಲ್ಲ. ಹಾಗೆಯೇ ಕಾಲ ಬಳಿ, ಆ ದೇವತೆಯ ಆಯುಧಗಳಾದ ಬಿಲ್ಲೂ, ಬತ್ತಳಿಕೆಯ ತುಂಬ ಬಾಣಗಳೂ ಇದ್ದುವು.

ತನ್ನ ಪತಿಯ ಅತಿಶಯದ ಆಯುಧಗಳನ್ನು ಕಂಡ ಅಷ್ಟರಿಂದಲೇ ಸೈಕೆಯ ಕುತೂಹಲ ಇಂಗಲಿಲ್ಲ. ಅದನ್ನೂ ಕೈಗೆತ್ತಿಕೊಂಡು ನೋಡಬಯಸಿದಳು. ಬತ್ತಳಿಕೆಯಿಂದ ಒಂದು ಬಾಣವನ್ನು ಎಳೆದು, ಅದರ ತುದಿ ಮೊನಚಾಗಿದೆಯೋ ನೋಡೋಣವೆಂದು ಹೆಬ್ಬೆರಳಿಗೆ ತಾಕಿಸಿದಳು. ಕೈ ನಡುಗುತ್ತಿತ್ತಾದ ಕಾರಣ, ತುಂಬ ಬಲವಾಗಿ ಒತ್ತಿದಳು. ಆ ತುದಿ ಚರ್ಮವನ್ನು ಚುಚ್ಚಿ, ಒಂದೆರಡು ಹನಿ ರಕ್ತ ಹೊರಗೆ ಬಂತು. ಹೀಗೆ ಸೈಕೆ, ಆಕಸ್ಮಿಕವಾಗಿ, ಪ್ರೇಮದೇವತೆಯ ಬಲೆಗೆ ಬಿದ್ದಳು. ಮೊದಲಿಗಿಂತ ಅತಿಶಯವಾದ ಪ್ರೇಮಾತುರಕ್ಕೆ ತುತ್ತಾದಳು. ಏದುಸಿರು ಎಳೆಯುತ್ತ, ಅವನ ಮೇಲೆ ಬಿದ್ದಳು. ಕಾಮಾಗ್ನಿಯ ಆವೇಗದಿಂದ ಅವನನ್ನು ಮುತ್ತುಗಳಲ್ಲಿ ಮುಚ್ಚಿದಳು. ಅವನು ಎಲ್ಲಿ ಬೇಗ ಎಚ್ಚರವಾಗಿಬಿಡುವನೋ ಎಂಬುದೊಂದೇ ಅವಳಿಗೆ ಆಗ ಇದ್ದ ಹೆದರಿಕೆ.

ಸಂತೋಷದ ಆಧಿಕ್ಯದಿಂದ ವ್ಯೆಯರಿಯದೆ, ಸೈಕೆ ಅವನನ್ನು ಬಿಗಿಯಾಗಿ ಕಟ್ಟಿಕೊಂಡಿರುವಾಗ ಅವಳ ಕೈಯಲ್ಲಿದ್ದ ದೀಪ, ಅದೇನು ದ್ರೋಹ ಮಾಡಬೇಕೆಂದೋ, ಅಥವಾ ಹೊಟ್ಟೆಕಿಚ್ಚಿನಿಂದಲೋ, ಇಲ್ಲವೆ ಆ ದೇವತೆಯ ಅನುಪಮವಾದ ದೇಹವನ್ನು ಮುಟ್ಟಬೇಕೆಂಬ ಆಸೆಯಿಂದಲೋ—ಏನೋ ಕಾರಣದಿಂದ ಒಂದೇ ಹನಿ ಸುಡುವ ಎಣ್ಣೆಯನ್ನು ಆ ದೇವತೆಯ ಬಲಗಡೆಯ ಭುಜದ ಮೇಲೆ ಸಿಡಿಸಿತು. ಏನು ಧೈರ್ಯ ಆ ದೀಪಕ್ಕೆ! ಏನು ಧೃಷ್ಟತನ ಆ ದೀಪಕ್ಕೆ!

ಕ್ಯುಪಿಡ್ ನೋವಿನಿಂದ ಕೂಗಿಕೊಂಡು ನೆಗೆದೆದ್ದನು. ಆ ಅವಲಕ್ಷಣದ ಪ್ರಕರಣವನ್ನೆಲ್ಲಾ ಒಂದು ಕ್ಷಣದಲ್ಲಿ ಗ್ರಹಿಸಿದನು. ಅದೇ ಕ್ಷಣದಲ್ಲಿಯೇ ತನ್ನ ರೆಕ್ಕೆಗಳನ್ನು ಬಿಚ್ಚಿಕೊಂಡು, ಮಾತನಾಡದೆ ಹಾರಿಹೋದನು.

ಸೈಕೆಯಾದರೂ ಸುಮ್ಮನಿರಲಿಲ್ಲ. ಹಾರಿಹೋಗುವ ಆ ದೇವತೆಯ ಬಲದ ಕಾಲನ್ನು ಎರಡು ಕೈಗಳಿಂದಲೂ ಒಮ್ಮೆಗೇ ಕಟ್ಟಿಕೊಂಡಳು. ಅವನ ಕಾಲಿಗೆ ಅಂಟಿಕೊಂಡು ಅವಳು ಅಂತರಿಕ್ಷದಲ್ಲಿ ಹೋದದ್ದು ತುಂಬ ವಿಚಿತ್ರವಾಗಿತ್ತು. ಆದರೆ, ಬೇಗನೆ ಅವಳ ಕೈಯ ಬಲ ಉಡುಗಿ, ಸೈಕೆ ಪುನಃ ಭೂಮಿಗೆ ಬಿದ್ದಳು.

ಕ್ಯುಪಿಡ್ ಆದರೂ ಸೈಕೆಯನ್ನು ಆ ಕೂಡಲೇ ತೊರೆದು ಬಿಡಲಿಲ್ಲ. ಹತ್ತಿರದ ಒಂದು ಸೈಪ್ರೆಸ್‌ವೃಕ್ಷದ ಮೇಲೆ ಇಳಿದು ಕುಳಿತು, ಅವಳನ್ನು ಆಕ್ಷೇಪಿಸಿ ಹೇಳಿದ: "ಛೀ, ಬುದ್ಧಿ ಇಲ್ಲದ ಸೈಕೆ! ನಿನಗೋಸ್ಕರ ನಾನು ನನ್ನ ತಾಯಿಯ ಮಾತನ್ನು ಕೂಡ ಉಲ್ಲಂಘಿಸಿ ಬಂದಿದ್ದೆ! ಯಾವನಾದರೂ ಒಬ್ಬ ದರಿದ್ರ ಅಸಾರ್ಥಕನ ಸಂಗಡ ನೀನು ಮೋಹಗೊಳ್ಳುವ ಹಾಗೆ ಮಾಡಬೇಕೆಂದು ಅವಳು ಆಜ್ಞೆಮಾಡಿದ್ದರೆ, ನಾನು ಸ್ವರ್ಗದಿಂದ ಇಳಿದುಬಂದು ನಾನೇ ನಿನ್ನ ಪ್ರಿಯನಾದೆ. ನಾನು ಯೋಚನೆ ಮಾಡದೆ ವರ್ತಿಸಿದೆನೆಂದು ಈಗ ನನಗೆ ಎನಿಸುತ್ತದೆ. ಈಗ ನೋಡು, ನನ್ನ ಪ್ರೀತಿಯ ಪರಿಣಾಮ ಏನಾಯಿತು! ಪ್ರಸಿದ್ಧ ಬಿಲ್ಗಾರನಾದ ಕ್ಯುಪಿಡ್ ತನ್ನ ಬಾಣಗಳಿಗೆ ತಾನೇ ಗುರಿಯಾಗಿ, ಒಬ್ಬ ಮನುಷ್ಯ ಕನ್ಯೆಯನ್ನು ಮದುವೆಯಾದರೆ, ಆ ಕನ್ಯೆ ಅವನನ್ನು ಒಂದು ವಿಕಾರವಾದ ವಿಷಜಂತು ಎಂದು ಭಾವಿಸಿದ್ದಾಳೆ! ತನ್ನನ್ನು ಅಷ್ಟೊಂದು ಪ್ರೇಮದಿಂದ ಪಾಲಿಸಿಕೊಂಡು ಬಂದವನ ಕೊರಳನ್ನು ಕತ್ತರಿಸಲು ಮಚ್ಚು ಮಸೆದಿದ್ದಾಳೆ. ಇದನ್ನು ಕುರಿತೇ ನಾನು ಮತ್ತೆ ಮತ್ತೆ ನಿನಗೆ ಎಚ್ಚರ ಕೊಟ್ಟಿದ್ದು, ಜೋಪಾನವಾಗಿರು ಎಂದು ಇದಕ್ಕೇ ಪುನಃ ಪುನಃ ಹೇಳಿದ್ದು. ನಿನ್ನನ್ನು ಹೀಗೆ ನನಗೆ ವಿರುದ್ಧವಾಗಿ ಎತ್ತಿಕಟ್ಟಿ, ನಿನ್ನ ಬುದ್ಧಿಯನ್ನು ಕೆಡಿಸಿದ ಆ ನಿನ್ನ ಅಕ್ಕಂದಿರಿಗೆ ನಾನು ಇಷ್ಟರಲ್ಲೇ ತಕ್ಕ ಶಾಸ್ತಿ ಮಾಡುತ್ತೇನೆ. ಆದರೆ ನಿನಗೆ ಮಾತ್ರ, ನನ್ನ ವಿಯೋಗವೊಂದೇ ತಕ್ಕ ಶಿಕ್ಷೆ."

ಹೀಗೆಂದು ಹೇಳಿ, ಕ್ಯುಪಿಡ್, ರೆಕ್ಕೆ ಬಿಚ್ಚಿ, ಹಾರಿಹೋದನು.

೯

ಸೈಕೆ, ನಿಶ್ಚೇತನಳಾಗಿ ನೆಲದ ಮೇಲೆ ಬಿದ್ದು, ಮುಲುಗುಟ್ಟುತ್ತಾ, ಅವನು ಮರೆಯಾಗುವವರೆಗೂ ಬಿಟ್ಟ ಕಣ್ಣಿನಿಂದ ನಿಟ್ಟಿಸಿದಳು. ಅವನು ಕಣ್ಣಿಗೆ ಮರೆಯಾದ ಮೇಲೆ, ಅಲ್ಲೇ ಹತ್ತಿರದಲ್ಲಿ ಹರಿಯುತ್ತಿದ್ದ ನದಿಯ ದಡವನ್ನು ಏರಿ, ಹೊಳೆಗೆ ಹಾರಿದಳು. ಆದರೆ ಆ ನದಿ ತನಗೆ ಸಹಜವಾದ

ದಯೆಯಿಂದ, ಕ್ಯುಪಿಡ್ ದೇವತೆಯ ಮೇಲಿನ ಗೌರವದಿಂದ, ಅವಳನ್ನು ತನ್ನ ಮೃದುವಾದ ಕೈಗಳೆಂಬ ಅಲೆಗಳಿಂದ ಎತ್ತಿ ತಂದು, ನೆನೆಸದಂತೆ, ದಡದಲ್ಲಿ ಹೂ ಕೆದರಿನ ಹುಲ್ಲಿನ ಮೇಲೆ ಮಲಗಿಸಿತು.

ಆಡಿನ ಕಾಲುಗಳುಳ್ಳ ಗ್ರಾಮದೇವತೆಯಾದ ಪ್ಯಾನ್ ಆ ಹೊತ್ತಿನಲ್ಲಿ ಅಲ್ಲಿಯೇ ಹತ್ತಿರ ಕುಳಿತು, ಬೆಟ್ಟಗಳ ದೇವತೆಯಾದ ಇಕೋವಿಗೆ ಅನೇಕ ರೀತಿಯ ಚೆಲವು ಗೀತಗಳನ್ನು ಹೇಳಿಕೊಡುತ್ತಿದ್ದನು. ಮೇಕೆಗಳ ಹಿಂಡು, ಹುಲ್ಲು ಅಗಿದು ತಿನ್ನುತ್ತಾ ಓಡಿಯಾಡುತ್ತಿದ್ದುವು.

ಸೈಕೆಯ ದುರವಸ್ಥೆ ಆಗಲೇ ಪ್ಯಾನ್ ದೇವತೆಗೆ ಅರಿವಾಗಿತ್ತು. ಅವನು ಆ ತಬ್ಬಲಿ ಹುಡುಗಿಯನ್ನು ಮೃದುವಾಕ್ಯದಿಂದ ಕರೆದು, ಅವಳಿಗೆ ಕೈಲಾದ ಸಮಾಧಾನ ಹೇಳಿದನು: "ಅಯ್ಯೋ, ಪಾಪ. ನಾನು ಮುದುಕ, ಕುರಿ ಕಾಯುವವ, ಹಳ್ಳಿಗ; ಆದರೂ, ಲೋಕದ ಕಷ್ಟಸುಖ ಕಂಡಿದ್ದೇನೆ. ನಿನ್ನ ಈ ಅಸ್ಥಿರವಾದ ನಡಿಗೆ, ಮುಖದ ಕಳೆಗೆಟ್ಟ ಬಣ್ಣ, ಈ ನಿರಂತರವಾದ ನಿಟ್ಟುಸಿರು, ಈ ದುಃಖ ತುಂಬಿದ ಕಣ್ಣು—ಇವುಗಳನ್ನೆಲ್ಲಾ ನೋಡಿದರೆ, ನೀನು ಪ್ರೇಮಕ್ಕೆ ಪರವಶಳಾಗಿದ್ದೀಯೆ ಎಂದು ನಿಸ್ಸಂದೇಹವಾಗಿ ಹೇಳಬಹುದಷ್ಟೆ? ನೋಡು: ಪುನಃ ಯಾವುದಾದರೂ ಕಮರಿಯಿಂದ ಹಾರಿಯೋ, ಇನ್ನೇನಾದರೂ ಮಾಡಿಕೊಂಡೋ, ಆತ್ಮಹತ್ಯೆಗೆ ಉದ್ಯೋಗಿಸಬೇಡ. ಈ ಅಳುವುದನ್ನು ನಿಲ್ಲಿಸು, ನಗುನಗುತ್ತ ಇರಲು ಯತ್ನಿಸು, ನಮ್ಮ ದೇವತೆಗಳಲ್ಲೆಲ್ಲ ಮಹಾದೇವನೆನಿಸಿದ ಕ್ಯುಪಿಡ್ ದೇವತೆಗೆ ಮೊರೆಯಿಡು. ಅವನನ್ನು ಮತ್ತೆ ಒಲಿಸಿಕೊಳ್ಳುವುದು ಸಾಧ್ಯ."

ಪ್ಯಾನ್ ಯಾರನ್ನಾದರೂ ಮಾತನಾಡಿಸುವುದೆಂದರೆ, ಅದು ಆಗುವ ಸೌಭಾಗ್ಯಕ್ಕೆ ಸೂಚನೆ. ಆದರೆ, ಸೈಕೆ ಏನೂ ಉತ್ತರ ಹೇಳಲಿಲ್ಲ. ಸುಮ್ಮನೆ ವಿಧೇಯಳಾಗಿ ವಂದಿಸಿ, ಮುಂದೆ ಹೋದಳು. ನದಿಯ ತೀರದಲ್ಲೇ ನಡೆಯಲಾರದೆ ನಡೆದಳು; ಕಡೆಗೆ ಅದೇನು ಕಾರಣವೋ ಏನೋ, ಪಕ್ಕದ ಒಂದು ಓಣಿಯಲ್ಲಿ ತಿರುಗಿಹೋದಳು. ಸಂಜೆಯ ಹೊತ್ತಿಗೆ ಒಂದಾನೊಂದು ನಗರಕ್ಕೆ ಬಂದಳು. ಅಲ್ಲಿ ಅವಳ ದೊಡ್ಡ ಅಕ್ಕ ರಾಣಿಯಾಗಿದ್ದಳೆಂದು ತಿಳಿದುಬಂತು.

ಸೈಕೆ, ತಾನು ಬಂದಿರುವುದನ್ನು ಹೇಳಿಕಳಿಸಿದಳು. ಆ ಅಕ್ಕ ಕುತೂಹಲದಿಂದ ಬಂದು, ತೋರಿಕೆಯ ಪ್ರೀತಿಯಿಂದ ತಂಗಿಯನ್ನು ತಬ್ಬಿಕೊಂಡು, ಅವಳ ಯೋಗಕ್ಷೇಮವನ್ನು ವಿಚಾರಿಸಿದಳು.

ಸೈಕೆ ಹೇಳಿದಳು: "ನಿನ್ನ ಗಂಡ ಒಂದು ಘಟಸರ್ಪ, ಅದು ನಿನ್ನನ್ನು ನುಂಗಿಬಿಡುತ್ತದೆ, ಅದನ್ನು ಮಚ್ಚಿನಿಂದ ಕತ್ತರಿಸಿಬಿಡು, ಎಂದು ನೀನು ಉಪಾಯ ಹೇಳಿದೆಯಲ್ಲಾ—ನಾನು ಅದರಂತೆ ಮಾಡಬೇಕೆಂದು, ದೀಪ ಹಚ್ಚಿಕೊಂಡು ನೋಡಿದಾಗ, ಹಾಸಿಗೆಯ ಮೇಲೆ ಒಂದು ಅದ್ಭುತವಾದ ದೃಶ್ಯ ಗೋಚರವಾಯಿತು! ವೀನಸ್ ದೇವತೆಯ ಸಾಕ್ಷಾತ್ ಪುತ್ರನಾದ ಕ್ಯುಪಿಡ್ ತಾನೇ ಅಲ್ಲಿ ಶಾಂತವಾಗಿ ನಿದ್ರಿಸುತ್ತಿದ್ದನು. ನನಗೆ ಏನು ಸಂತೋಷವಾಯಿತು, ಏನು ನಿಶ್ಚಿಂತೆಯಾಯಿತು, ಅದನ್ನು ವರ್ಣಿಸುವುದು ಸಾಧ್ಯವಿಲ್ಲ. ನನಗೆ ದಿಕ್ಕುತೋಚದೆ ಹೋಯಿತು, ಪ್ರೇಮದ ಆತುರ ತೀಕ್ಷ್ಣವಾಯಿತು. ಆಗ, ಕೈ ಸ್ವಲ್ಪ ನಡುಗಿ, ಒಂದು ಹನಿ ಸುಡುವ ಎಣ್ಣೆ ಅವನ ಭುಜದ ಮೇಲೆ ಸಿಡಿಯಿತು. ಕೂಡಲೆ ನೋವಿನಿಂದ ಅವನಿಗೆ ಎಚ್ಚರ ವಾಯಿತು. ನನ್ನ ಕೈಯ ದೀಪವನ್ನೂ ಮಚ್ಚನ್ನೂ ಕಂಡವನೆ, "ಎಲೆ ದುಷ್ಟ ಹೆಣ್ಣೆ, ಈ ಹಾಸಿಗೆಯಿಂದ ಈಗಲೇ ಆಚೆ ತೊಲಗು! ನಿನಗೂ ನನಗೂ ಈಗಿನಿಂದ ತೊರೆದುಹೋಯಿತು! ನಿನಗೆ ಬದಲಾಗಿ ನಾನು ನಿನ್ನ ಹಿರಿಯಕ್ಕ ನನ್ನು ಮದುವೆಯಾಗುತ್ತೇನೆ." ಎಂದು ಗದರಿಸಿ, ಪಶ್ಚಿಮಾನಿಲನನ್ನು ಕರೆದು, ನನ್ನನ್ನು ಅಲ್ಲಿಂದ ಆ ಗಳಿಗೆಯೇ ಓಡಿಸಿಬಿಟ್ಟನು. ಈಗ ನಿರ್ಗತಿಕ ಳಾಗಿ ಇಲ್ಲಿಗೆ ಬಂದಿದ್ದೇನೆ."

ಸೈಕೆ ಇನ್ನೂ ತನ್ನ ಕಥೆಯನ್ನು ಮುಗಿಸುವುದಕ್ಕಿಲ್ಲ; ಅಷ್ಟರಲ್ಲಿಯೇ ಅವಳ ಅಕ್ಕ ಅಲ್ಲಿಂದ ಎದ್ದು ಓಡಿದಳು. ತನ್ನ ತಂಗಿ ದೇವತೆಯೊಡನೆ ದೇಹಸಂಬಂಧವನ್ನು ಸಂಪಾದಿಸಿದಳೆಂದು ಅವಳಿಗೆ ಅಸೂಯೆ, ತಾನೂ ಅದೇ ಅನುಭವವನ್ನು ಪಡೆಯಬೇಕೆಂದು ಹೇರಾಸೆ; ಅದರಿಂದ ಆ ಕೂಡಲೆ ತನ್ನ ಗಂಡನ ಬಳಿಗೆ ಓಡಿ, "ನನ್ನ ತಾಯಿ ತಂದೆ ಸತ್ತರಂತೆ, ನೋಡಿಕೊಂಡು ಬರುತ್ತೇನೆ." ಎಂದು ಸುಳ್ಳು ಹೇಳಿ, ಹಡಗನ್ನು ಹತ್ತಿ ತವರುಮನೆಗೆ ಬಂದಳು. ಅಲ್ಲಿಂದ ನೇರವಾಗಿ ಬೆಟ್ಟದ ಬಂಡೆಗೆ ಏರಿದಳು. ಎಂದಿನಂತೆ

ಮೃದುವಾದ ಗಾಳಿ ಬೀಸುತ್ತಿರಲಿಲ್ಲ, ಗಾಳಿ ಬಿರುಸಾಗಿತ್ತು. ಆದರೂ ಅವಳು "ಇದೋ, ಕ್ಯುಪಿಡ್! ನಿನ್ನ ಪ್ರೀತಿಗೆ ತಕ್ಕಂತಹ ಹೆಣ್ಣು ನಾನು ಬಂದಿದ್ದೇನೆ. ಓ, ಪಶ್ಚಿಮಾನಿಲನೆ, ನಿನ್ನ ಒಡೆಯನ ಪ್ರಿಯೆಯನ್ನು ಈ ಒಡನೆ ಅರಮನೆಗೆ ಒಯ್ದುಹೋಗು!" ಎಂದು ಕೂಗುತ್ತ, ಕಣಿವೆಗೆ ಹಾರಿದಳು. ಆದರೆ ಅವಳ ಜೀವವಾಗಲಿ ದೇಹವಾಗಲಿ ಕಣಿವೆಯನ್ನು ಮುಟ್ಟಲೇ ಇಲ್ಲ; ಮಧ್ಯದಲ್ಲಿಯೇ ಮೊನಚಾದ ಬಂಡೆಗಳಿಗೆ ತಾಗಿ, ಚರ್ಮ ಮಾಂಸ ಕಿತ್ತುಹರಿದು, ಕರುಳೆಲ್ಲ ಹೊರಗೆ ಚೆಲ್ಲಿಕೊಂಡಿತು. ಅವಳಿಗೆ ಕರ್ಮಕ್ಕೆ ತಕ್ಕ ಫಲ ದೊರಕಿತು, ಮೃಗಗಳೂ ಪಕ್ಷಿಗಳೂ ಅವಳ ಮಾಂಸವನ್ನು ತಿಂದು ತೇಗಿದುವು.

ಸೈಕೆ ಹಾಗೇ ಅಲೆಯುತ್ತ ಅಲೆಯುತ್ತ, ಮತ್ತೊಂದು ನಗರಕ್ಕೆ ಬಂದಳು. ಅವಳ ಚಿಕ್ಕ ಅಕ್ಕ ಅಲ್ಲಿಗೆ ರಾಣಿ. ಅಲ್ಲಿಯೂ ಅದೇ ಕಥೆ ಹೇಳಿದಳು. ಆ ದುಷ್ಟಹೆಂಗಸು ಸೈಕೆಗೆ ಬದಲಾಗಿ ತಾನು ಕ್ಯುಪಿಡ್ ದೇವತೆಯ ಪ್ರೇಮಕ್ಕೆ ಪಾತ್ರಳಾಗಬೇಕೆಂದು ಕೂಡಲೆ ಹಡಗು ಹತ್ತಿ ಹೊರಟು, ಬೆಟ್ಟದ ಬಂಡೆಯನ್ನೇರಿ, ಅಕ್ಕನ ಹಾಗೆಯೇ ಹಾರಿದಳು. ಅವಳಿಗೂ ಅದೇ ಗತಿಯಾಯಿತು.

೧೦

ಕ್ಯುಪಿಡ್ ದೇವತೆಯನ್ನು ಅರಸುತ್ತಾ ಸೈಕೆ ದೇಶದೇಶಗಳನ್ನೆಲ್ಲಾ ಸುತ್ತಾಡಿದಳು. ಆದರೆ ಅವನು ಸ್ವರ್ಗದಲ್ಲಿ, ತನ್ನ ತಾಯಿಯ ಅಂತಃಪುರದಲ್ಲಿ, ನೋವಿನಿಂದ ನರಳುತ್ತಾ ಮಲಗಿದ್ದನು.

ಈ ಮಧ್ಯೆ, ಸಮುದ್ರದ ಅಲೆಗಳ ಅಗ್ರವನ್ನು ಸವರಿಕೊಂಡು ಹೋಗುವ ಒಂದಾನೊಂದ ಬಿಳಿಯ ಕಡಲುಹಕ್ಕಿ ನೀರಿನಲ್ಲಿ ಮುಳುಗಿ, ಸಮುದ್ರಸ್ನಾನ ಮಾಡುತ್ತಿದ್ದ ವೀನಸ್ಸಿಗೆ ಹೇಳಿತು: "ನಿನ್ನ ಮಗ ಮೈ ಸುಟ್ಟುಕೊಂಡು, ನೋವಿನಿಂದ ನರಳುತ್ತ ಮಲಗಿದ್ದಾನೆ. ಅವನು ಸ್ವಸ್ಥನಾಗುವನೋ ಇಲ್ಲವೋ ಎಂಬುದು ಸಂದೇಹವಾಗಿದೆ. ನಿನ್ನ ಮನೆವಾರ್ತೆ

ಯನ್ನು ಕುರಿತು ಎಲ್ಲರೂ ಏನೇನೋ ಆಡಿಕೊಳ್ಳುತ್ತಿದ್ದಾರೆ. ನಿನ್ನ ಮಗ ಯಾವುದೋ ಬೆಟ್ಟಕ್ಕೆ ಹಾರಿಹೋದನಂತೆ, ಅಲ್ಲಿ ಯಾವುದೋ ಹುಡುಗಿಯನ್ನು ಕಟ್ಟಿಕೊಂಡನಂತೆ, ನೀನು ಕೂಡ ನಿನ್ನ ಕರ್ತವ್ಯಗಳನ್ನು ತೊರೆದು ಬಿಟ್ಟು, ಅಲ್ಲಿ ಇಲ್ಲಿ ಅಲೆದಾಡುತ್ತಿದ್ದೀಯಂತೆ. ಇದರ ಪರಿಣಾಮವೇನಾಗಿದೆಯೆಂದರೆ—ಸಂತೋಷ, ಸೌಂದರ್ಯ, ಜಾಣತನ ಇವೆಲ್ಲಾ ಲೋಕದಿಂದ ಮಾಯವಾಗಿ, ಎಲ್ಲೆಲ್ಲಿ ನೋಡಿದರೂ ಗೋಳುಕರೆ, ಕುರೂಪ, ದಡ್ಡತನ ತಾನೇ ತಾನಾಗಿದೆಯಂತೆ. ಗಂಡಹೆಂಡಿರಿಗೂ ತಂದೆಮಕ್ಕಳಿಗೂ ಸ್ನೇಹಿತರಿಗೂ ಅನ್ಯೋನ್ಯ ತಪ್ಪಿಹೋಗಿದೆಯಂತೆ. ಮಾನವಪ್ರೇಮದ ತಂತ್ರ ಪದ್ಧತಿಯೆಲ್ಲ ಅತಂತ್ರವಾಗಿ ಹೋಗಿದೆಯಂತೆ. ಪ್ರೇಮವೆಂದರೆ, ಸ್ನೇಹವೆಂದರೆ ಕೇಳಿದವರು ಕೇಕೆ ಹಾಕಿ ನಗುವರಂತೆ."

ತನಗೆ ಸಂಬಂಧಪಡದ ವಿಷಯದಲ್ಲಿ ಪ್ರವೇಶಿಸಿ, ಆ ಹಕ್ಕಿ ಹಾಗೆ ಹೇಳಿತು. ವೀನಸ್ಸಿನ ಮನಸ್ಸಿನಲ್ಲಿ ವಿಷವನ್ನು ಹಿಂಡಿತು.

ವೀನಸ್ಸಿಗೆ ಸಹಜವಾಗಿ ಕೋಪ ಬಂತು: "ಓಹೋ, ನನಗೆ ಮಾತು ಕೊಟ್ಟು ಹೋದ ನನ್ನ ಮಗ ಯಾವುದೋ ಹುಡುಗಿಯನ್ನು ಕಟ್ಟಿಕೊಂಡು ಕುಣಿಯುತ್ತಿರುವನೋ! ಬಾ ಇಲ್ಲಿ, ಕಡಲುಹಕ್ಕಿ! ನನ್ನ ಮೇಲಿನ ವಿಶ್ವಾಸದಿಂದ ಇಷ್ಟೆಲ್ಲ ಸುದ್ದಿಯನ್ನು ತಂದುಹೇಳಿದ. ಇನ್ನೊಂದು ಉಪಕಾರ ಮಾಡು. ಏನೂ ಅರಿಯದ ನನ್ನ ಮಗುವನ್ನು ಹೀಗೆ ತನ್ನ ಬಲೆಗೆ ಕೆಡವಿಕೊಂಡಿರುವ ಆ ಮಾಯಾಂಗನೆಯ ಹೆಸರೇನು? ಅವಳು ಯಾರು? ಜಲಕನ್ನಿಕೆಯೋ? ವೃಕ್ಷಕನ್ನಿಕೆಯೋ? ಲತಾಕನ್ನಿಕೆಯೋ? ಯಾರು?"

ಯಾರೂ ಕೇಳದೆಯೇ ಅವರಿವರ ಮೇಲೆ ಚಾಡಿ ಹೇಳುವ ಹಕ್ಕಿಯನ್ನು ಕರೆದು ಕೇಳಿದರೆ, ಹೇಳದೆ ಬಿಟ್ಟೀತೆ?

"ನಾನು ಖಂಡಿತವಾಗಿ ಹೇಳಲಾರೆ. ಆದರೆ, ನಿನ್ನ ಮಗ, ಅದು ಯಾರೋ ಮನುಷ್ಯಕನ್ಯೆಯಂತೆ, ಸೈಕೆ ಎಂದು ಅವಳ ಹೆಸರಂತೆ, ಅವಳ ಮೋಹಕ್ಕೆ ಒಳಗಾಗಿರುವನಂತೆ, ಎಂದು ಹಾಗೇನೋ ಕೇಳಿದಂತೆ ನೆನಪು" ಎಂದಿತು.

ವೀನಸ್ ಉರಿದೆದ್ದಳು: "ಏನು, ಏನು! ಎಲ್ಲಾ ಬಿಟ್ಟು, ಆ ಹೆಣ್ಣನ್ನೆ? ನನ್ನ ಸ್ಥಾನವನ್ನು ಅನ್ಯಾಯವಾಗಿ ಆಕ್ರಮಿಸಿಕೊಂಡು, ನನ್ನ ಪೂಜೆ ಪುರಸ್ಕಾರಗಳನ್ನು ಅಪಹಾರಮಾಡಿದ ಆ ಸೈಕೆಯನ್ನೆ? ಇವನ್ನು ಇನ್ನು ಸಹಿಸಿಕೊಂಡು ಸುಮ್ಮನಿರುವುದು ಸಾಧ್ಯವಿಲ್ಲ. ಈ ಹುಡುಗಿಯ ವಿಷಯವನ್ನು ಇವನಿಗೆ ಮೊದಲು ತಿಳಿಸಿದವಳು ನಾನು. ನನ್ನನ್ನೇನು ಗಂಡಿಗೆ ಹೆಣ್ಣನ್ನು ಹೊಂದಿಸಿಕೊಡುವ ಕುಂಟಣಿಯೆಂದು ತಿಳಿದು ಕೊಂಡನೋ, ಈ ದರಿದ್ರ ಹುಡುಗ?"

ವೀನಸ್ ಕೂಡಲೇ ಸಮುದ್ರದಿಂದ ಮೇಲೆದ್ದು, ಸ್ವರ್ಗದಲ್ಲಿ ತನ್ನ ಚಿನ್ನದ ಕೊಠಡಿಗೆ ಹೋದಳು. ಕ್ಯುಪಿಡ್ ನೋವಿನಿಂದ ನರಳುತ್ತ ಹಾಸಿಗೆಯಲ್ಲಿ ಮಲಗಿದ್ದುದನ್ನು ಕಂಡಳು. ಇನ್ನೂ ಒಳಗೆ ಕಾಲಿಡುವು ದಕ್ಕಿಲ್ಲ, ತುದಿಗಂಟಲಲ್ಲಿ ಅರಚಿಕೊಂಡೇ ಬಂದಳು: "ಇದು ಸಭ್ಯವಾದ ನಡೆವಳಿಯೋ? ನಿನ್ನನ್ನು ಹೆತ್ತವರಿಗೆ ಒಳ್ಳೆಯ ಹೆಸರನ್ನು ತಂದೆ. ನೀನೂ ತುಂಬ ಹೆಸರುವಾಸಿಯಾದೆ. ತಾಯಿಯ ಮಾತೆಂದರೆ ಅಷ್ಟು ಅಲಕ್ಷ್ಯ ನಿನಗೆ, ಅಲ್ಲವೆ! ಕಸಕ್ಕಿಂತ ಕಡೆ! ನಾನು ಆಜ್ಞೆಮಾಡಿದ ಹಾಗೆ ಹೋಗಿ ನನ್ನ ಶತ್ರುವನ್ನು ಶಿಕ್ಷಿಸುವುದು ಬಿಟ್ಟು, ನೀನೇ ಅವಳೊಡನೆ ಮಲಗಿ ಕೊಂಡೆಯಲ್ಲವೆ! ನಿನ್ನ ವಯಸ್ಸೇನು, ನೀನು ಆಡುವ ಆಟಗಳೇನು? ಸೊಸೆಯೆಂದು ಅವಳನ್ನು ಸಂತೋಷದಿಂದ ಮನೆತುಂಬಿಸಿಕೊಳ್ಳುವೆನೆಂದು ಕೊಂಡೆಯೇನೋ? ಸದ್ಯಕ್ಕೆ ನನಗೆ, ನೀನೊಬ್ಬನೇ ಮಗನಾಗಿರಬಹುದು; ಆದರೆ, ನನಗೆ ಇಷ್ಟ ಬಂದರೆ, ನನಗಿನ್ನೂ ಮಕ್ಕಳನ್ನು ಹೆರುವ ವಯಸ್ಸು ಮುಗಿದುಹೋಗಿಲ್ಲ. ನನ್ನ ಐಶ್ವರ್ಯದಲ್ಲಿ ಒಂದು ಚೂರೂ ನಿನಗೆ ಬಾರದಂತೆ ನಿನ್ನ ಉತ್ತರಾಧಿಕಾರಿತ್ವವನ್ನು ತೊಡೆದುಬಿಟ್ಟೇನು! ಅಥವಾ, ಯಾರಾದರೂ ನನ್ನ ದಾಸಿಯ ಮಗನೊಬ್ಬನನ್ನು ದತ್ತು ತೆಗೆದುಕೊಂಡು, ನಿನ್ನ ಈ ರೆಕ್ಕೆಗಳನ್ನೂ ಪಂಜನ್ನೂ ಬಿಲ್ಲುಬಾಣಗಳನ್ನೂ ನಿನ್ನಿಂದ ಕಿತ್ತು ಅವನಿಗೆ ಕೊಟ್ಟುಬಿಡುತ್ತೇನೆ. ನೀನು ಹೀಗೆಲ್ಲಾ ದುರುಪಯೋಗಿಸ ಬೇಕೆಂದು ಅದನ್ನು ನಿನಗೆ ಕೊಡಲಿಲ್ಲ. ಇವೆಲ್ಲಾ ನಿನಗೆ ನನ್ನಿಂದ ಬಂದುವೇ ಹೊರತು, ನಿನ್ನ ತಂದೆಯಾದ ವಲ್ಕನ್ ಏನೂ ಕೊಟ್ಟಿದ್ದಲ್ಲ.

ಹುಟ್ಟಿದಂದಿನಿಂದಲೂ ನಾನೂ ನೋಡುತ್ತಿದ್ದೇನೆ, ನೀನು ಯಾವಾಗಲೂ ಹೀಗೇ ಚೇಷ್ಟೆ; ಇತರರನ್ನು ನೋಯಿಸಿ ನರಳಿಸುವುದೆಂದರೆ ನಿನಗೆ ಪರಮ ಪ್ರೀತಿ. ಹಿರಿಯರೆಂದರೆ ಗೌರವವಿಲ್ಲ, ಯಾರೆಂದರೆ ಅವರ ಮೇಲೆ ಬಾಣ ಪ್ರಯೋಗ ಮಾಡುವುದು ; ನಿನ್ನ ಆ ಶನಿ ಬಾಣಗಳನ್ನು ನನ್ನ ಮೇಲೂ ಎಡೆಬಿಡದೆ ಎಸೆದು, ಲೋಕದ ಎದುರಿಗೆ ನನ್ನ ಮರ್ಯಾದೆಯನ್ನೂ ಕಳೆಯು ವುದು! ತಾಯನ್ನು ಕೊಲ್ಲುವುದಕ್ಕೂ ಹೇಸದ ಪಾಪಿ ನೀನು! ಅಲ್ಲವೋ, ನಿನ್ನ ತಂದೆಯಾದ ವಲ್ಕನ್ನನೂ ನಾನೂ ಈಗ ಒಬ್ಬರೊಡನೊಬ್ಬರು ಮಾತ ನಾಡುತ್ತಿಲ್ಲ ಎಂಬ ಕಾರಣದಿಂದ ನನ್ನನ್ನು 'ವಿಧವಾ' ಎಂದು ಕರೆಯು ತ್ತೀಯಾ! ಅದೂ ಹೋಗಲಿ, ನಿನ್ನ ಮಲತಂದೆಯಾದ ಆ ಮಾರ್ಸ್‌ದೇವತೆ, ಆ ಮಹಾವೀರ, ಆ ಅಪರಾಜಿತ, ಅವನನ್ನು ಕಂಡರೂ ಭಯ ಭೀತಿಯಿಲ್ಲದೆ, ಅವನು ಕಂಡಕಂಡವರ ಹಿಂದೆ ಓಡುವ ಹಾಗೆ ಅವನ ಮೇಲೆ ಬಾಣಗಳ ನ್ನೆಸೆದು, ನನ್ನ ಹೊಟ್ಟೆಯುರಿಸುತ್ತೀಯಲ್ಲೋ! ಇರಲಿ, ಇರಲಿ, ಇದು ವರೆಗೆ ಆಡಿದ್ದು ಆಟ ಅಲ್ಲ. ಆ ಮನೆಹಾಳಿಯನ್ನು ಮದುವೆ ಮಾಡಿಕೊಂಡು ಮೆರೆದದ್ದಲ್ಲ. ಮಾಡುತ್ತೇನೆ, ಮಾಡುತ್ತೇನೆ!"

ಕ್ಯುಪಿಡ್ ಏನೂ ಉತ್ತರ ಕೊಡದೇ ಮಲಗಿದ್ದ. ವೀನಸ್ ತನಗೆ ತಾನೆ ಗೊಣಗುಟ್ಟಿಕೊಂಡಳು: "ಆಗಲಿ, ಆಗಲಿ. ಎಲ್ಲರೂ ನನ್ನನ್ನು ನೋಡಿ ನಗಲಿ. ಏನು ಮಾಡಬೇಕೋ, ಎಲ್ಲಿಗೆ ಹೋಗಬೇಕೋ, ನನಗೆ ಒಂದೂ ತೋಚದೆ ಇದೆ. ಆ ಅನಿಷ್ಟದ ಹೊಲಸು ಹುಡುಗಿಯನ್ನು ಹಿಡಿದು ಸೆರೆಯಿಡುವುದು ತಾನೆ ಹೇಗೆ? ಸರಿಯೆ, ಕಂಡವರ ಕಾಲು ಕಟ್ಟಿಕೊಳ್ಳ ಬೇಕು ಎಂದು ಕಾಣುತ್ತದೆ. ಇರಲಿ, ಇರಲಿ. ಇವನ ಬಾಣ ಬತ್ತಳಿಕೆ ಯನ್ನು ಕಿತ್ತುಕೊಂಡು, ಬಿಲ್ಲಿನ ಹಗ್ಗವನ್ನು ಹರಿದು, ಪಂಜನ್ನು ಆರಿಸಿ, ತಲೆಯ ಚಿಂಗೂದಲನ್ನು ತೆಗೆಯಿಸಿ, ರೆಕ್ಕೆಗಳನ್ನು ಕಟಾಯಿಸದಿದ್ದರೆ, ನಾನು ಇವನನ್ನು ಹೆತ್ತವಳೇ ಅಲ್ಲ. ಇರಲಿ, ಇರಲಿ. ಮಾಡುತ್ತೇನೆ."

ವೀನಸ್ ಆ ಕೂಡಲೆ ತನ್ನ ಮಲತಾಯಿಯಾದ ಜೂನೋ ದೇವತೆಯ ಬಳಿಗೂ ತನ್ನ ಚಿಕ್ಕಮ್ಮನಾದ ಸೀರೀಸ್ ದೇವತೆಯ ಬಳಿಗೂ ಓಡಿದಳು. ಅವಳ ದುಮುದುಮುಗುಟ್ಟುತ್ತಿದ್ದಮುಖವನ್ನು ಕಂಡು, "ಏಕೇ,

ವೀನಸ್? ಏನಾಯಿತಮ್ಮ? ಇದೇಕೆ ಈ ಸಿಡುಕು?'' ಎಂದು ಕೇಳಿದರು.

"ನಿಮ್ಮನ್ನೇ ನೋಡಬೇಕೆಂದು ಬಂದೆನಮ್ಮ. ನೀವು ನನಗೊಂದು ಉಪಕಾರ ಮಾಡಿದರೆ ನನ್ನ ಮನಸ್ಸು ಸ್ತಿಮಿತವಾಗುತ್ತದೆ. ಆ ಸೈಕ ಎಂಬುವಳ ಸುದ್ದಿಯನ್ನು ನೀವೆಲ್ಲಾ ಕೇಳಿರಬೇಕು, ನನ್ನ ಮಗ ಆಡಿರುವ ಆಟಗಳೆಲ್ಲಾ ಗೊತ್ತಿರಬೇಕು; ಆ ಸೈಕೆ ಎಲ್ಲಿಗೆ ಹೋಗಿದ್ದಾಳೆ ಎಂಬುದನ್ನು ನನಗೆ ಪತ್ತೆಮಾಡಿಕೊಡಿ."

ಜೂನೋ ಹೇಳಿದಳು: "ಹೌದು, ಹೌದು. ಕೇಳಿದ್ದೇವೆ. ಆದರೆ, ವೀನಸ್, ಇದನ್ನು ಅಷ್ಟಾಗಿ ಹಚ್ಚಿಕೊಳ್ಳಬಾರದು. ಅವನ ಸಂತೋಷಕ್ಕೆ ನೀನೇಕೆ ಅಡ್ಡಿಯಾಗಬೇಕು? ಅವನ ಹೆಣ್ಣನ್ನು ನೀನೇಕೆ ಹಾಳುಮಾಡ ಬೇಕು? ಪಾಪ, ಅವಳು ತಾನೆ ಏನು ಪಾಪ ಮಾಡಿದಳು? ಅಲ್ಲವೇ, ಚೆಲುವೆಯಾದ ಹುಡುಗಿಯೊಡನೆ ನಿನ್ನ ಮಗ ಮಲಗಿಕೊಂಡರೆ, ಅದನ್ನೇ ಮಹಾಪರಾಧ ಮಾಡಿಕೊಂಡುಬಿಡುವುದೇ?"

ಸೀರೀಸ್ ಹೇಳಿದಳು: "ನೋಡು, ವೀನಸ್. ನಿನ್ನ ಮಗ ನೋಡುವುದಕ್ಕೇನೋ ಮಗುವಿನ ಹಾಗೇ ಇದ್ದರೂ, ಅವನು ಬೆಳೆದು ಯುವಕನಾಗಿದ್ದಾನೆ ಎಂಬುದನ್ನು ಮರೆಯಬೇಡ. ಅವನ ವಯಸ್ಸೇನು, ಜ್ಞಾಪಿಸಿಕೊ? ಅಲ್ಲವೇ, ವಯಸ್ಸಿಗೆ ಬಂದ ಮಗ, ಅವನನ್ನು ಅವನ ಪಾಡಿಗೆ ಬಿಡುವುದು ಬಿಟ್ಟು, ಅವನು ಮಾಡಿ ಮುಟ್ಟುವುದರಲ್ಲಿ ನೀನು ಏಕೆ ಮಧ್ಯೆ ತಲೆಹಾಕಿಕೊಂಡು ಹೋಗುತ್ತೀಯೆ? ಇಷ್ಟಕ್ಕೂ, ಅವನ ಈ ಶೃಂಗಾರದ ಚೇಷ್ಟೆಗಳೆಲ್ಲವೂ ಅವನು ಯಾರಿಂದ ಕಲಿತದ್ದು? ನೂಲಿನಂತೆ ಸೀರೆ, ತಾಯಿಯಂತೆ ಮಗ! ಅಲ್ಲವೇ, ದೇವದಾನವ ಮಾನವರುಗಳಲ್ಲೆಲ್ಲ ಕಾಮವನ್ನೂ ಪ್ರೇಮವನ್ನೂ ಉದ್ರೇಕಗೊಳಿಸುವುದಕ್ಕೆ ಆದಿದೇವತೆಯಾದ ನೀನು ನಿನ್ನ ಮಗನಲ್ಲಿಯೇ ಅದೇ ಕಾಮಪ್ರೇಮಗಳನ್ನು ಅಂಕುರಿಸದಂತೆ ಅಡಗಿಸಬೇಕೆನ್ನುವೆಯಲ್ಲಾ, ಇದು ಯಾವ ನ್ಯಾಯ? ಕ್ಯುಪಿಡ್ ಹೀಗೆ ಕೊರಗುತ್ತ ಕುಳಿತುಬಿಟ್ಟರೆ, ಲೋಕದ ವ್ಯಾಪಾರ ನಡೆಯುವುದು ತಾನೆ ಹೇಗೆ?''

ಜೂನೋ ಆಗಲಿ, ಸೀರೀಸ್ ಆಗಲಿ, ಕ್ಯುಪಿಡಿನ ಪಕ್ಷ ವಹಿಸಿ ವಾದ ಮಾಡಬೇಕೆಂದು ವಾದಮಾಡುತ್ತಿರಲಿಲ್ಲ. ಅವರಿಗೆ ದಿಟವಾಗಿಯೂ ಅವನ ಬಾಣಗಳ ಏಟೆಂದರೆ, ಬಹು ಭಯ. ಆದ್ದರಿಂದ, ಅವನು ಎದುರಿಗೆ ಇಲ್ಲ ದಾಗಲೂ ಅವನ ವಿಷಯವಾಗಿ ಒಳ್ಳೆಯ ಮಾತನಾಡುವುದು ಕ್ಷೇಮವೆಂದು ಅವರು ಹಾಗೆ ಹೇಳಿದರು. ಅವರು ತನಗೆ ಸಹಾನುಭೂತಿ ತೋರುವುದಕ್ಕಿಂತ ಹೆಚ್ಚಾಗಿ ತನ್ನ ಮಗನ ಕಡೆಗೇ ವಹಿಸಿ ಮಾತನಾಡಿದರೆಂದು ಮುನಿಸಿಕೊಂಡು, ವೀನಸ್ ಅಲ್ಲಿಂದ ಎದ್ದು, ಪುನಃ ತನ್ನ ತವರು ಮನೆಯಾದ ಸಮುದ್ರಕ್ಕೆ ಸರಸರನೆ ಹಿಂದಿರುಗಿದಳು.

೧೧

ಇತ್ತ, ಸೈಕೆ, ಪೇಚಾಡುತ್ತಾ ಹಗಲೂ ರಾತ್ರೆ ತನ್ನ ಗಂಡನನ್ನು ಹುಡುಕಿಕೊಂಡು ಅಲೆದಾಡಿದಳು. ಅವನಿಗೆ ಎಷ್ಟೇ ಕೋಪಬಂದಿರುವು ದಾದರೂ, ತನ್ನ ಪ್ರಣಯದ ಆಪ್ತವಚನಗಳಿಂದ ಲಲ್ಲೆಗರೆದೋ, ಅಥವಾ ಪಶ್ಚಾತ್ತಾಪದಿಂದ 'ನೀನಲ್ಲದೆ ನನಗೆ ಬೇರೆ ಗತಿ ಇಲ್ಲ' ಎಂದು ಕಾಲಿಗೆ ಬಿದ್ದೋ, ಅವನ ಕ್ಷಮಾಪಣೆಯನ್ನು ಪಡೆಯುವೆನೆಂದು ಅವಳು ನಂಬಿದ್ದಳು.

ಒಂದು ದಿವಸ, ಯಾವುದೋ ಬೆಟ್ಟದ ಮೇಲಿನ ಒಂದು ದೇವಾಲಯ ಅವಳಿಗೆ ಗೋಚರವಾಯಿತು. "ನನ್ನ ಪತಿ ಅಲ್ಲಿ ಇರಬಹುದೋ ಏನೋ?" ಎಂದುಕೊಂಡು, ಮಾತನಾಡದೆ ಆ ಬೆಟ್ಟದ ಕಡೆಗೆ ನಡೆದಳು. ತುಂಬ ಪ್ರೀತಿಯಿಂದ ತುಂಬ ಭರವಸೆಯಿಂದ ಬೆಟ್ಟವನ್ನು ಕಷ್ಟಪಟ್ಟು ಹತ್ತಿದಳು. ದೇವಾಲಯವನ್ನು ಸೇರಿದಳು.

ಅಲ್ಲಿ ದೇವರ ಬಲಿಪೀಠದ ಹತ್ತಿರ ಗೋಧಿಯ ತೆನೆಗಳನ್ನೂ ಗೋಧಿಯ ಸರಗಳನ್ನೂ ನವಣೆಯ ತೆನೆಗಳನ್ನೂ ಕುಡುಗೋಲು ಮುಂತಾದ ಸುಗ್ಗಿಯ ಕುಯಿಲಿನ ಉಪಕರಣಗಳನ್ನೂ ಅಲ್ಲಿ ಕಂಡಳು. ಕುಯಿಲು ಮಾಡಿದವರು ಅಲಕ್ಷ್ಯದಿಂದ ಸಂಜೆಯ ಕೊನೆಗೆ ಅವುಗಳನ್ನು ಅಲ್ಲಿ ಎಸೆದುಹೋದ ಹಾಗಿತ್ತು.

ಸೈಕೆ ಅವುಗಳನ್ನೆಲ್ಲಾ ಜೋಪಾನವಾಗಿ ಬೇರೆ ಬೇರೆ ಮಾಡಿ, ಜೋಡಿಸಿ ಇಡತೊಡಗಿದಳು. "ಈ ದೇವತೆಯ ದೇವಾಲಯಕ್ಕೆ ಬಂದಿದ್ದೇನೆ. ಈ ದೇವತೆಯ ಸಹಾಯವನ್ನು ಬೇಡಬೇಕಾಗಿದೆ. ಆದ್ದರಿಂದ ಈ ದೇವತೆಗೆ ನಾನು ಸೇವೆಮಾಡುವುದು ತಕ್ಕದ್ದು." ಎಂದುಕೊಂಡಳು.

ಹೌದು, ಅದು ಉದಾರಿಯಾದ ಸೀರೀಸ್ ದೇವತೆಯ ದೇವಸ್ಥಾನ· ಸೈಕೆ, ಚೆಲ್ಲಾಪಿಲ್ಲಿಯಾಗಿ ಕೆದರಿದ್ದನ್ನು ಸರಿಯಾಗಿ ತೆಗೆದಿರಿಸುವುದು ನೋಡಿ' ಸೀರೀಸ್ ದೂರದಿಂದಲೇ ಕೂಗಿದಳು: "ನೋಡು, ಸೈಕೆ. ವೀನಸ್ ನಿನ್ನ ವಿಷಯದಲ್ಲಿ ಕೆಂಡವಾಗಿದ್ದಾಳೆ. ನಿನಗಾಗಿ ಎಲ್ಲೆಲ್ಲಿಯೂ ಹುಡುಕುತ್ತಿದ್ದಾಳೆ. ನಿನಗೆ ಕ್ರೂರವಾಗಿ ಶಿಕ್ಷಿಸಬೇಕೆಂದಿದ್ದಾಳೆ. ನೀನು ನಿನ್ನನ್ನು ಕಾಪಾಡಿ ಕೊಳ್ಳುವುದು ಬಿಟ್ಟು, ನನ್ನ ಸೇವೆಯಲ್ಲಿ ಏಕೆ ಹೊತ್ತು ಹಾಳುಮಾಡಿ ಕೊಳ್ಳುವೆ, ಅಮ್ಮ?"

ಸೈಕೆ ಆ ದೇವತೆಯ ಕಾಲಿಗೆರಗಿದಳು, ಅವಳ ತಲೆಗೂದಲು ದೇವ ಸ್ಥಾನದ ನೆಲವನ್ನು ಗುಡಿಸಿತು. ಸೈಕೆಯ ಕಣ್ಣೀರು ಸೀರೀಸ್ ದೇವತೆಯ ಕಾಲುಗಳನ್ನು ತೊಳೆಯಿತು.

"ಓ, ಸೀರೀಸ್ ದೇವತೆ, ನಿನ್ನ ಕೈಯಲ್ಲಿರುವ ಕಾಳಿನ ತೆನೆಗಳ ಮೇಲೆ ಆಣೆ, ಸುಗ್ಗಿಯಕಾಲದ ಸಂತೋಷಸಮಯದ ಆಣೆ, ನಿನ್ನ ಉತ್ಸವ ದಲ್ಲಿ ಹೊರುವ ಬಿದಿರುಬುಟ್ಟಿಗಳಲ್ಲಿ ತುಂಬಿರುವುದರ ಮೇಲಿನ ಆಣೆ, ನಿನ್ನ ರಥವನ್ನೆಳೆಯುವ ರೆಕ್ಕೆಯ ಸರ್ಪಗಳ ಆಣೆ, ನಿನ್ನ ಮಗಳಾದ ಪ್ರೊಸರ್ಪಿನೆ ಯನ್ನು ಅಪಹರಿಸಿಕೊಂಡು ಹೋದ ಆ ಕ್ರೂರದೇವತೆಗೆ ಅವಕಾಶ ಕೊಟ್ಟ ನೇಗಿಲಗೆರೆಯ ಆಣೆ, ಆ ದೇವತೆಯ ರಥಚಕ್ರಗಳ ಆಣೆ, ಆ ಮಗಳನ್ನು ಒಳಗೆ ನುಂಗಿಕೊಂಡ ಭೂಮಿಯ ಮೇಲೆ ಆಣೆ, ಪ್ರೊಸರ್ಪಿನೆಗೆ ಕೆಳಗಿನ ಅಂಧಂತಮಸ್ಸಿನಲ್ಲಿ ಜರುಗಿದ ಆ ದುಮ್ಮಾನದ ಮದುವೆಯ ಆಣೆ, ಅವಳು ನಗುನಗುತ್ತ ಪಂಜಿನ ಬೆಳಕಿನಲ್ಲಿ ಭೂಮಿಗೆ ಹಿಂದಿರುಗಿದ ಹರ್ಷೋತ್ಸವದ ಹೊತ್ತಿನಾಣೆ, ನಿನ್ನ ಇತರ ಮಹಾರಹಸ್ಯಗಳ ಮೇಲಿನ ಆಣೆ, ಓ ದೇವತೆ ಸೀರೀಸ್! ದಯೆಮಾಡಿ ನನಗೆ ನೆರವಾಗು. ನಾನು ಅಸಹಾಯಳಾಗಿ ನಿನಗೆ ಶರಣಾಗಿದ್ದೇನೆ. ಕೆಲವು ದಿವಸಗಳ ಮಟ್ಟಿಗಾದರೂ, ವೀನಸ್

ದೇವತೆಯ ಕೋಪ ಶಾಂತವಾಗುವವರೆಗಾದರೂ, ನಾನು ತಲೆಮರೆಸಿಕೊಂಡಿರಲು ನಿನ್ನ ಗೋಧಿಯ ತೆನೆಗಳ ಮರೆಯಲ್ಲಿ ನನಗೆ ಇಷ್ಟು ಅವಕಾಶಕೊಡು. ಅದೂ ಆಗದೆ ಹೋದರೆ, ನಾನು ಇಲ್ಲಿ ಸ್ವಲ್ಪ ವಿಶ್ರಮಿಸಿಕೊಳ್ಳಲು ಅನುಜ್ಞೆ ಕೊಡು. ನಾನು ಆ ಅರಮನೆಯಿಂದ ಹೊರಟದ್ದು ಮೊದಲುಗೊಂಡು, ಒಂದೇ ಸಮನೆ ನಡೆಯುತ್ತಿದ್ದೇನೆ. ತುಂಬ ಆಯಾಸವಾಗಿದೆ, ಸ್ವಲ್ಪ ಸುಧಾರಿಸಿಕೊಳ್ಳುತ್ತೇನೆ. " ಎಂದು ಸೈಕೆ ಬೇಡಿಕೊಂಡಳು.

ಅದಕ್ಕೆ ಸೀರೀಸ್ ಹೇಳಿದಳು: "ನಿನ್ನ ಈ ಕಣ್ಣೀರೂ ಈ ಕೊರಗೂ ನೋಡಿದರೆ ನನಗೆ ಮರುಕವುಂಟಾಗುತ್ತದೆ. ನನಗೂ ನಿನಗೆ ಸಹಾಯ ಮಾಡಬೇಕೆಂದು ಇಷ್ಟ. ಆದರೆ, ವೀನಸ್ ದೇವತೆಯನ್ನು ನಾನು ಎದುರು ಹಾಕಿಕೊಳ್ಳುವಂತಿಲ್ಲ. ಯುಗಯುಗಾಂತರಗಳಿಂದ ನನಗೂ ಅವಳಿಗೂ ಒಳ್ಳೇ ಸ್ನೇಹ ನಡೆದುಬಂದಿದೆ. ಅವಳಾದರೂ ಏನು ಅಂತಹ ಕೆಟ್ಟವಳಲ್ಲ, ಅವಳ ಹೃದಯ ದಿಟವಾಗಿಯೂ ತುಂಬ ಮೃದು. ಆದರೂ ನೀನು ಈ ಕೂಡಲೆ ಈ ದೇವಸ್ಥಾನದಿಂದ ಹೊರಟುಹೋಗುವುದು ಕ್ಷೇಮ. ನಿನ್ನನ್ನು ನಾನು ಸೆರೆಹಿಡಿದು ಬಂಧಿಸುತ್ತಿಲ್ಲವಲ್ಲಾ, ಅದಕ್ಕೆ ಸಂತೋಷಪಡು."

ಸೈಕೆ ಸುಮ್ಮನೆ ಹೊರಟಳು. ಅವಳ ದುಃಖ ಮೊದಲಿಗೆ ಇಮ್ಮಡಿಯಾಗಿತ್ತು. ಹೀಗೆ ಮುಖಮುರಿದು ಕಳಿಸುತ್ತಾಳೆಂದು ಅವಳು ಎಂದು ಕೊಂಡಿರಲಿಲ್ಲ.

ಅಲ್ಲಿಂದ ಹೊರಟವಳಿಗೆ, ಕೆಳಗಿನ ಕಣಿವೆಯಲ್ಲಿ, ಮರಗಳಿಂದ ಕಪ್ಪಾದ ವನವೊಂದರ ನಡುವೆ ಮತ್ತೊಂದು ಸುಂದರವಾದ ದೇವಾಲಯ ಗೋಚರವಾಯಿತು. ಏನೋ ಹೇಗೋ, ಯಾವ ದೇವತೆ ಸಹಾಯ ಮಾಡಿದರೂ ಸಾಕು, ಹೋಗಿ 'ರಕ್ಷಣೆ ಮಾಡು' ಎಂದು ಬೇಡಿಕೊಳ್ಳೋಣ, ಎಂದುಕೊಂಡು ಸೈಕೆ ಅಲ್ಲಿಗೆ ಹೋದಳು. ಅಲ್ಲಿ, ವನದೊಳಗಿನ ಮರಗಳಿಗೆ ಮುಡಿಸಿದ್ದ ಹೂಹಾರಗಳನ್ನೂ ಬಾಗಿಲುಗಳಿಗೆ ಕಟ್ಟಿದ್ದ ತೋರಣಗಳನ್ನೂ ನೋಡಿದಳು. ಅಲ್ಲಲ್ಲೆ ಪಟ್ಟೆಪೀತಾಂಬರಗಳನ್ನೂ ನೋಡಿದಳು; ಅವುಗಳ ಮೇಲೆ ಜೂನೋ ದೇವತೆಯ ಹೆಸರನ್ನೂ ಆ ದೇವತೆ ತನ್ನ ಭಕ್ತರಿಗೆ ಮಾಡಿರುವ ಉಪಕೃತಿಗಳನ್ನೂ ಉಲ್ಲೇಖಿಸಿದ್ದರು.

ಸೈಕೆ ಮೊಣಕಾಲೂರಿ, ಕಣ್ಣೀರುಗಳನ್ನು ಒರಸಿಕೊಳ್ಳುತ್ತಾ, ದೇವಾಲಯದ ಬಲಿಪೀಠವನ್ನು ಬಿಗಿಯಾಗಿ ತಬ್ಬಿಕೊಂಡು, ಪ್ರಾರ್ಥನೆ ಮಾಡಿದಳು: "ಜ್ಯೂಪಿಟರ್ ಮಹಾದೇವತೆಗೆ ಸೋದರಿಯೂ ಪತ್ನಿಯೂ ಆದವಳೆ, ನೀನು ಈ ಹೊತ್ತಿನಲ್ಲಿ ಎಲ್ಲಿ ಇರುವೆಯೋ ಏನೋ! ನೀನು ಹುಟ್ಟಿ, ಬಾಲ್ಯಕಾಲದಲ್ಲಿ ಬೆಳೆದಾಡಿದ ಸಾಮೊಸ್ ದ್ವೀಪದ ಪ್ರಾಚೀನ ದೇವಾಲಯಗಳಲ್ಲಿ ಇರುವೆಯೋ, ಕನ್ಯಾರೂಪದಿಂದ ಸಿಂಹವನ್ನು ಹೂಡಿದ ರಥದಲ್ಲಿ ಕಾರ್ಥೇಜ್ ನಗರಕ್ಕೆ ಹೋಗಿರುವೆಯೋ, ದೇವದೇವನ ಮಹಾದೇವಿಯೆಂದು ನಿನಗೆ ಪೂಜೆಯೊಪ್ಪಿಸುವ ಆರ್ಗಾಸ್ ನಗರವನ್ನು ರಕ್ಷಿಸುತ್ತಿರುವೆಯೋ, ನೀನು ಎಲ್ಲಿರುವೆಯೋ ಕಾಣೆ. ಪೂರ್ವದೇಶವೆಲ್ಲಾ ನಿನ್ನನ್ನು ಮದುವೆಯ ಅಧಿದೇವತೆಯೆಂದೂ, ಪಶ್ಚಿಮದವರೆಲ್ಲಾ ನಿನ್ನನ್ನು ಪ್ರಸವದ ಅಧಿದೇವತೆಯೆಂದೂ ಕೊಂಡಾಡುವರು. ಈಗ ನಾನು, ನೀನಲ್ಲದೆ ಬೇರೆ ರಕ್ಷಕರಿಲ್ಲ, ಎಂದು ನಿನಗೆ ಶರಣಾಗಿದ್ದೇನೆ. ನನ್ನನ್ನು ತುಳಿದು ಒತ್ತುತ್ತಿರುವ ಈ ದುರವಸ್ಥೆಯಲ್ಲಿ, ನೀನು ನನ್ನನ್ನು ಉದ್ಧಾರಮಾಡು. ನನ್ನನ್ನು ಭಯಗೊಳಿಸುತ್ತಿರುವ ಅಪಾಯಗಳನ್ನು ನಿವಾರಿಸಿ, ನನ್ನನ್ನು ಸಲಹು. ಓ ದೇವಿ, ನನಗೆ ತುಂಬ, ತುಂಬ ಆಯಾಸವಾಗಿದೆ; ನನಗೆ ತುಂಬ, ತುಂಬ ಹೆದರಿಕೆಯಾಗಿದೆ. ಕಷ್ಟಕ್ಕೆ ಒಳಗಾಗಿರುವ ಗರ್ಭಿಣಿಯರಿಗೆ ಅಭಯದಾನ ಮಾಡುವುದರಲ್ಲಿ ನಿನಗಿಂತ ಮಿಗಿಲಾದವರು ಇಲ್ಲ, ಎಂದು ಬಲ್ಲೆ. ನೀನು ನನ್ನನ್ನು ಕೈಬಿಡದೆ ಕಾಪಾಡು."

ಜೂನೋ ತನ್ನ ಸಮಸ್ತ ದೇವವೈಭವದಿಂದ ಪ್ರತ್ಯಕ್ಷಳಾದಳು. ಹೇಳಿದಳು: "ಮಗೂ, ನಿನಗೆ ನೆರವಾಗಬೇಕೆಂದು ನನಗೇನೋ ತುಂಬ ಇಷ್ಟ. ಆದರೆ, ನೋಡು, ದೇವತೆಗಳಾದ ನಾವು ದೇವತೆಗಳನ್ನು ಎದುರು ಹಾಕಿಕೊಳ್ಳುವಂತಿಲ್ಲ. ನಿನಗೇ ಗೊತ್ತಿರುವ ಹಾಗೆ, ವೀನಸ್ ನನ್ನ ಮಗನಾದ ವಲ್ಕನ್ ದೇವತೆಯನ್ನು ಮದುವೆಯಾದಳು; ಆದ್ದರಿಂದ ಅವಳನ್ನು ನಾನು ಸ್ವಂತ ಮಗಳಂತೆಯೇ ನೋಡುತ್ತಿದ್ದೇನೆ. ನೀನಾದರೋ ಅವಳ ಕಣ್ಣಿನಿಂದ ತಪ್ಪಿಸಿಕೊಂಡು ತಲೆಮರೆಸಿಕೊಳ್ಳಲು ಯತ್ನಿಸುತ್ತಿರುವಳು.

ಇಂಥವಳಿಗೆ ಆಶ್ರಯ ಕೊಡುವುದು ದೇವಲೋಕದ ನೀತಿನಿಯಮಗಳಿಗೆ ತೀರ ವಿರುದ್ಧವಾದದ್ದು."

ಹೀಗೆ ಎರಡನೇ ಸಲ ಮತ್ತೆ ತನ್ನ ಆಸೆಗಳೆಲ್ಲ ಭಗ್ನವಾದುದು ಕಂಡು, ಸೈಕೆಯ ದುಃಖ ಹೇಳತೀರದು. 'ಇನ್ನು ತನ್ನ ಪತಿಯನ್ನು ಅರಸಿಹೋಗಿ ಕಾಣುವುದು ನನ್ನ ಕೈಲಾಗದು' ಎಂದು ಕುಸಿದಳು. "ನಿಮ್ಮಂತಹ ದೊಡ್ಡ ದೇವತೆಗಳೇ ಹೀಗೆ ನನ್ನ ಕೈಬಿಟ್ಟರೆ, ನಿಮ್ಮ ಕರುಣೆಯ ಮಾತು ಕಾರ್ಯದಲ್ಲಿ ಪರಿಣಾಮವಾಗದಿದ್ದರೆ, ಜಗತ್ತಿನಲ್ಲಿ ನಾನು ಯಾರ ರಕ್ಷಣೆಯನ್ನು ಪಡೆಯಲಿ? ಅದೃಷ್ಟವು ಬೀಸಿದ ಬಲೆಯಲ್ಲಿ ನನ್ನ ಕಾಲುಗಳು ಸಿಕ್ಕಿ ತೊಡರಿಕೊಂಡು, ನಾನು ಯಾರ ಸಹಾಯವನ್ನು ಕೇಳಿದರೂ ಏನೂ ಫಲ ವಿಲ್ಲದೆ ಹೋಗಿದೆ. ಮಹಾದೇವತೆಯಾದ ವೀನಸ್ಸಿನ ಕಣ್ಣುಗಳಿಗೆ ಬೀಳದಂತೆ ಎಲ್ಲಿ ನಾನು ಅಡಗಿಕೊಳ್ಳಲಿ? ಯಾರು ನನಗೆ ಗತಿ? ಯಾರು ನನಗೆ ದಿಕ್ಕು?" ಎಂದು ನಿರಾಶೆಯಿಂದ ನರಳಿದಳು.

ಅದಕ್ಕೆ ಜೂನೋ ಹೇಳಿದಳು: "ನೋಡು, ಸೈಕೆ. ಯಥಾರ್ಥವನ್ನು ಹೇಳುವುದಾದರೆ, ನೀನು ಸ್ವಲ್ಪ ಗಂಡುಧೈರ್ಯವನ್ನು ತಂದುಕೊಳ್ಳಬೇಕು. ವೀನಸ್ ದೇವತೆಗೆ ಸಿಕ್ಕದಹಾಗೆ ತಪ್ಪಿಸಿಕೊಳ್ಳುವೆನೆಂಬ ವ್ಯರ್ಥವಾದ ಭ್ರಮೆಯನ್ನು ಬಿಟ್ಟುಬಿಟ್ಟು, ನೀನಾಗಿಯೇ ಹೋಗಿ ಅವಳ ಕೈಗೆ ಒಪ್ಪಿಸಿಕೊಂಡು ಬಿಡು. ಅದೂ ಅಲ್ಲದೆ, ನಿನ್ನ ಗಂಡನಿಗಾಗಿ ನೀನು ಎಲ್ಲೆಲ್ಲಿ ಹುಡುಕಿದರೂ, ಅದೆಲ್ಲ ವ್ಯರ್ಥ. ಅವನನ್ನು ಕಾಣಬೇಕಾದರೆ, ಒಂದೇ ಒಂದು ಕಡೆ: ನಿನ್ನ ಅತ್ತೆಯ ಮನೆಯಲ್ಲಿ."

ಜೂನೋ ಹೇಳಿದ ಕರ್ತವ್ಯವನ್ನು ನಡಸುವುದು ಅಪಾಯದಿಂದ ಕೂಡಿತ್ತು, ಅದು ಆತ್ಮಘಾತಕವೇ ಎಂದು ಹೇಳಬಹುದು. ಆದರೆ ಅದು ಹೊರತು ಬೇರೆ ದಾರಿಯಿಲ್ಲ. ಯಾವ ರೀತಿಯಲ್ಲಿ ತನ್ನ ಅತ್ತೆಯನ್ನು ಬೇಡಿಕೊಂಡು, ಅವಳ ಅನುಗ್ರಹವನ್ನು ಸಂಪಾದಿಸುವುದು, ಎಂದು ಸೈಕೆ ಚಿಂತಿಸಿದಳು.

೧೨

ಈ ಮಧ್ಯೆ, ವೀನಸ್, ಮನುಷ್ಯಲೋಕದವರು ಯಾರನ್ನು ನೆಚ್ಚಿಕೊಂಡರೂ ತಾನು ಸೈಕೆಯನ್ನು ಕಂಡುಹಿಡಿಯುವ ಸಂಭವವಿಲ್ಲ ಎಂದುಕೊಂಡು, ಮತ್ತೆ ಸ್ವರ್ಗಕ್ಕೆ ಹಿಂದಿರುಗಿದಳು. ತನ್ನ ರಥ ಪ್ರಯಾಣಕ್ಕೆ ಸಿದ್ಧವಾಗಲಿ, ಎಂದು ಆಜ್ಞೆ ಮಾಡಿದಳು. ಚೊಕ್ಕ ಚಿನ್ನದ ರಥ, ಪರಮೋತ್ಕೃಷ್ಟವಾದ ಕುಸುರಿಕೆಲಸದಿಂದ ಕಂಗೊಳಿಸುತ್ತಿದ್ದ ರಥ ಸಿದ್ಧವಾಯಿತು. ಅದು ಅವಳ ಗಂಡನಾದ ವಲ್ಕನ್ ಅವಳಿಗೆ ಮದುವೆಯ ಉಡುಗೊರೆಯಾಗಿ ಕೊಟ್ಟದ್ದು. ನಾಲ್ಕು ಬಿಳಿಯ ಬಣ್ಣದ ಪಾರಿವಾಳಗಳು ತಮ್ಮ ಕಾಮನಬಿಲ್ಲಿನ ಕೊರಳುಗಳನ್ನು ಆ ರಥದ ನೊಗಕ್ಕೆ ಹೂಡಿ ಎಳೆದುಕೊಂಡು ಚುರುಕಾಗಿ ಹೋಗುವುವು. ವೀನಸ್ ದೇವತೆ ಆ ರಥದಲ್ಲಿ ಹೊರಟಳೆಂದರೆ, ತುಂಟು ಗುಬ್ಬಚ್ಚಿಗಳೂ ಇನ್ನೂ ಕೆಲವು ಚಿಕ್ಕ ಹಕ್ಕಿಗಳೂ ಹಿಂಡುಹಿಂಡಾಗಿ ಹಿಂದೆ ಹೊರಟು, ಚಿಲಿಪಿಲಿ ಎಂದು ಹಾಡುತ್ತಾ ಹೋಗುವುವು.

ವೀನಸ್ ತನ್ನ ರಥವನ್ನು ಏರಿದಳು. ಮೋಡಗಳು ಮರೆಯಾದುವು. ಆಕಾಶ ದಾರಿ ಬಿಟ್ಟಿತು. ಅದರ ಮೇಲಿನ ಸ್ವರ್ಗಮಾರ್ಗ ಅವಳನ್ನು ಆನಂದದಿಂದ ಬರಮಾಡಿಕೊಂಡಿತು. ಅವಳ ಹಿಂದೆ ಹೊರಟ ಗಾಯಕ ಪಕ್ಷಿಗಳು ಹೊಟ್ಟೆಬಾಕ ಹದ್ದುಗಳ, ಬಂದೆರಗುವ ಡೇಗೆಗಳ ಭೀತಿಯೇನೂ ಇಲ್ಲದೆ ಹಾಡುತ್ತಾ ಹೋದುವು.

ವೀನಸ್ ನೇರವಾಗಿ ಜ್ಯೂಪಿಟರ್ ದೇವತೆಯ ದೇವಭವನಕ್ಕೆ ಬಂದಳು. ಸ್ವರ್ಗದ ಸರ್ವಸುದ್ದಿಗಾರನಾದ ಮರ್ಕ್ಯುರಿ ದೇವತೆಯ ಮೂಲಕ ತನ್ನ ಆಗಮನವನ್ನು ಹೇಳಿಕಳಿಸಿದಳು, ತಡವಿಲ್ಲದೆ ಜ್ಯೂಪಿಟರನನ್ನು ಕಾಣಲೇಬೇಕಾಗಿದೆ, ಎಂದಳು. ಜ್ಯೂಪಿಟರ್ ಕೂಡಲೆ ಅವಳಿಗೆ ಸಂದರ್ಶನವನ್ನು ಕರುಣಿಸಿದನು. ವೀನಸ್ಸಿಗೆ ಸಂತೋಷವಾಗುವಂತೆ ಮಾತನಾಡಿದನು. ಅವಳ ಆಜ್ಞೆಗಳನ್ನು ನೆರವೇರಿಸುವಂತೆ ಮರ್ಕ್ಯುರಿಗೆ ಅಪ್ಪಣೆ ಮಾಡಿದನು.

ವೀನಸ್ ಮರ್ಕ್ಯುರಿಗೆ ಹೇಳಿದಳು: "ಗಮನವಿಟ್ಟು ಕೇಳು, ಮರ್ಕ್ಯುರಿ. ನಿನ್ನ ಸಹಾಯವಿಲ್ಲದೆ ಇದುವರೆಗೆ ಯಾವ ಕಾರ್ಯವನ್ನೂ ನಾನು ಕೈಕೊಂಡದ್ದಿಲ್ಲ. ಇದನ್ನು ನೀನು ಬಲ್ಲೆ. ಈಗ ಪ್ರಕೃತವೇನೆಂದರೆ: ನನ್ನ ದಾಸಿಯೊಬ್ಬಳು ಕೈಗೆ ಸಿಕ್ಕದೆ ತಪ್ಪಿಸಿಕೊಂಡಿದ್ದಾಳೆ, ಬಹು ದಿವಸದಿಂದ ಅವಳ ಸುದ್ದಿಯೇ ಇಲ್ಲ. ಆದ್ದರಿಂದ ಅವಳನ್ನು ಹುಡುಕಿ ತಂದು ಒಪ್ಪಿಸುವವರಿಗೆ ಬಹುಮಾನ ಕೊಡುವೆನೆಂದು ಕೂಡಲೇ ಡಂಗುರ ಹಾಕಿಸು. ಅವಳಿಗೆ ಯಾರಾದರೂ ಆಶ್ರಯ ಕೊಟ್ಟು, ಅವಳು ಯಾರೆಂಬುದು ಸರಿಯಾಗಿ ಅವರಿಗೆ ಗೊತ್ತಿಲ್ಲದಿದ್ದರೆ, ಇದೋ, ಅವಳ ಚಹರೆಪಟ್ಟಿ ಇಲ್ಲಿದೆ. ಅವಳಿಗೆ ಸಂಬಂಧಿಸಿದ ಸಮಸ್ತ ವಿಷಯವೂ ಈ ಪುಸ್ತಕದಲ್ಲಿ ಬರೆದಿದೆ. ಇದನ್ನು ಎಲ್ಲರಿಗೂ ಶ್ರುತಪಡಿಸು. ಅವಳ ಹೆಸರು—ಸೈಕೆ." ಹೀಗೆಂದು ಹೇಳಿ, ಸೈಕೆಯ ಚರಿತ್ರೆಯನ್ನೊಳಗೊಂಡ ಪುಟ್ಟ ಪುಸ್ತಕವೊಂದನ್ನು ಅವನ ಕೈಯಲ್ಲಿಟ್ಟು, ವೀನಸ್ ಮನೆಗೆ ಹೋದಳು.

ಮರ್ಕ್ಯುರಿ ದೇಶದಿಂದ ದೇಶಕ್ಕೆ ಡಂಗುರಹಾಕುತ್ತಾ ಹೋದ: "ಕೇಳಿ, ಕೇಳಿ: ವೀನಸ್ ದೇವತೆಯ ದಾಸಿಯಾದ ಆ ರಾಜಕುಮಾರಿ, ಸೈಕೆ ಎಂಬುವಳು, ಅವಳಿಗೆ ಯಾರಾದರೂ ಆಶ್ರಯ ಕೊಟ್ಟಿದ್ದರೆ, ಅಥವಾ ಇಂಥವರು ಆಶ್ರಯ ಕೊಟ್ಟಿದ್ದಾರೆ ಎಂಬುದನ್ನು ತಿಳಿದಿದ್ದರೆ—ಅಂಥವರು ಅದನ್ನು ನನಗೆ, ಮರ್ಕ್ಯುರಿಗೆ, ತಿಳಿಯಪಡಿಸಲಿ. ರೋಂ ನಗರದಲ್ಲಿ, ಅಸಂತೀನ್ ಪರ್ವತದ ಮೇಲೆ, ನನ್ನ ದೇವಾಗಾರದಲ್ಲಿ ಯಾರು ಯಾವಾಗ ಬೇಕಾದರೂ ನನ್ನನ್ನು ಕಾಣಬಹುದು. ಅಂಥವರಿಗೆ ಕೊಡಲಾಗುವ ಬಹುಮಾನವೇನೆಂದರೆ—ಸಾಕ್ಷಾತ್ ವೀನಸ್ ದೇವತೆಯೇ ನೇರವಾಗಿ ತನ್ನ ಮುಖದಿಂದ ಏಳು ಮುತ್ತುಗಳನ್ನು ಕೊಡುತ್ತಾಳೆ, ಜೊತೆಗೆ ತನ್ನ ಅಮೃತಮಯವಾದ ಸವಿನಾಲಿಗೆಯ ತುದಿಯನ್ನು ತನ್ನ ತುಟಿಗಳ ನಡುವಿನಿಂದ ನೀಡಿ ಸುಖಪಡಿಸುತ್ತಾಳೆ."

ಸೈಕೆಯ ಸುದ್ದಿಯನ್ನು ತಂದವರಿಗೆ ಬಹುಮಾನ ಏನು ಎಂಬ ವಾರ್ತೆಯನ್ನು ಕೇಳಿ, ಮಾನವವರ್ಗದಲ್ಲೆಲ್ಲಾ ಸಹಜವಾಗಿಯೇ ಒಂದು ಸ್ಪರ್ಧೆಯ ಮನೋಭಾವ ತಲೆದೋರಿತು. ವೀನಸ್ಸಿನ ಬಳಿಗೆ ಹೋಗಲು

ಮೀನಮೇಷ ಎಣಿಸುತ್ತಿದ್ದ ಸೈಕೆ ಮರ್ತ್ಯಲೋಕದವರ ಆತುರವನ್ನು ಕಂಡು, ಸ್ವರ್ಗಕ್ಕೆ ಹೋಗಲು ನಿರ್ಧರಿಸಿದಳು.

ವೀನಸ್ಸಿನ ಮನೆಯ ಬಾಗಿಲಿಗೆ ಬಂದಳೋ ಇಲ್ಲವೋ, ಆ ಮನೆಯ ಹಳೆಯ ಪೈಕದವಳೊಬ್ಬಳು ಅವಳ ಮುಖ ಕಂಡೊಡನೆಯೇ ಹೀಗೆಂದು ಕಿರಿಚಿಕೊಂಡಳು: "ಬಂದೆಯಾ, ಬಜಾರಿ! ಕಡೆಗೂ ಮನೆಗೆ ದಾರಿ ಗೊತ್ತಾಯಿತು, ಎನ್ನು! ನಾಚಿಕೆಗೆಟ್ಟ ಮೂಳಿ, ನಿನ್ನಿಂದ ಎಲ್ಲರಿಗೂ ಎಷ್ಟು ಕಾಟವಾಗುತ್ತಿದೆ ನೋಡು, ನಿನ್ನನ್ನು ಹುಡುಕಿಕೊಂಡು ಅಲೆದೂ ಅಲೆದೂ! ನೀನು ಈ ಮನೆಯಲ್ಲಿ ಬೇರೆ ಯಾರ ಕೈಗೂ ಸಿಕ್ಕದೆ, ನನ್ನ ಕೈಗೆ ಸಿಕ್ಕಿದ್ದು ತುಂಬ ಲೇಸಾಯಿತು. ನೇರವಾಗಿ ಬಂದು ನರಕದ ಬಾಯಿಗೇ ಬಿದ್ದಿರುವೆ! ನಿನ್ನನ್ನು ಹುರಿದು ಹುಗ್ಗಿಮಾಡಿಸುತ್ತೇನೆ, ಬಾ. ಸುಡುಗಾಡಿ!" ಎಂದು ಅಷ್ಟಕ್ಕೇ ನಿಲ್ಲದೆ, ಸೈಕೆಯ ತಲೆಗೂದಲಲ್ಲಿ ತನ್ನ ಬೆರಳುಗಳನ್ನು ಹಾಕಿ ಹಿಡಿದಳು. ಸೈಕೆ ತಾನಾಗಿಯೇ ಬರುವುದಕ್ಕೆ ಸಿದ್ಧವಾಗಿದ್ದರೂ, ಆ ಮುದುಕಿ ಅವಳನ್ನು ವೀನಸ್ಸಿನ ಸಮ್ಮುಖಕ್ಕೆ ದರ ದರನೆ ಎಳೆದುಕೊಂಡುಹೋದಳು.

ವೀನಸ್, ಕ್ರೋಧದ ಅತಿರೇಕದಿಂದ ಹುಚ್ಚುಹುಚ್ಚಾಗಿ ನಗ ತೊಡಗಿದಳು. ಸೈಕೆಯನ್ನು ಗದರಿಸುವಂತೆ ತಲೆದೂಗಿದಳು. ಹೆದರಿಸು ವಂತೆ ತನ್ನ ಬಲದ ಕಿವಿಯ ಹಿಂಭಾಗವನ್ನು ಕೆರೆದಳು. ಏಕೆಂದರೆ, ವೀನಸ್ಸಿನ ಬಲಕಿವಿಯ ಹಿಂದುಗಡೆ ಪ್ರತೀಕಾರದ ಸಿಂಹಾಸನವು ಪ್ರತಿಷ್ಠಿತ ವಾಗಿರುವುದಂತೆ.

"ಓಹೋ! ಕಡೆಗೂ ಬಂದೇಬಿಟ್ಟೆ, ನಿನ್ನ ಅತ್ತೆಯನ್ನು ನೋಡಿ ಮಾತನಾಡಿಸುವುದಕ್ಕೆ! ಅಥವಾ, ನೀನು ಮಾಡಿದ ಸುಟ್ಟಗಾಯದಿಂದ ಹಾಸಿಗೆ ಹಿಡಿದು ನರಳುತ್ತಿರುವ ನಿನ್ನ ಗಂಡನನ್ನು ಮಾತನಾಡಿಸಲು ಬಂದೆಯೋ? ಬಾ, ಬಾಮ್ಮ, ಬಾ. ಇದು ನಿನ್ನದೇ ಮನೆ. ಅತ್ತೆ ಯಾದವಳು ಮಗನ ಹೆಂಡತಿಯನ್ನು ಹೇಗೆ ಬರಮಾಡಿಕೊಳ್ಳಬೇಕೋ ಹಾಗೆ ಬರಮಾಡಿಕೊಳ್ಳುತ್ತೇನೆ." ಎಂದು ವೀನಸ್ ತನ್ನ ಕೈಗಳನ್ನು ತಟ್ಟಿ ದಳು. ಕಾತರ ಮತ್ತು ದುಃಖ ಎಂಬವರಿಬ್ಬರೂ ದೂತಿಯರು ಓಡಿ

ಂದರು. ವೀನಸ್ ಸೈಕೆಯನ್ನು ಅವರ ವಶಕ್ಕೆ ಒಪ್ಪಿಸಿದಳು. ಅವರಿ ್ರರೂ ಸೈಕೆಯನ್ನು ಎಳೆದುಕೊಂಡುಹೋಗಿ, ಕಶೆಯಿಂದ ಪ್ರಹರಿಸಿ, ನ್ನೂ ಯಾವುಯಾವುದೋ ವಿಧದಲ್ಲಿ ಚಿತ್ರಹಿಂಸೆ ಮಾಡಿ, ಪುನಃ ಅವ ನ್ನು ಎಳೆದುತಂದು ವೀನಸ್ಸಿನ ಕಾಲಬಳಿ ಕೆಡವಿದರು.

ವೀನಸ್ ಮತ್ತೆ ಹುಚ್ಚುಹುಚ್ಚಾಗಿ ನಗುತ್ತಾ ಕಿರಿಚಿದಳು; ಆಹಾಹಾಹಾ! ಹಾದರಗಿತ್ತಿ! ಇವಳ ಈ ದೊಡ್ಡಹೊಟ್ಟೆ ನೋಡಿದರೆ, ಯ್ಯೋ ಪಾಪ ಎನ್ನಿಸುತ್ತದೆ. ಎಷ್ಟೇ ಆದರೂ, ಇವಳ ಹೊಟ್ಟೆಯ ುಗುವಿಗೆ ನಾನು ಅಜ್ಜಿ ತಾನೆ! ಅಜ್ಜಿಯಂತೆ, ಅಜ್ಜಿ! ಈ ವಯಸ್ಸಿಗಾ ಲೇ ನನ್ನನ್ನು ಅಜ್ಜಿ ಮಾಡಿಬಿಟ್ಟಳಲ್ಲಾ ಈ ಮೂಳಿ! ಅಬ್ಬಾ, ಈ ರಿದ್ರಳಾದ ದಾಸಿಯ ಪಿಳ್ಳೆ ಸಾಕ್ಷಾತ್ ವೀನಸ್ಸಿಗೆ ಮೊಮ್ಮಗುವಂತೆ! , ಅದು ಎಂದಿಗೂ ಆಗಲು ಆಗದು. ದೇವತೆಗೂ ಮನುಷ್ಯರಿಗೂ ಮದುವೆಯಂತೆ! ಯಾವುದೋ ದೇಶದಲ್ಲಿ ಯಾರೂ ಸಾಕ್ಷಿಗಳಿಲ್ಲದ ಕಡೆ ಡೆಯಿತಂತೆ! ಹೆಣ್ಣಿನ ತಂದೆಗೆ ಕೂಡ ಗಂಡು ಯಾರೆಂದು ತಿಳಿಯ ಂತೆ, ಯಾವ ನ್ಯಾಯ ಈ ವರ್ತನೆಯನ್ನು ಒಪ್ಪುತ್ತದೆ? ನೀನು ಒಂದು ೇಳೆ ನಿನ್ನ ಮಗುವನ್ನು ಪ್ರಸವಿಸಿಕೊಂಡರೂ, ಅದು ಬೇರೆ ನನ್ನ ಮಗನ ಮಗು ಎನ್ನಿಸಿಕೊಳ್ಳುವುದಿಲ್ಲ. ಎಂದಿಗೂ ಇಲ್ಲ. ಇದು ಖಂಡಿತ."

ವೀನಸ್ ಅಷ್ಟಕ್ಕೇ ನಿಲ್ಲಲಿಲ್ಲ. ಅಸಹಾಯಳಾದ ಸೈಕೆಯ ಕಡೆಗೆ ಹಾರಿ, ಅವಳ ತಲೆಗೂದಲುಗಳನ್ನು ಕಿತ್ತು, ಅವಳ ತೋಳು ಹಿಡಿದು ಕುಲುಕಿ ದರಿ, ಪಾಡು ಪಜೀತಿಪಡಿಸಿಬಿಟ್ಟಳು. ಅನಂತರ ಒಂದು ಇಷ್ಟು ೋಧಿ, ನವಣೆ, ಸಾವೆ, ಕಡಲೆ, ಉದ್ದು, ಮೆಣಸು, ಸಾಸಿವೆ ಇವನ್ನು ಕರಿಸಿ, ಒಟ್ಟಿಗೆ ಒಂದು ದೊಡ್ಡ ರಾಶಿ ಮಾಡಿದಳು. "ಕೇಳೇ, ಗುಲಾಮ ತ್ತಿ! ನನ್ನ ಮಗನ ಹೆಂಡತಿಯಾದವಳು ಮೈಮುರಿಯ ದುಡಿದು ಕೆಲಸ ಮಾಡಬೇಕು. ನಿನ್ನ ಯೋಗ್ಯತೆಯನ್ನು ನಾನು ಈಗ ಪರೀಕ್ಷಿಸುತ್ತೇನೆ, ನಗೆ ಕೆಲಸ ಏನು ಬರುತ್ತದೆಯೋ ನೋಡುತ್ತೇನೆ. ಕಾಣುವುದೇನೇ, ಇಲ್ಲಿ ಒಟ್ಟಿಗೆ ಬೆರಿಕೆಮಾಡಿ ಗುಡ್ಡೆಹಾಕಿರುವ ಬೇರೆ ಬೇರೆ ಕಾಳಿನ ರಾಶಿ? ಇದನ್ನೆಲ್ಲಾ ವಿಂಗಡಿಸಿ, ಒಂದೊಂದು ಕಾಳನ್ನೂ ಬೇರೆ ಬೇರೆ

ರಾಶಿ ಮಾಡು. ರಾತ್ರಿಯಾಗುವುದರೊಳಗಾಗಿ ನಿನ್ನ ಕೈಯ ಕೌಶಲವನ್ನು ತೋರಿಸು, ನೋಡೋಣ." ಎಂದು ಹೇಳುತ್ತಾ ಇದ್ದಹಾಗೆಯೇ, ಯಾವುದೋ ಮದುವೆಯ ಊಟವನ್ನು ಜ್ಞಾಪಿಸಿಕೊಂಡು ಅಲ್ಲಿಂದ ಹಾರಿಹೋದಳು.

೧೩

ಸೈಕೆ ಆ ಅಸಾಧ್ಯವನ್ನು ಮಾಡಲು ತೊಡಗದೆ. ಸುಮ್ಮನೆ ಅದನ್ನೆ ಕುರಿತು ನೋಡುತ್ತ ಕುಳಿತಳು. ಆಗ ಒಂದು ಸಣ್ಣ ಇರುವೆ ಅಲ್ಲಿ ಹೋಗುತ್ತಾ, ಸೈಕೆಯ ಪೇಚಾಟವನ್ನು ಕಂಡಿತು. ಪ್ರೇಮದೇವತೆಯ ಪ್ರಿಯೆಗಾಗಿ ಆ ಇರುವೆ ಮರುಕಗೊಂಡು, ಅವಳ ಕ್ರೂರಿಯಾದ ಅತ್ತೆಗೆ ಅನೇಕ ರೀತಿಯಾದ ಶಾಪಗಳನ್ನಿಕ್ಕಿತು. ಗುಡುಗುಡನೆ ಓಡಿಯಾಡಿ, ಆ ಪ್ರಾಂತದಲ್ಲಿದ್ದ ಇರುವೆಗಳನ್ನೆಲ್ಲ ಒಂದೆಡೆ ಕರೆಯಿತು. "ಅಕ್ಕತಂಗಿಯರಿರಾ, ನೀವು ನಿರಂತರವಾಗಿ ದುಡಿಯುವ ಭೂಮಿತಾಯಿಯ ಮಕ್ಕಳು. ಈ ಅರಿಯದ ಹುಡುಗಿಯ ಮೇಲೆ ನಿಮ್ಮ ಕೃಪಾದೃಷ್ಟಿ ಬೀಳಲಿ. ಇವಳು ಸಾಕ್ಷಾತ್ ಕಾಮದೇವನ ಕಾಮಿನಿ. ಪ್ರಾಣಾಪಾಯಕರವಾದಂಥ ಕಷ್ಟಕ್ಕೆ ಸಿಕ್ಕಿದ್ದಾಳೆ. ಬೇಗ, ಇವಳಿಗೆ ನಾವು ಸಹಾಯಮಾಡಿಕೊಡೋಣ." ಎಂದಿತು.

ಇರುವೆಗಳ ಆರು ಕಾಲುಗಳೂ ಬುಡಬುಡು ಓಡಿದುವು. ಇರುವೆಗಳು ಅಲೆಯ ಮೇಲೆ ಅಲೆಯಾಗಿ ಬಂದುವು. ಬರಬರನೆ ಕಾಳುಕಾಳನ್ನು ಬೇರೆ ಬೇರೆ ಮಾಡಿದುವು. ಸ್ವಲ್ಪಹೊತ್ತಿನಲ್ಲಿಯೇ ಒಂದೊಂದು ಕಾಳನ್ನೂ ಬೇರೆ ಬೇರೆ ಗುಡ್ಡೆಮಾಡಿಟ್ಟು, ಓಡಿಹೋದುವು.

ಸಂಜೆಯ ಹೊತ್ತಿಗೆ ವೀನಸ್ ಬಂದಳು. ಮದ್ಯವನ್ನು ಸ್ವಲ್ಪ ಮಿತಿ ಮೀರಿಯೇ ಕುಡಿದಿದ್ದಳು. ಕಾಮೋತ್ತೇಜಕವಾದ ಲೇಪನಗಳ ಪರಿಮಳ ಹೊಡೆಯುತ್ತಿತ್ತು. ಗುಲಾಬಿಯ ಮಾಲೆಗಳನ್ನು ಮೈತುಂಬ ಹೇರಿಕೊಂಡಿದ್ದಳು. ಸೈಕೆ ಎಷ್ಟು ಶೀಘ್ರವಾಗಿ ತನಗೆ ಒಪ್ಪಿಸಿದ್ದ ಕಾರ್ಯವನ್ನು

ೂನೆಮುಟ್ಟಿಸಿದಳು ಎಂಬುದನ್ನು ಕಂಡಳು. "ಅಯ್ಯೋ ಅನಿಷ್ಟವೇ, ನೀನು
ನ್ನ ಕೈಯಾರೆ ಈ ಕಾರ್ಯವನ್ನು ಮಾಡಲಿಲ್ಲವೆಂದು ನಾನು ಬಲ್ಲೆ.
ಾರಿಗೋ ಏನೋ ಮಂಕುಬೂದಿ ಎರಚಿ, ಅವರಿಂದ ಈ ಕೆಲಸವನ್ನು
ಾಡಿಸಿಕೊಂಡಿದ್ದೀಯೆ! ಆದರೆ, ಇಷ್ಟಕ್ಕೆ ಬಿಟ್ಟೇನೇ ನಿನ್ನನ್ನ?" ಎಂದು
ಂಗಿಸಿ, ಒಂದು ಒಣಕಲು ರೊಟ್ಟಿಯ ಚೂರನ್ನು ಎಸೆದು, ಮಲಗಿ
ೊಳ್ಳಲು ಹೋದಳು.

ವೀನಸ್ ಕ್ಯುಪಿಡ್ಡನ್ನು ಇನ್ನೂ ತನ್ನ ಶಯನಗೃಹದಲ್ಲಿಯೇ ಬಂಧಿಸಿ
ಳು. ಇದರಲ್ಲಿ ಅವಳಿಗೆ ಎರಡು ಉದ್ದೇಶವಿತ್ತು. ಒಂದು—ಪುನಃ
ನ್ನ ತುಂಟಾಟಗಳಿಗೆ ತೊಡಗಿ, ಮತ್ತೆ ನೋವು ಮಾಡಿಕೊಳ್ಳದಿರಲಿ,
ಂದು; ಇನ್ನೊಂದು—ಸೈಕೆಯನ್ನು ಅವನು ಪುನಃ ಸೇರದಿರಲಿ, ಎಂದು.
ೀಗಾಗಿ, ಒಂದೇ ಮನೆಯಲ್ಲಿದ್ದರೂ, ಆ ಪ್ರಣಯಿಗಳಿಬ್ಬರೂ ಒಬ್ಬರ
ನ್ನೊಬ್ಬರು ಕಾಣದೆ ಖಿನ್ನರಾಗಿದ್ದರು.

ಬೆಳಗಾಯಿತು, ಉಷಾದೇವಿಯ ರಥ ಹೊರಟಿತು. ವೀನಸ್ ಸೈಕೆ
ಯನ್ನು ಕರೆದು ಹೇಳಿದಳು: "ಆ ನದಿ ಕಾಣುವುದೇನೇ? ಅದರ ಅಂಚಿ
ಲ್ಲಿರುವ ವನ ಕಾಣುವುದೋ? ಅಲ್ಲಿ ಚಿನ್ನದ ತುಬಟದ ಕುರಿ ಮೇಯು
ವೆ. ಕುರುಬ ಯಾರೂ ಅಲ್ಲಿ ಇಲ್ಲ. ಹೋಗಿ ಹೇಗಾದರೂ ಮಾಡಿ,
ವುಗಳ ಮೈಮೇಲಿನ ತುಬಟ ಇಷ್ಟನ್ನು ಎತ್ತಿಕೊಂಡು ಬಾ."

ಸೈಕೆ ಲಗುಬಗೆಯಿಂದ ಎದ್ದಳು, ಆದರೂ ಅವಳಿಗೆ ವೀನಸ್ ಹೇಳಿದ
ೆಲಸವನ್ನು ಮಾಡಬೇಕೆಂದು ಉದ್ದೇಶವಿರಲಿಲ್ಲ. ಹೊಳೆಗೆ ಹೋಗಿ,
ುಮುಕಿ, ತನ್ನ ದುಃಖಗಳನ್ನೆಲ್ಲಾ ಕೊನೆಗಾಣಿಸಬೇಕೆಂದು ನಿಶ್ಚಯಿಸಿ
ೊಂಡಿದ್ದಳು. ಆದರೆ ಅಲ್ಲಿ, ಪ್ಯಾನ್ ದೇವತೆಯು ತಾನು ಪೀಪಿಯೂದು
ುದಕ್ಕೆ ಉಪಯೋಗಿಸುವ ತೆರದ ಒಂದು ಹಸಿರು ಜೊಂಡು, ಯಾವುದೋ
ೇವಪ್ರೇರಿತವಾದ ಗಾಳಿಗೆ ವಶವಾಗಿ, ಆಕೆಗೆ ಪಿಸುಮಾತಿನಲ್ಲಿ
ೇಳಿತು: "ತಡೆ, ಸೈಕೆ, ತಡೆ. ನೀನು ಎಂತಹ ದಾರುಣವಾದ ದುಃಖ
ಳನ್ನು ಅನುಭವಿಸಿರುವೆಯೆಂದು ನಾನು ಬಲ್ಲೆ. ಆದರೆ, ಆತ್ಮಹತ್ಯೆ
ಾಡಿಕೊಂಡು ನೀನು ಈ ಪವಿತ್ರವಾದ ನೀರನ್ನು ಮೈಲಿಗೆ ಮಾಡು

ವುದು ತಕ್ಕದ್ದಲ್ಲ. ಅಲ್ಲದೆ, ಆ ವನಕ್ಕೆ ಹೋಗಬೇಡ. ಆ ಕುರಿಗಳು ಸಾಧುವಲ್ಲ, ಅಲ್ಲಿ ಹೋದರೆ ನಿನ್ನ ಜೀವಕ್ಕೆ ಅಪಾಯ. ಸ್ವಲ್ಪ ತಾಳು. ಈ ಮಧ್ಯಾಹ್ನದ ಬೇಗೆಗೆ ಅವುಗಳಿಗೆ ರೋಷ ಉಕ್ಕಿ, ಹತ್ತಿರ ಹೋದ ವರನ್ನು ಕೊಂದುಬಿಡುತ್ತವೆ. ಟಗರುಗಳು ಕೊಂಬಿನಿಂದ ತಿವಿಯುತ್ತವೆ, ಅಥವಾ ತಲೆಯಿಂದ ಗುಮ್ಮುತ್ತವೆ, ಇಲ್ಲವೇ ವಿಷದ ಹಲ್ಲುಗಳಿಂದ ಕಡಿದು ಬಿಡುತ್ತವೆ. ಅದೇ, ಬಿಸಿಲು ಇಳಿಯಲಿ ನೋಡು, ಈ ನೀರಿನ ಅಲೆಗಳ ಜೋಗುಳಕ್ಕೆ ಅವು ನಿದ್ರೆಮಾಡುತ್ತವೆ. ನಾನು ಇಲ್ಲಿ ಕುಡಿಯುವ ಇದೇ ನೀರನ್ನು ತಾನೂ ಕುಡಿಯುತ್ತಿರುವ ಆ ದೊಡ್ಡಮರದ ಅಡಿಯಲ್ಲಿ ಅಡ ಗಿಕೋ. ಕುರಿಗಳು ಶಾಂತವಾಗಿ ನಿದ್ರೆಹೋದಾಗ, ವನಕ್ಕೆ ಹೋಗು; ಅಲ್ಲಿನ ಪೊದೆಗಳಿಗೆ ಅಂಟಿಕೊಂಡಿರುವ ಅವುಗಳ ಮೈಯ ತುಬಟನನ್ನು ಹೆಕ್ಕಿಕೋ."

ಹೀಗೆ ಆ ನೇರವಾಗಿ ಬೆಳೆದ ಜೊಂಡು ದಯೆಯಿಂದ ಹೇಳಿದ ಬುದ್ಧಿವಾದವನ್ನು ಸೈಕೆ ಶಿರಸಾವಹಿಸಿದಳು. ಅದೇ ಸಂಜೆಯ ಹೊತ್ತಿಗೆ ಮಡಿಲಿನ ತುಂಬ ಆ ಕುರಿಗಳ ಚಿನ್ನದ ತುಬುಟನನ್ನು ತುಂಬಿಕೊಂಡು, ವೀನಸ್ಸಿಗೆ ತಂದುಕೊಟ್ಟಳು. ಅಷ್ಟು ಅಪಾಯಕರವಾದ್ದ ಈ ಎರಡ ನೆಯ ಸಾಹಸವನ್ನು ನೆರವೇರಿಸಿದರೂ, ವೀನಸ್ಸಿಗೆ ತೃಪ್ತಿಯಾಗಲಿಲ್ಲ. ಹುಬ್ಬು ಗಂಟುಹಾಕಿದಳು. ಕ್ರೂರವಾಗಿ ನಗುತ್ತಾ ಹೇಳಿದಳು: "ಪುನಃ ಯಾರೋ ನಿನಗೆ ಸಹಾಯಮಾಡುತ್ತಿದ್ದಾರೆ. ಆಗಲಿ. ಈಗ ಇನ್ನೊಂದು ಕಾರ್ಯವನ್ನು ನೇಮಿಸುತ್ತೇನೆ, ನಿನ್ನ ಧೈರ್ಯವನ್ನೂ ವಿವೇಕವನ್ನೂ ಪರೀಕ್ಷಿ ಸುತ್ತೇನೆ. ಅಲ್ಲಿ ಆ ಎತ್ತರದ ಬೆಟ್ಟದ ತುತ್ತತುದಿ ಕಾಣುವುದೇನೆ? ಅದೋ ಅಲ್ಲಿ ಒಂದು ಕಪ್ಪುಬಣ್ಣದ ಝರಿ ನಿರಿನಿರಿಯಾಗಿ ದುಮುಕುತ್ತಿದೆ, ಅಲ್ಲಿನ ಪ್ರಪಾತಗಳಿಂದ ಕೆಳಗಿನ ಕಣಿವೆಗೆ ಬಿದ್ದು, ಮುಂದೆ ನರಕದ ನದಿಗೆ ಹೋಗಿ ಸೇರುತ್ತದೆ. ಇದೋ, ಈ ಹೂಜಿ ತೆಗೆದುಕೋ. ಈಗಲೇ ಹೋಗು, ಇದರ ತುಂಬ ಹಿಮಶೈತ್ಯದ ನೀರನ್ನು, ಅದು ಬಂಡೆ ಯನ್ನು ಸೀಳಿಕೊಂಡು ಬರುವ ಸ್ಥಳದಿಂದಲೇ ತುಂಬಿಕೊಂಡು, ಬೇಗ

ರಾ. ಜೋಕೆ, ನೀರಿಲ್ಲದೆ ಬರಿಯ ಪಾತ್ರೆ ಹಿಡಿದು ಬಂದರೆ, ನಿನಗೆ ಗತಿ ಾಣಿಸಿಯೇನು !"

ವೀನಸ್ ಕೊಟ್ಟ ಶುದ್ಧಸ್ಫಟಿಕದ ಹೂಜಿಯನ್ನು ಹಿಡಿದುಕೊಂಡು, ್ರೈಕೆ ಬೆಟ್ಟದ ತುದಿಗೆ ಹತ್ತಿದಳು. ಏನಾದರೂ ಒದಗಿ, ತನ್ನ ಹಾಳು ಾಳು ಮುಗಿದರೆ ಸಾಕೆಂದು ಬಯಸುತ್ತಾ ಸಾಗಿದಳು. ಝರಿಯ ಾತ್ತಿರ ಬಂದಂತೆಲ್ಲಾ, ವೀನಸ್ ತನಗೆ ಎಂತಹ ಅಸಾಧ್ಯವಾದ ಕಾರ್ಯ ವನ್ನು ನೇಮಿಸಿದ್ದಳೆಂಬುದನ್ನು ಕಂಡಳು. ಆ ಕರಿಯ ಕೆಸರಿನ ಕ್ರೂರ ಾದ ನೀರು ಪಾಚಿಕಟ್ಟಿದ ಆ ಬೆಟ್ಟದ ಮುಖದ ಮಧ್ಯೆ ಚಿಮ್ಮುತ್ತಿತ್ತು. ಎಷ್ಟೋ ಕಲ್ಪಗಳಿಂದ ಅದು ಅಲ್ಲಿಂದ ದುಮುಕುತ್ತಿದ್ದಿರಬೇಕು. ಅಷ್ಟೇ ಅಲ್ಲ, ಆ ನೀರು ಚಿಮ್ಮುವ ಸ್ಥಳದಲ್ಲಿ ಆಚೆ ಈಚೆ ಎರಡು ಕ್ರೂರವಾದ ಿಕ್ಕೆಯ ಸರ್ಪಗಳು, ಸದಾ ತೆರೆದ ರೆಪ್ಪೆ ಮುಚ್ಚದೆ, ಎಚ್ಚರವಾಗಿ ಹರಿದಾಡು ತ್ತಿದ್ದುವು. ಆ ನೀರು ಹುಟ್ಟಿ, ದುಮುಕಿ, ಹರಿದು ಹೋಗುವಾಗ ಅಲ್ಲಲ್ಲೆ "ಹೋಗಾಚೆ ! ಹೋಗಾಚೆ ! ತೊಲಗು ! ತೊಲಗು ! ತೊಲಗು ! ಜೋಕೆ ! ಜೋಕೆ ! ಜೋಕೆ !" ಎಂದು ಕೂಗುತ್ತಿರು ನಂತಿತ್ತು.

ಸೈಕೆ ಕಲ್ಲಿನಲ್ಲಿ ಕಡೆದ ಹಾಗೆ ಸ್ತಬ್ಧವಾಗಿ ನಿಂತಳು. ಅವಳ ಮನಸ್ಸು ಎಲ್ಲೋ ಇತ್ತು. ಕಷ್ಟಕಾಲದಲ್ಲಿ ಕಣ್ಣೀರು ಬಿಡುವುದು ಹೆಂಗಸರಿಗೆ ಎತ್ತಿದ್ದು. ಆದರೂ, ಸೈಕೆಯ ನಿರಾಶೆ ಎಷ್ಟು ತೀವ್ರವಾಗಿದ್ದಿತೆಂದರೆ, ಅವಳ ಕಣ್ಣಲ್ಲಿ ನೀರು ಕೂಡ ಬಾರದೆಹೋದುವು.

ಆದರೆ, ಏನೂ ಅರಿಯದ ಜೀವಗಳು ಸಂಕಟಕ್ಕೆ ಸಿಕ್ಕಿದಾಗ, ದೈವದ ಸಾಕ್ಷಿಯಾದ ಕಣ್ಣು ಕರುಣೆಯಿಂದ ನೋಡದೆ ಇರುವುದಿಲ್ಲ. ದೈವದ ಸೂಚನೆಯ ಪ್ರಕಾರ, ಜ್ಯೂಪಿಟರ್ ದೇವತೆಯ ರಾಜಪಕ್ಷಿಯಾದ ಬಲಾಢ್ಯ ಗಿಡಗನು ನೇರವಾಗಿ ಸ್ವರ್ಗದಿಂದ ಸೈಕೆಯಿದ್ದ ಎಡೆಗೆ ಎರಗಿ ಬಂತು. ಹಿಂದೆ, ಒಂದಾನೊಂದು ಕಾಲದಲ್ಲಿ ಕ್ಯುಪಿಡ್ ತನಗೆ ಮಾಡಿದ್ದ ಉಪಕಾರವನ್ನು ಅದು ಮರೆತಿರಲಿಲ್ಲ. ಸೈಕೆ ಕ್ಯುಪಿಡ್ಡನ ಪತ್ನಿಯಾದ್ದ ರಿಂದ ತನ್ನ ಋಣವನ್ನು ಹರಿಸಿಕೊಳ್ಳಬಹುದೆಂದು ಅದು ಬಂತು.

"ಅಯ್ಯೋ, ಹುಚ್ಚಿ, ಸೈಕೆ! ಅನುಭವ ಸಾಲದ ಹೆಣ್ಣೆ! ಈ ಭಯಂಕರವಾದ ಮೃತ್ಯುನದಿಯಿಂದ ಒಂದೇ ಒಂದು ಹನಿಯಾದರೂ ನೀರನ್ನು ನೀನು ಪಡೆದುಹೋಗುವುದು ಸಾಧ್ಯವೆ? ಸಾಕ್ಷಾತ್ ಜ್ಯೂಪಿಟರ್ ಕೂಡ ಈ ನೀರನ್ನು ಮುಟ್ಟಲು ಹಿಂಜರಿಯುವನು. ಇರಲಿ. ಇಲ್ಲಿ ತಾ, ನಿನ್ನ ಆ ಸ್ಫಟಿಕದ ಹೂಜಿಯನ್ನು.'' ಎಂದು ಆ ಗಿಡಗ ಚಕ್ಕನೆ ಅವಳ ಕೈಯಿಂದ ಹೂಜಿಯನ್ನು ಕಿತ್ತುಕೊಂಡು, ಭರ್‍ರನೆ ಹಾರಿಹೋಯಿತು. ದಾರಿ ಕೊಡದೆ ಕಾವಲು ಹಿರಿಯುತ್ತಿದ್ದ ಆ ಎರಡು ರೆಕ್ಕೆಯ ಹಾವುಗಳ ಹೆಡೆಗಳ ನಡುವೆ ಹಾಗೂ ಹೀಗೂ ಹಾರಿಹೋಗಿ, ಚಿಮ್ಮುವ ಚಿಲುಮೆಗೆ ಹೂಜಿಯನ್ನು ಒಡ್ಡಿತು.

"ಬೇಡ. ಈ ನೀರಿನ ತಂಟೆಗೆ ಬರಬೇಡ. ಜೋಕೆ!" ಎಂದು ಕೂಗಿತು ಆ ಚಿಲುಮೆ. "ಇಲ್ಲ, ಇಲ್ಲ. ವೀನಸ್ ದೇವತೆಗೆ ಈ ನೀರು ಕೊಂಚ ಬೇಕಂತೆ. ತರಬೇಕೆಂದು ಆಜ್ಞೆಮಾಡಿದ್ದಾಳೆ." ಎಂದಿತು, ಗಿಡಗ. ವೀನಸ್ಸಿನ ಆಜ್ಞೆಯೆಂದು ಕೇಳಿ, ಚಿಲುಮೆ ಮರುಮಾತನಾಡದೆ, ಹೂಜಿಯ ತುಂಬ ನೀರು ಕೊಟ್ಟಿತು. ಗಿಡಗ ಆ ನೀರನ್ನು ಜೋಪಾನವಾಗಿ ತಂದು ಸೈಕೆಗೆ ಕೊಟ್ಟು, ಅವಳನ್ನು ಸಂತೋಷಪಡಿಸಿತು.

ಈ ಕಾರ್ಯವನ್ನೂ ಸೈಕೆ ನೆರವೇರಿಸಿಕೊಂಡು ಬಂದದ್ದರಿಂದಲೂ ವೀನಸ್ಸಿನ ಕೋಪ ಇಳಿಯಲಿಲ್ಲ. ಈ ಸಲ ಇವಳನ್ನು ತೀರಿಸಿಯೇ ಬಿಡುತ್ತೇನೆ ಎಂದುಕೊಂಡು, ಮೇಲೆ ಮಾತ್ರ ಮುಸಿಮುಸಿ ನಗುತ್ತಾ ಹೇಳಿದಳು: "ಅದೇನು ಮಾಟವೋ, ಅದೇನು ಮಂತ್ರವೋ, ನಾನು ಹೇಳಿದ್ದನ್ನೆಲ್ಲಾ ನೀನು ನಡೆಸಿದ್ದೀಯೆ. ಎಲ್ಲಿ? ಹಾಗೆಯೇ ಇದೂ ಒಂದನ್ನು ಮಾಡಿಬಿಡು, ಅಮ್ಮಯ್ಯ! ಇದೋ, ಈ ಭರಣಿ ತೆಗೆದುಕೋ. ಪಾತಾಳ ಲೋಕದಲ್ಲಿ ಪ್ಲೂಟೋ ದೇವತೆಯ ಸಾವಿನ ಅರಮನೆಗೆ ಹೋಗು. ಅಲ್ಲಿ ರಾಣಿ ಪ್ರೊಸರ್ಪಿನೆ ಇದ್ದಾಳೆ. ಅವಳಿಗೆ ಹೇಳು: "ವೀನಸ್ ದೇವತೆಯ ವಂದನೆಗಳು. ದಯಮಾಡಿ, ನಿನ್ನ ಸೌಂದರ್ಯದ ಲೇಪನವನ್ನು, ಒಂದು ದಿನಕ್ಕಾಗುವ ಮಟ್ಟಿಗಾದರೂ ಸಾಕು, ಈ ಭರಣಿಯಲ್ಲಿ ಹಾಕಿ ಕಳುಹಿಸಿಕೊಡು. ರಾತ್ರಿಯೆಲ್ಲಾ ಮಗನ ಹಾಸಿಗೆಯ ಹತ್ತಿರ ನಿದ್ರೆಗೆಟ್ಟು

ಕುಳಿತು, ಮುಖವೆಲ್ಲಾ ವಿರೂಪವಾಗಿದೆ, ಎಂದು ಹೇಳು. ಹೋಗು, ತೆಗೆದು ಕೊಂಡು ಬೇಗ ಬಾ. ರಾತ್ರಿ ದೇವಸಭೆಯಲ್ಲಿ ನಾಟಕವಂತೆ. ನಾನು ಹೋಗಬೇಕು." ಎಂದಳು.

ಸರಿಯೆ, ಪಾತಾಳಲೋಕಕ್ಕೆ ಪ್ರಯಾಣಮಾಡುವುದೆಂದರೆ ಇಹ ಲೋಕದ ಆಸೆಯನ್ನು ಬಿಟ್ಟಹಾಗೆಯೇ. ತನ್ನನ್ನು ವೀನಸ್ ಖಂಡಿತ ವಾಗಿಯೂ ಸಾವಿನ ಮನೆಗೆ ಕಳುಹಿಸುತ್ತಿದ್ದಾಳೆ ಎಂಬುದನ್ನು ಸೈಕೆ ತಿಳಿದಳು. ಕೂಡಲೆ ಅಲ್ಲಿದ್ದ ಒಂದು ಎತ್ತರವಾದ ಗೋಪುರವನ್ನು ಹತ್ತಿ, 'ಇಲ್ಲಿಂದ ದುಮುಕಿ, ನೇರವಾಗಿ ನಾನು ಪಾತಾಳಲೋಕಕ್ಕೆ ಹೋಗುತ್ತೇನೆ' ಎಂದು ಕೊಂಡಳು.

ಅಷ್ಟರಲ್ಲಿ ಆ ಗೋಪುರ ಇದ್ದಕ್ಕಿದ್ದಂತೆ ಮನುಷ್ಯರು ಮಾತನಾಡುವಂತೆ ಮಾತನಾಡಿತು: "ಮಗೂ, ನನ್ನ ಮೇಲೆ ಹತ್ತಿ, ದುಮುಕಿ, ಆತ್ಮಹತ್ಯೆ ಮಾಡಿಕೊಳ್ಳಬೇಕೆಂದಿರುವೆಯಾ? ನಿನ್ನ ಪಾಡುಗಳೆಲ್ಲ ಇನ್ನೇನು ಮುಗಿದು ಹೋಯಿತು ಎಂಬ ಹೊತ್ತಿಗೆ ಇಂಥ ನಿರಾಶೆಯನ್ನು ನೀನು ಎತ್ತಿಕೊಳ್ಳ ಬಹುದೆ? ನೀನು ಇಲ್ಲಿಂದ ದುಮುಕಿದರೇನೋ, ಸತ್ತು ಪಾತಾಳಕ್ಕೇ ಹೋಗುವೆ. ಆದರೂ, ಹಾಗೆ ಹೋದರೆ, ಮತ್ತೆ ಮೇಲೆದ್ದು ಬರುವ ಆಸೆ ಯಿಲ್ಲ, ಕಂಡೆಯಾ? ನಾನು ಹೇಳುವುದನ್ನು ಕೇಳು. ಇಲ್ಲಿಗೆ ಹತ್ತಿರದಲ್ಲಿಯೇ ಲಕಿಡೆಮಾನ್ ಎಂಬ ಪ್ರಸಿದ್ಧ ಗ್ರೀಕ್ ನಗರವಿದೆ. ಅಲ್ಲಿಗೆ ಹೋಗಿ, ಕೇಳು. ಪಾತಾಳಲೋಕಕ್ಕೆ ಹೋಗುವ ದ್ವಾರಗಳಲ್ಲಿ ಒಂದನ್ನು ಅಲ್ಲಿ ತೋರಿಸುವರು. ಅದರಲ್ಲಿ ತಲೆಹಾಕಿ ನೋಡು. ಇಳಿಮುಖವಾದ ಮಾರ್ಗವೊಂದು ಗೋಚರ ವಾಗುವುದು. ನಿರ್ಜನವಾದ ಆ ದಾರಿಯನ್ನು ಹಿಡಿದು ಹೋಗು, ನೇರವಾಗಿ ಪ್ಲೂಟೋವಿನ ಅರಮನೆಗೇ ಹೋಗುವೆ. ಆದರೆ, ಒಂದು ಮಾತ್ರ ಮರೆಯ ಬೇಡ: ಹೋಗುವಾಗ ಎರಡು ಚೂರು ಬಾರ್ಲಿರೊಟ್ಟಿಯನ್ನು ಜೇನುತುಪ್ಪ ದಲ್ಲಿ ನೆನೆಸಿ ತೆಗೆದುಕೊಂಡು ಹೋಗು, ಹಾಗೆಯೇ ಬಾಯಲ್ಲಿ ಎರಡು ನಾಣ್ಯ ಗಳನ್ನು ಕಚ್ಚಿಕೊಂಡು ಹೋಗು.

"ಕೇಳು, ಸೈಕೆ; ನೀನು ಆ ಪಾತಾಳದ ಮಾರ್ಗದಲ್ಲಿ ಹಾಗೇ ಹೋದರೆ ಕಟ್ಟಿಗೆಯನ್ನು ಹೊರುವ ಒಂದು ಕುಂಟುಕತ್ತೆ ಸಿಕ್ಕುತ್ತದೆ. ಕುಂಟನೊಬ್ಬ

ಅದನ್ನು ಓಡಿಸುತ್ತಿರುತ್ತಾನೆ, ಅದರ ಬೆನ್ನಿಂದ ಕಟ್ಟಿಗೆ ಬಿದ್ದುಹೋಗದ ಹಾಗೆ ಬಿಗಿಯುವುದಕ್ಕೆ ಒಂದು ಚೂರು ಹಗ್ಗ ಬೇಕೆಂದು ಬೇಡುತ್ತಾನೆ. ಅವನೊಡನೆ ಮಾತನಾಡದೆ ಮುಂದೆ ಹೋಗು. ಮುಂದೆ, ಸತ್ತವರು ದಾಟಬೇಕಾದ ಸ್ಟಿಕ್ಸ್ ನದಿ ದೊರಕುತ್ತದೆ. ಅದನ್ನು ದಾಟಿಸುವ ಅಂಬಿಗನು ಹಣ ಕೇಳುತ್ತಾನೆ. ನೀನು ಬಾಯಲ್ಲಿ ಕಚ್ಚಿಕೊಂಡುಹೋಗುವ ಎರಡು ನಾಣ್ಯಗಳಲ್ಲಿ ಒಂದನ್ನು ಅವನಿಗೆ ಕೊಡು; ಎಂದರೆ, ನಿನ್ನ ಕೈಯಿಂದ ನೀನೇ ಕೊಡಬೇಡ, ನಿನ್ನ ಬಾಯಿಂದ ಅವನೇ ತೆಗೆದುಕೊಳ್ಳಲಿ. ನದಿಯಲ್ಲಿ ಅರ್ಧದಾರಿ ಹೋಗುತ್ತಿರುವಾಗ, ಒಬ್ಬ ಮುದುಕನ ಹೆಣವೊಂದು ತೇಲಿಬರುತ್ತದೆ, ನನ್ನನ್ನೂ ಮೇಲೆತ್ತಿಕೋ ಎಂದು ತನ್ನ ಕೊಳೆತ ತೋಳೆತ್ತಿ ಬೇಡುತ್ತದೆ. ಆದರೆ ಅದರ ಗೊಡವೆಗೆ ಹೋಗಬೇಡ, ಅದನ್ನು ಎತ್ತುವುದು ನಿಷಿದ್ಧ. ಆಚೆ ದಡವನ್ನು ಮುಟ್ಟಿದ ಮೇಲೆ, ಸ್ವಲ್ಪ ದೂರದಲ್ಲಿ ಮೂವರು ಹೆಂಗಸರನ್ನು ಕಾಣುವೆ. ಅವರು ಬಟ್ಟೆ ನೇಯುತ್ತಿರುತ್ತಾರೆ. ನಿನ್ನನ್ನೂ ಸಹಾಯಕ್ಕೆ ಕೋರುತ್ತಾರೆ. ಅವರ ಬಟ್ಟೆಯನ್ನು ಮುಟ್ಟುವುದು, ಅದೂ ನಿಷಿದ್ಧ. ಹೀಗೆ ಕಾಣಿಸಿಕೊಳ್ಳುವುದೆಲ್ಲವೂ ವೀನಸ್ಸಿನ ಮಾಯದ ಬಲೆಗಳು. ನಿನ್ನ ಕೈಯಲ್ಲಿರುವ ರೊಟ್ಟಿಯ ಚೂರು ಕೆಳಗೆ ಬೀಳಲೆಂದು, ಇನ್ನೂ ಇಂಥದು ಎಷ್ಟನ್ನೋ ನಿನ್ನ ಕಣ್ಣಮುಂದೆ ಒಡ್ಡಬಹುದು. ಏನೇ ಆದರೂ, ನಿನ್ನ ಎರಡು ಕೈಯ ಎರಡು ರೊಟ್ಟಿ ಚೂರನ್ನು ಗಟ್ಟಿಯಾಗಿ ಹಿಡಿ, ಬಿಡಬೇಡ. ಅದನ್ನು ಕಳೆದುಕೊಂಡೆಯೋ, ನೀನು ಮತ್ತೆ ಪಾತಾಳದಿಂದ ಮೇಲೆ ಬರುವ ಹಾಗಿಲ್ಲ. ಏಕೆ, ಎಂದು ಹೇಳುತ್ತೇನೆ, ಕೇಳು:

"ಪಾತಾಳದಲ್ಲಿ ಒಂದು ಮಹಾಕ್ರೂರಿಯಾದ ಮೂರು ತಲೆಯ ಗಡವ ನಾಯಿ ಇದೆ. ಮೂರು ತಲೆಗಳ ಮೂರು ಕೊರಳುಗಳಿಂದಲೂ ಅದು ಒಂದು ಸಲ ಬಗುಳಿದರೆ, ಸತ್ತವರು ಕೂಡ ಗಡಗಡ ನಡುಗಿಹೋಗುತ್ತಾರೆ. ಈ ನಾಯಿಗೆ ಸೆರ್‌ಬಿರಸ್ ಎಂದು ಹೆಸರು. ಅದು ನಿರಂತರವಾಗಿ ಪ್ಲೂಟೋವಿನ ಅರಮನೆಯ ಬಾಗಿಲಿನಲ್ಲಿ ಕಾವಲಿರುತ್ತದೆ. ರಾಣಿ ಪ್ರೊಸರ್ಪಿನೆ ಇರುವುದು ಅದೇ ಅರಮನೆಯೊಳಗೆ. ನಿನ್ನ ಕೈಯಲ್ಲಿನ ಒಂದು ಚೂರನ್ನು ಆ ನಾಯಿಯ ಮುಂದೆ ಹಾಕು, ಸುಲಭವಾಗಿ ಅದನ್ನು ದಾಟಿಕೊಂಡು

ಪ್ರೊಸರ್ಪಿನೆಯ ಸನ್ನಿಧಿಯನ್ನು ಸೇರಬಹುದು. ಅಲ್ಲಿ ಆ ಪ್ರೊಸರ್ಪಿನೆ ನಿನ್ನನ್ನು ಆದರದಿಂದ ಸ್ವಾಗತಿಸಿ, ಕುಳ್ಳಿರಲು ಮೆತ್ತನೆಯ ಕುರ್ಚಿ ಕೊಟ್ಟು, ಸೊಗಸಾದ ಭೋಜನವನ್ನು ಅಣಿಮಾಡಿ ಕರೆಯುವಳು. ಆದರೆ, ನೆಲದ ಮೇಲಲ್ಲದೆ ಬೇರೆ ಯಾತರಮೇಲೂ ಕುಳಿತುಕೊಳ್ಳಬೇಡ. ಬರಿಯ ಒಂದು ಸಾಧಾರಣ ರೊಟ್ಟಿಯನ್ನು ಮಾತ್ರ ಕೇಳು, ಬೇರೆ ಏನೂ ತಿನ್ನಬೇಡ. ಅನಂತರ, ವೀನಸ್ ಕಳುಹಿಸಿದ ವಾರ್ತೆಯನ್ನು ತಿಳಿಸು, ಕೊಡಬೇಕಾದ್ದನ್ನು ಕೊಟ್ಟು ಕಳುಹಿಸುತ್ತಾಳೆ.

“ಮತ್ತೆ, ನೀನು ಅಲ್ಲಿಂದ ಹೊರಗೆ ಬರುವಾಗಲೂ ಅಷ್ಟೆ—ಉಳಿದಿರುವ ಇನ್ನೊಂದು ರೊಟ್ಟಿಚೂರನ್ನು ಆ ನಾಯಿಗೆ ಹಾಕು, ಅದು ನಿನಗೆ ದಾರಿ ಕೊಡುತ್ತದೆ. ಅದರಂತೆಯೇ, ಸ್ಟಿಕ್ಸ್ ನದಿಯನ್ನು ಮತ್ತೆ ದಾಟುವಾಗ ಆ ಅಂಬಿಗನಿಗೆ ಉಳಿದ ಇನ್ನೊಂದು ಹಣವನ್ನು ಕೊಡು. ಹೀಗೆ, ಮತ್ತೆ ಈಚೆ ದಡವನ್ನು ತಲಪಿದ ಮೇಲೆ, ಹೋದ ದಾರಿಯನ್ನು ಹಿಡಿದು, ಹಾಗೇ ಮೇಲೆ ಬಾ.

“ಆದರೆ ಒಂದು ಎಚ್ಚರದ ಮಾತು ಮರೆಯಬೇಡ. ಏನೆಂದರೆ: ಪ್ರೊಸರ್ಪಿನೆ ಕೊಡುವ ಆ ಭರಣಿಯ ಮುಚ್ಚಳ ತೆಗೆಯಬೇಡ, ಅದರ ಕಡೆಗೆ ನೋಡ ಕಣ್ಣು ತಿರುವಬೇಡ. ದೇವತೆಗಳ ಸೌಂದರ್ಯದ ರಹಸ್ಯವನ್ನು ಭೇದಿಸಲು ಬಯಸುವುದು ನಿನಗೆ ತಕ್ಕದ್ದಲ್ಲ.”

ದೈವದಿಂದ ಪ್ರೇರಿತವಾಗಿ ಆ ಗೋಪುರವು ದಯೆಯಿಂದ ಹೇಳಿದ ಬುದ್ಧಿ ವಾದವನ್ನು ಸೈಕೆ ಮರೆಯಲಿಲ್ಲ. ಅದು ಹೇಳಿದ ಹಾಗೆಯೇ, ಎರಡು ನಾಣ್ಯ ಗಳನ್ನೂ ಎರಡು ರೊಟ್ಟಿತುಣುಕುಗಳನ್ನೂ ತೆಗೆದುಕೊಂಡು ಪಾತಾಳದ ಬಿಲ ವನ್ನು ಪ್ರವೇಶಿಸಿದಳು. ಕುಂಟುಕತ್ತೆಯನ್ನು ಓಡಿಸುತ್ತಿದ್ದ ಕುಂಟನಿಗೆ ಏನೂ ಉತ್ತರ ಕೊಡದೆ ಮುಂದೆ ಹೋದಳು. ಅಂಬಿಗನಿಗೆ ಒಂದು ನಾಣ್ಯ ವನ್ನು ಕೊಟ್ಟು ದೋಣಿಯೇರಿದಳು. ತೇಲುತ್ತ ಬಂದ ಹೆಣದ ಗೋಳಾಟಕ್ಕೆ ಕಿವಿಗೊಡದೆ, ಆಚೆ ದಡದಲ್ಲಿ ನೇಯುತ್ತಿದ್ದ ಮೂವರು ಹೆಂಗಸರನ್ನು ಮಾತು ಕೂಡ ಆಡಿಸದೆ, ಸೆರ್‌ಬಿರಸ್ಸಿಗೆ ಒಂದು ಚೂರು ರೊಟ್ಟಿಯೆಸೆದು, ಪ್ರೊಸರ್ಪಿ ನೆಯ ಅರಮನೆಯನ್ನು ಪ್ರವೇಶಿಸಿದಳು. ಅಲ್ಲಿನ ಸುಖದ ಸುಪ್ಪತ್ತಿಗೆಯ

ಕುರ್ಚಿಯನ್ನು ಒಲ್ಲದೆ ನೆಲದಮೇಲೆ ಕುಳಿತು, ಷಡ್ರಸದ ಊಟವನ್ನು ಒಲ್ಲದೆ ಸಾಧಾರಣದ ರೊಟ್ಟಿಯಿಂದು, ತಾನು ತಂದ ವಾರ್ತೆಯನ್ನು ತಿಳಿಸಿದಳು. ಪ್ರೊಸರ್ಪಿನೆ ಆ ಭರಣಿಯಲ್ಲಿ ತುಂಬಬೇಕಾದ್ದನ್ನು ರಹಸ್ಯವಾಗಿ ತುಂಬಿ, ಮುಚ್ಚುಳ ಮುಚ್ಚಿ, ಸೈಕೆಯ ಕೈಲಿಟ್ಟಳು. ಸೈಕೆ ಉಳಿದ ಒಂದು ರೊಟ್ಟಿಯನ್ನು ಸೆರ್‌ಬಿರಸ್ಸಿಗೆ ಹಾಕಿ, ಅಂಬಿಗನಿಗೆ ಎರಡನೆಯ ನಾಣ್ಯವನ್ನು ಕೊಟ್ಟು ನದಿಯನ್ನು ದಾಟಿ, ಪಾತಾಳದಿಂದ ಕ್ಷೇಮವಾಗಿ ಮೇಲುಲೋಕಕ್ಕೆ ಬಂದಳು. ಕತ್ತಲೆಯಿಂದ ಬಂದವಳು ಬೆಳಕನ್ನು ಕಂಡು, ದೇವರನ್ನು ಸ್ತೋತ್ರ ಮಾಡಿದಳು.

ಬುದ್ಧಿಯಿಲ್ಲದ ಸೈಕೆ, ತಾನು ತಂದುದನ್ನು ವೀನಸ್ಸಿಗೆ ಒಪ್ಪಿಸಬೇಡವೆ, ಪಾಪ, ಸ್ತ್ರೀಸಹಜವಾದ ಕುತೂಹಲಕ್ಕೆ ತುತ್ತಾದಳು. 'ಇಷ್ಟೆಲ್ಲಾ ಕಷ್ಟಪಟ್ಟು ಈ ದೇವಸೌಂದರ್ಯದ ಲೇಪನವನ್ನು ಹೊತ್ತು ತಂದಿದ್ದೇನೆ. ಇದರಲ್ಲಿ ಒಂದು ಚಿಕ್ಕ ಚೂರೂ ನನಗೆ ದೊರಕದೆ ಹೋದರೆ, ಬುದ್ಧಿಯಿಲ್ಲವೆಂದಾರು. ನನ್ನ ಪ್ರಿಯನನ್ನು ಕಂಡಾಗ ಅವನಿಗೆ ಪ್ರೀತಿಯುಂಟುಮಾಡಲು ಇದು ಅನುಕೂಲವಾಗುತ್ತದೆ.' ಎಂದುಕೊಂಡು, ಸೈಕೆ, ಆ ಭರಣಿಯ ಮುಚ್ಚುಳ ತೆರೆದಳು. ಆದರೆ ಅದರಲ್ಲಿ ಏನೂ ಇದ್ದಂತೆ ಅವಳಿಗೆ ಕಾಣಿಸಲಿಲ್ಲ. ಅದರೊಳಗಿಂದ ಒಂದು ತೆರನಾದ ಗಾಢನಿದ್ರೆಯೊಂದು ಮೆಲ್ಲನೆ ಬಂದು, ಅವಳನ್ನು ಮುತ್ತಿ, ಮೈಮೇಲೆ ಎಚ್ಚರವಿಲ್ಲದ ಹಾಗೆ ಮಲಗಿಸಿಬಿಟ್ಟಿತು. ಸೈಕೆ ಸತ್ತಂತೆ ಅಲ್ಲಿ ಬಿದ್ದಳು, ಆ ತೆರೆದ ಭರಣಿ ಅವಳ ಪಕ್ಕದಲ್ಲಿ ಬಿದ್ದಿತ್ತು.

೧೪

ಆ ವೇಳೆಗೆ ಕ್ಯುಪಿಡ್ಡಿನ ಸುಟ್ಟ ಹುಣ್ಣು ಮಾಯ್ದಿತ್ತು. ಅವನಾದರೂ ಸೈಕೆಯನ್ನು ಇನ್ನು ಹೆಚ್ಚು ಕಾಲ ಕಾಣದಿರಲಾರದೆ, ತನ್ನನ್ನು ಬಂಧಿಸಿಟ್ಟಿದ್ದ ಶಯನಗೃಹದ ಒಂದು ಚಿಕ್ಕ ಗವಾಕ್ಷದ ಮೂಲಕ ಹಾರಿಹೋದನು. ದೀರ್ಘಕಾಲ ವಿಶ್ರಾಂತಿ ಕೊಟ್ಟು, ಆ ರೆಕ್ಕೆಗಳಿಗೆ ಹೊಸ ಚೈತನ್ಯ ಬಂದಿತ್ತು. ಮನೋವೇಗದಿಂದ ಹಾರಿದನು.

ಸೈಕೆ ನೈಮರೆತು ಬಿದ್ದಿದ್ದ ಎಡೆಗೆ ಬಂದನು. ಅವಳ ಅಂಗೋ
ಪಾಂಗಗಳನ್ನು ಸುತ್ತಿ ಮುತ್ತಿಕೊಂಡಿದ್ದ ಗಾಢನಿದ್ರೆಯನ್ನು ಮೆಲ್ಲಗೆ ಬಿಡಿಸಿ
ತ್ತಿಕೊಂಡು, ಮೊದಲಿನಂತೆಯೇ ಆ ಭರಣಿಯಲ್ಲಿ ಇಟ್ಟು ಮುಚ್ಚಿದನು.
ನಂತರ ತನ್ನ ಬಾಣದ ಮೊನೆಯಿಂದ ಮೃದುವಾಗಿ ಚುಚ್ಚಿ, ಅವಳನ್ನು
ಚ್ಚರಿಸಿದನು. "ಅಯ್ಯೋ ಹುಡುಗಿ, ಕುತೂಹಲಪಟ್ಟು ನಿನ್ನ ಕೆಲಸ
ನ್ನೆಲ್ಲಾ ಕೆಡಿಸಿಕೊಳ್ಳುತ್ತಿದ್ದೀಯಲ್ಲೆ! ಈಗಲಾದರೂ ಶೀಘ್ರವಾಗಿ
ಹೋಗಿ, ಇದನ್ನು ಅಮ್ಮನಿಗೆ ಕೊಟ್ಟುಬಾ. ಉಳಿದದ್ದನ್ನು ನಾನು
ನೋಡಿಕೊಳ್ಳುತ್ತೇನೆ." ಎಂದು ಕೂಡಲೆ ಅಲ್ಲಿಂದ ಹಾರಿಹೋದನು.
ಸೈಕೆ ಒಡನೆ ನೆಗೆದೆದ್ದು, ಪ್ರೊಸರ್ಪೀನೆಯ ಕೊಡುಗೆಯನ್ನು ವೀನಸ್ಸಿಗೆ
ಕೊಡಲು ಹೋದಳು.

ಇತ್ತ, ಕ್ಯುಪಿಡ್ಡಿಗಾದರೋ ಸೈಕೆಯಲ್ಲಿ ಮೊದಲಿಗಿಂತ ಪ್ರೇಮ
ಗಾಢವಾಗಿಬಿಟ್ಟಿತ್ತು. ಸ್ವಲ್ಪ ಚೇತರಿಸಿಕೊಂಡನೋ ಇಲ್ಲವೋ, ಮತ್ತೆ
ತನ್ನ ತುಂಟಾಟಗಳಿಗೆ ತೊಡಗಿದನು. ಮಹಾವೇಗದಿಂದ ಸ್ವರ್ಗಗಳ
ಮೇಲಿನ ಸ್ವರ್ಗಕ್ಕೆ ಹೋಗಿ, ಜ್ಯೂಪಿಟರನ ಪಾದಗಳಲ್ಲಿ ಶರಣಾಗಿ ಬಿದ್ದನು,
ತನ್ನ ಬಿನ್ನಹವನ್ನು ತೋಡಿಕೊಂಡನು.

ಜ್ಯೂಪಿಟರ್ ಅವನ ಮುದ್ದಾದ ಕೆನ್ನೆಗಳನ್ನು ಚಿವುಟಿ, ಕೈಗೆ
ಮುತ್ತಿಕ್ಕಿ ಹೇಳಿದನು: "ನೀನು ತುಂಬ ಮನಸ್ವಿಯಾಗಿಹೋಗಿದ್ದೀಯೆ,
ಕ್ಯುಪಿಡ್. ದೇವಸಭೆಯವರು ನನಗೆ ಯಾವ ಗೌರವ ಸತ್ಕಾರ ಸಲ್ಲತಕ್ಕ
ದ್ದೆಂದು ತೀರ್ಮಾನ ಮಾಡಿರುವರೋ ಅದನ್ನು ನೀನು ನನಗೆ ಸಲ್ಲಿಸುತ್ತಿಲ್ಲ.
ಭೂಮಿಯ ನಾಲ್ಕು ಭೂತಗಳನ್ನೂ ಅಂತರಿಕ್ಷದ ಗ್ರಹತಾರಗೆಗಳನ್ನೂ ನಡ
ಸುವ ನಿಯಮಗಳಿಗೆ ನಿವಾಸವಾದ ನನ್ನ ಹೃದಯವನ್ನು ಕೂಡ ನಿನ್ನ
ಬಾಣಗಳು ತಾಕದೆ ಬಿಟ್ಟಿಲ್ಲ. ಆಗಾಗ್ಗೆ ನೀನು ಈ ನನ್ನ ದೇವಹೃದಯ
ದಲ್ಲಿ ಮಾನವಸಂಬಂಧವಾದ ಪ್ರೇಮವನ್ನು ತಂದು ಮೈಲಿಗೆ ಕೂಡ
ಮಾಡಿಬಿಟ್ಟದ್ದೀಯೆ. ಅದರಿಂದಾಗಿ ನಾನು ಹಾವು, ಹಕ್ಕಿ, ಬೆಂಕಿ,
ಗೂಳಿ ಮೊದಲಾದ ನಾನಾ ರೂಪಗಳನ್ನು ಧರಿಸಿ ಭೂಮಿಗೆ ಹೋಗ
ಬೇಕಾಗಿಯೂ ಬಂದಿದೆ. ಆದರೂ, ಎಷ್ಟುಸಲ ನಿನ್ನನ್ನು ನಾನು ನನ್ನ

ತೊಡೆಯ ಮೇಲೆ ಎತ್ತಿ ಆಡಿಸಿದ್ದೇನೆ, ಎಂಬುದನ್ನು ಮರೆಯುವಂತಿಲ್ಲ. ನಿನ್ನನ್ನು ಕಂಡರೆ, ನೀನು ಏನು ಕೇಳಿದರೂ ಕೊಟ್ಟುಬಿಡೋಣವೆನ್ನಿಸುತ್ತದೆ. ಆದರೆ, ನಿನಗೆ ಒಂದು ವಿಷಯದಲ್ಲಿ ಎಚ್ಚರಿಕೆ ಕೊಡಬೇಕು: ನಿನಗೆ ದೊರಕಿರುವ ಸುಂದರಿಯಾದ ಪತ್ನಿಯನ್ನು ಕಂಡು ಅಸೂಯೆಪಡುವ ಒಬ್ಬಾನೊಬ್ಬ ದೇವತೆಯ ಕೋಪಕ್ಕೆ ಪಾತ್ರನಾಗದೆ ಇರು. ನನ್ನ ಕೈಲಾದ ಸಹಾಯ ನಾನು ಮಾಡುತ್ತೇನೆ."

ಕೂಡಲೆ, ಮರ್ಕ್ಯುರಿಯ ಮೂಲಕ ಹೇಳಿಕಳುಹಿಸಿ, ಸಕಲ ದೇವತೆಗಳ ಸಭೆಯನ್ನು ಏರ್ಪಡಿಸಿದನು. ಬಾರದೆ ನಿಂತವರಿಗೆ ಹತ್ತುಸಾವಿರ ಹಣದ ದಂಡ, ಎಂದು ವಿಧಿಸಿದನು. ಅಷ್ಟು ಭಾರಿ ಹಣದ ಗಂಟಿನ ಹೆಸರು ಕೇಳಿ, ಎಲ್ಲರೂ ಓಡೋಡಿಬಂದರು. ಸಭಾಭವನ ಕಿಕ್ಕಿರಿದು ತುಂಬಿತು.

ದೇವದೇವನಾದ ಜ್ಯೂಪಿಟರ್ ಆ ಸಕಲದೇವತೆಗಳ ಎದುರಿಗೆ ತಾನು ಬರೆದುಕೊಂಡು ತಂದಿದ್ದನ್ನು ಓದಿದನು :

"ಮಾನ್ಯ ದೇವರುಗಳೇ, ದೇವಿಯರುಗಳೇ! ನಾನು ಈ ಬಾಲಕನನ್ನು ಇವನ ಹಸುಳೆತನದ ಕಾಲದಿಂದಲೂ ಎತ್ತಿಯಾಡಿ ಬೆಳೆಸಿದ್ದೇನೆ ಎಂಬುದನ್ನು ನೀವೆಲ್ಲ ಬಲ್ಲಿರಿ. ಇವನ ತುಂಟಾಟಗಳನ್ನೂ ಬಲ್ಲಿರಿ. ಪ್ರತಿದಿನವೂ ಇವನ ಮೇಲೆ ಒಂದಿಲ್ಲ ಒಂದು ಪುಕಾರು ಇದ್ದೇಇರುತ್ತದೆ. ನಾವು ಏನಾದರೂ ಮಾಡಿ, ಇವನ ಹಾವಳಿಗೆ ಒಂದು ಮಿತಿಯನ್ನು ಕಲ್ಪಿಸದಿದ್ದರೆ, ಯಾರಿಗೂ ಉಳಿಗಾಲವಿಲ್ಲ. ಆದ್ದರಿಂದ ಇವನಿಗೆ ಇತರ ಚೇಷ್ಟೆಗಳಿಗೆ ವೇಳೆ ವಿರಾಮ ದೊರಕವಂತೆ ಮಾಡುವುದಕ್ಕೆ ಒಂದೇ ಒಂದು ಮಾರ್ಗವಿರುವುದನ್ನು ನಾನು ಕಂಡುಕೊಂಡಿದ್ದೇನೆ. ಅದೇನೆಂದರೆ—ಇವನು ಅದು ಯಾರೋ ಹುಡುಗಿ, ಸೈಕೆಯಂತೆ, ಅವಳನ್ನು ಹಿಡಿದು ತನಗೆ ವಶವರ್ತಿ ಮಾಡಿಕೊಂಡುಬಿಟ್ಟಿದ್ದಾನೆ. ಈಗ ನಾನು ಇವನಿಗೆ ವಿಧಿಸತಕ್ಕಂಥ ಶಿಕ್ಷೆ ಏನೆಂದರೆ — ಇವನು ತನ್ನ ಜೀವಾವಧಿಯೂ ಆ ಸೈಕೆಯನ್ನೇ ಪಡೆದು ಹಿಡಿದು, ಪೊಂದಿ, ಲಾಲಿಸಿ, ಪಾಲಿಸಿ, ಪೋಷಿಸಿಕೊಂಡಿರತಕ್ಕದ್ದು."

ಅನಂತರ ಜ್ಯೂಪಿಟರ್ ವೀನಸ್ಸನ್ನು ಕುರಿತು ಹೇಳಿದನು : "ವೀನಸ್, ಇದಕ್ಕಾಗಿ ನಿನಗೆ ಖೇದ ಬೇಡ, ದೇವತೆಯಾದ ನಿನ್ನ ಮಗ ಮನುಷ್ಯಳಾದವಳನ್ನು ಮದುವೆಯಾದನೆಂದು ನಿನಗೆ ಸಿಗ್ಗು ಬೇಡ. ಈ ಮದುವೆಯು ಸರಿಸಮಾನಸ್ಕಂಧರ ಮದುವೆಯಾಗುವಂತೆ ನಾನು ನೋಡಿಕೊಳ್ಳುತ್ತೇನೆ. ನೀನು ನಿಶ್ಚಿಂತೆಯಿಂದಿರು."

ಜ್ಯೂಪಿಟರ್ ಆ ಕೂಡಲೆ ಮರ್ಕ್ಯುರಿಯ ಮುಖಾಂತರ ಹೇಳಿಕಳುಹಿಸಿ ಸೈಕೆಯನ್ನು ಅಲ್ಲಿಗೇ ದೇವಸಭೆಗೆ ಕರೆಸಿಕೊಂಡನು. ಅವಳನ್ನು ಹತ್ತಿರ ಕರೆದು, ಅವಳ ಕೈಯಲ್ಲಿ ಒಂದು ಅಮೃತದ ಪಾತ್ರೆಯನ್ನಿಟ್ಟು, "ಇದನ್ನು ಕುಡಿ, ಮಗು. ಕುಡಿದು, ನೀನೂ ಅಮರಳಾಗು." ಎಂದನು. "ಕ್ಯುಪಿಡ್ ಮತ್ತೆ ಎಂದೆಂದಿಗೂ ನಿನ್ನ ತೋಳಬಳಿಯಿಂದ ತಪ್ಪಿಸಿಕೊಳ್ಳುವುದಿಲ್ಲ. ಎಂದೆಂದಿಗೂ ನಿನ್ನವನೇ ಆಗಿ ನಿನ್ನೊಡನೆಯೇ ಇರುತ್ತಾನೆ." ಎಂದು ಆಶೀರ್ವದಿಸಿದನು.

ಕೂಡಲೆ ಮದುವೆಯ ಸಂತರ್ಪಣೆ ಸಿದ್ಧವಾಯಿತು. ಅಗ್ರಸ್ಥಾನದಲ್ಲಿ ಕ್ಯುಪಿಡ್, ಅವನ ಎದೆಯ ಮೇಲೆ ಒರಗಿಕೊಂಡು ಸೈಕೆ, ಕುಳಿತರು. ಅನಂತರದ ಎಡೆಯಲ್ಲಿ ಜ್ಯೂಪಿಟರ್, ಆತನ ಎದೆಯ ಮೇಲೆ ಒರಗಿಕೊಂಡು ಜೂನೋ. ಆಮೇಲೆ ಅವರವರ ಅಂತಸ್ತುಗಳಿಗೆ ಅನುಗುಣವಾಗಿ ಇನ್ನಿತರ ದೇವದೇವಿಯರುಗಳು ಅಮೃತದ ಅಡುಗೆಯನ್ನು ಬಡಿಸಿದರು. ಅರಮನೆಯಲ್ಲಿ ಎಲ್ಲೆಲ್ಲೂ ಹೂಗಳ ತೋರಣ ಕಟ್ಟಿದ್ದರು ಸುಗಂಧದ ಸುವಾಸನೆಯೋ ಸುವಾಸನೆ. ಗಾನದೇವತೆಗಳು ಗಾನಮಾಡಿದರು. ವಾದ್ಯಾಧಿದೇವತೆಗಳು ವಾದ್ಯ ಬಾರಿಸಿದರು. ಕಡೆಗೆ, ಅಪಾಲೋ ದೇವತೆ ತನ್ನ ವೀಣೆಯನ್ನು ತಾನೇ ಬಾರಿಸುತ್ತ ಮೋಹಕವಾಗಿ ಹಾಡತೊಡಗಿದಾಗ, ವೀನಸ್ ಕೂಡ, ಕೋಪ ಕರಗಿ, ಆ ಹಾಡಿಗೆ ತಕ್ಕ ಹೆಜ್ಜೆಹಾಕುತ್ತಬಂದು, ನರ್ತನ ಮಾಡಿದಳು.

ಹೀಗೆ, ಕ್ಯುಪಿಡ್ ಮತ್ತು ಸೈಕೆ ಇವರ ಮದುವೆ ಸಂಭ್ರಮದಿಂದ ಸ್ವರ್ಗದಲ್ಲಿ ನೆರವೇರಿತು. ಕಾಲಕ್ರಮದಲ್ಲಿ ಸೈಕೆ ಒಂದು ಹೆಣ್ಣುಮಗುವನ್ನು ಹೆತ್ತಳು. ಆ ಮಗುವಿಗೆ "ಸಂತೋಷ" ಎಂದು ನಾಮಕರಣ ಮಾಡಿದರು.

ಕಳ್ಳರ ಕೊಂಪೆ

"ಇದು ಯಾರಯ್ಯ ಹೇಳಿದ್ದು, ಈ ಕತೆ? ಸೊಗಸಾಗಿದೆಯಲ್ಲಾ!"

"ಅದು ಒಬ್ಬ ಅಡುಗೂಳಜ್ಜಿ ಹೇಳಿದ್ದು, ಒಂದು ಕಳ್ಳರ ಕೊಂಪೆಯಲ್ಲಿ."

"ಆ ಕೊಂಪೆಗೆ ಸ್ವಲ್ಪ ಹೋಗಿಬರೋಣವೇನು?"

"ಓ! ನನ್ನದೇನೂ ಅಡ್ಡಿಯಿಲ್ಲ."

೧

ಒಂದು ದೊಡ್ಡ ಎತ್ತರದ ಪರ್ವತ. ಮೇಲೆ ಹತ್ತುವುದಕ್ಕೆ ಗೊತ್ತಾದ ಹಾದಿಯಿಲ್ಲ. ದುರ್ಗ ಎಂದು ಕೇಳಿಲ್ಲವೇ, ಹಾಗೆ. ಅದರ ತಪ್ಪಲಿನಲ್ಲಿ ಪ್ರವೇಶಿಸಲು ಪರಮ ಕಷ್ಟವಾದ ಗೊಂಡಾರಣ್ಯ. ಪರ್ವತದ ಮೈಯಲ್ಲಂತೂ ಕುರುಚುಕಾಡು. ತುತ್ತತುದಿಯ ಶಿಖರದ ಕೋಡುಗಲ್ಲಿನ ಪಕ್ಕದಲ್ಲಿ ಒಂದು ತಿಳಿನೀರಿನ ಚಿಲುಮೆ. ಅಲ್ಲಿಂದ ನೆಗೆದ ನೀರು, ಮುಂದೆ ಝುರಿಯಾಗಿ, ಜಲಪಾತವಾಗಿ, ಅಬ್ಬರಿಸುತ್ತ, ಕೇಳಿದವರ ಕಿವಿಗೆ ಭಯವನ್ನು ತುಂಬು ವುದು. ಆ ಕೋಡುಗಲ್ಲಿನ ಬುಡದಲ್ಲಿ ಒಂದು ವಿಶಾಲವಾದ ಗುಹೆ. ಅದರ ಸುತ್ತಲೂ ಅದರ ಮೇಲೆಯೂ ಒಂದು ಎತ್ತರವಾದ ಮರದ ಕೋಟೆ. ಅದರೊಳಗೆ ಸುಲಭವಾಗಿ ಹೋಗಲು ಆಗದಂತೆ ಭದ್ರವಾದ ದಿಡ್ಡಿ ಬಾಗಿಲು. ಬೇರೆ ಯಾವುದೂ ಮನೆಮಠಗಳ ಚಿಹ್ನೆಯಿಲ್ಲ. ಕೋಟೆಯ ಮೇಲೊಂದು ಅಟ್ಟಣೆ. ಅಲ್ಲಿ ಸರದಿಯ ಪ್ರಕಾರ ಕಾವಲುಗಾರರು ತೆರೆದ ಕಣ್ಣನ್ನು ಹೊಯ್ಯದೆ ನಿಂತು, ತಮ್ಮ ದುರ್ಗವನ್ನು ರಕ್ಷಿಸುತ್ತಿದ್ದರು.

ಅಲ್ಲಿ ವಾಸಮಾಡುತ್ತಿದ್ದ ದರೋಡೆಗಳ್ಳರ ಗುಂಪು ಎಂದಿನಂತೆ ತಮ್ಮ ಗುಹೆಗೆ ಹಿಂದಿರುಗಿ ಬಂತು. ತಾವು ತಮ್ಮ ಕೊಳ್ಳೆಯನ್ನು ಹೇರಿ ತಂದಿದ್ದ

ಕತ್ತಿಗಳನ್ನು ಗುಹೆಯ ಹೊರಗಡೆ ಕಟ್ಟಿ, ತಾವು ಗುಹೆಯೊಳಕ್ಕೆ ತೆವಳಿಕೊಂಡು ಪ್ರವೇಶಿಸಿದರು.

ಬಂದವರೆಲ್ಲರಿಗೂ ಹೊಲಗಳನ್ನೇ ತಿಂದುಬಿಡುವಷ್ಟು ಹಸಿವು. ಬಂದ ಕೂಡಲೆ,ತಮಗೆ ಅಡುಗೆ ಮಾಡುವುದಕ್ಕೆ ಇದ್ದ ಮುದುಕಿಯನ್ನು ಕೂಗಿ, ಕರೆದು, ಬೈದರು.

"ಏ ಮುದಿಹೆಣವೆ, ಎಲ್ಲೇ ಕೊಳೆಯುತ್ತ ಬಿದ್ದಿದ್ದೀಯೆ?"

"ಅವಳು ಹೆಣ ಅಲ್ಲವೋ, ಕುರುಡುಹದ್ದೇ!"

"ಹೆಣಾ, ಕಣೊ. ಹೆಣವೇ!"

"ಅಲ್ಲ ಎಂದರೆ, ಕೇಳಬೇಕು. ಬದುಕಿಗೆ ಅವಳು ಬೇಡವಾಗಿರಬಹುದು, ನಿಜ; ಆದರೆ, ಸಾವು ಕೂಡ ಅವಳನ್ನೇನೂ ಹತ್ತಿರ ಸೇರಿಸುವುದಿಲ್ಲ."

"ಅದೇನೋಪ್ಪ! ಅಲ್ಲಿಯ ಒಲೆಯ ಮುಂದೆ ಗೂಬೆಯ ಹಾಗೆ ಕೂತಿರುವುದು ನೋಡು! ಲೇ, ದೆವ್ವ! ಎದ್ದೇಳು! ಯಾವಾಗಲೇ ನೀನು ಅಡಿಗೆ ಮಾಡಿ, ನಮಗೆಲ್ಲಾ ಬಡಿಸುವುದು? ಹೋಗಿ, ದುಡಿದ್ದು ತಂದುಹಾಕುವುದು ಬಿಟ್ಟೆಬಿದ್ದುಹೋಯಿತೆ! ಕುಡಿದು ಕುಡಿದು, ಕಣ್ಣು ಮುಚ್ಚಿಕೊಂಡು ಕೆಮ್ಮುತ್ತ ಮನೆಯಲ್ಲಿ ಕುಳಿತುಕೊಂಡಹಾಗಲ್ಲ!"

ಕುಳಿತ ಕಡೆಯಿಂದಲೇ ಮುದುಕಿ ವಟಗುಟ್ಟಿದಳು :

"ಅಯ್ಯಯ್ಯೋ! ಅದು ಯಾಕೆ ಹಾಗೆ ಬಡಿದುಕೊಳ್ಳುತೀಯಪ್ಪ. ನೋಡು, ಎಂಥೆಂಥ ಬಾಡು ಬೇಯಿಸಿದ್ದೀನಿ! ನೋಡು, ಎಂಥೆಂಥ ಸಾರು ಕಾಯಿಸಿದ್ದೀನಿ! ತಿಂದದ್ದನ್ನೆಲ್ಲ ತೊಳೆಯುವುದಕ್ಕೆ ಮದ್ಯ ನೋಡು, ಹೇಗೆ ಗಮಗಮಾ ಅಂತಿದೆ! ಮೊದಲು ಹೋಗಿ, ಮೈತೊಳೆದುಕೊಂಡು ಬನ್ನಿ. ಬಿಸಿಬಿಸಿ ನೀರು ಕಾದು ಸಿದ್ಧವಾಗಿದೆ."

ದರೋಡೆಕಾರರೆಲ್ಲಾ ನೀರುಮನೆಗೆ ಹೋದರು. ಒಲೆ ಧಗಧಗ ಉರಿಯುತ್ತಿತ್ತು. ನೀರು ಕುತಕುತ ಕುದಿಯುತ್ತಿತ್ತು. ಎಲ್ಲರೂ ಎಣ್ಣೆ ಹಚ್ಚಿಕೊಂಡರು, ಬಿಸಿನೀರು ಹುಯಿದುಕೊಂಡರು, ಒಬ್ಬರ ಬೆನ್ನನ್ನು ಒಬ್ಬರು ಉಜ್ಜಿ ತಿಕ್ಕಿದರು.

ಬಟ್ಟೆ ಬದಲಾಯಿಸಿಕೊಂಡು ಬಂದು, ಊಟಕ್ಕೆ ಕುಳಿತರು. ಆದರೆ ಮೊದಲನೇ ತುತ್ತು ಇನ್ನೂ ಎತ್ತುವುದಕ್ಕಿಲ್ಲ, ಅಷ್ಟರಲ್ಲಿಯೇ ಅವರದೇ ಇನ್ನೊಂದು ಪಡೆ ಬಂತು. ತಾವು ತಂದಿದ್ದ ಕೊಳ್ಳೆಯನ್ನು ಒಂದು ಕಡೆಗೆ ಎಸೆದು, ಸ್ನಾನಕ್ಕೆ ಹೋಯಿತು. ಸ್ನಾನ ಬೇಗ ಮುಗಿಸಿಕೊಂಡು, ಬಂದು ಊಟಕ್ಕೆ ಕುಳಿತಿತು.

ಅಯ್ಯೋ ಅಯ್ಯೋ, ಅದೇನು ತಿಂದರು! ಅದೇನು ಕುಡಿದರು! ದೇವರೇ ಗತಿ! ಗುಡ್ಡೆಗುಡ್ಡೆ ಮಾಂಸ, ರಾಶಿರಾಶಿ ರೊಟ್ಟಿ, ಕಡಾಯಿಗಟ್ಟಲೆ ಮದ್ಯ—ಒಂದರ ಮೇಲೊಂದು ಧ್ವಂಸ! ಹುಚ್ಚುಹುಚ್ಚಾಗಿ ಹಾಡಿದರು, ಬಾಯಿಗೆ ಬಂದಂತೆ ಬೈದಾಡಿದರು, ಪೋಲಿ ಪೋಕರಿ ಪುಂಡುಕಥೆ ಹೇಳಿದರು, ಹೊಲಸುಹೊಲಸಾಗಿ ನಡೆದುಕೊಂಡರು.

ಆಗ ಅವರಲ್ಲಿ ಒಬ್ಬ "ಖಾಮೂಷ್!" ಎಂದು ಕೂಗಿದ. ಅವನು ಹೇಳಬೇಕಾದದ್ದು ಏನೋ ಇದೆ ಎಂದುಕೊಂಡು ಮಿಕ್ಕವರೆಲ್ಲ ಮೌನವಾದರು.

ಅವನು ಹೇಳಿದ:

"ನಮ್ಮ ಗುಂಪಿನವರ ವರದಿ ಒಪ್ಪಿಸುತ್ತೇನೆ, ಕೇಳಿ. ನಾವು ಹೈಪಾಟಾ ನಗರದಲ್ಲಿ ಮೈಲೋ ಎಂಬವನ ಮನೆಯನ್ನು ಲೂಟಿ ಮಾಡಿದವರು. ಒಳಗೆ ಹೊಕ್ಕವರೇ, ಮನೆಯನ್ನು ತೊಳೆದು ಸ್ವಚ್ಛಮಾಡಿಬಿಟ್ಟೆವು. ಅಲ್ಲಿದ್ದ ಬೆಳ್ಳಿಬಂಗಾರಗಳನ್ನೆಲ್ಲ ಬೆಟ್ಟಬೆಟ್ಟವಾಗಿ ಹೊತ್ತು ತಂದೆವಾದರೂ ನಮ್ಮಲ್ಲಿ ಒಬ್ಬರಿಗೂ ಏನೂ ಹಾನಿಯಾಗಲಿಲ್ಲ. ಅಷ್ಟೇ ಅಲ್ಲ, ಬರಿಕೈಯಲ್ಲಿ ಹೋದವರು ನಾಲ್ಕು ಕಾಲಿನ ಎರಡು ಪ್ರಾಣಿಗಳನ್ನೂ ಹಿಡಿದುಕೊಂಡು ಬಂದಿದ್ದೇವೆ. ನೀವು ಬಿಯೋಷಿಯಾ ಕಡೆಗೆ ಹೋದವರು, ಹೋದವರೆಲ್ಲಾ ಹಿಂದಿರುಗಿ ಬಂದಹಾಗೆ ಕಾಣುವುದಿಲ್ಲ. ಎಲ್ಲಿ ನಿಮ್ಮ ಮುಖಂಡ, ಲಮಾಖಸ್? ಲಮಾಖಸ್ ಅಂಥವನನ್ನು ಕಳೆದುಕೊಂಡ ಮೇಲೆ, ನೀವು ಬೆಳ್ಳಿ ಬಂಗಾರ ಎಷ್ಟು ತಂದರೆ ತಾನೆ, ಏನು ಪ್ರಯೋಜನ? ಲಮಾಖಸ್ ಎಂದರೆ ವೀರಾಧಿವೀರ!"

"ಆ ವೀರಾಧಿವೀರತ್ವದಿಂದಲೇ ಅವನು ಹಾಳಾದದ್ದು. ತಲೆ ಗಟ್ಟಿ
ಯೆಂದು ಕಲ್ಲುಹಾಯ್ದರೆ, ಹಾಗಾಗದೆ ಮತ್ತೇನು? ಆದರೂ, ಆವನು
ಸತ್ತರೂ ಅವನ ಹೆಸರು ಎಂದಿಗೂ ಸಾಯದು." ಎಂದ, ಯಾರೋ.

"ಹೋಗಿರೋ, ಹೋಗಿರೋ. ಥು! ಎಲ್ಲಿಯಾದರೂ ಕಳಚಿಬಿಟ್ಟು
ಹೋದ ಚಪ್ಪಲಿಗಳನ್ನು ಕದಿಯುವವರು ನೀವು! ಹಿತ್ತಿಲಕಡೆ ಹಗ್ಗದ
ಮೇಲೆ ಆರಹಾಕಿದ್ದ ಹರುಕುಬಟ್ಟೆ ಹಾರಿಸುವವರು ನೀವು! ನಿಮಗೆಲ್ಲಾ
ಏಕೋ ಈ ದರೋಡೆ ಕೆಲಸ" ಎಂದ ಇನ್ನೊಬ್ಬ, ತುಂಬಾ ಕುಡಿದು.

ಎದುರುಕಡೆಯವರಿಗೆ ಆ ಮಾತು ಕೇಳಿ ಕೋಪ ಬಂತು. ಅವರಲ್ಲಿ
ಒಬ್ಬ, ತತ್ಕಾಲಕ್ಕೆ ನಾಯಕನಾದವನು ಗರ್ಜಿಸಿದ:

"ಬುದ್ಧಿಯಿಲ್ಲದೆ ನೀನು ಹೇಳುವುದಕ್ಕೇನು? ಮನೆ ಎಷ್ಟು ದೊಡ್ಡ
ದಾದರೆ ಅಷ್ಟೂ ದೋಚಿಕೊಂಡು ಬರುವುದು ಸುಲಭ. ಆಳುಕಾಳು ಏನೋ
ಕಾಸಿಗೊಂದು ಕೊಸರಿಗೆರಡು ಎಂಬ ಹಾಗೆ ಇದ್ದರೂ, ಸಮಯ ಬಂದಾಗ
ಪ್ರತಿಯೊಬ್ಬನಿಗೂ ಯಜಮಾನನ ಸ್ವತ್ತಿಗಿಂತ ತನ್ನ ಪ್ರಾಣವೇ ದೊಡ್ಡ
ವಸ್ತುವಾಗಿಬಿಡುತ್ತದೆ. ಆದರೆ, ಮನೆ ಸಣ್ಣದಾದರೆ, ಸೇವಕರ ಸಂಖ್ಯೆ
ಕೊಂಚವಾಗಿದ್ದರೆ, ಅಲ್ಲಿ ಇರುವ ಅಮೂಲ್ಯವನ್ನೆಲ್ಲಾ ಚೆನ್ನಾಗಿ ಅವಿತಿರಿ
ಸಿರುತ್ತಾರೆ; ಅದಕ್ಕೆ ಯಾರಾದರೂ ಕೈಯಿಕ್ಕಲು ಬಂದರೆ, ತಮ್ಮ ಪ್ರಾಣ
ವಿರುವವರೆಗೂ ಕಾದಾಡುತ್ತಾರೆ. ನಮ್ಮ ಕತೆಯನ್ನು ನೀವು ತಿಳಿದಿದ್ದರೆ,
ಹೀಗೆಲ್ಲಾ ಹಂಗಿಸುತ್ತಿರಲಿಲ್ಲ."

"ಹುಂ! ಅದೇನು ಹೇಳಪ್ಪ. ಕೇಳೋಣ."

"ನಾವು ಹೋದದ್ದು ಸುಪ್ರಸಿದ್ಧವಾದ ಥೀಬ್ಸ್ ನಗರದ ಕಡೆಗೆ. ಅಲ್ಲಿ
ಅತ್ಯಂತ ಧನಿಕ ಯಾರು ಎಂದು ವಿಚಾರಿಸಿದೆವು. ಅದೇ ತಾನೆ ಮೊದಲು
ಮಾಡಬೇಕಾದ ಕರ್ತವ್ಯ. ಯಾರೋ ಹೇಳಿದರು–'ಕ್ರೈಸೆರೋ ಎಂಬವನು
ಇದ್ದಾನೆ. ತಾನು ಪಾಪರ್ ಎಂದು ತೋರಿಸಿಕೊಳ್ಳುತ್ತಾನೆ, ಆದರೂ
ಅವನ ಮನೆಯಲ್ಲಿ ಹಣ ಹುಳಿತುಹೋಗುತ್ತಿದೆ' ಎಂದು. ಅವನ ಮನೆ
ಹುಡುಕಿಕೊಂಡು ಹೋದೆವು. ಮನೆ ಸಣ್ಣದಾದರೂ, ಬಾಗಿಲುಗಳೆಲ್ಲ
ಭದ್ರವಾಗಿ ದುರ್ಗದ ಹಾಗಿತ್ತು. ಅಲ್ಲಿ ಒಳಗೆ, ಮನೆಯ ಯಜಮಾನ,

ಹರಕು ಬಟ್ಟೆ ಸುತ್ತಿಕೊಂಡು ಚಿನ್ನದ ಚೀಲಗಳನ್ನು ಎಣಿಸುತ್ತಿರುವನೆಂದು ಜನ ಆಡಿಕೊಳ್ಳುತ್ತಿದ್ದರು. ಸರಿ, ಅವನ ಮನೆಗೆ ನುಗ್ಗಿದರಾಯಿತು; ಅವನು ಒಬ್ಬ, ನಾವು ಇಷ್ಟು ಜನ—ಎಂದುಕೊಂಡೆವು. ರಾತ್ರಿಯಾದ ಕೂಡಲೆ, ಅವನ ಮನೆಯ ಬಳಿ ಸೇರಿದೆವು. ಆದರೆ ಆ ಬಾಗಿಲನ್ನು ಮುರಿಯಲು ಯತ್ನಿಸಿದರೆ, ಅದರ ಶಬ್ದದಿಂದ ಬೀದಿಗೆಲ್ಲಾ ಎಚ್ಚರವಾಗಿಬಿಡುವುದೆಂದು ಹೆದರಿದೆವು. ಅದಕ್ಕೆ ಲಮಾಖಸ್ ಒಂದು ಉಪಾಯ ಮಾಡಿದ. ಬಾಗಿಲಿಗೆ ಬೀಗ ಹಾಕುವ ಬಳಿ ಬೀಗದಕೈತೂತು ಇತ್ತಲ್ಲಾ ಅದನ್ನು ಕತ್ತಿಯಿಂದ ಕೊರೆದು ದೊಡ್ಡದು ಮಾಡಿದ. ಒಳಗಿನ ತಾಪಾಳನ್ನು ತೆಗೆಯೋಣವೆಂದು ಆ ತೂತಿನಲ್ಲಿ ಕೈತೂರಿಸಿದ. ಆದರೆ, ಒಳಗೆ, ಆ ಪಾಪಿ, ಎರಡು ಕಾಲಿನ ನಾಯಿ, ಆ ಧನಪಿಶಾಚಿ, ದರಿದ್ರ ಕ್ರೈಸೆರೋ ಎಚ್ಚರವಾಗಿದ್ದವನು, ಕೈ ಒಳಗೆ ಬಂದದ್ದನ್ನು ಕಂಡುಬಿಟ್ಟ. ಎಲ್ಲಿಂದಲೋ ಒಂದು ಮೊಳೆಯನ್ನೂ ಸುತ್ತಿಗೆಯನ್ನೂ ಸಂಪಾದಿಸಿಕೊಂಡು, ಸದ್ದಿಲ್ಲದೆ ಬಂದು, ತಟಕ್ಕನೆ ಲಮಾಖಸನ ಕೈಯನ್ನು ಆ ಬಾಗಿಲಿಗೆ ಮೊಳೆಯಿಂದ ಸೇರಿಸಿ ಹೊಡೆದುಬಿಟ್ಟ. ಈಚೆ ಲಮಾಖಸ್ ಕೈಸಿಕ್ಕಿಕೊಂಡು, ಬಿಡಿಸಿಕೊಳ್ಳಲು ಒದ್ದಾಡುತ್ತಿದ್ದರೆ, ಆಚೆ ಆ ಕ್ರೈಸೆರೋ ತನ್ನ ಮನೆಯ ಬಿಸಿಲುಮಚ್ಚಿಗೆ ಏರಿ, "ಬೆಂಕಿ! ಬೆಂಕಿ! ನನ್ನ ಮನೆಗೆ ಬೆಂಕಿ ಬಿದ್ದಿದೆ! ನಿಮ್ಮ ಮನೆಗೂ ಹರಡುತ್ತದೆ!" ಎಂದು ಅಕ್ಕಪಕ್ಕದವರನ್ನೆಲ್ಲ ಹೆಸರು ಹಿಡಿದು ಹಿಡಿದು ಕೂಗಿದ. ಕ್ರೈಸೆರೋವನ್ನು ಕಂಡರೆ ಮಿಕ್ಕವರಿಗೆ ಏನೂ ವಿಶ್ವಾಸವಿರದಿದ್ದರೂ, ಬೆಂಕಿ 'ಎಲ್ಲಿ ತಮ್ಮ ಮನೆಗೂ ಹಬ್ಬುವುದೋ ಎಂದು ಅದನ್ನು ಆರಿಸಲು ಎಲ್ಲರೂ ಓಡೋಡಿಬಂದರು."

"ಓಹೋ, ಲಮಾಖಸ್ ಹೀಗೆ ಸಿಕ್ಕಿಕೊಂಡನೋ? ಆಮೇಲೆ?"

"ಏನುಮಾಡುವುದು? ಉಭಯಸಂಕಟದಲ್ಲಿ ಸಿಕ್ಕಿಕೊಂಡೆವು. ಲಮಾಖಸನ್ನು ಕರೆದುಕೊಂಡು ಹೋಗುವಂತಿಲ್ಲ, ಬಿಟ್ಟು ಹೋಗುವಂತೆಯೂ ಇಲ್ಲ. ಕಡೆಗೆ, ದೇವರೇ ಗತಿ ಎಂದುಕೊಂಡು, ಅವನ ಕೈಯನ್ನು ಮೊಣಕೈಯ ಹತ್ತಿರ ಕತ್ತರಿಸಿಬಿಡುವುದೆಂದು ಇತ್ಯರ್ಥವಾಯಿತು. ಎಂದರೆ, ಲಮಾಖಸನೇ ಅದನ್ನು ಸೂಚಿಸಿ, ಒತ್ತಾಯಪಡಿಸಿದ. ಹಾಗೇ ಅದನ್ನು

ತ್ತರಿಸಿ, ಆ ಮೋಟೆಗೆ ಚೆನ್ನಾಗಿ ಬಟ್ಟೆ ಸುತ್ತಿ, ಅವನನ್ನು ಎತ್ತಿಕೊಂಡು ಅಲ್ಲಿಂದ ಓಡಿದೆವು. ಆ ವೇಳೆಗೆ ಬೀದಿಗೆ ಬೀದಿಯೇ ಎದ್ದುಬಂದಿತ್ತು. ಎಲ್ಲರೂ ಕೂಗಿಕೊಂಡು, ಕಿರಿಚಿಕೊಂಡು ನಮ್ಮ ಬೆನ್ನು ಹತ್ತಿದರು. ಪಾಪ, ಲಮಾಖಸ್ ನಮ್ಮ ಜೊತೆಗೆ ಓಡಲಾರ. ನಾವು ಅವನನ್ನು ಎತ್ತಿಕೊಂಡು ಬೇಗ ಹೋಗಲಾರೆವು. ಅವನನ್ನು ಬಿಟ್ಟು ಹೋಗುವಂತಿಲ್ಲ. ಛೆ! ನಮ್ಮ ಪಾಡು ಬೇಡ! ಆಗ ಲಮಾಖಸ್, ಎಷ್ಟಾದರೂ ದೊಡ್ಡಮನುಷ್ಯ, ಹೇಳಿದ: 'ಈ ಯಾತನೆ ತಡೆಯುಲಾರೆ. ನಮ್ಮ ಸ್ನೇಹದ ಮೇಲಿನ ಆಣೆ! ನನ್ನನ್ನು ಇರಿದು ಕೊಂದುಬಿಡಿ! ನಾನು ಉಳಿದರೆ ನೀವು ಸಿಕ್ಕಿಬೀಳು ತ್ತೀರಿ. ನಾನು ಸತ್ತರೆ, ನೀವು ತಪ್ಪಿಸಿಕೊಳ್ಳಲು ಅನುಕೂಲವಾಗುತ್ತದೆ. ನಾನು ಸೆರೆ ಸಿಕ್ಕಿದರೆ, ಹೇಗೂ ಅವರು ನನ್ನನ್ನು ಶೂಲಕ್ಕೆ ಹಾಕುತ್ತಾರೆ. ಅವರ ಕೈಯಲ್ಲಿ ಸಾಯುವುದರ ಅವಮಾನಕ್ಕಿಂತ, ನನ್ನ ಸ್ನೇಹಿತರ ಕೈಯಲ್ಲಿ ಪ್ರಾಣ ಬಿಡುವ ಬಹುಮಾನವೇ ನನಗೆ ಇಷ್ಟ! ಒಂದು ವೇಳೆ ನಾವು ತಪ್ಪಿಸಿಕೊಂಡರೂ, ಬಲಗೈ ಕಳೆದುಕೊಂಡವನು ನಾನು ಏನು ಕದಿಯಲಿ? ಯಾರ ಕೊರಳು ಹೇಗೆ ಕೊಯ್ಯಲಿ? ಆದ್ದರಿಂದ ನಾನು ಹೇಳಿದಂತೆ ಮಾಡಿ' ಎಂದು ಎಷ್ಟೆಷ್ಟೋ ಅವನು ಬೇಡಿಕೊಂಡರೂ, ಸಹೋದರನನ್ನು ಕೈಯಾರೆ ಕೊಲ್ಲುವ ಹೇಸಿಗೆಯ ಕೃತ್ಯಕ್ಕೆ ಯಾವನೂ ಒಪ್ಪಲಿಲ್ಲ. ಕಡೆಗೆ, ಲಮಾಖಸ್ ತಾನೇ ತನ್ನ ಕತ್ತಿಯನ್ನು ಎಡಗಯ್ಯಿಂದ ಹಿರಿದು ಹಿಡಿದು, ಎದೆಗೆ ತಿವಿದುಕೊಂಡು, ಸಾವಿನಲ್ಲೂ ವೀರಾಧಿವೀರ ನಂತೆಯೇ ಸತ್ತ. ಅವನ ಕಳೇಬರವನ್ನು ರೇಶಿಮೆ ವಸ್ತ್ರದಲ್ಲಿ ಸುತ್ತಿ, ಗೌರವದಿಂದ ಅವನನ್ನು ಹೊತ್ತುತಂದು, ಇಸ್ಮೇರಿಯಾ ನದಿಯ ಪಾಲು ಮಾಡಿದೆವು, ನಮ್ಮ ಪ್ರೀತಿಯ ನಾಯಕನನ್ನು. ಅಂತಹ ನಾಯಕನಿಗೆ ನದಿಯ ಮೂಲಕವಾಗಿ ಸಮುದ್ರದ ಸಮಾಧಿಯೇ ಸರ್ವೋತ್ಕೃಷ್ಟ ವಾದದ್ದು."

ಮೊದಲು ಹೀಯಾಳಿಸಿದ ಎಮುರುಕಡೆಯವರು ಕೂಡ ಲಮಾಖಸನ ವೀರಮರಣವನ್ನು ಮೆಚ್ಚಿಕೊಂಡರು. ಅವನ ಆತ್ಮಕ್ಕೆ ಶಾಂತಿಯನ್ನು ಮನಸಾ ಕೋರಿದರು.

೨

"ಅಯ್ಯೋ, ಅಷ್ಟೇ ಅಲ್ಲಪ್ಪ. ನಾವು ದರೋಡೆ ಲೂಟಿಗಳ ಹೊರಡುವ ಮುಂಚೆ ಇಂಥ ಕಡೆ ಇಂಥ ದಿನ ಹೀಗೆ ಹೀಗೆ ಎಂದ ನಿಷ್ಕರ್ಷಿಸುತ್ತಿದ್ದನಲ್ಲಾ, ಅವನನ್ನೂ ಕಳೆದುಕೊಂಡೆವು. ನಮ ದುರದೃಷ್ಟಕ್ಕೆ ಏನು ಹೇಳೋಣ ?

"ಅವನು ಒಂದು ಮುದುಕಿಯ ಮನೆಗೆ ಕನ್ನ ಹಾಕಿ, ಒಳಗೆ ನುಗ್ಗಿದ್ದ ಅಟ್ಟದ ಮೇಲೆ ಮಲಗುವ ಮನೆಯಲ್ಲಿ ಅವಳು ನಿದ್ರೆಮಾಡುತ್ತಿದ್ದಳು ಸುಮ್ಮನೆ ಸದ್ದುಮಾಡದೆ ಅವಳ ಕುತ್ತಿಗೆ ಕಿವಿಚಿಬಿಡಬಾರದೆ? ಏನು ಮಾಡಿದ, ನಮ್ಮ ಆಲ್‌ಕಿಮಸ್ ? ಅದು ಏಕೋ ಏನೋ, ಅವಳ ಗೋಜಿಗೆ ಹೋಗದೆ, ಅವಳು ಮಲಗಿದ್ದ ಕೋಣೆಯೊಳಗಿನ ಪದಾರ್ಥ ಗಳನ್ನೆಲ್ಲಾ ಕಿಟಕಿಯಿಂದ ಆಚೆ, ನಾವು ಇದ್ದ ಕಡೆಗೆ, ಎಸೆಯತೊಡಗಿದ ಕೊಠಡಿಯಲ್ಲಿ ಇದ್ದದ್ದನ್ನೆಲ್ಲಾ ಗುಡಿಸಿಕೊಂಡದ್ದಾಯಿತು. ಆ ಹೊತ್ತಿಗೆ ಅವನಿಗೆ ಹೀಗೂ ದುರ್ಬುದ್ಧಿ ಬರಬಹುದೆ? ಆ ಮುದುಕಿ ಮಲಗಿಕೊಂಡಿದ್ದ ಹಾಸಿಗೆಯನ್ನೂ ಹಾರಿಸೋಣವೆಂದು, ಅವಳನ್ನು ನೆಲಕ್ಕೆ ತಳ್ಳಿದ. ಇನ್ನೇನು, ಆ ಹಾಸಿಗೆ ಹೊದಿಕೆಗಳನ್ನು ಮುದುರುಗಟ್ಟಿ ಎತ್ತಿ ಒಗೆಯ ಬೇಕು; ಅಷ್ಟರಲ್ಲಿ ಆ ಮುದುಕಿ ಅವನ ಕಾಲು ಕಟ್ಟಿಕೊಂಡು, 'ಇದೇಕಪ್ಪಾ? ನನ್ನ ಪಾತ್ರೆ ಪದಾರ್ಥಗಳನ್ನು ಮಗ್ಗಲು ಮನೆಯ ಅಂಗಳಕ್ಕೆ ಹೀಗೆ ಎಸೆಯುತ್ತಿದ್ದೀ? ನಾನೋ ಬಡವಿ. ಅವರೋ ಬೇಕಾದ ಹಾಗೆ ಭಾಗ್ಯವುಳ್ಳವರು' ಎಂದು ಗೋಳಾಡಿದಳು.

"ಆಲ್‌ಕಿಮಸ್ ಅದೂ ನಿಜ ಎಂದುಕೊಂಡ. ಏನೋ ಆ ಕಡೆ ಬೀದಿಯೆಂದು ಭ್ರಮಿಸಿಕೊಂಡು, ನಿಜವಾಗಿಯೂ ಪಕ್ಕದ ಮನೆಯ ಅಂಗಳಕ್ಕೇ ಎಸೆಯುತ್ತಿದ್ದೇನೆಯೋ ಹೇಗೋ ಎಂದುಕೊಂಡು, ಕಿಟಕಿಯ ಕಡೆಗೆ ಕಾಲಿಟ್ಟ. ಹಾಗೆಯೇ, ಪಕ್ಕದ ಮನೆಯ ಆಜುಬಾಜು ಹೇಗಿದೆಯೋ ನೋಡೋಣ ಎಂದು ಕಿಟಕಿಯಿಂದ ಬಗ್ಗಿನೋಡಿದ. ಮುದುಕಿ, ಅದೇ ಹೊತ್ತಿಗೆ ಹೊಂಚುಹಾಕುತ್ತಿದ್ದವಳು, ಮೆಲ್ಲನೆ ಹಿಂದಿನಿಂದ ಬಂದು, ಅವನನ್ನು ನೂಕಿಬಿಟ್ಟಳು. ಆಲ್‌ಕಿಮಸ್ಸಿಗೆ ತೂಕ ತಪ್ಪಿತು. ಅಟ್ಟದಿಂದ

ಲಕ್ಕೆ ಏನೂ ಅಷ್ಟು ದೂರವಿಲ್ಲ; ಆದರೂ ಬೀಳುವಾಗ ಪಕ್ಕದಲ್ಲಿದ್ದ
ಂದು ದೊಡ್ಡ ಕಲ್ಲಿನ ಮೇಲೆ ಬಿದ್ದು, ಅವನ ಪಕ್ಕೆಲುಬು ಮುರಿದು
ೇಯಿತು. ಕೊಢ ಕೊಡ ರಕ್ತ ಕಾರಿಕೊಂಡ. ಸಾಯುವ ಮುಂಚೆ,
ುದುಕಿ ಮಾಡಿದ ಮೋಸವನ್ನು ಹೇಳಿಕೊಂಡ. ಮತ್ತೇನು ಮಾಡು
ದು? ಅವನನ್ನೂ ನಮ್ಮ ಲನಾಖಸ್ಸಿನ ಹಿಂದೆಯೇ ಸಮುದ್ರಕ್ಕೆ
ಳಿಸಿದೆವು.

"ಹೀಗೆ, ಘಟಾನುಘಟಿಗಳು ಇಬ್ಬರನ್ನು ಕಳೆದುಕೊಂಡ ಬಳಿಕ,
ೀಬ್ಸಿನಲ್ಲಿ ನಿಲ್ಲದೆ, ಪ್ಲಾಟಿಯದ ಕಡೆಗೆ ಹೆಜ್ಜೆ ಎಳೆದುಕೊಂಡು ಹೋದೆವು.
ಲ್ಲಿ ಒಂದು ಭಾರಿ ಕರಡಿಯ ಕಾಳಗ ಮನುಷ್ಯರೊಂದಿಗೆ ನಡೆಯುವು
ದೆಯೆಂದು ಕೇಳಿದೆವು. ಡೆಮೊಷಾರೆ ಎಂಬ ಸಾಹುಕಾರ ಅದನ್ನು ಬಹು
ಸದ ವ್ಯಯದಿಂದ ಏರ್ಪಡಿಸುತ್ತಿದ್ದನಂತೆ. ಆ ಕಾಳಗವನ್ನು ನೋಡುವು
ಕ್ಕೆ ದೂರದೂರಗಳಿಂದ ಲಕ್ಷಾಂತರ ಜನ ಬಂದು ನೆರೆಯುತ್ತಿದ್ದರು.

"ಅವನು ಹೇರಳವಾಗಿ ಹಣವನ್ನು ವೆಚ್ಚಮಾಡಿ, ಬೇಟೆಗಾರರನ್ನು
ದಕ್ಕಾಗಿಯೇ ಕಳುಹಿಸಿ, ದೊಡ್ಡ ದೊಡ್ಡ ಗಡವ ಕರಡಿಗಳನ್ನು ಹಿಡಿಸಿ
ರಿಸಿದ್ದ. ಕೆಲವನ್ನು ಕೊಂಡುಕೊಂಡಿದ್ದ. ಕೆಲವನ್ನು ಸ್ನೇಹಿತರು
ೊಟ್ಟಿದ್ದರು. ಅವುಗಳಿಗಾಗಿಯೇ ಒಂದು ಕರಡಿಯ ತೋಟವನ್ನು ಬೆಳಸಿ,
ಲ್ಲಿ ಅವುಗಳನ್ನು ಕೊಬ್ಬಿಸುತ್ತಿದ್ದ. ಅವುಗಳಿಗೂ, ಇದಕ್ಕಾಗಿಯೇ
ಸ್ಯೆಯನ್ನು ಬೆಳಸಿಕೊಂಡು ತ್ರಿಶೂಲಗಳನ್ನು ಹಿಡಿದು ಕಾದಾಡಬಲ್ಲ
ುಲ್ಲರಿಗೂ ಕಾಳಗಗಳನ್ನು ಏರ್ಪಡಿಸುತ್ತಿದ್ದ. ಡೆಮೊಷಾರೆ ನಡಸುತ್ತಿದ್ದ
ನೋಟವನ್ನು ನೋಡುವುದಕ್ಕೆ ಬಂದವರ ಜಾತ್ರೆಯನ್ನು ನೋಡಲಿಕ್ಕೆ
ರಡು ಕಣ್ಣು ಸಾಲದು!

"ಆದರೆ, ಡೆಮೊಷಾರೆಯ ಮೇಲೆ ದೇವತೆಗಳಿಗೆ ಅದೇನು ಅಸೂಯೆ
ಂತೋ, ಆ ಕರಡಿಗಳು ಒಂದೊಂದಾಗಿ ಕೃಶವಾಗತೊಡಗಿದುವು. ಬಿಸಿಲಿನ
ಾಪ, ಎಂದರು; ಸೆರೆಮನೆಯ ಸಂಕಟ, ಎಂದರು; ಕರಡಿಗಳಿಗೆ
ಯಾಯಾಮ ಸಾಲದು, ಎಂದರು. ಅನಂತರ ಏನೋ ಅಂಟುಜಾಡ್ಯ
ಂತು, ಒಂದೊಂದಾಗಿ ಕರಡಿಗಳನ್ನು ಹೊತ್ತುಕೊಂಡುಹೋಯಿತು.

ಡೆಮೊಷಾರೆಗೆ, ಅನ್ಯಾಯವಾಗಿ ಆಟ ಇಲ್ಲದೆ ಹೋಯಿತಲ್ಲಾ, ಎಂದು ವ್ಯಥೆಯಾಯಿತು."

"ಅದನ್ನು ಕಂಡು, ನನಗೂ ನಮ್ಮ ಈ ಬಬೂಲಸಿಗೂ ಒಂದು ಯೋಚನೆ ಹೊಳೆಯಿತು. ಅಂಟುರೋಗ ತಗುಲಿ ಸತ್ತುಹೋಯಿತಲ್ಲಾ, ಆ ಕರಡಿಗಳನ್ನು ಊರಾಚೆ ಎಸೆದಿದ್ದರು. ಅದರಲ್ಲಿ ಒಂದನ್ನು ಹಿಡಿದು, ನಾವು ಇಳಿದಿದ್ದ ಕಡೆಗೆ ಎತ್ತಿಕೊಂಡುಹೋದೆವು. ಮೊದಲೇನೋ ಅದರ ಮೈಯ ಮಾಂಸವನ್ನು ತಿನ್ನುವುದು ಎಂದುಕೊಂಡಿದ್ದೆವು. ಆದರೆ ಈ ಯೋಚನೆ ಬಂದ ಮೇಲೆ, ಅದರ ದೇಹವನ್ನು ಕತ್ತರಿಸದೆ, ಉಪಾಯ ವಾಗಿ ಅದರ ಚರ್ಮವನ್ನು ಸುಲಿದೆವು. ಒಳಭಾಗವನ್ನೆಲ್ಲಾ ಚೆನ್ನಾಗಿ ಕೆರೆದು ಕೆರೆದು, ಅದರ ಮೇಲೆ ಬೂದಿಯನ್ನು ಚಿಮುಕಿಸಿ, ಅದನ್ನು ಬಿಸಿಲಿನಲ್ಲಿ ಒಣಗಲು ಹಾಕಿದೆವು. ಅದು ಆಚೆ ಒಣಗುತ್ತಿದ್ದರೆ, ಈಚೆ ಆ ಕರಡಿಯ ಮಾಂಸವನ್ನು ಹೊಟ್ಟೆ ಬಿರಿಯುವಂತೆ ತುಂಬಿಕೊಂಡೆವು. ತಿಂದು ತೇಗಿ ಆದಮೇಲೆ, ನಮ್ಮ ಯೋಚನೆಯನ್ನು ಉಳಿದವರಿಗೂ ತಿಳಿಸಿದೆವು.

"ಏನೆಂದರೆ: ನಮ್ಮಲ್ಲಿ ಅತ್ಯಂತ ಬುದ್ಧಿವಂತನಾದವನು, ಅಷ್ಟೇ ಧೈರ್ಯಶಾಲಿಯಾದವನು ಆ ಕರಡಿಯ ಚರ್ಮದಲ್ಲಿ ತಾನು ಹೊಕ್ಕು, ತಾನು ಕರಡಿಯಂತೆ ನಟಿಸಬೇಕು. ಅವನನ್ನು ಉಳಿದವರು ಡೆಮೊಷಾರೆಯ ಮನೆಗೆ ಕರೆದುಕೊಂಡುಹೋಗಿ, ಅವನನ್ನು ಕರಡಿಯೆಂದು ಮಾರಬೇಕು. ಅವನಾದರೋ, ಕರಡಿಗಳ ನಡುವೆ ಕರಡಿಯಾಗಿದ್ದುಕೊಂಡು, ರಾತ್ರಿ ಸಮಯ ನೋಡಿ, ಮನೆಯ ಮುಂಬಾಗಿಲನ್ನು ನಮಗೆ ತೆರೆಯಬೇಕು. ಆಗ ನಾವೆಲ್ಲ ಒಳಗೆ ನುಗ್ಗಿ, ಸಿಕ್ಕಿದ್ದನ್ನು ದೋಚಿಕೊಂಡು ಹೋಗ ಬಹುದು.

"ಈ ಆಲೋಚನೆ ಕೇಳಿ, ಎಲ್ಲರಿಗೂ ಕಚಕುಳಿ ಇಟ್ಟಹಾಗಾಯಿತು. ಕರಡಿಯ ಪಾತ್ರವನ್ನು ವಹಿಸಲು ನಾನು ತಾನು ಎಂದು ನಮ್ಮವರು ಮುಂದೆ ಬಂದರು. ಆದರೆ, ನಾವು ಅದಕ್ಕಾಗಿ 'ಚೀಟಿ' ಹಾಕಿದೆವು. ಕರಡಿ ಯಾಗುವ ಗೌರವ ನಮ್ಮ ಥ್ರಸೈಲಿಯಾನಿಗೆ ಬಂದಿತು. ನಾವು ಅವನ

ಸುತ್ತ ಕರಡಿಯ ಚರ್ಮವನ್ನು ಹೊಲಿಯುತ್ತಿರುವಾಗ, ಅದೇನು ಸಮಾಧಾನಚಿತ್ತದಿಂದ ಇದ್ದ ಎನ್ನುತ್ತೀರಿ! ಚರ್ಮವನ್ನು ಭದ್ರವಾಗಿ ಹೊಲಿದೆವು, ಹೊಲಿಗೆ ಕಾಣಿಸದಂತೆ ಕೂದಲನ್ನು ಬಾಚಿದೆವು, ಕರಡಿಯ ತಲೆಯನ್ನು ಅವನ ತಲೆಯ ಮೇಲೆ ಕವಿಚಿದೆವು. ನೋಡಿದರೆ, ನಿಜವಾದ ಕರಡಿಯೇ ಎಂದು ಹೇಳುವಹಾಗಿತ್ತು. ಅವನಿಗಾಗಿ ಒಂದು ಪಂಜರ ಸಂಪಾದಿಸಿದೆವು. ಇನ್ನು ಅವನನ್ನು ಡೆಮೊಷಾರೆಯ ಮನೆಗೆ ತಲುಪಿಸುವುದು ಒಂದು ಉಳಿದಿತ್ತು.

"ಮಾರುವುದು ಬೇಡ, ಅವನ ಸ್ನೇಹಿತರು ಯಾರೋ ಕಳಿಸಿದರೆಂದು ತಂದು ತಲಪಿಸೋಣ—ಎಂದುಕೊಂಡೆವು; ಅವನ ಅತ್ಯಂತ ಹತ್ತಿರದ ಸ್ನೇಹಿತರು ಯಾರೆಂದು ವಿಚಾರಿಸಿಕೊಂಡು, ಅವರ ಹೆಸರಿನಲ್ಲಿ ಒಂದು ಸುಳ್ಳು ಕಾಗದವನ್ನು ಸೃಷ್ಟಿಸಿದೆವು. 'ಬೇಟೆಯಲ್ಲಿ ದೊರೆತ ಈ ಮೊದಲನೇ ಕರಡಿಯನ್ನು ನಿಕನಾರನು ತನ್ನ ಪ್ರಿಯಮಿತ್ರನಾದ ಡೆಮೊಷಾರೆಗೆ ಒಪ್ಪಿಸುತ್ತಿದ್ದಾನೆ' ಎಂದು ಕರಡಿಯ ಕುತ್ತಿಗೆಗೆ ಒಂದು ಚೀಟಿ ಕಟ್ಟಿ, ಕರೆದುಕೊಂಡುಹೋದೆವು.

"ನಾವು ಹೋಗುವ ವೇಳೆಗೆ ಸಂಜೆಯಾಗಿತ್ತು. ಡೆಮೊಷಾರೆ ಕಾಗದವನ್ನು ಓದಿಕೊಂಡ, ಕರಡಿಯ ಗಡವತನವನ್ನು ಮೆಚ್ಚಿಕೊಂಡ, ನಿಕನಾರನ ಸ್ನೇಹವನ್ನು ಕೊಂಡಾಡಿದ. ಸಕಾಲಕ್ಕೆ ಸರಿಯಾಗಿ ಕರಡಿ ಒದಗಿತು, ಎಂದು ಸಂತೋಷಪಡುತ್ತಾ ನಮಗೆ ಹತ್ತು ಚಿನ್ನದ ವರಹಗಳನ್ನು ಬಹುಮಾನವಾಗಿ ಕೊಡಿಸಿದ

"ಮನೆಯವರೆಲ್ಲ ಬಂದರು, ಕರಡಿಯನ್ನು ಕೊಂಡಾಡಿದರು. ಅವರು ಹತ್ತಿರ ಬರದ ಹಾಗೆ ಥ್ರಸ್ಸೈಲಿಯಾನ್ ಘೋರವಾಗಿ ಗುರುಗುಟ್ಟುತ್ತ ಅವರನ್ನು ದೂರದಲ್ಲಿಯೇ ತಡೆದಿರಿಸಿದ್ದ. ಸರಿ, ನಿಂತುಹೋಯಿತು ಎಂದುಕೊಂಡಿದ್ದ ವಿನೋದ ಮತ್ತೆ ನಡೆಯುತ್ತದೆ ಎಂದು ಎಲ್ಲರಿಗೂ ಹಿಗ್ಗು.

"ಡೆಮೊಷಾರೆ ಆ ಕರಡಿಯನ್ನು ಕರಡಿಯ ತೋಟಕ್ಕೆ ಕರೆದುಕೊಂಡು ಹೋಗಲು ಹೇಳಿದ. ಆ ಕೂಡಲೆ ನಾನು ಹೇಳಿದೆ: 'ಧಣಿಯೆ! ಪಾಪ, ಈ ಕರಡಿ ಈಗತಾನೆ ಅಷ್ಟು ದೂರದಿಂದ ಪ್ರಯಾಣಮಾಡಿ ಬಂದು, ಆಯಾಸ

ವಾಗಿದೆ. ಇದು ಇನ್ನೂ ಚೇತರಿಸಿಕೊಳ್ಳುವುದಕ್ಕೆ ಮೊದಲೇ ಇದನ್ನು ಇತರ ಕರಡಿಗಳ ನಡುವೆ ಬಿಟ್ಟರೆ, ಪಾಪ—ಇಲ್ಲಿನ ಕರಡಿಗಳಿಗೆ ಏನೋ ಅಂಟುರೋಗವಂತಲ್ಲ? ಅದು ಇದಕ್ಕೂ ತಗುಲಿದರೆ, ಗತಿಯೇನು? ಅದರ ಬದಲು, ಇಲ್ಲಿ ಎಲ್ಲಾದರೂ ತಂಪಾದ ನೀರಿನ ಕೊಳದ ಹತ್ತಿರ, ತಂಪಾದ ಗಾಳಿ ಬೀಸುವ ಕಡೆ, ಒಂದೆರಡು ದಿನ ಇದನ್ನು ಒಂಟಿಯಾಗಿ ಇರಿಸಿದ್ದರೆ ಮೇಲು. ತಲೆಯ ಮೇಲೆ ನೀರು ತೊಟ್ಟಿಕ್ಕುವ ತಂಪಾದ ಗುಹೆಗಳಲ್ಲಿ ವಾಸಮಾಡುತ್ತಿದ್ದ ಕರಡಿಗೆ ಕೆಲವು ದಿನ ತಂಪಿನ ಬಳಿಯಲ್ಲೇ ಇರುವುದಾಗಲಿ' ಎಂದೆ.

"ಡೆಮೊಷಾರೆ ನನ್ನ ಮಾತಿಗೆ ಮೆಚ್ಚಿಕೊಂಡ. ಆಗಬಹುದೆಂದು ಒಪ್ಪಿದ. 'ನಿನಗೆ ಇಷ್ಟ ಬಂದ ಕಡೆ ಪಂಜರವನ್ನು ಇರಿಸು' ಎಂದ. ಅದಕ್ಕೆ ನಾನು ಕೇಳಿಕೊಂಡೆ: 'ಧಣಿಯೆ, ನಿನಗೆ ಒಪ್ಪಿಗೆ ಆದರೆ, ನಾವು ಈ ಪಂಜರದ ಜೊತೆಗೇ ಇದ್ದು, ಕಾಲಕಾಲಕ್ಕೆ ಈ ಕರಡಿಗೆ ಅನ್ನಾಹಾರ ಗಳನ್ನು ಹಾಕುತ್ತೇವೆ. ಇದು ಬೇಗ ಚೇತರಿಸಿಕೊಳ್ಳುವಂತೆ ಆರೈಕೆ ಮಾಡುತ್ತೇವೆ.' ಡೆಮೊಷಾರೆ ಅದನ್ನು ಒಪ್ಪಲಿಲ್ಲ. 'ನೀವೇನೂ ನಿಲ್ಲ ಬೇಕಾದ್ದಿಲ್ಲ ಕರಡಿಗಳ ಆರೈಕೆ ಮಾಡಿ, ನಮ್ಮವರಿಗೆ ತುಂಬ ಅನುಭವ ವಿದೆ.' ಎಂದು ನಮ್ಮನ್ನು ಕಳುಹಿಸಿಬಿಟ್ಟ.

"ಏನು ಮಾಡುವುದು? ಕೈಮುಗಿದು, ಕಾಲು ತೆಗೆದೆವು. ಊರ ಹೊರಗೆ ಒಂದು ಶ್ಮಶಾನ. ಅಲ್ಲಿ ಒಂದು ಸಮಾಧಿ. ಅದರೊಳಗೆ ಕೆಲವು ಶವದ ಪೆಟ್ಟಿಗೆಗಳು. ರಾತ್ರಿಯಾಗುವವರೆಗೂ ಮಾಡತಕ್ಕದೇನು? ಆ ಪೆಟ್ಟಿಗೆಗಳಲ್ಲಿದ್ದ ಮುರುಕು ಮೂಳೆಗಳನ್ನು ತೆಗೆದುಹಾಕಿದೆವು. ರಾತ್ರಿ ನಾವು ತರುವ ದೋಚನ್ನು ತುಂಬುವುದಕ್ಕೆ ಆಯಿತೆಂದು ಆ ಪೆಟ್ಟಿಗೆ ಗಳನ್ನು ಸಿದ್ಧಮಾಡಿಕೊಂಡೆವು.

"ನಡುರಾತ್ರಿಯಾಯಿತು. ಎಲ್ಲರೂ ಕೈಗಳಲ್ಲಿ ಕತ್ತಿಹಿಡಿದು, ಡೆಮೊ ಷಾರೆಯ ಮನೆಯ ಬಾಗಿಲಿನಲ್ಲಿ ಮುತ್ತಿಗೆಗೆ ಸಜ್ಜಾಗಿ ಸೇರಿದೆವು. ರಾತ್ರಿಯೋ ಕತ್ತಲೆ, ನಕ್ಷತ್ರಗಳ ಬೆಳಕಷ್ಟೆ, ಎಲ್ಲರಿಗೂ ಮೊದಲನೆಯ ನಿದ್ರೆ ಮುಗಿಯುತ್ತಿರುವ ಹೊತ್ತು.

"ಒಳಗೆ ಥ್ರಸ್ಸೈಲಿಯಾನ್ ಏನೂ ನಿದ್ರೆ ಮಾಡುತ್ತಿರಲಿಲ್ಲ. ಸಮಯವನ್ನೇ ನೋಡುತ್ತಿದ್ದವನು, ಸದ್ದಿಲ್ಲದೆ ಎದ್ದು, ಪಂಜರದಿಂದ ಈಚೆ ಬಂದು, ಬಳಿಯಲ್ಲಿ ಇದ್ದ ಕಾವಲಿನವರನ್ನು ಅವರದೇ ಕತ್ತಿಗಳಿಂದ ತಿವಿದು ಕೊಂದು, ಹೆಬ್ಬಾಗಿಲಿನ ಹತ್ತಿರ ಬಂದ. ಅಲ್ಲಿದ್ದ ದ್ವಾರಪಾಲಕನನ್ನೂ ಹತಮಾಡಿ, ಅವನ ನಡುವಿನಲ್ಲಿದ್ದ ಬೀಗದೆಸಳಿನಿಂದ ಬಾಗಿಲನ್ನು ತೆರೆದ. ನಾವೆಲ್ಲಾ ಒಳಗೆ ನುಗ್ಗಿದೆವು. ಬೆಳ್ಳಿಯ ಪಾತ್ರೆಗಳನ್ನು ತುಂಬಿಟ್ಟಿದ್ದ ಪೆಟ್ಟಿಗೆಗಳನ್ನು ಒಡೆದೆವು. ನಮ್ಮ ಜೊತೆಯವರೆಲ್ಲ ತಮ್ಮ ತಮ್ಮ ಕೈಲಾದಷ್ಟು ಬೆಳ್ಳಿ ಬಂಗಾರಗಳನ್ನು ಹೊತ್ತುಕೊಂಡು, ಊರ ಹೊರಗಿನ ಶ್ಮಶಾನಕ್ಕೆ ಓಡಿದರು. ಅಲ್ಲಿ ಅದನ್ನು ಆ ಶವಗಳ ಪೆಟ್ಟಿಗೆಗೆ ತುಂಬಿರಿಸಿ, ಮತ್ತಷ್ಟು ಹೊತ್ತುಕೊಂಡುಹೋಗಲು ಬಂದರು.

"ನಾನು ಹಿಂದೆ ನಿಂತು, ಕಾವಲು ನೋಡುತ್ತಿದ್ದೆ. 'ಥ್ರಸ್ಸೈಲಿಯಾನ್! ನೀನು ಈಗಲೇ ಈ ವೇಷ ತೆಗೆಯಬೇಡ. ಯಾರಾದರೂ ಬಂದರೆ, ಕರಡಿ ಪಂಜರದಿಂದ ತಪ್ಪಿಸಿಕೊಂಡಿದೆ ಎಂದು ಹೆದರಿ, ಮೂಲೆಯಲ್ಲಿ ಮುದುರಿಕೊಳ್ಳುತ್ತಾರೆ. ಆದ್ದರಿಂದ ನಿನ್ನ ವೇಷವೇ ನಮಗೊಂದು ದೊಡ್ಡ ರಕ್ಷೆಯಾಗಿರುತ್ತದೆ' ಎಂದು ಹೇಳಿದ್ದೆ. ಅವನೂ ಅದರಂತೆಯೇ ಕರಡಿಯ ವೇಷದಲ್ಲಿದ್ದ.

"ನಾವು ಹಾಕಿಕೊಂಡ ಹಂಚಿಕೆಯಂತೆಯೇ ಎಲ್ಲಾ ನಡೆಯುತ್ತಿತ್ತು. ಆದರೆ, ನಾವು ನಿರೀಕ್ಷಿಸದಿದ್ದುದು ಒಂದು ಅನಾಹುತ ನಡೆದುಹೋಯಿತು. ಏನೆಂದರೆ—ನಮ್ಮ ಜೊತೆಗಾರರು ಶ್ಮಶಾನದಿಂದ ಹಿಂದಿರುಗಿ ಬರಲಿ ಎಂದು ನಾವು ಎದುರುನೋಡುತ್ತಿರುವಾಗ, ಆ ಮನೆಯ ಸೇವಕನೊಬ್ಬ—ಅದೇನು ಸದ್ದು ಕೇಳಿದನೋ, ಅದೇನು ಅನುಮಾನವಾಯಿತೋ—ಮೆಲ್ಲಗೆ ಎದ್ದು ಬಂದವನು, ಕರಡಿ ಮನೆಯೊಳಗೆ ಸುಳಿದಾಡುವುದನ್ನು ನೋಡಿದ. ಆದರೆ ಅವನು ನಾವು ಎಣಿಸಿದ್ದಂತೆ ಕೂಗಿಕೊಳ್ಳಲಿಲ್ಲ. ಸದ್ದಿಲ್ಲದೆ ಹೋಗಿ, ಉಳಿದವರನ್ನು ಎಬ್ಬಿಸಿ, ಅವರಿಗೆ ತಾನು ಕಂಡದ್ದನ್ನು ಹೇಳಿದ. ಮರುಗಳಿಗೆಯಲ್ಲೇ ಅವರೆಲ್ಲ ಬಂದರು: ದೀಪಗಳು, ಪಂಜುಗಳು, ಮಸಾಲುಗಳು, ಹಣತೆಗಳು ಕೈಯಲ್ಲಿ ಹಿಡಿದು.

“ಅಂಗಳವೆಲ್ಲ ಬೆಳ್ಳಂಬೆಳಗಾಯಿತು. ಬಂದವರು ಒಬ್ಬೊಬ್ಬರ ಕೈಲೂ ಒಂದೊಂದು ಕತ್ತಿ, ಒಂದೊಂದು ಕೊಂತ, ಒಂದೊಂದು ಈಟಿ. ಒಬ್ಬೊಬ್ಬರು ಒಂದೊಂದು ದ್ವಾರದ ಬಳಿ ಕಾವಲು ನಿಂತರು. ಮನೆಯಲ್ಲಿದ್ದ ಬೇಟೆಯ ನಾಯಿಗಳನ್ನೆಲ್ಲಾ ಬಿಚ್ಚಿ ತಂದು, ಛೂ ಬಿಟ್ಟರು.

“ಆ ಗಲಾಟೆಯ ಮಧ್ಯೆ, ನಾನು ಕಾಣದಂತೆ ತಪ್ಪಿಸಿಕೊಂಡು, ಬಾಗಿಲ ಹಿಂದೆ ಅವಿತುಕೊಂಡೆ. ಅಲ್ಲಿಂದ ಕಂಡೆ: ನಮ್ಮ ಥ್ರಸ್ಯೆಲಿಯಾನ್ ಕರಡಿಯ ವೇಷದಲ್ಲಿ ಹೇಗೆ ಬೇಟೆಯ ನಾಯಿಗಳೊಡನೆ ಹೋರಾಡಿದ ಎಂಬ ಅದ್ಭುತ ದೃಶ್ಯವನ್ನು. ತನ್ನ ಕತೆ ಮುಗಿದಹಾಗೆಯೇ ಎಂದು ಅವನಿಗೆ ತಿಳಿದುಹೋಗಿದ್ದಿತಾದರೂ ತನ್ನ ಆತ್ಮಗೌರವವನ್ನು ಅವನು ಮರೆಯಲಿಲ್ಲ, ನಮ್ಮ ದಳದವರ ಗೌರವವನ್ನು ಬಿಟ್ಟುಕೊಡಲಿಲ್ಲ. ತಾನು ನಿಜವಾಗಿಯೂ ಕರಡಿಯೋ ಎಂಬಂತೆ ಕಾದಾಡಿದ. ಒಮ್ಮೆ ನಾಯಿಗಳನ್ನು ಅಪ್ಪಳಿಸುವನು, ಒಮ್ಮೆ ಪರಚುವನು, ಒಮ್ಮೆ ಕಚ್ಚುವನು. ಹಾಗೂ ಹೀಗೂ ಮಾಡಿಕೊಂಡು, ಮಹಾಪ್ರಯಾಸದಿಂದ ಅಂಗಳವನ್ನು ಹಾದು, ಹೆಬ್ಬಾಗಿಲಿನಿಂದ ನುಗ್ಗಿ, ಬೀದಿಯವರೆಗೂ ಬಂದ. ಆದರೆ ಅಲ್ಲಿ ಅವನಿಗೆ ಅಡ್ಡಿ ಕಾದಿತ್ತು. ಬೀದಿಯ ನಾಯಿಗಳೆಲ್ಲಾ ಹಿಂಡುಹಿಂಡಾಗಿ ಅವನಿಗೆ ಬಂದು ಮುತ್ತಿದುವು.

“ಅಯ್ಯೋ, ಆ ನಾಯಿಗಳೆಲ್ಲಾ ಹೇಗೆ ಬಂದು ಮುತ್ತಿದುವು! ನಮ್ಮ ಮಿತ್ರನ ಒಂದೊಂದು ದೇಹಭಾಗವನ್ನೂ ಹೇಗೆ ಕಿತ್ತುವು! ಅದನ್ನು ಜ್ಞಾಪಿಸಿಕೊಂಡರೆ, ನನಗೆ ಕಣ್ಣು ಕತ್ತಲೆ ಬರುತ್ತದೆ. ಏನಾದರೂ ಮಾಡಿ ಅವನನ್ನು ಕಾಪಾಡಿ ಉಳಿಸಬೇಕು, ಎನ್ನಿಸಿತು. ಜನರ ಗುಂಪಿನ ನಡುವೆ ನುಗ್ಗಿ ಕೂಗಿಕೊಂಡೆ: ‘ಏನು ಅನ್ಯಾಯ ಇದು? ಎಷ್ಟು ಅಮೂಲ್ಯವಾದ ಗಡವ ಕರಡಿ! ಒಂದರ ಮೇಲೆ ಎಷ್ಟು ನಾಯಿ! ಎಷ್ಟು ಜನ!” ಎಂದು. ಆದರೆ, ನನ್ನ ಕೂಗನ್ನು ಕಿವಿಗೆ ಹಾಕಿಕೊಳ್ಳುವವರು ಯಾರು?

“ಆಗ, ಇದ್ದಕ್ಕಿದ್ದಹಾಗೆ, ಯಾವನೋ ದಡಿಯ ಆ ಗುಂಪಿನಿಂದ ಹಾರಿಬಂದು, ತನ್ನ ಭರ್ಜಿಯನ್ನು ಥ್ರಸ್ಯೆಲಿಯಾನನಿಗೆ ಚುಚ್ಚಿಯೇ

ಬಿಟ್ಟ. ಅದು ಅವನ ಮೈಯನ್ನು ಈಚೆಕಡೆಯಿಂದ ಹಾದು ಆಚೆ ಬಂದುಬಿಟ್ಟಿತು. ಅದನ್ನು ಕಂಡು, ಮಿಕ್ಕವರಿಗೆ ಅದುವರೆಗೆ ಇಲ್ಲದ ಧೈರ್ಯ ಬಂತು. ಒಬ್ಬೊಬ್ಬರೂ ತಮ್ಮ ತಮ್ಮ ಕೈಲಿದ್ದ ಆಯುಧಗಳನ್ನು ಅವನ ಮೇಲೆ ಬೀಸಿದರು.

"ಏನೇ ಆಯುಧದ ಏಟು ತಗಲಲಿ, ಏನೇ ನಾಯಿಯ ಹಲ್ಲು ಕಚ್ಚಲಿ, ಥ್ರಸ್ಸೈಲಿಯಾನ್ ತಾನು ಕರಡಿಯಂತೆ ಗುರುಗುಟ್ಟಿದನೇ ಹೊರತು, ಮುಲುಗುಟ್ಟಿದನೇ ಅಲ್ಲದೆ, ತನ್ನ ಗುಟ್ಟನ್ನು ಕೊಂಚವಾದರೂ ಬಿಟ್ಟು ಕೊಡಲಿಲ್ಲ. ಕಟ್ಟಕಡೆಗೆ, ಹೋರಾಡಿ ಹೋರಾಡಿ, ಸೋತು ಸೋತು, ಥ್ರಸ್ಸೈಲಿಯಾನ್ ಸತ್ತುಬಿದ್ದ. ಆದರೂ ಅವನ ಹೆಣದ ಹತ್ತಿರ ಹೋಗಿ, ಕೈಯಿಂದ ಮುಟ್ಟುವ ಧೈರ್ಯ ಯಾರಿಗೂ ಬರಲಿಲ್ಲ. ಅಷ್ಟು ಭೀಕರವಾಗಿ ಕಾಳಗ ಮಾಡಿದ್ದ, ಕರಡಿಯ ವೇಷದಲ್ಲಿದ್ದ ನಮ್ಮ ಥ್ರಸ್ಸೈಲಿಯಾನ್!

"ಮಾರನೆಯ ಬೆಳಗ್ಗೆ ಒಬ್ಬ ಕಟಿಕ, ಇತರರಿಗಿಂತ ಕೊಂಚ ಧೈರ್ಯಸ್ಥ, ಮಚ್ಚು ಹಿಡಿದು ಬಂದ. ಬಂದವನು ಅದರ ಹೊಟ್ಟೆಯನ್ನು ಸೀಳಿ ಬಗೆದರೆ, ಒಳಗಿದ್ದ ಮನುಷ್ಯನ ಆಕಾರ ಕಂಡುಬಂತು. ಎಲ್ಲರೂ ದಿಗ್ಭ್ರಮೆಯಾಗಿಹೋದರು.

"ಸರಿ; ನಾನು ದುಃಖವನ್ನು ನುಂಗಿಕೊಂಡು, ನಮ್ಮವರು ಅವಿತು ಕೊಂಡಿದ್ದ ಶ್ಮಶಾನದ ಕಡೆಗೆ ಹೋದೆ. ಅಲ್ಲಿ ನಡೆದದ್ದನ್ನೆಲ್ಲಾ ಅವರಿಗೆ ಹೇಳಿದೆ. ಇನ್ನು ಅಲ್ಲಿ ನಿಂತು ಮಾಡುವುದೇನು? ದೋಚಿತಂದದ್ದನ್ನೆಲ್ಲಾ ಗಂಟು ಕಟ್ಟಿಕೊಂಡು, ಆ ಪ್ರಾಂತದಿಂದ ಹೊರಟೆವು. ಭಾರವನ್ನು ಹೊತ್ತು, ಹಳ್ಳಿಕೊಳ್ಳವೆನ್ನದೆ, ಮೂವರು ಮಹಾ ಸಮರ್ಥರನ್ನು ಕಳೆದುಕೊಂಡು, ದುಃಖಪಡುತ್ತಾ ದಾರಿ ತುಳಿದೆವು. ದಾರಿಯುದ್ದಕ್ಕೂ ನಮಗೆನ್ನಿಸುತ್ತಿತ್ತು: 'ಜೀವವಿರುವ ಮನುಷ್ಯರಿಗಿಂತ ಜೀವವಿಲ್ಲದ ಹೆಣಗಳೇ ವಾಸಿ. ನಾವು ತಮ್ಮ ಕೈಗೆ ಒಪ್ಪಿಸಿ ಕೊಟ್ಟದ್ದನ್ನು ತಪ್ಪಿಸದೆ ನಮಗೇ ತಲುಪಿಸಿದುವು' ಎಂದು."

ಹೀಗೆ, ಅವನು ತನ್ನ ದಳದವರ ಕತೆಯನ್ನು ಮುಗಿಸಿದನು. ಆಗ ಎಲ್ಲರೂ ತಮ್ಮ ಪಾತ್ರೆಗಳಲ್ಲಿ ಶುದ್ಧವಾದ ಮದ್ಯವನ್ನು ತುಂಬಿಕೊಂಡು,

ಅದನ್ನು ತಮ್ಮ ಸತ್ತ ಮಿತ್ರರಿಗಾಗಿ ತರ್ಪಣವೆಂದು ಅರ್ಪಿಸಿ, ಭೂಮಿಗೆ ಸುರಿದರು. ಅನಂತರ, ತಮ್ಮ ಇಷ್ಟದೇವತೆಯಾದ ಮಾರ್ಸ್ ಎಂಬ ಯುದ್ಧದೇವತೆಯ ಸ್ತೋತ್ರಗಳನ್ನು ಹಾಡಿ ಹೊಗಳಿ, ಅಲ್ಲಲ್ಲಿ ಇದ್ದಿದ್ದ ಕಡೆಯೇ ಹಾಗೆಹಾಗೇ ಮಲಗಿ ನಿದ್ದೆಹೋದರು.

೩

ಅರ್ಧರಾತ್ರಿಯ ಸುಮಾರಿಗೆ ಆ ಕಳ್ಳರೆಲ್ಲ ಅವಸರವಸರವಾಗಿ ಎದ್ದು, ವೇಷ ಬದಲಾಯಿಸಿಕೊಂಡರು. ಕೆಲವರು ಭೂತಗಳಂತೆ ಬಟ್ಟೆ ಹಾಕಿಕೊಂಡರು, ಕೆಲವರು ಎಂದಿನ ಉಡಿಗೆ ಉಟ್ಟರು. ಎಲ್ಲರೂ ಕತ್ತಿಗಳನ್ನು ಎತ್ತಿಕೊಂಡರು.

ಹೋದವರು, ಬೆಳಕು ಹರಿಯುವ ಮೊದಲೇ ಹಿಂದಿರುಗಿ ಬಂದರು. ಎಲ್ಲರ ಮುಖಗಳೂ ಗಂಭೀರವಾಗಿದ್ದುವು. ಹೋದವರಲ್ಲಿ ಯಾರೂ ನಷ್ಟವಾಗದೆ, ಎಲ್ಲರೂ ಕ್ಷೇಮವಾಗಿ ಹಿಂದಕ್ಕೆ ಬಂದಿದ್ದರೂ, ಹೋದಹಾಗೆಯೇ ಬರಿಗೈಯಲ್ಲಿ ಬಂದಿದ್ದರು. ಲೂಟಿ ಏನೂ ತಂದಿರಲಿಲ್ಲ; ಅದಕ್ಕೆ ಬದಲು ಒಂದು ಹುಡುಗಿಯನ್ನು ಅಪಹರಿಸಿಕೊಂಡು ಬಂದಿದ್ದರು.

ಆ ಹುಡುಗಿಯ ಬಟ್ಟೆಬರೆಗಳನ್ನು ನೋಡಿದರೇನೋ ಆಕೆ ದೊಡ್ಡ ಮನೆತನಕ್ಕೆ ಸೇರಿದವಳೆಂದು ಊಹಿಸಬಹುದಾಗಿತ್ತು. ಅವಳ ಮುಖ ವ್ಯಸನದಿಂದ ಮುಚ್ಚಿಹೋಗಿದ್ದರೂ, ಅವಳು ಸುಂದರಿಯೆಂಬುದು ಸ್ಪಷ್ಟವಾಗಿತ್ತು.

ಗುಹೆಯೊಳಕ್ಕೆ ಕಾಲಿಟ್ಟಕೂಡಲೇ ಆಕೆ ತನ್ನ ವಸ್ತ್ರಗಳನ್ನು ಹಿಡಿದು ಸೀಳಿ, ಕೂದಲನ್ನು ಹಿಡಿಹಿಡಿಯಾಗಿ ಕಿತ್ತು, ಒಂದೇ ಉಸಿರಿಗೆ ಗೋಳಿಡ ತೊಡಗಿದಳು. ಆ ಕಳ್ಳರೂ ಅವಳಿಗೆ ಏನೇನೋ ಸಮಾಧಾನ ಹೇಳಿದರು: "ನಿನಗೇನೂ ಚಿಂತೆ ಬೇಡ. ಇಲ್ಲಿ ನಿನ್ನ ಜೀವಕ್ಕೆ ಹಾನಿ ಇಲ್ಲ, ನಿನ್ನ ಮಾನಕ್ಕೆ ಹಾನಿಯಿಲ್ಲ. ಒಂದೆರಡು ದಿನ ದಯಮಾಡಿ ಸಹಿಸಿಕೊ. ನಿನ್ನ ತಾಯಿ ತಂದೆ ಅಷ್ಟು ಜಿಪುಣರಾಗದೆ, ನಾವು ಕೇಳಿದ ದ್ರವ್ಯವನ್ನು ಕಳಿಸಿದ ಒಡನೆ, ನೀನು ಮನೆಗೆ ಮತ್ತೆ ಹೋಗಬಹುದು. ನೀನು ಅವರಿಗೆ ಒಬ್ಬಳೇ

ಮಗಳು, ಅವರಿಗೋ ಅಪರಿಮಿತವಾದ ಐಶ್ವರ್ಯ ಕೊಳ್ಳೆಹೋಗುತ್ತಿದೆ." ಎಂದರು.

ಅವರು ಸಮಾಧಾನಪಡಿಸಲು ಯತ್ನಿಸಿದಷ್ಟೂ ಆ ಹುಡುಗಿಯ ಅಳು ಏರುತ್ತಿತ್ತು. ಕಡೆಗೆ ಅವರಿಗೂ ಸಾಕಾಗಿ, "ಏ ಮುದುಕಿ! ಇಲ್ಲಿ ಈ ಹುಡುಗಿಯ ಜೊತೆಗಿದ್ದು, ಇವಳಿಗೆ ಧೈರ್ಯ ಹೇಳು. ನಾವು ಸ್ವಲ್ಪ ಆಚೆ ಹೋಗಿಬರುತ್ತೇವೆ." ಎಂದು ಅವಳನ್ನು ಮುದುಕಿಯ ವಶಕ್ಕೆ ಒಪ್ಪಿಸಿ ಹೊರಟುಹೋದರು.

ಮುದುಕಿ ಅವಳು ತಾನೇ ಏನುಮಾಡಿಯಾಳು? ಹುಡುಗಿಯ ಗೋಳು ಗಳಿಗೆಗಳಿಗೆಗೂ ಏರುತ್ತಿತ್ತು. "ಅಯ್ಯೋ! ಎಲ್ಲವನ್ನೂ ಕಳೆದುಕೊಂಡೆ ನಲ್ಲ! ಅಂಥ ಚೆಲುವಾದ ಮನೆ, ಅಂಥ ಪ್ರೀತಿಯ ತಾಯಿತಂದೆ, ವಿಶ್ವಾಸದ ಬಂಧು ಬಳಗ, ಎಲ್ಲಾ ಕಳೆದುಕೊಂಡೆನಲ್ಲ! ಇಲ್ಲಿ ಈ ಹಾಳು ಗುಹೆಯಲ್ಲಿ ಸೆರೆಯೊಳಿನ ಹಾಗೆ ಸಿಕ್ಕಿಬಿದ್ದೆನಲ್ಲ! ಯಾವ ಗಳಿಗೆಗೆ ಏನು ಮಾಡುತ್ತಾರೋ ಕಾಣೆನೇ! ಅಯ್ಯಯ್ಯೋ!" ಎಂದು ಬಿಕ್ಕಿ ಬಿಕ್ಕಿ ಗೋಳಾಡಿದಳು.

ಆದರೂ ಎಷ್ಟು ಗೋಳಾಡಿಯಾಳು? ಅತ್ತು ಅತ್ತು, ಹಾಗೇ ಗಂಟಲು ಕಟ್ಟಿ, ಸೊರಗಿ, ಹಾಗೇ ಸ್ವಲ್ಪ ಕಣ್ಣು ಮುಚ್ಚಿದಳು. ಆದರೆ, ಅದೂ ಎಷ್ಟು ಹೊತ್ತು? ಮತ್ತೆ ಎಚ್ಚರವಾಯಿತು. ಏನನ್ನು ಜ್ಞಾಪಿಸಿಕೊಂಡಳೋ ಏನೋ, ಮೊದಲಿಗಿಂತ ಇನ್ನೂ ಜೋರಾಗಿ ಅಳತೊಡಗಿದಳು. ಹಣೆ ಹಣೆ ಚಚ್ಚಿಕೊಂಡಳು, ಎದೆಎದೆ ಬಡಿದುಕೊಂಡಳು.

ಅವಳ ಈ ಮರುಕಗೊಳಿಸಿದ ದುಃಖವನ್ನು ನೋಡಿ, ಮುದುಕಿ ಹತ್ತಿರ ಬಂದು, "ಏಕೇ? ಏನಾಯಿತೇ ಈಗ ನಿನಗೆ?" ಎಂದು ಕೇಳಿದಳು.

ಹುಡುಗಿ ಬಿಕ್ಕಳಿಸುತ್ತ ಎಂದಳು; "ಆಯಿತಮ್ಮ, ಆಯಿತು. ನನ್ನ ಕಥೆ ಮುಗಿಯಿತು. ನನಗೆ ಬೇರೆ ಇಲ್ಲಿಂದ ಪಾರಾಗುವೆನೆಂಬ ಆಸೆಯಿಲ್ಲ. ಸರಿ, ಕಂಡೇ ಇದೆ. ಒಂದು ಮಾರು ಹಗ್ಗವೋ, ಒಂದು ಚೋಟು ಕತ್ತಿಯೋ, ಅಥವಾ ಕಮರಿಯಲ್ಲಿ ಹಾರಿಕೊಂಡೋ – ತೀರಿಕೊಂಡರಾಯಿತು."

ಮುದುಕಿಗೆ ತುಂಬ ಕೋಪ ಬಂತು. ಕಣ್ಣು ಕೆಂಪಗೆ ಮಾಡಿಕೊಂಡು ಹೇಳಿದಳು: "ಏನೆಂದೆ, ಮೂಳಿ? ಹಗ್ಗವೆ? ಕತ್ತಿಯೆ? ಕಮರಿಯಲ್ಲಿ

ಹಾರುವೆಯ ? ಹಾರಿಸುತ್ತೇನೆ, ತಾಳು. ಇಷ್ಟು ಕಷ್ಟಪಟ್ಟು, ನಿನ್ನನ್ನು ಅಪಹಾರ ಮಾಡಿಕೊಂಡು ಬಂದರೆ, ಅವರಿಗೆ ಬರಬೇಕಾದ ಬಿಡುಗಡೆಯ ದ್ರವ್ಯಕ್ಕೆ ಸೊನ್ನೆ ಹಾಕಬೇಕೆಂದಿದ್ದೀಯಾ ನೀನು ? ತೆಪ್ಪಗೆ ಮುಚ್ಚಿಕೊಂಡು ಒಂದು ಕಡೆ ಮುದರಿ ಕುಳಿತೆಯೋ ಸರಿ ; ಇಲ್ಲವೋ ನಿನ್ನನ್ನು ಬಾಣಲಿಯಲ್ಲಿ ಹಾಕಿ ಹುರಿದು, ಊಟಕ್ಕೆ ಬಡಿಸಿಕೊಂಡುಬಿಡುತ್ತೇನೆ. ಜೋಕೆ! ” ಎಂದಳು.

ಹುಡುಗಿ ನಿಜವಾಗಿಯೂ ಹೆದರಿದಳು. ಮುದುಕಿಯ ಕೈ ಹಿಡಿದಳು. “ಅಜ್ಜೀ, ಅಜ್ಜೀ! ಅದು ಮಾತ್ರ ಮಾಡಬೇಡ, ಅಜ್ಜೀ. ನೀನು ಎಷ್ಟಾದರೂ ಹೆಣ್ಣುಜೀವ. ಅವರ ಹಾಗಲ್ಲ. ಆದ್ದರಿಂದ ನನ್ನ ದುಃಖಕ್ಕೆ ಕಾರಣವೇನೆಂದು ತಿಳಿದರೆ, ನಿನಗೂ ಕಣ್ಣೀರು ಬರುತ್ತದೆ. ಅಯ್ಯೋ! ಹೇಗೆ ಇದ್ದ ನನ್ನ ಗತಿ ಹೇಗಾಗಿಹೋಯಿತ್ತು! ” ಎಂದಳು.

“ ಅದೇನು ನಿನಗೆ ಅಂಥ ಗತಿ ಬಂದದ್ದು? ಹೇಳೇ, ಕೇಳೋಣ.”

ಹುಡುಗಿ ತನ್ನ ಕಥೆಯನ್ನು ಹೇಳಿಕೊಂಡಳು :

“ ನನ್ನ ಸೋದರತ್ತೆಯ ಮಗ ಒಬ್ಬ ಇದ್ದಾನೆ. ನನಗಿಂತ ಅವನು ಮೂರು ವರ್ಷ ದೊಡ್ಡವನು. ಅವನ ಹೆಸರು ತೆಲಿಪೊಲೀಮಸ್. ನಾವು ಚಿಕ್ಕಂದಿನಿಂದ ಒಂದಿಗೇ ಆಡಿ ಬೆಳೆದವರು. ಚಿಕ್ಕಂದಿನಲ್ಲಿ ಒಂದೇ ಹಾಸಿಗೆಯಲ್ಲಿ ಮಲಗುತ್ತಿದ್ದವರು. ನಾವು ಬೆಳೆದ ಮೇಲೆ ನಮಗೆ ಮದುವೆಯಾಗುವುದೆಂದು ನಿಶ್ಚಿತವಾಗಿತ್ತು. ನೆನ್ನೆ ತಾನೆ ಮದುವೆಯ ದಿನ. ಮದುವೆಯ ನಾಂದೀಕಾರ್ಯಗಳೆಲ್ಲ ಮುಗಿದ ಮೇಲೆ, ವರನು ದೇವಸ್ಥಾನಕ್ಕೆ ಹೋಗಬೇಕಷ್ಟೆ. ನಾನು ಮನೆಯಲ್ಲಿ ಮದುಮಗಳ ಮಂಗಳಾಲಂಕಾರಗಳನ್ನು ಸರಿಪಡಿಸಿಕೊಳ್ಳುತ್ತ ಮುಹೂರ್ತಕ್ಕೆ ಎದುರು ನೋಡುತ್ತಿದ್ದೆ. ನನ್ನ ತಾಯಿಯೂ ನನ್ನ ಸಖಿಯರೂ ನನ್ನನ್ನು ಚೇಷ್ಟೆ ಮಾಡುತ್ತಿದ್ದರು: ‘ಎಷ್ಟು ಮಕ್ಕಳು ? ಗಂಡೋ? ಹೆಣ್ಣೋ ? ’ ಎಂದು. ಅಷ್ಟರಲ್ಲಿ ಈ ದರೋಡೆಗಳ್ಳರು ಕೈಯಲ್ಲಿ ಕತ್ತಿಗಳನ್ನು ಹಿರಿದು, ಮನೆಯೊಳಗೆ ನುಗ್ಗಿದರು. ಯಾರನ್ನೂ ಕೊಲ್ಲಲಿಲ್ಲ. ಏನನ್ನೂ ದೋಚಲಿಲ್ಲ. ನೇರವಾಗಿ ನುಗ್ಗಿದರು, ನಾನು ಕುಳಿತಿದ್ದ ಕಡೆಗೆ. ದಾಸದಾಸಿಯರೆಲ್ಲ ಹೆದರಿ ಕರಗಿ ಕಸವಾಗಿ ಹೋಗಿದ್ದರು. ಭಯದಿಂದ

ರ್ಘಜೀವ ಹೋಗಿ, ತಾಯಿಯ ತೊಡೆಯಮೇಲೆ ಬಿದ್ದಿದ್ದ ನನ್ನನ್ನು ಇವರು ತ್ತಿಕೊಂಡು ಬಂದರು. ನನ್ನ ಮದುವೆ ಹೀಗೆ ಮುಕ್ತಾಯವಾಯಿತು. ಲ್ಲಿ ಈಗತಾನೆ ಸ್ವಲ್ಪ ಕಣ್ಣುಮುಚ್ಚಿದಾಗ, ನನಗೆ ಆ ಮದುವೆಯ ಮನೆಯ ನಸು ಬಿತ್ತು; ಹಿಂದಿನದೆಲ್ಲ ಜ್ಞಾಪಕವಾಯಿತು. ನನ್ನನ್ನು ನನ್ನ ್ರಿಯನಿಂದ ದೂರಮಾಡಿ ಹೇಗೆ ಅಪಹರಿಸಿಕೊಂಡು ಬಂದರೆಂಬುದೂ ಅಲ್ಲಿ ನನ್ನನ್ನು ಕಾಣದೆ ನನ್ನ ಪ್ರಿಯನು ಏನು ಪರಿತಾಪ ಪಡುವನೆಂಬುದೂ ನೆನಪಾಗಿ, ನನಗೆ ದುಃಖ ಒತ್ತಿಬಂತು. ಅಜ್ಜಿ, ನನ್ನ ಕನಸಿನಲ್ಲಿ, ನನ್ನ ತೀಪೊಲೀಮಸ್ ದೇವಾಲಯದಿಂದ ಹಿಂದಿರುಗಿ ಬಂದು, ನನ್ನನ್ನು ಅಪಹರಿಸಿದ ವಾರ್ತೆ ಕೇಳಿ, ಇವರ ಬೆನ್ನಟ್ಟಿ ಬಂದಹಾಗಾಯಿತು. ನನ್ನನ್ನು ಇವರ ಕೈಯಿಂದ ಬಿಡಿಸಿಕೊಂಡಹಾಗಾಯಿತು. ಆಗ ಈ ಕಳ್ಳರಲ್ಲಿ ಒಬ್ಬನಿಗೆ ಸೈರಣೆ ತಪ್ಪಿ, ದಪ್ಪ ಕಲ್ಲೊಂದರಿಂದ ಆ ಹುಡುಗನ ತಲೆಯನ್ನು ಚಚ್ಚಿಬಿಟ್ಟಹಾಗಾಯಿತು. ಎಂಥ ಕೆಟ್ಟ ಕನಸು ಕಂಡೆನೇ, ಅಜ್ಜಿ!"

ಮುದುಕಿ ಸಹಾನುಭೂತಿಯಿಂದ ನಿಟ್ಟುಸಿರುಗರೆದು ಹೇಳಿದಳು: "ನಿನ್ನ ಕತೆ ಕೇಳಿದರೆ, ಅಯ್ಯೋ ಪಾಪ ಎನಿಸುತ್ತೆ. ಕಂದ. ಆದರೂ ಸುಮ್ಮನೆ ಗೋಳಾಡಬೇಡ. ಹರ್ಷಚಿತ್ತದಿಂದ ಇರು. ಹಗಲುಹೊತ್ತಿನಲ್ಲಿ ಕನಸು ಬಿದ್ದರೆ, ಅದರಲ್ಲಿ ಏನೂ ಅರ್ಥವಿಲ್ಲ. ರಾತ್ರಿ ಕನಸು ಬಿದ್ದರೂ ಕೂಡ, ಒಂದೊಂದು ಸಲ ಅದಕ್ಕೂ ಏನೂ ಅರ್ಥವಿರುವುದಿಲ್ಲ. ಸುಮ್ಮನೆ ಹೆದರಿ ಹೆದರಿ, ನಿನಗೆ ನೀನೇ ಗಾಸಿಮಾಡಿಕೊಳ್ಳಬೇಡ. ನೋಡು, ನಿನ್ನ ದುಃಖವನ್ನು ಮರೆಯಿಸುವುದಕ್ಕೂ ಹಾಗೇ ಹೊತ್ತನ್ನು ನಿಶ್ಚಿಂತೆಯಾಗಿ ಕಳೆಯುವುದಕ್ಕೂ ಅನುಕೂಲವಾಗುವಂತೆ, ಒಂದು ಕತೆ ಹೇಳುತ್ತೇನೆ, ಕೇಳು."

ಎಂದು ಆ ಮುದುಕಿ, ಕ್ಯುಪಿಡ್ ದೇವತೆ ಸೈಕೆಯನ್ನು ಪ್ರೇಮಿಸಿದ ಪ್ರಸಂಗವನ್ನೂ, ಆ ಸಂದರ್ಭದಲ್ಲಿ ಸೈಕೆ ಪಟ್ಟ ಪಾಡುಗಳನ್ನೂ ವಿವರ ವಿವರವಾಗಿ ಹೇಳಿದಳು.

೪

ದರೋಡೆಗಳ್ಳರು ಹಿಂದಿರುಗಿದರು, ಮುದುಕಿ ಕಥೆ ಹೇಳಿ ಮುಗಿಸುವ ವೇಳೆಗೆ. ದೊಡ್ಡ ಹೋರಾಟವೇ ನಡೆದಿರಬೇಕೆಂದು ತೋರುತ್ತದೆ; ಏಕೆಂದರೆ, ಬಂದವರಲ್ಲಿ ಹಲವರಿಗೆ ಗಾಯವಾಗಿತ್ತು. ಗಾಯವಾದವರು ಅದಕ್ಕೆ ಮದ್ದು ಮಾಡಿಕೊಳ್ಳಬೇಕೆಂದೂ, ಮಿಕ್ಕವರು ಮತ್ತೆ ಹೋಗಿ ಅಲ್ಲಲ್ಲೆ ಬಚ್ಚಿರಿಸಿದ್ದುದನ್ನು ಎತ್ತಿಕೊಂಡು ಬರಬೇಕೆಂದೂ ಮಾತಾಡಿಕೊಂಡರು. ಬೇಗಬೇಗನೆ ಊಟವನ್ನು ಹೊಟ್ಟೆಗೆ ಹಾಕಿಕೊಂಡು, ಗಾಯವಾಗದಿದ್ದವರು ಮತ್ತೆ ಹೊರಟರು. ಮೈಲೋವಿನ ಮನೆಯಿಂದ ಅಪಹರಿಸಿ ತಂದಿದ್ದ ಒಂದು ಕುದುರೆಯಿತ್ತು, ಒಂದು ಕತ್ತೆಯಿತ್ತು; ಅವು ಎರಡನ್ನೂ ಹೊಡೆದು ಕೊಂಡು ಹೋದರು. ಬೇಗಬೇಗ ಮುಂದೆ ಹೋಗಲೆಂದು ಅವುಗಳನ್ನು ಚೆಚ್ಚಿದರು.

(ಕುದುರೆಗೇನೋ ಹಾಗೆ ಏಟು ತಿಂದು ಅಭ್ಯಾಸವಾಗಿತ್ತು. ಕತ್ತೆಗೆ ಮಾತ್ರ ಇಂಥ ಅನುಭವ ಹೊಸದು. ಆ ಕತ್ತೆ, ಅದು ಕತ್ತೆಯಾಗಿ ಹುಟ್ಟಿದ್ದಲ್ಲ. ಲೂಸಿಯಸ್ ಎಂಬವನೊಬ್ಬ, ತಾನು ಮುಟ್ಟಬಾರದ ಮಂತ್ರ ಮಾಟಗಳಿಗೆ ಕೈಹಾಕಿ, ತನ್ನ ಸ್ವಯಂಕೃತಾಪರಾಧದಿಂದ ಕತ್ತೆಯ ರೂಪವನ್ನು ಪಡೆದುಕೊಂಡಿದ್ದ. ಈ ಕಳ್ಳರ ಕತೆ ಮುಗಿದ ಮೇಲೆ ಜ್ಞಾಪಿಸು. ಈ ಲೂಸಿಯಸ್ ಕತ್ತೆಯಾದ ವಿಚಿತ್ರ ಕಥೆಯನ್ನು ಹೇಳುತ್ತೇನೆ.)

ಕತ್ತೆ ಬಿದ್ದು ಮೈಯೆಲ್ಲಾ ತರೆದುಹೋಯಿತು. ಕಾಲು ಕೊಂಚ ತಿರಿಚಿಕೊಂಡಿತು. ಹೇಗೋ, ಪಾಪ, ಮೇಲೆದ್ದು, ಕುಂಟಿಕೊಂಡು ನಡೆಯಿತು.

ಒಬ್ಬ ಹೇಳಿದ: "ಈ ಕುಂಟುಮುಂಡೇದಕ್ಕೆ ಹುಲ್ಲು ಹಾಕುವುದು ದಂಡ."

ಇನ್ನೊಬ್ಬ ಎಂದ: "ಅಯ್ಯೋ, ಅದು ಯಾವ ದರಿದ್ರ ಗಳಿಗೆಯಲ್ಲಿ ಇದನ್ನು ಹಿಡಿದುಕೊಂಡು ಬಂದೆವೋ, ಒಬ್ಬೊಬ್ಬರಾಗಿ ನಮ್ಮ ಜೊತೆ ಗಾರರನ್ನು ಬಲಿಯೊಪ್ಪಿಸಿದೆವು. ಈ ಕತ್ತೆ ಬಂದ ಮೇಲೆ ಅಂತೂ ನಮ್ಮ ಲೂಟಿ ಅರ್ಧಕ್ಕರ್ಧ ಕಡಿಮೆಯಾಯಿತು."

ಮತ್ತೊಬ್ಬ ಹೇಳಿದ: "ನೋಡು, ಈಗ ಈ ದೋಚಿದ್ದನ್ನು ಗುಹೆಗೆ ತೆಗೆದುಕೊಂಡು ಹೋದಮೇಲೆ, ಇದನ್ನು ಆಚೆಕಡೆಯ ಕಮರಿಗೆ ತಳ್ಳಿ ಬಿಡೋಣ. ಕೆಲಸ ಮಾಡುವುದಕ್ಕೆ ಮೈಗಳ್ಳತನ ಮಾಡುವ ಈ ಕತ್ತೆ ಇದ್ದರೂ ಒಂದೆ, ಸತ್ತರೂ ಒಂದೆ."

"ಛೆ, ಛೆ! ಅಂಥ ಸುಲಭದ ಸಾವು ಎಂದರೆ ಸ್ವರ್ಗ ಸಿಕ್ಕಿದ ಹಾಗೆ. ಇದನ್ನು ಹೇಗೆ ಸಾಯಿಸಬೇಕು ಎಂಬುದನ್ನು ನಾನು ಹೇಳುತ್ತೇನೆ, ಕೇಳಿ." ಎಂದು ಬೇರೊಬ್ಬ ಆರಂಭಿಸಿದ.

ಹೀಗೆ ಅವರು ಒಬ್ಬೊಬ್ಬರೂ ಕತ್ತೆಯ ಮರಣವನ್ನು ಸಾಧಿಸುವುದು ಹೇಗೆ ಎಂದು ಮಂತ್ರಾಲೋಚನೆ ಮಾಡುತ್ತಿರಬೇಕಾದರೆ; ಅವರ ಮಾತು ಕೇಳಿ, ಕತ್ತೆಯ ಕಾಲಿಗೆ ರೆಕ್ಕೆ ಬಂದಹಾಗಾಯಿತು. ಎಂದೂ ಇಲ್ಲದ ಲವಲವಿಕೆ ತಲೆದೋರಿತು. ಕಳ್ಳರು ಆ ಪ್ರಾಣಿಗಳಿಗೆ ನೀರು ಕೊಡುವುದಕ್ಕೂ ಪುರಸೊತ್ತಿಲ್ಲದೆ, ಕದ್ದು ತಂದದ್ದನ್ನೆಲ್ಲ ಇಳಿಸಿಹಾಕಿದರು. ಕುದುರೆಯನ್ನು ಮತ್ತೆ ಹೊಡೆದುಕೊಂಡು ಹೋದರು, ಕತ್ತೆಯನ್ನು ಹಾಗೇ ಬಿಟ್ಟುಹೋದರು.

ಮರಣದ ಭೀತಿ ಕತ್ತೆಯನ್ನು ಚಿಂತೆಗೆ ಈಡುಮಾಡಿತ್ತು. "ಹೇಗೂ ನನ್ನನ್ನು ಕೊಂದುಬಿಡಲು ಇವರು ನಿರ್ಧರಮಾಡಿದ್ದಾರೆ. ಅದೇನು ಬಡಿದು ಕೊಲ್ಲುವರೋ, ಕತ್ತರಿಸಿ ಕೊಲ್ಲುವರೋ, ಕಮರಿಗೆ ತಳ್ಳಿ ಕೊಲ್ಲುವರೋ— ಅದಕ್ಕೆ ಕಾದು ಕುಳಿತು ಏನು ಪ್ರಯೋಜನ? ಜೀವವಿರುವವರೆಗೂ—ಕತ್ತೆಯಾದರೇನು, ಮನುಷ್ಯನಾದರೇನು?—ಬದುಕುವ ಆಸೆ ಇದ್ದೇ ಇರುತ್ತದೆ. ಆದ್ದರಿಂದ, ಅವಕಾಶವಿರುವಾಗ, ಕಳ್ಳರು ನನ್ನನ್ನು ನನ್ನ ಪಾಡಿಗೆ ಬಿಟ್ಟು ಹೋಗಿರುವಾಗ, ಏಕೆ ತಪ್ಪಿಸಿಕೊಳ್ಳಲು ಪ್ರಯತ್ನಿಸಬಾರದು? ಇರುವವಳು ಈಯೊಬ್ಬಳು ಮುದುಕಿ. ಒಂದು ಒದೆ ಕೊಟ್ಟು, ಇವಳನ್ನು ತಳ್ಳಿ ಹೋಗಬಾರದೇಕೆ?" ಎಂದುಕೊಂಡಿತು.

ಆದರೆ ಆ ಮುದುಕಿಯ ಕಣ್ಣು ಬಹು ಚುರುಕಾಗಿತ್ತು. ಕತ್ತೆ ತನ್ನನ್ನು ಕಟ್ಟಿದ್ದ ಹಗ್ಗವನ್ನು ಕಿತ್ತುಕೊಂಡದ್ದನ್ನು ಕಂಡ ಕೂಡಲೆ, ವಯಸ್ಸಾದರೂ ಅದೇನು ಧೈರ್ಯವೋ ಅವಳಿಗೆ, ಬಂದು ಹಿಡಿದು,

ಅದನ್ನು ಮತ್ತೆ ಒಳಕ್ಕೆ ಎಳೆದುಕೊಂಡುಹೋದಳು. ಕತ್ತೆ ಮೊದಲು ಮುದುಕಿಯನ್ನು ಒದೆಯದೆಯೇ ಆದರೆ ತಪ್ಪಿಸಿಕೊಂಡುಹೋಗೋಣ ವೆಂದಿತ್ತು. ಆದರೆ, ಈಗ, ತಪ್ಪಿಸಿಕೊಳ್ಳಲು ಯತ್ನಿಸಿ ಸಿಕ್ಕಿಬಿದ್ದಿರುವಾಗ ಕಳ್ಳರು ಬಂದರೆ ಖಂಡಿತ ತನ್ನನ್ನು ಜೀವಸಹಿತ ಬಿಡುವುದಿಲ್ಲ ಎಂದು ಕೊಂಡು, ದಯಾದಾಕ್ಷಿಣ್ಯಗಳನ್ನು ಮರೆತು, ತೆಗೆದು ಒಂದು ಒದೆ ಒದೆಯಿತು. ಮುದುಕಿ ಮೂರು ಉರುಳಾಗಿ ಬಿದ್ದರೂ, ಕೈಯಲ್ಲಿನ ಹಗ್ಗ ಮಾತ್ರ ಬಿಡಲಿಲ್ಲ. ಕತ್ತೆ ಅವಳನ್ನೂ ಎಳೆದುಕೊಂಡೇ ಓಟ ಕಿತ್ತಿತು. ಮುದುಕಿ ಅರಚಿದಳು, ಮುದುಕಿ ಕಿರಿಚಿದಳು. ಆದರೆ ಆ ನಿರ್ಜನ ಪ್ರದೇಶದಲ್ಲಿ ಅದು ಯಾರ ಕಿವಿಗೆ ಬೀಳಬೇಕು? ಗಾಯಗೊಂಡು ಬಿದ್ದವರ ಕಿವಿಗೆ ಬಿದ್ದರೂ, ಯಾರು ಸಹಾಯಕ್ಕೆ ಎದ್ದು ಬರುವವರು?

ಮುದುಕಿಯ ಕೂಗು ಆ ಹುಡುಗಿಯ ಕಿವಿಗೆ ಬಿತ್ತು. ಅವಳು ಗವಿಯಿಂದ ಓಡಿಬಂದಳು. ಧೈರ್ಯಮಾಡಿ ಮುದುಕಿಯ ಕೈಯಿಂದ ಹಗ್ಗವನ್ನು ಬಿಡಿಸಿದಳು. ಹಗ್ಗವನ್ನು ಹಿಡಿದು, ಕತ್ತೆಯನ್ನು ನಿಲ್ಲಿಸಿದಳು. ಸರಕ್ಕನೆ ಅದನ್ನು ಹತ್ತಿದಳು. ಮುಂದಕ್ಕೆ ನಡೆಸಿದಳು.

ಕತ್ತೆ ಕತ್ತೆಯಲ್ಲ, ಅದು ಕತ್ತೆಯ ರೂಪದ ಮನುಷ್ಯ, ಎಂದು ಹೇಳಲಿಲ್ಲವೆ? ಆದಕ್ಕೆ ತಾನು ತಪ್ಪಿಸಿಕೊಂಡು ಹೋಗುವ ಧ್ಯಾನವೊಂದೇ ಮೊದಲು ಇತ್ತಾದರೂ, ಈಗಂತೂ ಆ ಹುಡುಗಿ ತಪ್ಪಿಸಿಕೊಳ್ಳುವುದಕ್ಕೂ ಸಹಾಯವಾಗೋಣ ಎಂದು ಮನಸ್ಸು ಆಯಿತು. ಜೊತೆಗೆ, ಅವಳು ಬೇರೆ ಕೈಲಿದ್ದ ಹಗ್ಗದಿಂದ ಹೊಡೆದು ಓಡಿಸುತ್ತಿದ್ದಳು. ಪಾಪ, ಅದು ಮನುಷ್ಯ, ಅದಕ್ಕೆ ಈ ಸದ್ಭಾವನೆ, ಎಂದು ಅವಳಿಗೆ ಹೇಗೆ ತಿಳಿಯಬೇಕು? ಅಂತೂ, ಕತ್ತೆ ಕುದುರೆಯಂತೆ ನಾಗಾಲೋಟ ಓಡಿತು.

ಹುಡುಗಿ ಅಂತರಿಕ್ಷದ ಕಡೆಗೆ ಮುಖ ಮಾಡಿ ಬೇಡಿದಳು: "ಓ! ದೇವರುಗಳೆ! ನನ್ನ ಈ ಕಷ್ಟಕಾಲದಲ್ಲಿ ಕೈಬಿಡಬೇಡಿ. ಓ ಅದೃಷ್ಟವೇ, ಇದುವರೆಗೆ ನನ್ನನ್ನು ಪಾಡುಪಡಿಸಿದ್ದು ಸಾಕು. ದಯಮಾಡಿ ನನಗೆ ಸುಮುಖವಾಗು." ಹಾಗೆಯೇ ಕತ್ತೆಗೂ ಕಾಲು ಕಟ್ಟಿಕೊಂಡಳು: "ಓ, ಮುದ್ದು ಕತ್ತೆ! ನೀನೇ ನನಗೆ ಈಗ ರಕ್ಷಕ. ನನ್ನನ್ನು ಇಲ್ಲಿಂದ ಕ್ಷೇಮ

ವಾಗಿ ನಮ್ಮ ತಾಯಿಯ ಮನೆಗೆ ತಲುಪಿಸಿದರೆ, ನಿನಗೆ ಪ್ರತಿದಿನವೂ ಹುಗ್ಗಿ ಮಾಡಿಸಿ ಹಾಕುತ್ತೇನೆ. ದಿನವೂ ನಿನ್ನ ಮೈಗೆ ತೈಲ ಹಚ್ಚಿ ನಾನೇ ನಿನ್ನ ಕೂದಲು ಬಾಚುತ್ತೇನೆ, ನಿನಗೆ ಜಡೆ ಹಾಕುತ್ತೇನೆ. ನಿನ್ನ ಬಾಲವನ್ನು ಸಿಕ್ಕು ಬಿಡಿಸಿ, ಕುಚ್ಚು ಕಟ್ಟುತ್ತೇನೆ. ನಿನ್ನ ಕೊರಳಿಗೂ ಕಾಲುಗಳಿಗೂ ಚಿನ್ನದ ಗೆಜ್ಜೆ ಕಟ್ಟಿಸುತ್ತೇನೆ. ತಾಳಮೇಳಗಳ ಸಹಿತವಾಗಿ ನಿನಗೆ ಮೆರವಣಿಗೆ ಮಾಡಿಸುತ್ತೇನೆ. ನೀನು ಬದುಕಿರುವವರೆವಿಗೂ ದಿನದಿನವೂ ನಿನಗೆ ರುಚಿರುಚಿಯಾದ ತಿಂಡಿತಿನಸುಗಳನ್ನು ನಾನೇ ತಂದು ತಿನ್ನಿಸುತ್ತೇನೆ. ನೀನು ನನ್ನನ್ನು ಬದುಕಿಸಿ ತಂದದ್ದನ್ನು ಕುರಿತು ಕಲ್ಲಿನಲ್ಲಿ ಕೆತ್ತಿಸುತ್ತೇನೆ, ಬಣ್ಣದಲ್ಲಿ ಚಿತ್ರ ಬರೆಸುತ್ತೇನೆ, ಕವಿಗಳಿಂದ ಕಾವ್ಯ ಹಾಡಿಸುತ್ತೇನೆ. ನಿನ್ನ ಹೆಸರು ಚರಿತ್ರೆಯಲ್ಲಿ ಚಿರಸ್ಥಾಯಿಯಾಗಿ ನಿಲ್ಲುವಂತೆ ಏರ್ಪಡಿಸುತ್ತೇನೆ." ಎಂದು ಏನೇನೋ ಬೇಡಿಕೊಂಡಳು.

ಹೀಗೇ ಹೋಗಬೇಕಾದರೆ, ಮುಂದೆ ದಾರಿ ಕವಲಾಯಿತು. ಅವಳು ತನ್ನ ಮನೆಗೆ ಹತ್ತಿರ ಎಂದು, ಕತ್ತೆಯನ್ನು ಬಲಗಡೆಗೆ ತಿರುವಿದಳು. ಆದರೆ ಕಳ್ಳರು ಹೋಗಿದ್ದು ಬರುವ ದಾರಿ ಅದೇ ಎಂದು ಕತ್ತೆ ಎಡಗಡೆಗೆ ಎಳೆಯಿತು. "ಅಯ್ಯೋ, ಪೆದ್ದು ಹೆಣ್ಣೆ. ಇದಕ್ಕೇ ನಿನ್ನಂಥವರಿಗೆ ಉಪಕಾರ ಮಾಡಬಾರದು ಎಂಬುದು. ಏಕೆ ? ನನಗೂ ನಿನಗೂ ಇಬ್ಬರಿಗೂ ಬದುಕು ಸಾಕಾಗಿದೆಯೇನು ? ನೀನು ಹೇಳಿದ ದಾರಿಯಲ್ಲಿ ಹೋದರೆ, ಕಳ್ಳರು ಎದುರಿಗೆ ಬಂದರೆ, ಆಯ್ತು, ನಾವು ಸತ್ತ ಹಾಗೆಯೇ!" ಎಂದು ಕತ್ತೆ ಮನಸ್ಸಿನಲ್ಲೇ ಎಂದುಕೊಂಡಿತು. ಅದನ್ನು ಬಿಡಿಸಿ ಹೇಳಲು, ಪಾಪ, ಅದಕ್ಕೆ ಬಾಯೆಲ್ಲಿ ?

ಅವಳು ಬಲಗಡೆ ತುಯ್ದಳು, ಕತ್ತೆ ಎಡಗಡೆಗೇ ಹೋಗುವುದೆಂದು ಮೊಂಡಾಟ ಮಾಡಿತು. ಹೀಗೆ ಅವರು ಅತ್ತಿತ್ತ ತುಯ್ದಾಡುತ್ತಿರುವಾಗಲೇ ಕಳ್ಳರು ಆ ಎಡೆಗೆ ಬಂದರು, ತಾವು ದೋಚಿ ತಂದದ್ದನ್ನು ಕುದುರೆಯ ಮೇಲೆ ಹೇರಿಕೊಂಡು. ಇನ್ನೂ ಸೂರ್ಯ ಹುಟ್ಟಿಲ್ಲದಿದ್ದರೂ, ಚಂದ್ರ ಮುಳುಗಿರಲಿಲ್ಲ. ಕಳ್ಳರು ಬೆಳುದಿಂಗಳಿನಲ್ಲಿ ಆ ಹುಡುಗಿಯನ್ನು ಗುರುತಿಸಿದರು.

"ಓಹೋ! ಎಲ್ಲಿಗೆ ಅಮ್ಮಯ್ಯ, ಓಟ ? ರಾತ್ರೆ ದೆವ್ವ, ಪಿಶಾಚಿ, ತಿರುಗಾಡುವ ಹೊತ್ತು. ಭಯವಿಲ್ಲವೆ ನಿನಗೆ ? ಅಥವಾ, ತಂದೆ ತಾಯಿಯ

ನೆನಪಾಗಿ, ಅವರನ್ನು ನೋಡಲು ಹೋಗುತ್ತಿರುವೆಯೇನೋ ? ಪಾಪ, ಒಂಟಿಯಾಗಿ ಹೀಗೆಲ್ಲ ಹೋಗಬಾರದು. ನಾವೂ ಜೊತೆಗೆ ಬರುತ್ತೇವೆ. ಹತ್ತಿರದ ಕಾಲುದಾರಿ ತೋರಿಸುತ್ತೇವೆ." ಎಂದು ಅವರಲ್ಲೊಬ್ಬನು ಕತ್ತೆಗೆ ಕಟ್ಟಿದ್ದ ಹಗ್ಗವನ್ನು ಹಿಡಿದು ಗುಹೆಯ ಕಡೆಗೆ ಅದನ್ನು ಎಳೆದುಕೊಂಡು ಹೊರಟ.

ಕತ್ತೆಗಂತೂ ತನಗೆ ಸಾವು ಅನಿವಾರ್ಯವೆಂದು ತೋರಿತು. ನಡೆಯಲು ಕಾಲೇ ಬರಲಿಲ್ಲ. ಕುಂಟಿಕೊಂಡು ನಡೆಯಿತು. ಕಳ್ಳನೊಬ್ಬ ಕೈಯ ದೊಣ್ಣೆಯಿಂದ ಎತ್ತಿ ಒಂದು ಬಿಟ್ಟ. "ಈಗ ತಾನೇ ಜೂಜಿನ ಕುದುರೆಯಂತೆ ಓಡುತ್ತಿದ್ದೆ. ಆಗಲೇ ಕುಂಟಾಯಿತಲ್ಲವೆ ಕಾಲು?" ಎಂದು ಇನ್ನೊಂದು ಏಟು ಬಿಟ್ಟ.

ಗುಹೆಗೆ ಅವರು ಸೇರುವ ವೇಳೆಗೆ, ಮುದುಕಿ ತಾನೊಂದು ಮರಕ್ಕೆ ನೇಣು ಹಾಕಿಕೊಂಡು ಸತ್ತು ಹೋಗಿದ್ದಳು. ಹುಡುಗಿಯನ್ನೂ ಕತ್ತೆಯನ್ನೂ ತಪ್ಪಿಸಿಕೊಳ್ಳಲು ಬಿಟ್ಟಿದ್ದಕ್ಕೆ ಕಳ್ಳರು ಏನು ಮಾಡುವರೋ ಎಂದು ಹೆದರಿ, ಅವಳು ಇಲ್ಲಿಂದ ಒಮ್ಮೆಗೇ ತಪ್ಪಿಸಿಕೊಂಡಿದ್ದಳು. ಕಳ್ಳರು ಅವಳ ಶವವನ್ನು ಕಿತ್ತು, ಪಕ್ಕದ ಕೊರಕಲಿಗೆ ಎಸೆದರು.

ಒಳಗೆ ಬಂದ ಮೇಲೆ, ಆ ಹುಡುಗಿಯ ಕೈಕಾಲುಗಳನ್ನು ಹಗ್ಗದಿಂದ ಕಟ್ಟಿದರು. ಮುದುಕಿ ಅಡುಗೆ ಮಾಡಿದ್ದುದನ್ನು ತೋಳಗಳಂತೆ ತಿಂದರು. "ಹೋಗಲಿ; ಸಾಯುವುದಕ್ಕೆ ಮುಂಚೆ ಸೊಗಸಾಗಿ ಬೇಯಿಸಿಟ್ಟು ಹೋಗಿದ್ದಾಳೆ. ಅವಳ ಹೊಟ್ಟೆ ತಣ್ಣಗಿರಲಿ." ಎಂದು ಸತ್ತವಳನ್ನು ಹರಸಿದರು.

"ನಮ್ಮ ಅಡುಗೂಳಜ್ಜಿಯನ್ನು ಸಾಯಿಸಿ ಕೊಂದುಹಾಕಿದ ಈ ಹುಡುಗಿಯನ್ನು ಏನು ಮಾಡೋಣ?" ಎಂದು ಒಬ್ಬ ಕೇಳಿದ.

"ಜೀವಸಹಿತ ಸುಟ್ಟುಬಿಡೋಣ!"

"ಹುಲಿ ಕರಡಿಗಳಿಗೆ ಕೊಟ್ಟುಬಿಡೋಣ!"

"ಕೈಕಾಲು ಕತ್ತರಿಸಿಬಿಡೋಣ."

"ಚಿತ್ರಹಿಂಸೆ ಮಾಡಿ ಸಾಯಿಸೋಣ."

ಹೀಗೆ ತಲೆಗೊಂದು ಮಾತು ನಡೆಯುತ್ತಿರುವಾಗ, ಅವರಲ್ಲೇ ಒಬ್ಬ ಹೀಗೆ ಹೇಳಿದ: “ಮಿತ್ರರೆ, ನಾವು ಎಷ್ಟಾದರೂ ಮನುಷ್ಯರು. ನಮಗೂ ದಯೆ, ಮರುಕ ಮುಂತಾದ್ದು ಉಂಟು. ಶಿಕ್ಷೆ ಮಾಡುವುದಾದರೂ ಅಪರಾಧದ ಪ್ರಮಾಣಕ್ಕೆ ತಕ್ಕಂತೆ ಇರಬೇಕು. ಅತಿಯಾಗಬಾರದು. ನೀವು ಹೇಳಿದ ಯಾವ ರೀತಿಯ ಸಾವೂ ನನಗೆ ಸರಿತೋರಲಿಲ್ಲ. ಈಗ ನಮಗೆ ಆಗಿರುವ ಅವಮಾನಕ್ಕೆ ತಕ್ಕ ಹಾಗೆ ಶಿಕ್ಷೆ ವಿಧಿಸಬೇಕೆಂದರೆ, ನನ್ನ ಸಲಹೆಯನ್ನು ಕೇಳಿರಿ. ಇವಳನ್ನು ಯಾವ ರೀತಿಯಿಂದಲೂ ಕೊಲ್ಲುವುದು ಬೇಡ. ಇವಳು ಎಂತಹ ಅಕಾರ್ಯ ಮಾಡಿದಳೋ ಅಂತಹ ಬದುಕನ್ನೇ ಬದುಕಲಿ. ಇವತ್ತು ಬೆಳಗ್ಗೆ ತಾನೇ ಈ ಕತ್ತೆಯನ್ನೂ ಕೊಲ್ಲುವ ಮಾತು ಬಂದಿತ್ತು. ಸೋಮಾರಿ ಇದು ಮೊದಲೇ, ಬಕಪಕ್ಷಿಯಂತೆ ದಂಡಕ್ಕೆ ತಿನ್ನುತ್ತದೆ, ಕೆಲಸ ಮಾಡಬೇಕಾದರೆ ಸುಮ್ಮಸುಮ್ಮನೆ ಕುಂಟುತ್ತದೆ, ಸಾಲದ್ದಕ್ಕೆ ಈಗ ಇವಳು ತಪ್ಪಿಸಿಕೊಳ್ಳುವುದಕ್ಕೆ ಸಹಾಯ ಮಾಡಿದೆ. ಆದ್ದರಿಂದ ನಾಳೆ ಒಂದು ಕೆಲಸ ಮಾಡೋಣ. ಈ ಕತ್ತೆಯನ್ನು ಕಮರಿಗೆ ತಳ್ಳಿ ಸಾಯಿಸುವ ಬದಲು, ಇದರ ಕತ್ತು ಕುಯಿದು, ಹೊಟ್ಟೆ ಸೀಳಿಬಿಡೋಣ. ನಮ್ಮನ್ನು ಬಿಟ್ಟು, ಇದರ ಜೊತೆಗೇ ಹೋಗಬೇಕೆಂದಳಲ್ಲವೆ ಈ ಹುಡುಗಿ— ಇವಳನ್ನು ಇವರ ಹೊಟ್ಟೆಯಲ್ಲಿ ಸೇರಿಸಿ, ತಲೆ ಮಾತ್ರ ಮೇಲೆ ಕಾಣುವಂತೆ ಹೊಲಿದುಬಿಡೋಣ. ಆ ಬಳಿಕ ಇಬ್ಬರನ್ನೂ ನೆರಳಿಲ್ಲದ ಕಡೆ ಒಂದು ಬಂಡೆಯ ಮೇಲೆ ಇಟ್ಟುಬಿಡೋಣ. ಕತ್ತೆಯಂತೂ ಕೂಡಲೆ ಸಾಯುತ್ತದೆ. ಆದರೂ, ಹುಡುಗಿ ಸಾವಿನ ಸಂಕಟವನ್ನೆಲ್ಲಾ ಅನುಭವಿಸಿಯೇ ಸಾಯುತ್ತಾಳೆ. ಕಾಡುಮೃಗಗಳು ಬಂದು ಇವಳ ತಲೆಯನ್ನು ಕಿತ್ತು ತಿನ್ನಲಿ. ಕತ್ತೆಯ ಮೈಯೊಳಗೆ ಉತ್ಪತ್ತಿಯಾಗುವ ಹುಳುಗಳು ಇವಳ ದೇಹವನ್ನು ಮುತ್ತಿ ತಿನ್ನಲಿ. ಬಿಸಿಲು ಹೊಡೆದು, ಕತ್ತೆಯ ಚರ್ಮ ಒಣಗಿ, ಇವಳ ದೇಹವನ್ನು ಬಿಗಿದು ಹಿಂಡಲಿ. ಕೊಳೆಯುವ ಕತ್ತೆಯ ವಾಸನೆ ಮೂಗನ್ನು ತುಂಬಲಿ. ಅನ್ನವಿಲ್ಲದೆ, ನೀರಿಲ್ಲದೆ, ನೆರಳಿಲ್ಲದೆ, ವಾಸನೆಯನ್ನು ತಡೆಯಲಾರದೆ, ನೊಣಗಳನ್ನು ಓಡಿಸಲಾರದೆ, ಕೈ ಕಟ್ಟಿ ನವೆಯನ್ನು ಅನುಭವಿಸುವ

ಈ ಚಿತ್ರಹಿಂಸೆಗಿಂತ ಹಿತವಾದುದು ಯಾವುದೂ ಇಲ್ಲವೆಂದೇ ನನ್ನ ಭಾವನೆ."

ಅವನ ಮಾತನ್ನು ಮಿಕ್ಕವರೆಲ್ಲ ಒಮ್ಮತದಿಂದ ಒಪ್ಪಿದರು.

ಕತ್ತೆ ಅವರ ಮಾತನ್ನೆಲ್ಲ ಕೇಳಿತು. "ಸರಿ, ನಾಳೆಗೆ ನಾನು ಸತ್ತೆ." ಎಂದುಕೊಂಡಿತು.

೫

ರಾತ್ರಿ ಮುಗಿಯಿತು, ಹಗಲು ಬೆಳಗಿತು. ಆ ಹೊತ್ತಿಗೆ ಒಬ್ಬನು ಬಂದು, ತುಂಬ ಆಯಾಸಪಡುತ್ತ ಗುಹೆಯ ಬಾಗಿಲಿನಲ್ಲಿ ಕುಳಿತುಕೊಂಡ. ಅವನು ಬಂದದ್ದನ್ನು ಕಂಡ ಕಳ್ಳರೆಲ್ಲಾ ಅವನ ಸುತ್ತ ಬಂದು ಸೇರಿದರು. ಅವನು ಹಾಗೇ ಸುದಾರಿಸಿಕೊಂಡು, ತನ್ನ ಕತೆ ಹೇಳಿದ.

"ಆ ಮೈಲೋ ಮನೆಯಲ್ಲಿ ದೋಚಿಕೊಂಡು ನೀವು ಈಚೆ ಬಂದರಲ್ಲಾ, ಅಲ್ಲಿ ನಾನು ನಿಂತು ನೋಡಿಕೊಂಡು ಬಂದಿದ್ದೇನೆ. ನಮ್ಮ ಮೇಲೆ ಯಾರಿಗೂ ಏನೂ ಅನುಮಾನವೇ ಬಂದಿಲ್ಲ ಅದು ಯಾರೋ ಲೂಸಿಯೆಸ್ ಎಂಬುವನು ಮೈಲೋ ಮನೆಗೆ ಅತಿಥಿಯಾಗಿ ಬಂದಿದ್ದನಂತೆ. ಈಗ ಕಳ್ಳತನ ಆದ ಹೊತ್ತಿನಿಂದ ಅವನು ಕಾಣೆಯಾಗಿರುವನಂತೆ. ಜೊತೆಗೆ ಅವನ ಕುದುರೆಯೂ ತಪ್ಪಿಸಿಕೊಂಡಿರುವುದಂತೆ ಅವನೇ ಈ ಕಳ್ಳತನ ಮಾಡಿರಬೇಕು, ಎಂದು ಎಲ್ಲರೂ ಹೇಳುತ್ತಿದ್ದಾರೆ. ಆ ಲೂಸಿಯಸ್ಸಿನ ಸೇವಕನನ್ನು ಚಿತ್ರಹಿಂಸೆ ಮಾಡಿದರು, ನಿನ್ನ ಯಜಮಾನ ಎಲ್ಲಿ ಎಂದು ಪ್ರಶ್ನಿಸಿದರು. ಪಾಪ, ಅವನು ಏನೂ ಹೇಳಲಾರದೆ ಇದ್ದ. ಈಗ, ಲೂಸಿಯಸ್ಸನ್ನು ಹುಡುಕಿ ಹಿಡಿದುಕೊಂಡು ಬನ್ನಿ, ಎಂದು ಅವನ ಪ್ರಾಂತಕ್ಕೆ ಜನರನ್ನು ಕಳಿಸಿದ್ದಾರೆ."

ಕತ್ತೆ ಒಳಗೊಳಗೇ ಗುಂಯಿಗುಟ್ಟಿತು. ಸಭ್ಯನಾದ ಮನುಷ್ಯನಾಗಿದ್ದವನು ತಾನು ಈಗ ಕತ್ತೆಯಾಗಿಹೋಗಿದ್ದೇನೆ. ಸತ್ಯವಂತನೆಂದು ಹೆಸರಾಗಿದ್ದ ತನ್ನ ತಲೆಯಮೇಲೆ ಈಗ ಕಳ್ಳತನದ ಆರೋಪಣೆ ಹೊರೆಸಿದ್ದಾರೆ.

ಸಾಲದ್ದಕ್ಕೆ, ತನ್ನ ಕುದುರೆಯ ಪಕ್ಕದಲ್ಲೇ ತಾನು ಕತ್ತೆಯಾಗಿ, ಅದರ ಜೊತೆಯಲ್ಲೇ ಊಟ, ಅದರ ಜೊತೆಯಲ್ಲೇ ನಿದ್ರೆ. ಕತ್ತೆ, ಪಾಪ ನರಳಿತು. ತಾನು ಮುಟ್ಟಬಾರದ ಮಂತ್ರಮಾಟಗಳಿಗೆ ಕೈ ಹಾಕಿದ್ದಕ್ಕೆ ತಕ್ಕ ಶಿಕ್ಷೆಯಾಯಿತು, ಎಂದು ಸಂಕಟಪಟ್ಟಿತು.

ಅನಂತರ, ಆ ಮೈಲೋ ಮನೆಯಿಂದ ವರ್ತಮಾನ ತಂದವನು ತಾನು ಹೊದೆದಿದ್ದ ಕಂಥೆಯನ್ನು ಬಿಚ್ಚಿ, ಅದರೊಳಗಿನಿಂದ ಒಂದು ಸಾವಿರ ಚಿನ್ನದ ನಾಣ್ಯಗಳನ್ನು ಹೊರಗೆ ಚೆಲ್ಲಿದ. ದಾರಿಯಲ್ಲಿ ಸಿಕ್ಕಿಸಿಕ್ಕಿದವರನ್ನು ಸುಲಿಗೆ ಮಾಡಿದ್ದರಿಂದ ಬಂದ ಆದಾಯವಂತೆ ಅದು. ಅದನ್ನು ಗುಹೆಯೊಳಗಿನ ಭಂಡಾರಕ್ಕೆ ಸುರಿದ ಮೇಲೆ, ಅವನು ಸುತ್ತಲೂ ನೋಡಿ, "ಮಿಕ್ಕವರೆಲ್ಲಿ ?" ಎಂದು ಕೇಳಿದ. ಅವರು ನಡೆದದ್ದನ್ನೆಲ್ಲಾ ಹೇಳಿದರು. ಆದ ನಷ್ಟವನ್ನೂ ಹೇಳಿದರು. ಸ್ವಲ್ಪ ಕಾಲ, ಈ ದರೋಡೆ ಕಳ್ಳತನಗಳನ್ನು ನಿಲ್ಲಿಸಿ, ನಮ್ಮ ದಳಕ್ಕೆ ಇನ್ನಷ್ಟು ಜನ ಹೊಸಬರನ್ನು ಸಂಪಾದಿಸಿಕೊಂಡು ಬರಬೇಕು, ಎಂದರು.

" ಹೌದು. ನೀವು ಹೇಳಿದಮೇಲೆ ಜ್ಞಾಪಕವಾಗುತ್ತದೆ. ನನಗೆ ದಾರಿಯಲ್ಲಿ ಒಬ್ಬ ಸಿಕ್ಕಿದ್ದ. ಒಳ್ಳೇ ಎತ್ತರವಾಗಿದ್ದಾನೆ, ಆಜಾನುಬಾಹು. ಆದರೆ, ಪಾಪ, ಬಡವ. ಹಣವಿಲ್ಲ, ಜೊತೆಗಾರರಿಲ್ಲ. ಅವನಿಗೆ ಹೇಳಿದೆ : ' ನಿನ್ನಂಥವನು ಭಿಕ್ಷಕ್ಕೆ ಕೈ ನೀಡಬಾರದು. ನೀನು ಕೈ ನೀಡಿ, ಬೇಕಾದ್ದನ್ನು ಎತ್ತಿಕೊಳ್ಳುವ ಹಾಗಿರಬೇಕು. ಬೇಕಾದರೆ, ಬಾ. ನಮ್ಮ ದಳಕ್ಕೆ ಸೇರಿಕೋ. ಸಂಪಾದನೆಯ ದಾರಿ ಹೇಳಿಕೊಡುತ್ತೇವೆ' ಎಂದೆ. ಅವನು ಒಪ್ಪಿ ಬಂದಿದ್ದಾನೆ. ನೀವು ಏನು ಹೇಳುವಿರೋ ಮೊದಲು ಕೇಳೋಣವೆಂದು ಅವನನ್ನು ಅಲ್ಲೇ ಇಲ್ಲಿಂದ ಸ್ವಲ್ಪ ದೂರದಲ್ಲಿ ಇರಹೇಳಿ ಬಂದಿದ್ದೇನೆ." ಎಂದ ಆ ವಾರ್ತೆ ತಂದ ಕಳ್ಳ.

" ನೋಡೋಣ, ಅವನನ್ನು ಕರೆ. ಯೋಗ್ಯನಾಗಿದ್ದರೆ, ನಮ್ಮ ಗುಂಪಿಗೆ ಸೇರಿಸಿಕೊಳ್ಳೋಣ '' ಎಂದರು, ಉಳಿದವರು.

ವಾರ್ತೆ ತಂದವನು ಗುಹೆಯಿಂದ ಹೋದ. ಸ್ವಲ್ಪ ಹೊತ್ತಿನಲ್ಲೇ ಆ ಬಡ ಭಿಕ್ಷುಕನನ್ನು ಕರೆದುಕೊಂಡು ಬಂದ. ಅವನು ಒಳ್ಳೇ ಕಟ್ಟುಮಸ್ತಾ

ಗಿದ್ದ, ಅಲ್ಲಿ ಇದ್ದವರಿಗಿಂತ ಒಂದು ಹಸ್ತ ಎತ್ತರ, ಅವರಿಗಿಂತ ಹೆಗಲ ಅಗಲ. ಇನ್ನೂ ಈಗತಾನೆ ಗಡ್ಡ ಮೀಸೆ ಮೊಳೆಯುತ್ತಿತ್ತು. ಅವನ ವಿಶಾ ವಾದ ಎದೆಯಂತೂ ಅವನ ಹರಕು ಬಟ್ಟೆಗಳನ್ನ ಸಿಗಿದುಕೊಂಡು ಈಚೆಗ ಬರುತ್ತಿತ್ತು.

ಒಳಗೆ ಬಂದವನೇ ಎಲ್ಲರಿಗೂ ಒಂದು ದೊಡ್ಡ ನಮಸ್ಕಾರ ಮಾಡಿದ. "ನನ್ನನ್ನು ನಿಮ್ಮ ಜೊತೆಗೆ ಸೇರಿಸಿಕೊಳ್ಳುವಿರಾದರೆ, ನಾನೂ ದುಡಿಯಲು ಸಿದ್ಧ. ನಿಮ್ಮ ಖ್ಯಾತಿಯನ್ನು ಕೇಳಿದ್ದೇನೆ. ನಿಮ್ಮೊಡನೆ ಸೇರುವುದೇ ಒಂದು ಹೆಮ್ಮೆ. ನನಗೂ ಕಾಳಗ ಎಂದರೆ ತುಂಬಾ ಇಷ್ಟ, ಭಿಕ್ಷೆಗೆ ಕೈ ನೀಡುವುದೆಂದರೆ ಬಲು ಬೇಸರ. ನನಗೆ ಸಾವೆಂದರೆ ಭೀತಿಯೇ ಇಲ್ಲ. ಈ ಹರಕು ಬಟ್ಟೆ ನೋಡಿ, ನನ್ನನ್ನು ಏನೋ ಕೆಲಸಕ್ಕೆ ಬಾರದವನೆಂದುಕೊಳ್ಳ ಬೇಡಿ. ನಾನು ಯಾವಾಗಲೂ ಹೀಗೆ ನಿರ್ಗತಿಕನಾಗಿದ್ದವನಲ್ಲ. ನಾನೂ ಕೂಡ ನಿಮ್ಮಂಥ ದರೋಡೆಗಾರರ ಪಡೆಯೊಂದಕ್ಕೆ ಮುಖಂಡನಾಗಿದ್ದೆ, ಮ್ಯಾಸಿಡೋನಿಯದ ಕಡೆ. ಹಯೀಮಸ್ ಎಂದು ನನ್ನ ಹೆಸರು. ನನ್ನ ಹೆಸರು ಹೇಳಿದರೆ, ಆ ಪ್ರಾಂತವೆಲ್ಲ ಗಡಗಡ ನಡುಗುತ್ತಿತ್ತು. ನನ್ನ ತಂದೆಯೂ ನನ್ನ ಹಾಗೆಯೇ ದರೋಡೆಯ ದಳಕ್ಕೆ ನಾಯಕನಾಗಿದ್ದ. ನಾನು ಚಿಕ್ಕಂದಿನಲ್ಲಿ ಶತ್ರುಗಳ ರಕ್ತ ಕುಡಿದು, ಇಂಥದೇ ಗುಹೆಯಲ್ಲಿ ಬೆಳೆದವನು. ನನ್ನ ತಂದೆ ನನಗೆ ಕೊಟ್ಟ ದೊಡ್ಡ ಆಸ್ತಿ ಎಂದರೆ ಈ ದೇಹ, ಈ ಧೈರ್ಯ. ಇವುಗಳನ್ನು ಬಂಡವಾಳವಾಗಿ ಇಟ್ಟುಕೊಂಡು, ನಾನೂ ಒಂದು ದೊಡ್ಡ ಗುಂಪು ಕಟ್ಟಿದೆ, ತುಂಬ ಐಶ್ವರ್ಯ ಸಂಪಾದಿಸಿದೆ. ಆದರೆ ಅದೃಷ್ಟ ಒಂದು ಸಲ ಹೀಗೆ ಎತ್ತುತ್ತದೆ, ಇನ್ನೊಂದು ಸಲ ಹಾಗೆ ಇಳಿಸುತ್ತದೆ. ಅದನ್ನು ನೀವೂ ಬಲ್ಲಿರಿ. ಹಾಗಾಗಿ ನಾನು ಶೇಖರಿಸಿದ್ದ ಸಂಪತ್ತೂ ಸೇನೆಯೂ ನಾಶವಾಗಿಹೋದುವು. ಅದರ ಕತೆ ಹೇಳುತ್ತೇನೆ ಕೇಳಿ: ಒಂದು ಸಲ ಯುದ್ಧದೇವತೆಗೆ ನನ್ನ ಮೇಲೆ ಏನೋ ರೋಷ ಹುಟ್ಟಿ, ನನಗೆ ದುರ್ಬುದ್ಧಿ ಕೊಟ್ಟನು. ನಾನು ಸಾಮಾನ್ಯ ಜನರನ್ನು ಸುಲಿಗೆ ಮಾಡುತ್ತಿದ್ದವರೆಗೂ ನಾನು ಕ್ಷೇಮದಿಂದಿದ್ದೆ. ಆದರೆ, ಒಮ್ಮೆ ಆ ಪ್ರಾಂತದ ಮುಖ್ಯಾಧಿಕಾರಿಯ ಮನೆಗೆ ಕನ್ನ ಹಾಕಿ, ಒಳಗಿದ್ದುದನ್ನೆಲ್ಲ ಗುಡಿಸಿಕೊಂಡೆವು. ಇನ್ನೇನು ಹೋಗಬೇಕು– ಅಷ್ಟರಲ್ಲಿ

ಗಾಳಿ ಬೀಸಿ, ಕದ ಬಡಿಯಿತು. ಮನೆಯಾಕೆಗೆ ಎಚ್ಚರವಾಯಿತು. 'ಕಳ್ಳರು! ಕಳ್ಳರು!' ಎಂದು ಕೂಗಿಕೊಂಡು ಅವಳು ಮನೆಯವರನ್ನೆಲ್ಲ ಎಬ್ಬಿಸಿದರೂ, ಅಕ್ಕ ಪಕ್ಕದವರೆಲ್ಲ ಎದ್ದು ಬಂದರೂ, ನಾವು ಸಿಕ್ಕದೆ ತಪ್ಪಿಸಿ ಕೊಂಡೆವು. ಆದರೆ, ಆ ಹೆಂಗಸು ಅಷ್ಟಕ್ಕೆ ಬಿಡಲಿಲ್ಲ. ನೇರವಾಗಿ ರಾಜ ಧಾನಿಗೆ ಹೋಗಿ, ಚಕ್ರವರ್ತಿಯ ಹತ್ತಿರ ದೂರು ಹೇಳಿದಳು. ಚಕ್ರವರ್ತಿ ಯಾದರೋ, ಅವಳ ಒತ್ತಾಯಕ್ಕೆ ಕಟ್ಟುಬಿದ್ದು ಒಂದು ತುಕಡಿ ಸೈನ್ಯವನ್ನು ನಮ್ಮ ಮೇಲೆ ಕಳಿಸಿದ. ಅವರು ಹಗಲೂ ರಾತ್ರೆ ನಮ್ಮ ಬೆನ್ನುಹತ್ತಿದರು. ನಮಗೂ ಓಡಿ ಓಡಿ ಸಾಕಾಯಿತು. ನಾವು ಬರಿಗಾಲಲ್ಲಿ, ಅವರು ಕುದುರೆಯ ಮೇಲೆ. ಒಬ್ಬೊಬ್ಬರಾಗಿ ಒಬ್ಬೊಬ್ಬರಾಗಿ ನಮ್ಮವರೆಲ್ಲ ಅವರ ಕತ್ತಿಗೆ ಆಹುತಿಯಾದರು. ಅದು ಯಾವ ದೇವತೆಯ ಕೃಪೆಯೋ, ಉಳಿದವನೆಂದರೆ ನಾನೊಬ್ಬ ಮಾತ್ರ. ಅದೂ ಹೇಗೆ ನಾನು ತಪ್ಪಿಸಿಕೊಂಡದ್ದು? ಹೆಂಗಸಿನಂತೆ ರಂಗಿನ ಲಂಗ ಉಟ್ಟು, ಹೆಂಗಸರ ಕುಲಾವಿಯನ್ನು ಕಿವಿಯವರೆಗೂ ಎಳೆದು ಕೊಂಡು, ಹಳ್ಳಿಯ ಹುಡುಗಿಯರ ಹಾಗೆ ಒಂದು ಕತ್ತೆಯನ್ನು ಹತ್ತಿಕೊಂಡು ಸೈನ್ಯದವರ ಕೈಗೆ ಬೀಳದಂತೆ ಪಾರಾದೆ. ನನಗಿನ್ನೂ ಗಡ್ಡ ಮೀಸೆ ಅಷ್ಟು ಮೊಳೆತಿಲ್ಲದ್ದರಿಂದ, ಹೆಂಗಸಿನಂತೆ ನಟಿಸಿದರೂ ಅದು ಪತ್ತೆಯಾಗಲಿಲ್ಲ. ಅದೇ ವೇಷವನ್ನು ಹಾಗೇ ಧರಿಸಿಕೊಂಡೇ ಪುನಃ ಅಲ್ಲಿ ಇಲ್ಲಿ ಮನೆಗಳಿಗೆ ನುಗ್ಗಿ ಮೋಸ ಮಾಡಿ ಈ ಧನವನ್ನು ಸಂಗ್ರಹಿಸಿದ್ದೇನೆ."

ಹೀಗೆಂದು ಮಾತನಾಡುತ್ತಲೆ ತನ್ನ ಹರಕು ಚಿಂದಿಯನ್ನು ಪರಪರನೆ ಹರಿದನು. ಅದರೊಳಗಿನಿಂದ ಚಿನ್ನದ ನಾಣ್ಯಗಳ ಮಳೆ ಬಿತ್ತು. ಕತೆ ಕೇಳುತ್ತಿದ್ದವರೆಲ್ಲ ತಮ್ಮ ಕಣ್ಣುಗಳನ್ನು ತಾವೇ ನಂಬಲಾರದೆಹೋದರು.

"ಇದನ್ನೂ ನಿಮ್ಮ ಭಂಡಾರಕ್ಕೆ ತುಂಬಿಕೊಳ್ಳಿ. ಇದು ನನ್ನ ಪಾಲಿನ ಶುಲ್ಕ. ನನ್ನದೊಂದು ಸೂಚನೆ. ನನ್ನನ್ನು ನಿಮ್ಮ ಗುಂಪಿಗೆ ಸೇರಿಸಿ ಕೊಂಡು, ನಾಯಕಪಟ್ಟ ನನಗೆ ಕೊಟ್ಟುನೋಡಿ. ನಿಮ್ಮ ಈ ಗುಹೆಯ ಗೋಡೆಗಳಿಗೆಲ್ಲ ಚಿನ್ನದ ತಗಡು ಹಾಕಿಸಿಬಿಡುತ್ತೇನೆ." ಎಂದ.

ಅವರಿಗೂ ಇಂಥವನೊಬ್ಬ ನಾಯಕನ ಅಗತ್ಯವಿತ್ತು. ಅವನ ಮಾತನ್ನು ಒಪ್ಪಿಕೊಂಡರು. ಅವನಿಗೆ ಹೊಸ ಬಟ್ಟೆಬರೆ ಕೊಟ್ಟರು. ಅವ

ನನ್ನ ತಮ್ಮನೆಂದು ಆಲಿಂಗಿಸಿಕೊಂಡರು. ತಮ್ಮ ಊಟದ ಪಂಕ್ತಿಯಲ್ಲಿ ಅವನನ್ನು ಅಗ್ರಸ್ಥಾನದಲ್ಲಿ ಕುಳ್ಳಿರಿಸಿದರು. ಪಾನಪಾತ್ರೆಗಳನ್ನು ತಾವೆ ತುಂಬಿ ತುಂಬಿ ಅವನಿಗೆ ನೀಡಿದರು. ಅವನಿಗೆ ರಾಜಮರ್ಯಾದೆ ಮಾಡಿದರು.

೬

ಊಟೋಪಚಾರ ನಡೆಯುತ್ತಿರುವಾಗ ದರೋಡೆಗಾರರು ತಾವು ಅಪ ಹರಿಸಿ ತಂದಿದ್ದ ಹುಡುಗಿಯ ವಿಚಾರವನ್ನು ತಮ್ಮ ಹೊಸ ನಾಯಕನಿಗೆ ತಿಳಿಸಿದರು. ಅವಳಿಗೆ ತಾವು ಮಾಡಬೇಕೆಂದಿದ್ದ ಚಿತ್ರಹಿಂಸೆಯನ್ನು ವರ್ಣಿಸಿದರು.

"ಎಲ್ಲಿ ಆ ಹುಡುಗಿ?" ಎಂದು ಅವನು ಕೇಳಿದ.

ಕರೆದುಕೊಂಡುಹೋಗಿ ತೋರಿಸಿದರು. ಕೈಕಾಲುಗಳಿಗೆ ಸಂಕೋಲೆ ತೊಡಿಸಿದ್ದ ಆ ಹುಡುಗಿಯನ್ನು ಕಂಡವನೇ, ಆ ನಾಯಕ ತಿರಸ್ಕಾರದಿಂದ ಮೂಗು ತಿರುವಿದ.

ಹೇಳಿದ: "ಛೆ! ಇಷ್ಟುಜನ ಗಂಡಸರಿರುವಾಗ, ಕೈಲಾಗದ ಒಂದು ಹುಡುಗಿಗೆ ಅಷ್ಟು ಸಂಕೋಲೆ ಹಾಕಬೇಕೆ? ನಾನು ಹೀಗೆ ಹೇಳುವೆನೆಂದು ಕೋಪ ಮಾಡಿಕೊಳ್ಳಬೇಡಿ. ಈಗ ನಾವೆಲ್ಲ ಒಂದೇ ದಳದವರಾಗಿರುವುದರಿಂದ, ನಿಮ್ಮ ಲಾಭ ನನ್ನ ಲಾಭ, ನಿಮ್ಮ ನಷ್ಟ ನನ್ನ ನಷ್ಟ. ಆದ್ದರಿಂದ, ನನ್ನ ಮಾತು ಗಮನಿಸಿ. ನೀವು ಇವಳನ್ನು ಕತ್ತೆಯ ಹೊಟ್ಟೆಯಲ್ಲಿ ಹುಗಿದು ಹೊಲಿಯಬೇಕೆಂದಿರುವುದೇನೋ ಸರಿಯೆ. ಆದರೆ, ಹಾಗೆ ಮಾಡಿದ್ದರಿಂದ ನಿಮಗೆ ಏನು ಲಾಭ ಬಂತು? ಇವಳನ್ನು ನಿರ್ದಯೆಯಿಂದ ಕೊಂದೆವೆಂಬುದು ಒಂದು ಕ್ರೂರ ಸಮಾಧಾನವಾಯಿತೆ ಹೊರತು, ನಿಮಗೆ ಬೇರೆ ಏನು ಲಾಭ ಬಂದಿತು? ಅದಕ್ಕೆ ಬದಲು, ಇಷ್ಟು ಚೆಲುವೆಯಾದ ಈ ಹುಡುಗಿಯನ್ನು, ಇನ್ನೂ ಪುರುಷರನ್ನು ಕಾಣದ ಈ ಕನ್ಯೆಯನ್ನು, ಯಾವುದಾದರೂ ದೊಡ್ಡ ನಗರಕ್ಕೆ ತೆಗೆದುಕೊಂಡು ಹೋಗಿ ಮಾರಿಬಿಟ್ಟರೆ, ಎಷ್ಟು

ಹಣ ಬರುತ್ತದೆ, ನೋಡಿ. ನಾನೂ ನನ್ನ ಸಂಚಾರಕಾಲದಲ್ಲಿ ಹಲವಾರು ವೇಶ್ಯಾಗೃಹಗಳನ್ನು ನೋಡಿದ್ದೇನೆ. ಅವರು ಇಂಥ ಹುಡುಗಿಗೆ ಅವಳ ತೂಕದ ಚಿನ್ನ ಕೊಡುತ್ತಾರೆಂದು ನಾನು ಭರವಸೆ ಹೇಳಬಲ್ಲೆ. ವೇಶ್ಯಾಗೃಹಗಳ ವಾಸಮಾಡುವುದೆಂದರೆ ಅದು ಏನೂ ಕಡಿಮೆ ತರಹದ ಚಿತ್ರಹಿಂಸೆಯಲ್ಲ. ನೋಡಿ, ಇಷ್ಟರ ಮೇಲೆ ನಿಮ್ಮಿಷ್ಟ; ಅವಳು ಸುಮ್ಮನೆ ಚಿತ್ರಹಿಂಸೆಗೆ ಗುರಿಯಾಗಬೇಕು ಎನ್ನುವುದಾದರೆ ಹಾಗೆ ಮಾಡಿ; ಅದರ ಜೊತೆಗೆ ನಮಗೂ ಚಿನ್ನ ಸಂಪಾದನೆಯಾಗಬೇಕು ಎನ್ನುವುದಾದರೆ, ಹೀಗೆ ಮಾಡಿ. ಇದು ಬರಿಯ ನನ್ನ ಸಲಹೆ, ಅಷ್ಟೆ."

ಅದಕ್ಕೆ ಅವರೆಲ್ಲರೂ ಒಂದೇ ದನಿಯಿಂದ "ನೀನು ನಮ್ಮ ನಾಯಕ. ನಿನ್ನ ಸಲಹೆ ಎಂದರೆ, ನಮಗೆ ಆಜ್ಞೆ ಇದ್ದಹಾಗೆ" ಎಂದರು. ಒಡನೆಯೆ ಎದ್ದುಹೋಗಿ, ಆ ಹುಡುಗಿಗೆ ಹಾಕಿದ್ದ ಸಂಕಲೆಗಳನ್ನು ಸಡಿಲಿಸಿ ತೆಗೆದರು.

ಆದರೆ, ಏನಿದು ವಿಚಿತ್ರ! ಅದುವರೆಗೂ ಕೊರಗುತ್ತ ಗೋಳಾಡುತ್ತ ಇದ್ದವಳು ಈಗ ಈ ಹೊಸಬ ಬಂದು ಮಾತನಾಡಿದ್ದನ್ನು ಕೇಳಿಸಿಕೊಂಡು, ಹೀಗೆ ಸುಮ್ಮಾನದಿಂದ ಇದ್ದಾಳೆ! ವೇಶ್ಯಾವೃತ್ತಿಗೆ ತನ್ನನ್ನು ಮಾರಿಬಿಡುತ್ತಾರೆಂದು ಕೇಳಿ ಕೂಡ, ಹೀಗೆ ಹಿಗ್ಗುತ್ತಿದ್ದಾಳಲ್ಲ! ದೇವರೇ ಕಾಪಾಡಬೇಕು! ಹೆಂಗಸಿನ ಹೃದಯ ಇಷ್ಟು ಹಗುರವಾದರೆ, ಹೇಗೆ? ಈಗತಾನೆ, ಬಿಟ್ಟು ಬಂದ ತನ್ನ ಪ್ರಿಯನನ್ನು ಜ್ಞಾಪಿಸಿಕೊಂಡು ಅತ್ತದ್ದೆಲ್ಲ ಅರ್ಥವಿಲ್ಲದ ರೋದನವೆ?

ನಾಯಕ ಹೇಳಿದ: "ನೋಡಿ: ಹುಡುಗಿಯನ್ನು ಮಾರಬೇಕೆಂದಿದ್ದೇವೆ, ದಳಕ್ಕೆ ಹೊಸಬರನ್ನು ಸಂಪಾದಿಸಬೇಕೆಂದಿದ್ದೇವೆ. ಈ ಎರಡು ಕೆಲಸಗಳೂ ನೆರವೇರಲೆಂದು ಮಾರ್ಸ್ ದೇವತೆಗೆ ಪ್ರಾರ್ಥನೆ ಮಾಡೋಣ. ಆ ಪ್ರಾರ್ಥನೆಯ ಪ್ರಮಾಣಕ್ಕೆ ತಕ್ಕಂತೆ ಸಂತರ್ಪಣೆ ನಡೆಸೋಣ. ನೀವು ಯಾರಾದರೂ ಹತ್ತು ಜನ ನನ್ನೊಡನೆ ಬನ್ನಿ. ಒಂದಿಷ್ಟು ಕುರಿಗಳನ್ನೂ ಇನ್ನೊಂದಷ್ಟು ಮದ್ಯವನ್ನೂ ತಂದು, ಯುದ್ಧದೇವತೆಗೆ ತೃಪ್ತಿಯಾಗುವಂತೆ ತಿಂದು ಕುಡಿದು ತೇಗೋಣ."

ಅವನೊಡನೆ ಹತ್ತು ಜನ ಹೋದರು. ಬುದ್ದಲಿಗಳಲ್ಲಿ ಮದ್ಯ ತುಂಬಿ ಕೊಂಡು, ಒಂದು ಹಿಂಡು ಕುರಿಮೇಕೆಗಳನ್ನು ಅಟ್ಟಿಕೊಂಡು ಹಿಂದಿರುಗಿದರು. ಅದರಲ್ಲಿ ಒಂದು ಕೊಬ್ಬಿದ ಆಡನ್ನು ಆಯ್ದುಕೊಂಡು, ಮಾರ್ಸ್ ದೇವತೆಗೆ ಬಲಿ ಕೊಟ್ಟರು ಉಳಿದದ್ದನ್ನು ಊಟಕ್ಕೆ ಸಿದ್ಧಮಾಡಿದರು. ಕೆಲವರು ಕಟ್ಟಿಗೆ ತಂದರು, ಕೆಲವರು ಒಲೆ ಉರಿಸಿದರು, ಕೆಲವರು ಅಡಿಗೆ ಮಾಡಿದರು.

"ನಾನು ನಿಮ್ಮ ನಾಯಕನೂ ಹೌದು, ನಾನು ನಿಮ್ಮ ಸೇವಕನೂ ಹೌದು" ಎಂದು ಆ ಹೊಸಬ, ನೆಲವನ್ನು ತಾನೇ ಗುಡಿಸಿದ, ಸಾರಿಸಿದ, ಒರೆಸಿದ. ಪಾತ್ರೆ ಪದಾರ್ಥಗಳನ್ನು ತಾನೇ ತಂದು ಇರಿಸಿದ. ಬಡಿಸುವುದಕ್ಕೂ ತಾನೇ ನಿಂತ. ಕುಡಿಯುತ್ತಿದ್ದವರ ಪಾತ್ರೆ ಬರಿದಾಗುವುದು ತಡ; ಬೇಗ ಬೇಗ ಅದರಲ್ಲಿ ಮದ್ಯವನ್ನು ತುಂಬಿ, ಚೆನ್ನಾಗಿ ಕುಡಿಯುವಂತೆ ಅವರಿಗೆ ಪ್ರೋತ್ಸಾಹಿಸಿದ.

ಈ ನಡುವೆ, ಮಧ್ಯೆ ಮಧ್ಯೆ ಗುಹೆಯ ಆಚೆಕಡೆಯಿಂದ ಏನನ್ನೋ ತೆಗೆದುಕೊಂಡು ಬರುವವನಂತೆ ಹೋಗಿಬರುತ್ತಾ, ಆ ಹುಡುಗಿಗೂ ಒಂದಿಷ್ಟು ಆಹಾರವನ್ನು ಕದ್ದು ತಂದು ಒದಗಿಸಿದ. ಅವಳು ಅದನ್ನು ಕೃತಜ್ಞತೆಯಿಂದ ತೆಗೆದುಕೊಂಡು, ನಿಶ್ಚಿಂತೆಯಾಗಿ ತಿನ್ನತೊಡಗಿದಳು. ಹಾಗೇ ಒಂದೆರಡು ಸಲ ಆ ಹೊಸಬ ಅವಳನ್ನು ಮುತ್ತಿಡಲು ಮುಖ ಮುಂದೆ ತಂದರೆ, ಅವಳು ಅತಿ ಕಾತರದಿಂದ ತಾನೇ ಅವನಿಗೆ ಮುತ್ತು ಕೊಟ್ಟಳು.

ಏನಿದು ವಿಪರೀತ? ಮರೆತಳೇ ಹುಡುಗಿ, ಇಷ್ಟು ಬೇಗ, ತನ್ನ ತೆಲಿಪೊಲೀಮಸ್ಸನ್ನು? ಮರೆತಳೇ ಹುಡುಗಿ, ಇಷ್ಟು ಬೇಗ, ಇದೇ ಹೊಸಬನೇ ತನ್ನನ್ನು ವೇಶ್ಯಾವೃತ್ತಿಗೆ ಮಾರಿಬಿಡಬೇಕೆಂದು ಸಲಹೆ ಮಾಡಿದನೆಂಬುದನ್ನು? ಸ್ವಲ್ಪವಾದರೂ ಮನಸ್ಸು ಅಳುಕುವುದಿಲ್ಲವೇ ಈ ಹುಡುಗಿಗೆ? ಕಳ್ಳರು ಕಂಡಾರೆಂಬ ಭೀತಿ ಬೇಡವೆ? ಛೆ! ಛೆ! ಅವಳ ವರ್ತನ ಕಂಡು ಕತ್ತೆಗೆ ಕೂಡ ಅಸಹ್ಯವಾಯಿತು.

ಆದರೆ ಒಮ್ಮೆ ಆ ಹೊಸಬ ಅವಳ ಹತ್ತಿರ ಬಂದವನು ಮೆಲ್ಲಗೆ ಪಿಸುಗುಟ್ಟಿದ: "ಹೆದರಬೇಡ. ಧೈರ್ಯವಾಗಿರು, ಛಾರಿಟೆ! ಇದುವರೆಗೆ ನಿನ್ನನ್ನು ಸೆರೆಯಲ್ಲಿಟ್ಟಿದ್ದವರು ಇನ್ನು ಸ್ವಲ್ಪ ಹೊತ್ತಿನಲ್ಲಿ ನಿನಗೇ ಸೆರೆಯಾಗುತ್ತಾರೆ!"

ಓಹೋ! ಅದಕ್ಕೇಯೋ ಈ ಸುಮ್ಮಾನ? ಹಾಗಾದರೆ, ಈ ಹೊಸಬ ದರೋಡೆಗಾರನಲ್ಲ? ಇವನೇ ಅಲ್ಲವೆ ಛಾರಿಟೆಯ ಮದುವಣಿಗ, ತೆಲಿಪೊಲೀಮಸ್! ಸರಿ ಸರಿ! ಈಗ ಅರ್ಥವಾಯಿತು ಇವನ ಇಷ್ಟೆಲ್ಲಾ ಸೇವೆ! ಕುಡಿಸಿ ಕುಡಿಸಿ, ಇವರಿಗೆ ಜ್ಞಾನ ತಪ್ಪಿಸಬೇಕೆಂದಿದ್ದಾನೇನೋ? ಅಥವಾ ಮೊದಲೇ ಮತ್ತು ಬರಿಸುವ ಮದ್ಯಕ್ಕೆ ಮತ್ತೇನಾದರೂ ಮಾದಕದ ಔಷಧಿ ಬೆರೆಸಿದ್ದಾನೆಯೋ ಹೇಗೋ!

ಓ, ಸಂದೇಹವೇಕೆ? ಕುಡಿದು ಬಿದ್ದಿರುವವರು ಉಸಿರಾಡುವ ರೀತಿ ನೋಡಿದರೇ ತಿಳಿಯುವುದಿಲ್ಲವೆ!

ತೆಲಿಪೊಲೀಮಸ್ ಅವರಲ್ಲಿ ಒಬ್ಬೊಬ್ಬರಿಗೂ ಹಗ್ಗದಿಂದ ಕೈ ಕಾಲುಗಳನ್ನು ಬಲವಾಗಿ ಬಿಗಿದುಕಟ್ಟಿದ. ಮೂಲೆಯಲ್ಲಿ ಕಟ್ಟಿದ್ದ ಆ ಕತ್ತೆಯನ್ನು ಬಿಚ್ಚಿದ. ಅದರ ಮೇಲೆ ಛಾರಿಟೆಯನ್ನು ಹತ್ತಿಸಿಕೊಂಡು, ಗವಿಯಿಂದ ಹೊರಟು, ಊರಿನ ಕಡೆಗೆ ನಡೆದ.

ಹುಡುಗ ಊರಿನಲ್ಲಿ ಹೇಳಿಯೇ ಬಂದಿದ್ದನೆಂದು ಕಾಣುತ್ತೆ. ಛಾರಿಟೆಯ ತಾಯಿ, ತಂದೆ, ಬಂಧುಬಳಗ, ದಾಸದಾಸಿಯರು ಎಲ್ಲರೂ ಓಡೋಡಿ ಬಂದು, ಅವರನ್ನು ಮೆರೆವಣಿಗೆಯಲ್ಲಿ ಕರೆದುಕೊಂಡು ಹೋದರು. ಊರೇ ಅವರನ್ನು ನೋಡಲು ಬಂದಿತ್ತು. ವಿಚಿತ್ರವಾಗಿತ್ತು ಆ ಮೆರೆವಣಿಗೆ! ಮದುವಣಗಿತ್ತಿ ಕತ್ತೆಯ ಮೇಲೆ! ಮದುವಣಿಗ ಅವಳ ಪಕ್ಕದಲ್ಲಿ ಕಾಲುನಡಿಗೆಯಿಂದ!

ಛಾರಿಟೆ ತನ್ನ ತಾಯಿಯ ಮನೆಯನ್ನು ಮುಟ್ಟಿದ ಮೇಲೆ, ತೆಲಿಪೊಲೀಮಸ್ ಕತ್ತೆಯನ್ನು ಕರೆದುಕೊಂಡು ಮತ್ತೆ ಆ ಕಳ್ಳರ ಗುಹೆಗೆ ಹಿಂದಿರುಗಿದ. ಅವನ ಜೊತೆಯವರು ಅನೇಕರು ತಾವೂ ಅವನ ಜೊತೆಗೆ ಹೋದರು, ತಮ್ಮ ತಮ್ಮ ಕತ್ತೆಕುದುರೆಗಳನ್ನು ಅಟ್ಟಿಕೊಂಡು ಅವರು ಹೋಗುವ ವೇಳೆಗೆ

ಇನ್ನೂ ಆ ಕಳ್ಳರು ಹಾಗೇ ಎಚ್ಚರವಿಲ್ಲದೆ ಬಿದ್ದಿದ್ದರು. ತಲಿಪೊಲೀಮುಸನ
ಅವನ ಜೊತೆಯವರೂ ಗುಹೆಯನ್ನು ಸೂರೆಮಾಡಿದರು, ಕಳ್ಳರನ್ನು ಒಬ
ಬ್ಬರನ್ನಾಗಿ ಹಾಗೇ ಉರುಳಿಸಿಕೊಂಡು ಹೋಗಿ, ಪಕ್ಕದ ಕಮರಿಯಲ್ಲಿ ತ
ಬಿಟ್ಟರು.

ಕಳ್ಳರ ಕತೆ ಹೀಗೆ ಕೊನೆಗೊಂಡಿತು.

ಥಾರಿಟೆ

"ಆಮೇಲೆ? ಮುಂದೆ?"

"ಮುಂದೆ ಏನು? ಮುಗಿಯಿತಲ್ಲ ಕಳ್ಳರ ಕತೆ?"

"ಅದು ಮುಗಿದರೆ ಏನು? ಇದು?"

"ಯಾವುದು ಇದು?"

"ಅದೇ ಕಣಯ್ಯ–ಆ ಹುಡುಗಿಯ ಕತೆ? ಥಾರಿಟೆ ಎಂದೆಯಲ್ಲಾ ಅವಳ ಕತೆ."

"ಓ! ಅದೇ! ಕೇಳು. ಅದೊಂದು ಕಣ್ಣೀರಿನ ಕತೆ."

"ಯಾಕೆ? ಗುಹೆಯಿಂದ ಹಿಂದಿರುಗಿದ ಮೇಲೆ, ಅವಳಿಗೂ ಅವಳ ತೆಲಿಪೊಲೀಮುಸಿಗೂ ಮದುವೆ ಆಗಲಿಲ್ಲವೇನು?"

"ಆಯಿತು. ಆದರೂ, ಸಂಸಾರ ಊರ್ಜಿತವಾಗಲಿಲ್ಲ. ಅನ್ಯಾಯ ವಾಗಿಹೋಯಿತು!"

೧

ಥಾರಿಟೆ ಇದ್ದ ಊರಿನ ಪಕ್ಕದ ಊರಿನಲ್ಲಿ ಒಬ್ಬ ಸಾಹುಕಾರನ ಮಗ. ಅವನ ಹೆಸರು – ಥ್ರಸಿಲ್ಲಸ್. ಸದಾ ಕುಡಿತ, ಸದಾ ಸೂಳೆಯರು, ಸದಾ ಕಳ್ಳರ ಕಾಕರ ಸಹವಾಸ. ಒಂದು ಹತ್ತಾರು ಕೊಲೆಗಳನ್ನು ಕೂಡ ಮಾಡಿ ಸಿದ್ದನೆಂದು ಜನ ಹೇಳುತ್ತಿದ್ದರು. ಅವನ ವಿಚಾರ ಊರಲ್ಲಿ ಎಲ್ಲರಿಗೂ ಚೆನ್ನಾಗಿ ಗೊತ್ತು.

ಥಾರಿಟೆ ಮದುವೆಯಾಗುವ ವಯಸ್ಸಿಗೆ ಬಂದಾಗ, ಅನೇಕರು ಅವ ಳನ್ನು ಕೈಹಿಡಿಯಲು ಬಯಸಿದರು. ಅವರಲ್ಲಿ ಈ ಥ್ರಸಿಲ್ಲಸನೂ ಒಬ್ಬ.

ಅವನು ದೊಡ್ಡ ವಂಶದಲ್ಲಿ ಹುಟ್ಟಿದವನಾದರೂ, ಧನಾಢ್ಯನ ಮಗನಾದರೂ ಅವನ ದುಷ್ಟನಡತೆಯನ್ನು ತಿಳಿದಿದ್ದುದರಿಂದ ಥಾರಿಟೆಯ ತಾಯಿ ತಂ ಅವನನ್ನು ನಿರಾಕರಿಸಿದರು.

ಆಮೇಲೆ ಅವಳಿಗೂ ತೆಲಿಪೊಲೀಮಸ್ಸಿಗೂ ನಿಶ್ಚಿತಾರ್ಥವಾಯಿತು ನಡುವೆ, ಮದುವೆಯ ದಿವಸ, ಥಾರಿಟೆಯ ಅಪಹಾರವಾಯಿತು. ಅನಂತ ಅವಳನ್ನು ಬಿಡಿಸಿಕೊಂಡು ಬಂದದ್ದಾಯಿತು. ಕೊನೆಗೆ ಥಾರಿಟೆ ತೆಲಿಪೊಲಿ ಮಸ್ಸಿನ ಹೆಂಡತಿಯಾದಳು.

ಥಾರಿಟೆಯ ತಾಯಿ ತಂದೆ ತನ್ನನ್ನು ನಿರಾಕರಿಸಿದುದರಿಂದ ಆದ ಕೋಪ ಒಂದು ಕಡೆ, ಥಾರಿಟೆಯ ಮದುವೆಯಿಂದ ಉದ್ರೇಕಗೊಂಡ ಅವನ ಕಾಮ ಒಂದು ಕಡೆ, ಇದರಿಂದ ಥ್ರಸಿಲ್ಲಸನ ಮನಸ್ಸು ಕೊಲೆಗೆ ತಿರುಗಿತು. ಹೇಗಾ ದರೂಮಾಡಿ ತೆಲಿಪೊಲೀಮಸ್ಸನ್ನು ತೀರಿಸಿಬಿಡಬೇಕೆಂಬುದು ಒಂದು ಹೊರತು ಅವನ ತಲೆಯಲ್ಲಿ ಬೇರೆ ಯಾವ ಆಲೋಚನೆಗೂ ಅವಕಾಶವಿರಲಿಲ್ಲ. ತನ್ನ ಬಯಕೆಯನ್ನು ನಡೆಸಿಬಿಡಲು ತಕ್ಕ ಸಮಯವನ್ನು ಹೊಂಚುತ್ತಿದ್ದ.

ಥಾರಿಟೆಯ ಮನೆಯಲ್ಲಿ ಮದುವೆಯ ಉತ್ಸವಗಳೆಲ್ಲ ಸಾಂಗವಾಗಿ ನೆರವೇರುವವರೆಗೂ ಸುಮ್ಮನಿದ್ದು, ಅದೆಲ್ಲಾ ಮುಗಿದ ಮೇಲೆ ತಾನು ತನ್ನ ಊರಿನವರು ಹಲವರೊಡನೆ ಹೊಸ ವಧೂವರರಿಗೆ ಶುಭವನ್ನು ಕೋರುವುದ ಕ್ಕಾಗಿ ಸಕಲ ಮಂಗಳದ್ರವ್ಯಗಳನ್ನೂ ತೆಗೆಸಿಕೊಂಡು ಬಂದ. ಸಂತೋಷದ ಸಂದರ್ಭದಲ್ಲಿ ಸಹಭಾಗಿಯಾಗಲು ಅವನು ಬಂದನೆಂದೇ ಎಲ್ಲರೂ ನಂಬಿ, ಅವನನ್ನು ವಿಶ್ವಾಸದಿಂದ ಮನೆಗೆ ಬರಮಾಡಿಕೊಂಡರು. ಅವನೂ ಬಹು ವಿಶ್ವಾಸವುಳ್ಳವನಂತೆ ಅವರೊಡನೆ ನಾಲ್ಕು ದಿನ ಇದ್ದು, ಹೋದ.

ಆಮೇಲೆ ಆಗಾಗ್ಗೆ ಊರಿಗೆ ಬಂದಾಗಲೆಲ್ಲಾ ಅವರ ಮನೆಗೆ ಬರುವನು. ಅವರೂ ಒಂದೆರಡು ಸಲ ಅವನನ್ನು ಊಟಕ್ಕೆ ನಿಲ್ಲಿಸಿಕೊಂಡರು. ಹೀಗೆ ಬಂದು ಹೋಗುವುದರಲ್ಲಿ, ಥ್ರಸಿಲ್ಲಸ್ಸಿನ ಕಾತರ ಕುದಿಯತೊಡಗಿತು. ಹೇಗಾ ದರೂ ಥಾರಿಟೆಯನ್ನು ವಶಮಾಡಿಕೊಳ್ಳಬೇಕೆಂದು ಹಾತೊರೆಯತೊಡಗಿದನು. ಸದಾ ಯಾರಾದರೂ ಸಖಿಯರೂ ಸೇವಕಿಯರೂ ಇರುತ್ತಲೇ ಇದ್ದುದರಿಂದ, ಥಾರಿಟೆಯೊಂದಿಗೆ ತನ್ನ ಮನಸ್ಸನ್ನು ಹೇಳಿಕೊಳ್ಳುವಂತಿರಲಿಲ್ಲ. ಗುಟ್ಟಾಗಿ

ಏನಾದರೂ ಏರ್ಪಡಿಸಿಕೊಳ್ಳೋಣವೆಂದರೆ, ಭಾರಿಟಗೆ ಅಂಥ ಮರೆ ಮೋಸ ಒಂದೂ ತಿಳಿಯದು. ಅಲ್ಲದೆ, ತೆಲಿಪೊಲೀಮಸ್ಸಿನಲ್ಲಿ ಸಂಪೂರ್ಣವಾಗಿ ಅರ್ಪಣೆಯಾಗಿದ್ದ ಅವಳ ಪ್ರೇಮಕ್ಕೆ ಈ ಥ್ರಸಿಲ್ಲಸನ ಕುಹಕ ಕಾಣಬರದು. ಹಾಗಾಗಿ, ಥ್ರಸಿಲ್ಲಸ್ ಅವಳ ಮನೆಗೆ ಬಂದು ಹೋಗುತ್ತಿದ್ದುದರಿಂದ ಅವನ ಬೇಗೆ ಇನ್ನಷ್ಟು ಅಧಿಕವಾಯಿತೇ ಹೊರತು ಆರಲಿಲ್ಲ.

ಆದರೂ. ತನ್ನ ಇಷ್ಟಾರ್ಥವನ್ನು ಪಡೆಯುವುದು ಎಷ್ಟೆಷ್ಟು ಕಷ್ಟ ವೆಂದು ಕಂಡುಬಂದರೆ, ಅಷ್ಟಷ್ಟೂ ಅವನ ಹಠ ಇನ್ನಷ್ಟು ಧೃಢವಾಯಿತು. ಮನುಷ್ಯನಿಗೆ ರಾಗಾದಿಗಳು ಹಿಡಿತವಿಲ್ಲದೆ ಹುಚ್ಚುಹರಿದಾಗ, ಅವನು ಏನೇನು ಮಾಡಿಬಿಡಬಲ್ಲ ಎಂಬುದಕ್ಕೆ ಈ ಕತೆ ಇದು ಒಳ್ಳೆಯ ನಿದರ್ಶನ.

೨

ಒಂದು ದಿವಸ ತೆಲಿಪೊಲೀಮಸ್ ಥ್ರಸಿಲ್ಲಸನೊಡನೆ ಬೇಟೆಗೆ ಹೊರಟ. ಬೇಟೆಯಲ್ಲಿ ಯಾವ ದುಷ್ಟಜಂತು ತನ್ನ ಪ್ರಿಯನಿಗೆ ಏನು ಘಾಸಿ ಮಾಡೀತೋ ಎಂದು ಭಾರಿಟಗೆ ಹೆದರಿಕೆ. ಆದರೆ ಅವಳಿಗೆ ಅವರು ಧೈರ್ಯ ಹೇಳಿದರು—ತಾವು ಜಿಂಕೆಯಲ್ಲದೆ ಬೇರೆ ಪ್ರಾಣಿಯ ಗೋಜಿಗೆ ಹೋಗುವುದಿಲ್ಲವೆಂದು.

ಬೇಟೆಗೆ ಅವರಿಬ್ಬರೂ ಪರಿವಾರದೊಡನೆ ಹೋದರು. ಮರಗಳು ದಟ್ಟವಾಗಿ ಬೆಳೆದಿದ್ದ ಒಂದು ಪರ್ವತದ ಪ್ರಾಂತದಲ್ಲಿ ಬಲೆಗಳನ್ನು ಹರಹಿದರು, ಬೇಟೆಗಳನ್ನು ಅಟ್ಟಲು ಜನರನ್ನು ನಿಲ್ಲಿಸಿದರು, ನಾಯಿಗಳನ್ನು ಕರೆದು ಛೂ ಬಿಟ್ಟರು. ಬೇಟೆಯವರ ತಮಟೆಯ ಶಬ್ದವನ್ನೂ ನಾಯಿಗಳು ಬಗುಳುವುದನ್ನೂ ಕೇಳಿ, ಆ ಕಾಡಿನ ಒಳಗಿನಿಂದ ಒಂದು ಪ್ರಾಣಿ ಕಡೆಯಿತು. ಆದರೆ, ಅದು ಜಿಂಕೆಯಾಗಿರಲಿಲ್ಲ; ಅದು ಕಾಡುಹಂದಿ! ಏನು ಭೂತಾಕಾರ? ಏನು ಮುಳ್ಳಿನಂದದ ಕೂದಲು! ಎಂಥ ಕೆಂಗಣ್ಣು! ಏನು ನೊರೆ ಕಟಬಾಯಲ್ಲಿ! ಎಂಥ ಉಗ್ರವಾದ ದಾಡೆ! ಹೇಗೆ ಸಿಡಿಲಿನಂತೆ ಎರಗಿತು! ನಾಯಿಗಳನ್ನೆಲ್ಲ

ಎತ್ತಿ ಬಿಸಾಟು, ಬಲೆಗಳನ್ನು ಕಿತ್ತು ಹರಿದು, ಬೇಟೆಗಾರನನ್ನು ಚೆಲ್ಲಾಪಿ
ಮಾಡಿ ಓಡಿತು!

ಥ್ರುಸಿಲ್ಲಸ್ ಹಿಗ್ಗಿದ: ತನ್ನ ದ್ರೋಹಕ್ಕೆ ತಕ್ಕ ಸಮಯ ಸಿಕ್ಕಿತು
ಎಂದು. "ತೆಲಿಪೊಲೀಮಸ್! ಹಂದಿ ತಪ್ಪಿಸಿಕೊಂಡಿತು ನೋಡು! ಬಾ
ಅದನ್ನು ಬೆನ್ನುಹತ್ತೋಣ! ಏಕೆ, ಹೀಗೆ ನಿಂತೆ? ವೈಮುರೆತೆಯೋ? ಇಲ್ಲವೆ
ಇಂಥ ಬೇಟೆ ಅಭ್ಯಾಸವಿಲ್ಲವೋ? ನೀನು ನಿಂತರೆ ನಿಲ್ಲು: ನಾನು ಒಬ್ಬನೆ
ಹೋಗುತ್ತೇನೆ!" ಎಂದು ಹಂಗಿಸಿ, ಮೂದಲಿಸಿ, ತನ್ನ ಕುದುರೆಯನ್ನು
ದೌಡಾಯಿಸಿಕೊಂಡು ಹೋದ.

ತೆಲಿಪೊಲೀಮಸ್ ನಿಂತಾನೆ? ಹಂದಿ ಓಡುತ್ತಿದ್ದರೆ, ಅವರಿಬ್ಬರೂ
ಅದರ ಬೆನ್ನಲ್ಲೇ ಓಡಿದರು. ಇನ್ನೇನು ಹತ್ತಿರ ಬಂದರು ಎನ್ನುವ ಹೊತ್ತಿಗೆ
ಹಂದಿ ಜೀವದಾಸೆಯನ್ನು ತೊರೆದು, ಸರಕ್ಕನೆ ತಿರುಗಿ, ಗುರುಗುಟ್ಟುತ್ತ ದುರು
ದುರನೆ ನೋಡುತ್ತಾ ನಿಂತಿತು: 'ಇವರಿಬ್ಬರಲ್ಲಿ ಯಾರ ಮೇಲೆ ನುಗ್ಗಲಿ?'
ಎಂದು.

ಅದು ಹಾಗೆ ನಿಂತ ಹೊತ್ತಿನಲ್ಲಿ, ತೆಲಿಪೊಲೀಮಸ್ ತನ್ನ ಭರ್ಜಿ
ಯನ್ನು ಬೀಸಿದ, ಹಂದಿಯ ಬೆನ್ನಲ್ಲಿ ಅದನ್ನು ನಾಟಿದ. ಅದೇ ಹೊತ್ತಿನಲ್ಲಿ
ಆ ಪಾಪಿ ಥ್ರುಸಿಲ್ಲಸ್, ಹಂದಿಯನ್ನು ಮುಗಿಸಿಬಿಡಬಾರದೆ? ಮಾಡಲಿಲ್ಲ.
ತಾನೂ ಭರ್ಜಿಯನ್ನು ಎತ್ತಿ ಬೀಸಿ, ತೆಲಿಪೊಲೀಮಸ್ ಏರಿದ ಕುದುರೆಯನ್ನು
ಹೊಡೆದು ಕೊಂದುಬಿಟ್ಟ. ಕುದುರೆ ರಕ್ತವನ್ನು ಕಾರುತ್ತ ಕುಸಿಯಿತು.
ತೆಲಿಪೊಲೀಮಸ್ ಆಯತಪ್ಪಿ ಕೆಳಗುರುಳಿದ. ಹಂದಿ ಕೂಡಲೆ, ಕಣ್ಣುರೆಪ್ಪೆ
ಹೊಯ್ಯುವುದರೊಳಗೆ ಅವನ ಮೇಲೆ ನುಗ್ಗಿ, ತನ್ನ ದಾಡೆಗಳಿಂದ ಮತ್ತೆ
ಮತ್ತೆ ಅವನನ್ನು ಕುತ್ತಿ, ಅನೇಕ ಕಡೆ ಗಾಯಗೊಳಿಸಿಬಿಟ್ಟಿತು.

ಥ್ರುಸಿಲ್ಲಸ್ ಅಲ್ಲೆ ಇದ್ದವನು, ಸುಲಭವಾಗಿ ಹಂದಿಯನ್ನು ಕೊಂದು
ತೆಲಿಪೊಲೀಮಸ್ಸನ್ನು ಸಂರಕ್ಷಿಸಬಹುದಾಗಿದ್ದರೂ, ಸಹಾಯ ನೀಡೆಂದು
ಅವನು ಬೇಡುತ್ತಿದ್ದರೂ, ಅವನ ರಕ್ಷಣೆಗೆ ಹೋಗದೆ ಇದ್ದುಬಿಟ್ಟನು.
ಅಷ್ಟೇ ಅಲ್ಲ, ಅವನ ಬಲತೊಡೆಯ ಮೇಲೆ ಹಂದಿ ಗಾಯಮಾಡಿದ್ದ ಕಡೆ

ತನ್ನ ಭರ್ಜಿಯಿಂದ ಕ್ರೂರವಾಗಿ ತಿವಿದು, ಅವನನ್ನು ಒಂದೇ ಏಟಿಗೆ ತೀರಿಸಿಬಿಟ್ಟ. ಅನಂತರವೇ ಹಂದಿಯನ್ನು ಅವನು ಕೊಂದದ್ದು.

ಅನಂತರ ಆ ಮಿತ್ರದ್ರೋಹಿ ಬೇಟೆಗಾರರನ್ನೆಲ್ಲಾ ಕೂಗಿ ಕರೆದು, ಸಂಭವಿಸಿದ ಅನಾಹುತವನ್ನು ಅವರಿಗೆ ತೋರಿಸಿದ. ತನ್ನ ದಾರಿಗೆ ಅಡ್ಡಿಯಾಗಿದ್ದವನು ಸತ್ತನಲ್ಲಾ ಎಂದು ಒಳಗೊಳಗೆ ಹಿಗ್ಗುತ್ತಿದ್ದರೂ, ತಾನು ಮಹಾ ದುಃಖವನ್ನು ಅನುಭವಿಸುವವನಂತೆ ತೋರಿಸಿಕೊಂಡು, ಅವರೊಡನೆ ತಾನೂ ಕಣ್ಣು ಹೊಸಗಿದ. ಆದರೇನು ? ಕಲ್ಲನ್ನು ಎಷ್ಟು ಹೊಸಗಿದರೆ ತಾನೆ ಅದರಿಂದ ಕಣ್ಣೀರು ಎಂದಿಗೆ ಬಂದೀತು ?

ತೆಲಿಪೊಲೀಮಸ್ ಕಾಲವಾದ ಸುದ್ದಿ ಗಾಳಿ ಬೀಸಿದ ಬೆಂಕಿಯಂತೆ ಬೇಗ ಹಬ್ಬಿಹೋಗಿ, ಥಾರಿಟೆಯ ಮನೆಗೆ ಮುಟ್ಟಿತು. ಥಾರಿಟೆ ಹುಚ್ಚು ಹಿಡಿದ ಹಾಗೆ ಆದಳು. ಬಿಚ್ಚಿ ಬಿದ್ದ ತಲೆಗೂದಲನ್ನು ಗಮನಿಸದೆ, ತನ್ನ ವಸ್ತ್ರಗಳು ಅಸ್ತವ್ಯಸ್ತವಾದುದನ್ನೂ ಲೆಕ್ಕಿಸದೆ, ಒಂದೇ ಉಸಿರಿಗೆ ತನ್ನ ಗಂಡನ ಹೆಸರನ್ನು ಹಿಡಿದು ಕೂಗುತ್ತ, ಅವನು ಬಿದ್ದಿದ್ದ ಕಡೆಗೆ ಓಡಿದಳು. ಅವಳ ದುಃಖದ ಕತೆಯನ್ನು ಕೇಳಿ, ಊರಿಗೆ ಊರೇ ಕರಗಿತು; ಊರಿಗೆ ಊರೇ ಅವಳ ಹಿಂದೆ ಹೊರಟಿತು.

ಥಾರಿಟೆ ತನ್ನ ಗಂಡನ ದೇಹವನ್ನು ದೂರದಿಂದಲೇ ಕಂಡವಳು, ಸಿಟ್ಟೋಟದಿಂದ ಬಂದವಳು, ಆ ದೇಹದ ಮೇಲೆ ನಿಶ್ಚೇತನಳಾಗಿ ಬಿದ್ದಳು. ಆಕೆಯ ಸ್ನೇಹಿತೆಯರು ಅವಳನ್ನು ಎತ್ತಿಕೊಂಡುಹೋಗಿ, ಉಪಚರಿಸಿ ಎಚ್ಚರಿಸಿದರು.

ಯಾರು ಎಷ್ಟು ಗೋಳಾಡಿದರೆ, ಏನು ? ಸತ್ತವರು ಬೇರೆ ಬದುಕಿಬರುವುದಿಲ್ಲ. ತೆಲಿಪೊಲೀಮಸ್ಸಿನ ಶವವನ್ನು ಸಮಾಧಿಸ್ಥಾನಕ್ಕೆ ಎತ್ತಿಕೊಂಡು ಹೋದರು. ಥ್ರಸಿಲ್ಲಸನೂ ಅಲ್ಲಿಗೆ ಬಂದ. ಗೋಳಾಡಿದ, ಎದೆ ಎದೆ ಚಚ್ಚಿಕೊಂಡ, ಹೇಗೋ ಏನೋ ಕಣ್ಣಿನಲ್ಲಿ ಎರಡು ಹನಿ ನೀರೂ ತಂದುಕೊಂಡ. ಅದು ತೆಲಿಪೊಲೀಮಸ್ಸಿನ ಮರಣದಿಂದಾದ ದುಃಖದ ಕಣ್ಣೀರಿರಲಾರದು; ಬಹುಶಃ, ಅವನು ಸತ್ತು ಸಮಾಧಿಯಾದನಲ್ಲಾ ಎಂಬ ಸಂತೋಷದಿಂದ ಬಂದದ್ದು ಇರಬೇಕು. “ಅಯ್ಯೋ ಗೆಳೆಯ! ಮಿತ್ರಾ!

ಒಡನಾಡಿ! ನನಗೆ ಸ್ವಂತ ಅಣ್ಣನಂತೆ ಇದ್ದೆಯಲ್ಲಾ! ಇನ್ನು ಯಾರನ್ನು ತೆಲಿಪೊಲೀಮಸ್ ಎಂದು ಕರೆಯಲಿ!" ಎಂದು ಮುಂತಾಗಿ ತಲೆ ತ ಚಚ್ಚಿಕೊಂಡ. "ಬೇಡ, ತಂಗಿ! ಹೀಗೆ ಎದೆ ಬಡಿದುಕೊಳ್ಳಬೇಡ ಹೀಗೆ ಮುಖ ಪರಚಿಕೊಳ್ಳಬೇಡ!" ಎಂದು ಭಾರಿಟೆಗೆ ಸಮಾಧಾ ಹೇಳುವ ನೆಪದಲ್ಲಿ ಅವಳ ಕೈಯನ್ನು ಮೈಯನ್ನು ಮುಟ್ಟಿ, ಆ ಪಾಪಿ ಅಂತ ಸಮಯದಲ್ಲೂ ತನ್ನ ಪಿಪಾಸೆಯನ್ನು ತೀರಿಸಿಕೊಳ್ಳಲು ಪ್ರಯತ್ನಪಟ್ಟ.

ತೆಲಿಪೊಲೀಮಸ್ಸಿನ ಉತ್ತರಕ್ರಿಯೆಗಳೆಲ್ಲ ಮುಗಿದ ಮೇಲೆ, ತಾನೂ ಅವನ ದಾರಿಯನ್ನು ಹಿಡಿಯಬೇಕೆಂದು ಭಾರಿಟೆಯು ಮನಸ್ಸುಮಾಡಿದಳು. ಹೇಗಾದರೂ ಸರಿಯೆ, ಸಾವು ಸುಲಭವಾಗಿ ಸಂಪಾದನೆಯಾಗುವಂತಹ ಸುಮಾರ್ಗವನ್ನು ಹಿಡಿಯಬೇಕೆಂದು ನಿರ್ಧರಿಸಿದಳು. ಊಟವನ್ನು ತೊರೆ ದಳು, ಸ್ನಾನವನ್ನು ಬಿಟ್ಟಳು, ಜನರ ಸಹವಾಸವನ್ನು ಒಲ್ಲದೆ, ಕತ್ತಲು ಕೋಣೆಯಲ್ಲಿ ಹಗಲು ಹೊತ್ತು ಕೂಡ ಒಬ್ಬಳೇ ಹೋಗಿ ಅವಿತುಕೊಳ್ಳ ತೊಡಗಿದಳು.

ಥ್ರಸಿಲ್ಲಸ್ಸಿಗೆ ಇದು ರುಚಿಸಲಿಲ್ಲ. ತಾನೇ ಏನೇನೋ ಹೇಳಿ ನೋಡಿದ. ಅವಳ ಸಖಿಯರಿಂದ ಹೇಳಿಸಿ ನೋಡಿದ, ಅವಳ ತಾಯಿ ತಂದೆಯರಿಂದ ನುಡಿಸಿ ನೋಡಿದ. ಮೊದಲು ಮೊದಲು ಭಾರಿಟೆ ಯಾರ ಮಾತಿಗೂ ಕಿವಿ ಕೊಡದೆಹೋದರೂ, ಕಡೆಗೆ, ತನ್ನ ತಾಯಿತಂದೆಗಳ ದುಃಖವನ್ನು ನೋಡ ಲಾರದೆ ಸ್ನಾನದ ಶಾಸ್ತ್ರಮಾಡಿದಳು, ಊಟದ ಶಾಸ್ತ್ರ ಮಾಡಿದಳು. ತನ್ನ ಒಳಗಿನ ಮನಗುದಿಯನ್ನು ತನ್ನೊಳಗೇ ಇರಿಸಿಕೊಂಡು, ಎಂದಿನಂತೆ ಮನೆ ಯಲ್ಲಿ ಓಡಿಯಾಡತೊಡಗಿದಳು.

ಹಗಲೂ ರಾತ್ರಿ ಅವಳಿಗೆ ತೆಲಿಪೊಲೀಮಸ್ಸಿನ ಧ್ಯಾನವೇ ಧ್ಯಾನ. ತಮ್ಮ ಮನೆದೇವರಾದ ಡಯೋನೀಸಸ್ ದೇವತೆಯ ವಿಗ್ರಹವನ್ನು ಮಾಡಿಸಿ ದಳು; ಅದರಲ್ಲಿ ತೆಲಿಪೊಲೀಮಸ್ಸಿನ ರೂಪವನ್ನು ಕೆತ್ತಿಸಿದಳು. ಆ ವಿಗ್ರ ಹಕ್ಕೆ ದೇವರಿಗೆಂಬಂತೆ ಪೂಜೆಮಾಡತೊಡಗಿದಳು. ಆದರೆ, ಇದರಿಂದ ಮನಸ್ಸಿಗೆ ಕೊಂಚವಾದರೂ ನೆಮ್ಮದಿ ಬರುವ ಬದಲು ತೆಲಿಪೊಲೀಮಸ್ಸಿನ ಜ್ಞಾಪಕದಿಂದ ಅವಳ ಹೃದಯ ಉರಿದುಹೋಗುತ್ತಿತ್ತು.

೩

ಥ್ರುಸಿಲ್ಲಸ್ಸಿಗೋ ತಡೆಯಲಾರದ ಆತುರ. ಗಂಡನನ್ನು ಕಳೆದುಕೊಂಡ ದುಃಖ ಉನ್ಮಾದ ಸ್ವಲ್ಪ ಇಳಿಯುವವರೆಗೂ ತಡೆಯಬಾರದೆ? ಅವಳು ಇನ್ನೂ ಕಣ್ಣೀರು ಸುರಿಸುವುದು ನಿಂತಿಲ್ಲ, ಬಟ್ಟೆಗಳನ್ನು ಹರಿದಾಡಿ ಹಣೆ ಚೆಚ್ಚಿಕೊಳ್ಳುವುದು ನಿಂತಿಲ್ಲ, ಆಗಲೇ ಅವಳೊಡನೆ ಮದುವೆಯ ಪ್ರಸ್ತಾಪ ವನ್ನೆತ್ತಿದ. ಎಂಥ ಸಮಯದಲ್ಲಿ ಎಂಥ ಮಾತನಾಡಬಹುದು ಎಂಬುದು ತಿಳಿ ಯದೆ ಅವನು ಆಡಿದ್ದರಿಂದ, ತನ್ನ ಮಿತ್ರನ ಸಾವಿನಿಂದ ಅವನಿಗೆ ಸಂತೋಷ ವಾದಂತೆ ಭಾಸವಾಯಿತು. ಅವನು ಆಡಿದ ಮದುವೆಯ ಮಾತನ್ನು ಕೇಳಿ, ಛಾರಿಟೆಗೆ ಸಿಡಿಲು ಹೊಡೆದಹಾಗಾಯಿತು. ಕುಳಿತಿದ್ದಂತೆಯೇ ಮೂರ್ಛೆ ಹೋದಳು. ಮೂರ್ಛೆ ತಿಳಿದು ಎಚ್ಚರವಾದಾಗ, ನಡೆದದ್ದೆಲ್ಲಾ ನೆನಪಿಗೆ ಬಂದು, ನೋವನ್ನು ತಡೆಯಲಾರದೆ ಅರಚಿಕೊಂಡಳು. ಆದರೂ ಆ ಒಡನೆಯೆ ಅವನಿಗೆ ಯಾವೊಂದು ಉತ್ತರವನ್ನೂ ಹೇಳಲಿಲ್ಲ.

ಆ ರಾತ್ರೆ ಅವಳ ಕನಸಿನಲ್ಲಿ ತೆಲಿಪೊಲೀಮಸನ ಪ್ರೇತ ಕಾಣಿಸಿಕೊಂಡು, ರಕ್ತದಿಂದ ತೊಯ್ದ ತನ್ನ ಮುಖವನ್ನು ತೋರಿಸಿ, ಆ ಪ್ರೇತ ಹೇಳಿತು: "ಓ, ಛಾರಿಟೇ! ಓ ನನ್ನ ಪ್ರಿಯಪತ್ನಿ! ನಾನು ಮರಣ ಹೊಂದಿದರೂ ನನಗೂ ನಿನಗೂ ಪ್ರೀತಿ ತೊರೆದುಹೋಗದು, ಎಂದುಕೊಂಡಿದ್ದೇನೆ. ಒಂದು ವೇಳೆ ನಿನಗೆ ನನ್ನ ನೆನಪು ಮಸಕಾಗುತ್ತ ಬಂದು, ನೀನು ಮತ್ತೆ ಮದುವೆ ಯಾಗುವ ಯೋಚನೆಮಾಡಿದರೆ, ಓ ಛಾರಿಟೆ ನೀನು ಯಾರನ್ನು ಬೇಕಾ ದರೂ ಮದುವೆಯಾಗು; ಆದರೆ ಆ ಮಿತ್ರದ್ರೋಹಿಯಾದ ಆ ಥ್ರುಸಿಲ್ಲಸ್ಸನ್ನು ಮಾತ್ರ ಮದುವೆಯಾಗಬೇಡ. ಅವನ ಗೊಡವೆ ನಿನಗೆ ಬೇಡ, ಅವನ ಜೊತೆ ಅನ್ನಾಹಾರ ನಿನಗೆ ಬೇಡ, ಅವನೊಡನೆ ಮಾತನಾಡುವುದು ಕೂಡ ಬೇಡ. ಅವನ ಕೈ ನನ್ನ ರಕ್ತದಿಂದ ಕಲುಷಿತವಾಗಿದೆ, ಅಂಥವನ ಕೈ ಹಿಡಿಯಬೇಡ. ಈ ನನ್ನ ಮೈಯನ್ನು, ಇಲ್ಲಿನ ಗಾಯಗಳನ್ನು ಗಮನಿಸು. ಛಾರಿಟೆ! ಈ ಎಲ್ಲಾ ಗಾಯಗಳೂ ಆ ಹಂದಿಯ ಕೋರೆಗಳಿಂದ ಆದುವಲ್ಲ. ಇದೋ, ತೊಡೆಯ ಮೇಲಿನ ಈ ಗಾಯ, ನನ್ನ ಸಾವಿಗೆ ಕಾರಣವಾದ ಈ

ಗಾಯ, ಇದು ಆ ಮಿತ್ರದ್ರೋಹಿಯಾದ ಥ್ರಸಿಲ್ಲಸನಿಂದ ಆದದ್ದು" ಎಂದ
ಹೇಳಿ, ಆ ಪ್ರೇತ, ಆ ದಿನ ಬೇಟೆಗೆ ಹೋದಾಗ ನಡೆದದ್ದನ್ನೆ
ವಿವರಿಸಿತು.

ಛಾರಿಟೆ ಆ ದಾರುಣವಾದ ಮಾತುಗಳನ್ನೂ ಕತೆಯನ್ನೂ ಕೇಳಿ ಕಿರಿ
ಕೊಂಡು ಎದ್ದಳು. ಅದರಿಂದ ತನ್ನ ಒಳಗಾದ ತಾಪವನ್ನು ತಾಳಿಕೊಳ್ಳ
ಲಾರದೆ, ಧಾರಾಕಾರವಾಗಿ ಗೋಳಿಡುತ್ತ, ಹಲುಬಿ ಹಂಬಲಿಸಿ, ಮುಖ ಮೈ
ಕೈಗಳನ್ನೆಲ್ಲಾ ರಕ್ತ ಕೋಡಿ ಹರಿಯುವವರೆಗೂ ಪರಚಿಕೊಂಡು ಬೇಗುದಿ
ಪಡುತ್ತಿದ್ದಳು.

ಮಾರನೆಯ ಬೆಳಗಾಯಿತು. ಛಾರಿಟೆ ತಾನು ಕನಸಿನಲ್ಲಿ ಪ್ರೇತ
ವನ್ನು ಕಂಡೆನೆಂದು, ಅದು ತನ್ನ ಕೊಲೆಯ ವಾರ್ತೆಯನ್ನು ತನಗೆ ತಿಳಿಸಿ
ತೆಂದು ಯಾರಿಗೂ ಹೇಳಲಿಲ್ಲ. ಆದರೆ, ಗಂಡನನ್ನು ಬಿಟ್ಟಿರಲಾರದೆ, ತಾನು
ಸಾಯುವ ಮೊದಲು, ತನ್ನ ಗಂಡನನ್ನು ಕೊಂದವನನ್ನು ಕೊಂದೇ ಸಾಯು
ವುದೆಂದು ದೃಢವಾದ ನಿಶ್ಚಯ ಮಾಡಿಕೊಂಡಳು.

ಥ್ರಸಿಲ್ಲಸ್ ಮತ್ತೆ ಮತ್ತೆ ಬಂದ; ಸ್ವಲ್ಪವೂ ನಾಚದೆ, ಹೇಸದೆ,
ಮದುವೆಯ ಮಾತನ್ನು ಮತ್ತೆ ಪ್ರಸ್ತಾಪಿಸಿದ. ಛಾರಿಟೆ, ಅವನು ಹೇಳು
ವುದನ್ನೆಲ್ಲಾ ಹೇಳಿಕೊಳ್ಳುವವರೆಗೂ ಅಡ್ಡಿಮಾಡದೆ ಸುಮ್ಮನಿದ್ದು, ಕಡೆಗೆ
ಒಂದು ದಿನ ಹೇಳಿದಳು: "ಸಾಕು, ಥ್ರಸಿಲ್ಲಸ್. ನನ್ನ ಪತಿಯನ್ನು
ನಾನು ಇನ್ನೂ ಮರೆತಿಲ್ಲ. ಅವನ ಮುಖ ಇನ್ನೂ ನನ್ನ ಕಣ್ಣ ಮುಂದಿದೆ,
ಅವನ ಮೈಯ ಸುಗಂಧ ಈಗಲೂ ನನ್ನ ಮೂಗಿಗೆ ತೀಡುತ್ತಿದೆ, ಅವನನ್ನು
ನೆನೆದಾಗ ನನ್ನ ಹೃದಯ ಹಿಗ್ಗುತ್ತದೆ. ಅವನ ಮರಣದಿಂದ ನನಗಾದ
ಆಘಾತದಿಂದ ನಾನು ಚೇತರಿಸಿಕೊಳ್ಳುವವರೆಗೂ ಸ್ವಲ್ಪ ತಾಳು. ಅಂಥ
ಗಂಡನನ್ನು ಕಳೆದುಕೊಂಡವಳು ಇಷ್ಟು ಬೇಗನೆ ಅವನ ಆಪ್ತಸ್ನೇಹಿತ
ನಾಗಿದ್ದವನನ್ನು ಮದುವೆಯಾದರೆ, ಜನ ಏನೆಂದಾರು? ಸತ್ತವನ ಆತ್ಮಕ್ಕೆ
ಕೂಡ ಅಶಾಂತಿಯುಂಟಾಗಿ, ಅದು ನಮಗೆ ಏನಾದರೂ ಹಾನಿಯನ್ನು
ಉಂಟುಮಾಡೀತು. ಇನ್ನೊಂದು ನಾಲ್ಕು ದಿನ ತಾಳು."

ಆದರೆ, ಮೊದಲೇ ಹೇಳಿದಂತೆ, ಥ್ರಸಿಲ್ಲಸಿಗೆ ಆತುರ. ಮನಸ್ಸನ್ನು ಬಿಗಿಹಿಡಿಯುವುದು ಅವನಿಗೆ ರೂಢಿಯಿಲ್ಲ. ಏನೇನೋ ಅಶ್ಲೀಲವಾದ ಯೋಜನೆಗಳನ್ನೆಲ್ಲಾ ಅವಳಿಗೆ ಸೂಚಿಸಿದ.

ಛಾರಿಟ ಮೊದಲು ಮೊದಲು ಅವನ ಮಾತುಗಳಿಗೆ ಒಲ್ಲೆ ಎನ್ನುತ್ತಿದ್ದ ವಳು ಕಡೆಗೆ ಒಂದು ದಿನ ಮನಸ್ಸಿಲ್ಲದ ಮನಸ್ಸಿನಿಂದ ಒಪ್ಪಿದಂತೆ ಮಾಡಿ ಹೇಳಿದಳು: "ಆಗಲಿ. ನೀನು ಹೇಳಿದಂತೆ ನಡೆಯಲು ನಾನು ಒಪ್ಪಿದರೂ, ಒಂದು ವಿಷಯದಲ್ಲಿ ಮಾತ್ರ ನನ್ನ ಮಾತನ್ನು ನೀನು ನಡಸಿಕೊಡಬೇಕು. ನೋಡು: ಮದುವೆಗೆ ಮೊದಲೇ ನಾವಿಬ್ಬರೂ ಒಂದೇ ಹಾಸಿಗೆಯಲ್ಲಿ ಮಲಗುವುದಾದರೆ, ಅದು ಮನೆಯಲ್ಲಿ ಯಾರಿಗೂ ತಿಳಿಯದ ಹಾಗೆ ಎಚ್ಚರ ದಿಂದ ಆಗಬೇಕು."

ಛಾರಿಟ ಗುಟ್ಟು ಗೊತ್ತಾಗದಂತೆ ನಟಿಸಿದಳು, ಥ್ರಸಿಲ್ಲಸಿಗೆ ಚೆನ್ನಾಗಿ ಮೋಸ ಮಾಡಿದಳು. ಅವನೂ ಕಾಮದಿಂದ ಕಣ್ಣು ಕುರುಡಾಗಿ, ಬಗೆ ಮುಚ್ಚಿಹೋಗಿ, ಅವಳ ಮಾತನ್ನು ನಿಜವೆಂದು ನಂಬಿದನು. ರಾತ್ರೆ ಯಾವಾಗ ಬಂದೀತೋ, ಕತ್ತಲು ಯಾವಾಗ ಆದೀತೋ, ಎಷ್ಟು ಹೊತ್ತಿಗೆ ಅವಳನ್ನು ತೋಳಿನಲ್ಲಿ ಪಡೆದೇನೋ ಎಂದು ಸೂರ್ಯನಿಗೆ ಶಾಪ ಹಾಕುತ್ತಿದ್ದ.

ಛಾರಿಟ ಹೇಳಿದ್ದಳು: "ಮಧ್ಯರಾತ್ರೆಯ ವೇಳೆಗೆ, ನೀನು ಒಬ್ಬನೇ ಒಂಟಿಯಾಗಿ, ನಿನ್ನ ಗುರುತು ಯಾರಿಗೂ ಗೊತ್ತಾಗದಂತೆ ವೇಷ ಮರೆಸಿ ಕೊಂಡು, ನನ್ನ ಶಯ್ಯಾಗೃಹದ ಬಾಗಿಲಿಗೆ ಬಾ. ಬಾಗಿಲನ್ನು ಮುಟ್ಟುವ ವರೆಗೂ ಸದ್ದುಮಾಡದೆ ಬಂದು, ಅಲ್ಲಿಗೆ ಬಂದೊಡನೆ ಮೃದುವಾಗಿ ಒಂದು ಸಲ ಸಿಳ್ಳೆ ಹಾಕು. ಸ್ವಲ್ಪ ಹೊತ್ತಿನಲ್ಲೆ, ನನ್ನನ್ನು ಚಿಕ್ಕಂದಿನಿಂದ ಎತ್ತಿ ಆಡಿಸಿದ ನನ್ನ ದಾದಿ ಬಂದು ಬಾಗಿಲು ತೆಗೆಯುತ್ತಾಳೆ. ಅವಳೇ ನಿನ್ನನ್ನು ನನ್ನ ಬಳಿಗೆ ಕರೆದುಕೊಂಡು ಬರುತ್ತಾಳೆ."

ಥ್ರಸಿಲ್ಲಸಿಗೆ ಆ ದಿವಸ ಹಗಲು ದೀರ್ಘವಾದ ಹಾಗೆ ಯಾವ ದಿವಸವೂ ಕಂಡಿರಲಿಲ್ಲ. ಅಂತೂ, ಕಡೆಗೆ ಸೂರ್ಯ ಮುಳುಗಿದ. ಛಾರಿಟೆಯು ಮಲಗುವ ಮನೆಯ ಹತ್ತಿರ ಬಂದ, ಸಂಕೇತವನ್ನು ಮೆಲ್ಲಗೆ ಕೂಗಿದ

ಛಾರಿಟೆ ಹೇಳಿದ್ದ ಹಾಗೆ, ಆ ಮುದುಕಿ ದಾದಿ, ಅವನನ್ನು ಎದು
ನೋಡುತ್ತಿದ್ದವಳು ಬಾಗಿಲು ತೆರೆದು, ಅವನನ್ನು ನಿಶ್ಶಬ್ದವಾಗಿ ಒಳ
ನಡೆಸಿಕೊಂಡು ಹೋದಳು. ಕತ್ತಲೆಯಲ್ಲೇ ಹೇಳಿದಳು: "ಶ್ಯ! ಸದ
ಮಾಡದೆ ಇರು. ಇನ್ನೇನು ಛಾರಿಟೆ ಬಂದುಬಿಡುತ್ತಾಳೆ. ಅವಳ ತಂ
ಏಕೋ ಹೇಳಿಕಳಿಸಿದ್ದರು. ಅವಳು ಬರುವವರೆಗೂ, ಇದೋ, ಇದನ್ನು ರು
ನೋಡುತ್ತಿರು." ಎಂದು ಒಂದು ಜಾಡಿಯಲ್ಲಿ ಸುವಾಸನೆಯ ಮಧುವನ್ನೂ
ಎರಡು ಕುಡಿಯುವ ಬಟ್ಟಲುಗಳನ್ನೂ ತೆಗೆದಿರಿಸಿದಳು. "ಇದನ್ನು ಹಾಗೆ
ಕುಡಿಯುತ್ತಿದ್ದರೆ, ಛಾರಿಟೆ ಬರುವ ವೇಳೆಗೆ ನೀನು ಸಿದ್ಧನಾಗಿರಬಹುದು."
ಎಂದು ಒಂದು ಬಟ್ಟಲು ತುಂಬ ಆ ಮಧುವನ್ನು ತುಂಬಿಕೊಟ್ಟಳು.

ಆದರೆ, ಆ ಮಧುವಿಗೆ ಮತ್ತು ಬರುವ ಮದ್ದನ್ನು ಬೆರೆಸಿರಬಹುದೆಂಬ
ಶಂಕೆ ಕೂಡ ಅವನಿಗಿರಲಿಲ್ಲ. ಒಂದು ಮಾತ್ರವಲ್ಲ, ಒಂದಾದ ಮೇಲೆ
ಒಂದರಂತೆ, ನಾಲ್ಕಾರು ಬಟ್ಟಲನ್ನು ತುಂಬಿ ಕುಡಿದ. ಅದರ ಪರಿಣಾಮ
ವಾಗಿ ಗಾಢವಾದ ನಿದ್ರೆ ಹತ್ತಿತು.

ಅವನು ಹೀಗೆ ಮೈಮೇಲೆ ಎಚ್ಚರ ತಪ್ಪಿ, ಬೆನ್ನಡಿಯಾಗಿ ಬಿದ್ದನೋ
ಇಲ್ಲವೋ, ಆ ದಾದಿ ಓಡಿಹೋಗಿ ಛಾರಿಟೆಗೆ ವರದಿ ಮಾಡಿದಳು. ಛಾರಿಟೆ
ಕೂಡಲೆ ಬಂದಳು. ಅವಳು ಹಜ್ಜೆ ಇಡುವುದರಲ್ಲಿಯೇ ಏನೋ ದೃಢತೆ
ಕಂಡುಬರುತ್ತಿತ್ತು. ಅವನ ಹತ್ತಿರ ಬಂದು ನಿಂತಾಗ, ಮೇರೆ ಮೀರಿದ
ಕ್ರೋಧದಿಂದ ಅವಳ ಸರ್ವಾಂಗವೂ ಕಂಪಿಸಿತು.

ಹೇಳಿದಳು: "ನೋಡು, ದಾದಿ: ಇವನೇ ನನ್ನ ಪತಿಯ ಪರಮಾಪ್ತ
ಮಿತ್ರ, ಅವನ ಪ್ರಾಣಸ್ನೇಹಿತ. ಇವನೇ ನನ್ನನ್ನು ಮದುವೆಯಾಗುವೆ
ನೆಂದುಕೊಂಡಿರುವ ಮಹಾವ್ಯಾಧ. ಇವನ ಕೈನೋಡು: ಇದೇ ನನ್ನ
ಪ್ರಿಯನ ರಕ್ತವನ್ನು ಹರಿಸಿದ್ದು. ಇವನ ಈ ಹೃದಯದಲ್ಲೇ ನನ್ನ ಸರ್ವ
ನಾಶದ ಮಂತ್ರಗಳೆಲ್ಲ ಮೊಟ್ಟೆಯಿಟ್ಟು ಮರಿಯಾದದ್ದು. ಇವನ ಈ ಕಣ್ಣು
ಗಳಿಗೆ ಆಕರ್ಷಕವಾಗಿ ಕಂಡದ್ದು ನನ್ನ ದೌರ್ಭಾಗ್ಯ. ಕತ್ತಲಾಗುವುದನ್ನು
ಇವನು ಎಷ್ಟು ಕಾತರದಿಂದ ಕಾಯುತ್ತಿದ್ದ! ಇವನಿಗೆ ಸಂತೋಷವಾಗುವ
ಕತ್ತಲನ್ನು ಕೊಡುವುದು ನನಗೂ ಇಷ್ಟ. ಮಲಗು, ಮಲಗು, ನಿರ್ಭೀತಿ

ಯಿಂದ ಮಲಗು. ನಾನೇನು ಕತ್ತಿ ಹಿಡಿದು ಬಂದಿಲ್ಲ, ಶೂಲ ಹಿಡಿದು ಬಂದಿಲ್ಲ; ನನ್ನ ಪತಿಗೆ ನೀನು ತಂದಂತಹ ಸಾವನ್ನು ನಿನಗೆ ಕೊಟ್ಟು ಗೌರವಿಸುವೆನೆಂದುಕೊಂಡಿರುವೆಯೇನು? ಖಂಡಿತವಾಗಿ ಇಲ್ಲ. ನಿನ್ನ ಈ ತಲೆಯಲ್ಲಿ ನಿನ್ನ ಈ ಕಣ್ಣುಗಳು ಮಾತ್ರ ಸಾಯಬೇಕು; ನನ್ನನ್ನು ನೀನು ಕಾಣಬೇಕಾದರೆ, ಅದು ನಿನ್ನ ಕನಸಿನಲ್ಲಿ ಮಾತ್ರ ಆಗಬೇಕು. ಬದುಕಿರುವಾಗ ತೆಲಿಪೊಲೀಮಸನ್ನು ಕುರಿತು ಅಸೂಯೆಪಡುತ್ತಿದ್ದೆಯಲ್ಲವೆ? ಈಗ ಅವನಿಗೆ, ಅಂಥ ಸಾವು ಬಂದಿತೆಂದು ಅಸೂಯೆಪಡುವಂತೆ ಮಾಡುತ್ತೇನೆ. ಸೂರ್ಯನಿಗೆ ಶಾಪವಿಡುತ್ತಿದ್ದೆಯಲ್ಲವೇ? ಇನ್ನುಮುಂದೆ ಎಂದಿಗೂ ಸೂರ್ಯ ನಿನಗೆ ತೊಂದರೆಪಡಿಸದಂತೆ ಮಾಡುತ್ತೇನೆ. ನೀನು ನನ್ನ ಕೈಹಿಡಿಯಬೇಕೆಂದಿದ್ದೆಯಲ್ಲವೆ? ಇನ್ನು ಮೇಲೆ ನೀನು ಬದುಕಿರುವವರೆಗೂ ಎಲ್ಲಿ ಹೋಗಬೇಕಾದರೂ, ಯಾರಾದರೂ ಒಬ್ಬರ ಕೈಹಿಡಿದೇ ಹೋಗುವಂತೆ ಮಾಡುತ್ತೇನೆ. ನೀನು ನನ್ನನ್ನು ಇನ್ನು ಮುಟ್ಟುವಂತೆಯೂ ಇಲ್ಲ, ಮದುವೆ ಯಾಗುವಂತೆಯೂ ಇಲ್ಲ. ನಿನಗೆ ಸಾವಿನ ಸಂತೋಷವೂ ದೊರಕಬಾರದು, ಬದುಕಿನ ಸುಖವೂ ನಿಲುಕಬಾರದು, ನೀನು ಅಂತರಪಿಶಾಚಿಯಂತೆ ದಿಕ್ಕುಗೆಟ್ಟು ಅಲೆಯಬೇಕು. ನಿನ್ನನ್ನು ಕುರುಡಾಗಿ ಮಾಡಿದ ಕೈ ಯಾರ ದೆಂದು ನೀನು ಹುಡುಕಬೇಕು, ಅದು ಯಾರದೆಂದು ನಿನಗೆ ಗೊತ್ತಾಗ ಬಾರದು! ನಿನ್ನ ಕಣ್ಣುಗಳಿಂದ ರಕ್ತದ ತರ್ಪಣವನ್ನು ನೀಡಿದಾಗಲೇ ನನ್ನ ಪತಿಯ ಪ್ರೇತಕ್ಕೆ ತೃಪ್ತಿ. ಆಗ ಮಾತ್ರ ಪ್ರತೀಕಾರದ ಪರಿಸಮಾಪ್ತಿ."

ಸ್ವಲ್ಪಹೊತ್ತು ಬಿಟ್ಟು ಮತ್ತೆ ಹೇಳಿದಳು: "ಮತ್ತೆ ಈ ಸಾವಧಾನ ವೇಕೆ? ಆಗುವ ಹಿಂಸೆ ಆದಷ್ಟು ಬೇಗ ಆರಂಭವಾಗಲಿ. ಏನು ಕನಸು ಕಾಣುತ್ತಿದ್ದೀಯೆ, ಥ್ರಸಿಲ್ಲಸ್? ನನ್ನ ಹಾಸಿಗೆಗೆ ಬಂದಂತೆ ಭಾವಿಸಿ ಕೊಳ್ಳುತ್ತಿರುವೆಯೊ? ಬರುವುದು ಒಳಿತಲ್ಲ; ನಾನು ವಿಷಕನ್ಯಕೆ. ಏಳೇಳು, ಒಂದು ಕತ್ತಲೆಯ ಲೋಕದಿಂದ ಇನ್ನೊಂದು ಲೋಕಕ್ಕೆ ಹೋಗುವ ಹೊತ್ತಾಯಿತು!"

ಎಂದು ಹೇಳುತ್ತಾ ಹೇಳುತ್ತಾ ಅವಳ ಉದ್ವೇಗ ಹೆಚ್ಚಿತು. ತನ್ನ ತಲೆಗೂದಲಿಗೆ ಸಿಕ್ಕಿಸಿದ್ದ ಲೋಹದ ಸೂಜಿಯನ್ನು ಸೆಳೆದುಕೊಂಡು, ಮತ್ತೆ

ಮತ್ತೆ, ಮತ್ತೆ ಮತ್ತೆ, ಥ್ರಸಿಲ್ಲಸನ ಎರಡು ಕಣ್ಣುಗಳನ್ನೂ ಕುಕ್ಕಿದಳು ಮಧ್ಯದಲ್ಲಿ ಬೆರೆಸಿದ್ದ ಮದ್ದಿನ ಅಮಲು ಇಳಿದು, ನೋವಿನಿಂದ ಎದ್ದು ಅವನ ನಿಧಾನವಾಗಿ ನರಳಲಿ ಎಂದುಕೊಂಡು, ಛಾರಿಟೆ, ತೆಲಿಪೊಲೀಮುಸ್ಸಿನ ದಾಗಿದ್ದ ಖಡ್ಗವೊಂದನ್ನು ಕೈಗೆತ್ತಿಕೊಂಡು, ಮನೆಯಿಂದ ಹೊರಟು ರಾಜಮಾರ್ಗದ ಮೂಲಕವಾಗಿ, ಸಮಾಧಿಸ್ಥಾನದ ಕಡೆಗೆ ಓಡಿದಳು.

ಅವಳ ನಿರ್ಗಮನವನ್ನು ಕಂಡ ಆ ಮನೆಯ ದಾಸದಾಸಿಯರೂ ಅವಳ ಹಿಂದೆ ಓಡಿದರು. "ನಿಲ್ಲು! ನಿಲ್ಲು!" ಎಂದು ಕೂಗಿದರು. "ಏನಾದರೂ ಘಾತ ಮಾಡಿಕೊಂಡಾಳು! ತಡೆಯಿರಿ!" ಎಂದರು. "ಅಯ್ಯೋ! ಆಕೆಗೆ ಬುದ್ಧಿ ನೆಟ್ಟಗಿಲ್ಲ, ಆ ಕತ್ತಿಯನ್ನು ಕಿತ್ತುಕೊಳ್ಳಿರಿ!" ಎಂದರು.

ಆದರೆ ಅವಳ ಹತ್ತಿರ ಸುಳಿಯುವ ಧೈರ್ಯ ಯಾರಿಗೂ ಬರಲಿಲ್ಲ. ಬೆತ್ತಲೆ ಕತ್ತಿಯನ್ನು ಹಿಡಿದು ಆಕೆ ಪತಿಯ ಸಮಾಧಿಯ ಹತ್ತಿರ ಭೈರವಿಯಾಗಿ ನಿಂತಳು.

ದಾಸದಾಸಿಯರು ಏನು ಮಾಡಲೂ ತೋಚದೆ, ಕಣ್ಣೀರು ಕರೆಯುತ್ತ ನಿಂತರು.

ಛಾರಿಟೆ ಅವರನ್ನು ಛೀಗುಟ್ಟಿದಳು.

"ಇದು ಕಣ್ಣೀರು ಇಡುವ ಕಾಲವಲ್ಲ. ಮಹತ್ಕಾರ್ಯವನ್ನು ನಾನು ಸಾಧಿಸಿರುವಾಗ ಇದು ವಿಜೃಂಭಿಸಬೇಕಾದ ಕಾಲ. ಈಗ ತಾನೆ ನನ್ನ ಪತಿಯ ಕೊಲೆಗಾರನನ್ನು, ನಾನು ಸಂಹರಿಸಿದ್ದೇನೆ. ನನ್ನ ಮದುವೆಯನ್ನು ಮುರಿದುಹಾಕಿದವನಿಗೆ ತಕ್ಕ ಶಿಕ್ಷೆಯನ್ನು ವಿಧಿಸಿದ್ದೇನೆ. ಇನ್ನು ಉಳಿದಿರುವುದು ಒಂದೇ: ತೆಲಿಪೊಲೀಮುಸ್ಸಿನ ಈ ಖಡ್ಗದ ಸಹಾಯದಿಂದ ನನ್ನ ತೆಲಿಪೊಲೀಮುಸ್ಸಿನ ಸನ್ನಿಧಿಯನ್ನು ನಾನು ಸೇರುವುದು, ಅಷ್ಟೇ."

ಅನಂತರ ಛಾರಿಟೆ, ತನ್ನ ಗಂಡನ ಪ್ರೇತ ತನಗೆ ಕನಸಿನಲ್ಲಿ ಕಾಣಿಸಿಕೊಂಡದ್ದನ್ನು ಹೇಳಿದಳು, ತಾನು ಥ್ರಸಿಲ್ಲಸಿಗೆ ಮರುಳು ಮಾಡಿದ್ದನ್ನು ಹೇಳಿದಳು. ಆ ಬಳಿಕ ಕತ್ತಿಯನ್ನು ಮೇಲೆತ್ತಿ ತನ್ನ ಬಲದ ಎದೆಯ ಅಡಿಗೆ ಹಿಡಿಯವರೆಗೂ ತಿವಿದುಕೊಂಡಳು. ಕೂಡಲೆ ರಕ್ತ ಕಾರಿದಳು,

ಅಸ್ಪಷ್ಟವಾಗಿ ನಾಲ್ಕಾರು ಮಾತನಾಡಿದಳು, ತಾನು ಎಷ್ಟು ಗಂಭೀರವಾಗಿ ಬದುಕಿದಳೋ ಅಷ್ಟೇ ಗಂಭೀರವಾಗಿ ಪ್ರಾಣಬಿಟ್ಟಳು.

ಅವಳ ಬಂಧುವರ್ಗದವರು ಅವಳ ಶವವನ್ನು ಎತ್ತಿಕೊಂಡುಹೋಗಿ ಪರಿಮಳಜಲದಿಂದ ಸ್ನಾನ ಮಾಡಿಸಿ, ಪರಮ ಪ್ರೀತಿಯಿಂದ ಅವಳನ್ನು ಅವಳ ಪ್ರಿಯನಾದ ತೆಲಿಪೊಲೀಮಸ್ಸಿನ ದೇಹದ ಪಕ್ಕದಲ್ಲಿ ಇರಿಸಿದರು. ಬದುಕಿನಲ್ಲಿ ಒಂದಾಗಿ ಸ್ವಲ್ಪಕಾಲ ಇದ್ದವರು ಈಗ ಸತ್ತಮೇಲೆ ಸದಾ ಕಾಲಕ್ಕೂ ಒಂದಾದರು.

ಇತ್ತ, ಥ್ರಸಿಲ್ಲಸ್ ಎಚ್ಚತ್ತಮೇಲೆ, ಥಾರಿಟೆಯ ಸಾವಿನ ಸುದ್ದಿ ಅವನಿಗೆ ತಿಳಿಯಿತು. ತಾನು ಮಾಡಿದ ಕೃತ್ಯದ ಘೋರತೆ ಅವನಿಗೆ ಮನವರಿಕೆಯಾಯಿತು. ಇದರ ಪರಿಹಾರಕ್ಕೆ ಏನು ಪ್ರಾಯಶ್ಚಿತ್ತ ಮಾಡಿಕೊಂಡರೂ ಸಾಲದು, ಎನ್ನಿಸಿತು. ಒಮ್ಮೆಗೇ ಜೀವ ತೆಗೆದುಕೊಂಡು ಸಾಯುವುದು ಸುಲಭವಾದ ಶಿಕ್ಷೆ ಎನ್ನಿಸಿತು. ತನ್ನನ್ನು ಥಾರಿಟೆಯ, ತೆಲಿಪೊಲೀಮಸ್ಸಿನ ಸಮಾಧಿಯ ಬಳಿಗೆ ಒಯ್ಯುವಂತೆ ಬೇಡಿಕೊಂಡ. ಅಲ್ಲಿಗೆ ಒಯ್ದಮೇಲೆ, "ಇದೋ, ನಾನು, ಪರಮಪಾಪಿ, ಬಂದಿದ್ದೇನೆ. ಇಂಥ ಉಗ್ರವಾದ ಕರ್ಮ ಮಾಡಿದವನಿಗೆ ಎಂಥ ಉಗ್ರವಾದ ಶಿಕ್ಷೆಯಾಗಬೇಕೋ ಆಗಲಿ. ಇದು ಆದಲ್ಲದೆ, ನನ್ನ ಜೀವಕ್ಕೆ ಸಮಾಧಾನವಿಲ್ಲ." ಎಂದು ಹಗಲೂ ರಾತ್ರೆ ಒಂದೇ ಸಮನೆ ಮೊರೆಯಿಟ್ಟುಕೊಂಡ.

ಹೀಗೇ ಕೆಲವು ದಿವಸ ಅನ್ನ ಬಿಟ್ಟು, ನಿದ್ರೆ ಬಿಟ್ಟು, ನೀರು ಬಿಟ್ಟು, ನರಳಿ ನರಳಿ, ನೊಂದು ನೊಂದು, ಜೀವವನ್ನು ಒಪ್ಪಿಸಿದ.

ಚಂಡಶಾಸನ

"ತುಂಬ ಕ್ರೂರವಾಗಿದೆಯಯ್ಯ, ಕತೆ. ದುರ್ಬುದ್ಧಿಯಾದ ಒಬ್ಬ ದುರ್ಮೋಹಿಯಿಂದ ಇನ್ನೂ ಅರಳದ ಮೊಗ್ಗಿನಂತಿದ್ದ ಎರಡು ಜೀವ ಬಾಡಿ ಹೋಯಿತಲ್ಲ! ಅನ್ಯಾಯ! ಅನ್ಯಾಯ! ಇಂತಹದೇ ಒಂದು ಕತೆ, ಇಷ್ಟೇ ದಾರುಣವಾದದ್ದು, ನಮ್ಮಲ್ಲೂ ಒಂದು ಇದೆ. ಕೇಳಿದ್ದೀಯ ?

" ಯಾವುದು ? ಯಾರದು ?"

" ಜನ್ನನ ಅನಂಥನಾಥಪುರಾಣದಲ್ಲಿ ಒಬ್ಬ ಚಂಡಶಾಸನ ಅಂತ ಬರತಾನೆ. ಸ್ವಲ್ಪಮಟ್ಟಿಗೆ ನೀನು ಹೇಳಿದ ಕತೆಯ ಥ್ರಸಿಲ್ಲಸ್ ಇದ್ದಹಾಗೆ. ಥ್ರಸಿಲ್ಲಸ್ ತಾನು ಒಂದು ಒಲ್ಲದ ಹೆಣ್ಣನ್ನು ಕೆಡಿಸಬೇಕೆಂದು ಅವರ ಮನೆಗೆ ಮಿತ್ರನಾಗಿ ಬಂದು ಸೇರಿಕೊಂಡು, ಆ ಹೆಣ್ಣಿನ ಗಂಡನನ್ನು ಕೈಯಾರೆ ಕೊಂದು, ಅನಂತರ ಆ ಹೆಣ್ಣಿನ ಕೈಲಿ ತಾನು ಕಣ್ಣು ಕಳೆದುಕೊಂಡು, ಆದರೂ ಆ ಹೆಣ್ಣನ್ನು ಪಡೆಯಲಾರದೆ ಪಶ್ಚಾತ್ತಾಪದಿಂದ ನರಳಿ ಸತ್ತ. ಆದರೆ ಈ ಕತೆಯಲ್ಲಿ ಆದರೋ ಚಂಡಶಾಸನ ತನ್ನ ಸ್ನೇಹಿತನ ಮನೆಗೆ ಬಂದು, ಅಲ್ಲಿ ಅವನ ಹೆಂಡತಿಯನ್ನು ಕಂಡು, ಕಾಮಕ್ಕೆ ತುತ್ತಾದ ಮನಸ್ಸನ್ನು ಹಿಡಿಯಲಾರದೆ, ತಾನೂ ಕೆಟ್ಟು, ಸ್ನೇಹಿತನ ಮನೆಯನ್ನೂ ಕೆಡಿಸುತ್ತಾನೆ. ಈ ಕತೆಯೂ ಆ ಕತೆಯೂ ಎರಡು ದಿಕ್ಕಿಗೆ ಹರಿದ ಎರಡು ಕೊಂಬೆ ಆದರೂ, ಅವು ಒಂದೇ ಬೇರು ಬುಡದಿಂದ ಬಂದುವು. ಕತೆ ಹೇಳಿದರೆ, ಕೇಳುತ್ತೀಯೇನು ?"

" ಕೇಳದಿದ್ದರೆ, ನೀನು ಬಿಡಬೇಕಲ್ಲ. ಅದೂ ಅಲ್ಲದೆ, ನಾನು ಇದುವರೆಗೆ ಹೇಳಿದ್ದನ್ನು ನೀನು ಕೇಳಿರುವಾಗ, ನೀನು ಹೇಳುವುದನ್ನು ನಾನು ಕೇಳಬೇಕಾದ್ದು ನ್ಯಾಯ."

“ನ್ಯಾಯ ಅಷ್ಟೇ ಅಲ್ಲ. ಆ ದೇಶದ ಈ ದೇಶದ ಕತೆ ಕಾವ್ಯಗಳನ್ನು ಮೆಚ್ಚಿ ತಂದು, ನಮ್ಮೆದುರಿಗೆ ಮೆರೆಸುತ್ತಿರುವ ನೀನೂ ಒಮ್ಮೊಮ್ಮೆಯಾದರೂ ನಮ್ಮ ದೇಶದ ಕತೆ ಕಾವ್ಯಗಳನ್ನು ತರಿಸಿಕೊಂಡು ಮೆಚ್ಚಿ ಮರೆಯದೆ ಇರುವುದು, ನೀನು ಈ ದೇಶದಲ್ಲಿ ಹುಟ್ಟಿದ್ದಕ್ಕೆ ನಡೆಸಬೇಕಾದ ಧರ್ಮ, ತೀರಿಸಬೇಕಾದ ಋಣ.”

“ಆಯಿತಪ್ಪಾ, ಆಯಿತು. ಅದಕ್ಕೆ ಇಷ್ಟು ಆವೇಶ ಯಾಕೆ? ಹೇಳು; ಕೇಳೋಣ.”

೧

ಸುರಮ್ಯ ಎಂಬುದು ಒಂದು ದೇಶ. ಅಲ್ಲಿಗೆ ಮುಖದ ಹಾಗಿದ್ದ ಪೌದನ ವೆಂಬ ಪುರಕ್ಕೆ ಅಧಿಪತಿ ವಸುಷೇಣನೆಂಬ ವೀರವರನು. ಆತನ ಪಟ್ಟದ ರಾಣಿ ಸುನಂದೆ ಎಂಬವಳು; ಊರ್ವಶಿ ರಂಭೆ ಮೇನಕೆ ತಿಲೋತ್ತಮೆ ಇವರುಗಳ ಹಾವ ಭಾವ ವಿಲಾಸಗಳನ್ನು ಉಳ್ಳವಳು. ಆಕೆ ವಸುಷೇಣನ ಇಷ್ಟಪತ್ನಿ. ಆ ದಂಪತಿಗಳು ಸಕಲ ರಾಜ್ಯಾಂಗ ಭೋಗಗಳನ್ನೂ ಅನುಭವಿಸುತ್ತ ಪರಮಸುಖದಿಂದ ಅನ್ಯೋನ್ಯವಾಗಿದ್ದರು.

ಒಂದು ದಿವಸ ವಸುಷೇಣ ಮಹಾರಾಜನು ಆನೆಯ ಮೇಲೆ ಕುಳಿತು, ತನ್ನ ಸೇನೆಯನ್ನು ಪರಿಶೀಲಿಸುತ್ತಿರುವ ಹೊತ್ತಿನಲ್ಲಿ ಸುದರ್ಶನನೆಂಬ ಪೂರ್ವ ಪರಿಚಿತನೊಬ್ಬನು ಬಂದು, ಮಹಾರಾಜನಿಗೆ ಮರ್ಯಾದೆಯ ಉಡುಗೊರೆಯನ್ನು ಒಪ್ಪಿಸಿ, ನಮಸ್ಕಾರ ಮಾಡಿ, ನಿಂತು ವಿಜ್ಞಾಪಿಸಿದನು: “ದೇವ! ತಮಗೆ ಸಹೋದರಪ್ರಾಯನೂ ಚಿಕ್ಕಂದು ಜೊತೆಗೆ ದೂಳಿನಲ್ಲಿ ಆಟವಾಡಿದವನೂ ಆದ ಮಕರಗ್ರಾಹಪುರದ ಅಧಿಪತಿ ಚಂಡಶಾಸನದೇವನು ತಮ್ಮನ್ನು ಅಗಲಿ ಬಹಳ ದಿವಸವಾದುದರಿಂದ ಮತ್ತೆ ನೋಡಲು ನೆನೆದು ಬರುತ್ತಿದ್ದಾನೆ. ಸ್ವಾಮಿಯ ವೇಳೆಯನ್ನು ತಿಳಿಯಲು ನನ್ನನ್ನು ಮೊದಲು ಕಳುಹಿಸಿದ್ದಾನೆ.”

ವಸುಷೇಣನು ಆ ದೂತನ ಮಾತನ್ನು ಕೇಳಿ ಹರ್ಷಪಟ್ಟು, “ಬೇಗ ಈಗಲೇ ಬರಹೇಳು” ಎಂದು ಅವನ ಜೊತೆಗೆ ತನ್ನ ಆಪ್ತನಾದ ನರ್ಮ

ಸಚಿವನನ್ನೂ ಕಳುಹಿಸಿ, ಅರಳಿದ ಕಣ್ಣುಗಳಿಂದ ಆ ಮಿತ್ರನ ಆಗಮನವನ್ನೇ ಎದುರುನೋಡುತ್ತಾ ನಿಂತನು.

ಚಂಡಶಾಸನನು ಸಕಲ ರಾಜವೈಭವಗಳಿಂದ, ತನ್ನ ಪರಿವಾರದ ವೀರರ ನಡುವೆ, ಬಿಳಿಯ ಕೊಡೆಗಳ ನೆರಳಲ್ಲಿ, ಬೀಸುವ ಚಾಮರಗಳ ಮಧ್ಯೆ ಬಂದನು. ಸ್ನೇಹಿತರು ಇಬ್ಬರೂ ತಮ್ಮ ತಮ್ಮ ವಾಹನಗಳಿಂದ ಇಳಿದರು. ಉಂಟಾದ ರೋಮಾಂಚ ತೊಟ್ಟ ಅಂಗಿಗಳನ್ನು ಸೀಳಿಬರುವ ಮಟ್ಟಿಗೆ ಪರಸ್ಪರಾಲಿಂಗನ ಮಾಡಿದರು. ಆ ಸಮಯಕ್ಕೆ ಸಮುಚಿತವಾದ ಮಾತುಕತೆಯಿಂದ ಒಬ್ಬರನ್ನೊಬ್ಬರು ಮರ‍್ಯಾದೆ ಮಾಡಿದ ಮೇಲೆ, ವಸುಷೇಣನು ತನ್ನ ಪಟ್ಟದ ಆನೆಯ ಮೇಲೆ ಚಂಡಶಾಸನನನ್ನು ಏರಿಸಿ, ತಾನು ಬೇರೊಂದು ಭದ್ರಗಜವನ್ನು ತರಿಸಿ ಏರಿಕೊಂಡು, ಮಹಾ ವಿಭವದೊಡನೆ ಸ್ನೇಹಿತನನ್ನು ತನ್ನ ನಗರಕ್ಕೆ ಕರೆದುತಂದನು.

ಅಷ್ಟು ಹೊತ್ತಿಗೆ ಊರಿಗೆಲ್ಲ ಅಷ್ಟಶೋಭೆ ಮಾಡಿದ್ದರು. ಸುಮಂಗಲಿಯರು ಬಂದು ಮಂಗಳಾಚಾರ ನಡೆಸಿದರು. ನೋಡುವುದಕ್ಕೆ ದಾರಿಯುದ್ದಕ್ಕೂ ಪೌರರು ನೆರೆದು ನಿಂತರು. ಮಿತ್ರರಿಬ್ಬರೂ ರಾಜಬೀದಿಗಳಲ್ಲಿ ಮೆರೆವಣಿಗೆ ಬಂದು, ಅರಮನೆಯನ್ನು ಹೊಕ್ಕರು.

ಮಿತ್ರನ ಮನಸ್ಸಿಗೆ ಸಂತೋಷವಾಗಲೆಂದು ವಸುಷೇಣನು ಸರಸವಾದ ಕಾವ್ಯ ವಿನೋದ ಗೋಷ್ಠಿಗಳನ್ನು ಏರ್ಪಡಿಸಿದನು. ನಾಟಕಗಳೂ, ನಾಟಿಕೆಗಳೂ ಯಥೇಚ್ಛವಾಗಿ ನಡೆದುವು. ಗೀತಗಳು, ವಾದ್ಯಗಳು, ನೃತ್ಯಗಳು ಲೆಕ್ಕವೇ ಇಲ್ಲ. ಒಮ್ಮೆ ಮಲ್ಲಯುದ್ಧ, ಒಮ್ಮೆ ಟಗರುಕಾಳಗ, ಒಮ್ಮೆ ಕುದುರೆ ಸವಾರಿ, ಇನ್ನೊಮ್ಮೆ ಚೆಂಡಿನ ಆಟ, ಮತ್ತೊಮ್ಮೆ ಗಜಯುದ್ಧ, ಹೀಗೆ ಎಷ್ಟೆಷ್ಟೋ ರೀತಿಯ ಕೌತುಕಗಳನ್ನು ಏರ್ಪಡಿಸಿ, ವಸುಷೇಣನು ಚಂಡಶಾಸನನ ಮನಸ್ಸನ್ನು ಸಂತೋಷಪಡಿಸಿದನು.

೨

ಹೀಗೆ ಎಡೆಬಿಡದೆ ಒಂದೇ ಸಮನೆ ಸ್ನೇಹಿತರಿಬ್ಬರೂ ಸೌಹಾರ್ದದಿಂದ ಒಂದೇ ಮನೆಯಲ್ಲಿ ವಾಸಮಾಡುತ್ತ, ಒಂದೇ ಪಂಕ್ತಿಯಲ್ಲಿ ಊಟ

ನೂಡುತ್ತ, ಒಂದೇ ಕ್ರೀಡಾವಿನೋದಗಳಲ್ಲಿ ಸಹಭಾಗಿಗಳಾಗಿರುತ್ತ ಇರುವ ಸಮಯದಲ್ಲಿ—

ವಸುಷೇಣನ ಸ್ತ್ರೀಯಾದ ಸುನಂದಾದೇವಿ ತನ್ನ ಉಕ್ಕುವ ಯೌವನಕ್ಕೆ ತಕ್ಕ ಅಲಂಕಾರವನ್ನು ಮಾಡಿಕೊಂಡು, ಕಾಮದೇವನ ಕೈಯ ಕತ್ತಿಯಂತೆ ಕಣ್ಣಿಗೆ ಹೊಳೆದು, ಎದೆಯಲ್ಲಿ ಮಿಂಚಿ, ಸಮ್ಮೋಹನ ಶಕ್ತಿಯಂತೆ ಎದುರಿಗೆ ಬಂದ ಹೊತ್ತಿನಲ್ಲಿ—

ಆ ಚಂಡಶಾಸನನ ಕಣ್ಣು ಆಕೆಯ ಮೇಲೆ ಕವಿದು, ಆಕೆಯನ್ನು ಸುತ್ತಿ ಮುತ್ತಿ ಬಳಸಿ ಆವರಿಸಿ ಒಳಗೆ ಮಾಡಿಕೊಂಡು, ಅವನನ್ನು ಕಾಮನ ಕೈಯ ಸೆರೆಯಾಗಿ ಮಾಡಿಬಿಟ್ಟಿತು. ಹೀಗೆ ಅವನ ಮನಸ್ಸಿಗೆ ಮದನವ್ಯಥೆಯೂ ತನುವಿಗೆ ಅನುತಾಪವೂ ತಾನೇತಾನಾಗಿ ಹಬ್ಬುತ್ತಿರಬೇಕಾದರೆ—

ಒಮ್ಮೆ ಚಂಡಶಾಸನನು ಸ್ನೇಹಿತನ ಜೊತೆಯಲ್ಲಿ ಊಟಕ್ಕೆ ಕುಳಿತಿರುವ ಹೊತ್ತು ವಸುಷೇಣನ ಅರಸಿ ತಾನೇ ಬಡಿಸಲು ವಿಲಾಸದಿಂದ ಬಂದಳು. ಆಕೆಯ ಕಂಕುಳಿನ ಕಾಂತಿ, ಮಣಿಬಂಧದ ಚೆಲುವು, ಕೋಮಲವಾದ ಬೆರಳುಗಳ ಕೊಂಕು ಅವನ ಕಣ್ಣಿಗೆ ಕೌತುಕವನ್ನು ಕಾಣಿಸಿ ಅವನಿಗೆ ಭ್ರಮೆ ಹಿಡಿಸಿದುವು. ಚಂಡಶಾಸನನು ಪರವಶನಾದನು : ಕಣ್ಣು ತುಂಬ ಅವಳನ್ನು ನೋಡಿದನು, ಕಿವಿಯ ತುಂಬ ಅವಳ ಇಂಪಾದ ಮಾತನ್ನು ಕೇಳಿದನು. ಅವಳು ಸುಳಿದಾಗಲೆಲ್ಲ ಸುಳಿದ ಸೌರಭ ಅವನ ಮೂಗಿಗಾಯಿತು, ಅವಳ ಚಿಗುರಿನಂಥ ಕೈಮುಟ್ಟಿದ ರಸಾನ್ನ ಮೊದಲಾದುವು ನಾಲಿಗೆಗಾಯಿತು ; ಆದರೆ ಅವಳನ್ನು ಸೋಕುವ ಆಸೆ ಮಾತ್ರ ಸಾರ್ಥಕವಾಗದೆ, ಅವನ ತಾಪ ಇನ್ನಷ್ಟು ಅಧಿಕವಾಯಿತು.

ಹೀಗೆ ಮನ್ಮಥಸಂತಾಪಕ್ಕೆ ಗುರಿಯಾಗಿ, ಕುದಿದು ಕುದಿದು, ಉಕ್ಕದೆ ಒಳಗೊಳಗೇ ಬೇಯುವ ತನ್ನ ಹೃದಯವನ್ನು ಸಂತೈಸಲಾರದೆ, ಚಂಡಶಾಸನನು ತಾನು ಬೀಡುಬಿಟ್ಟದ್ದ ಅರಮನೆಯ ಹೊರಗಿನ ನಂದನವನದ ಮಾವಿನಮರಗಳ ನೆರಳಲ್ಲಿ ನಿಲ್ಲುವನು ; ತಾವರೆಯೆಲೆಯ ಬೀಸಣಿಗೆಯಿಂದ ಬೀಸಿಕೊಳ್ಳುವನು ; ಎಳೆಯ ಚಿಗುರಿನ ಹಾಸಿಗೆಯಲ್ಲಿ ಹೊರಳುವನು ; ತಂಪಾದ ನೀರಿನ ತುಂತುರುಗಳನ್ನು ಚಿಮುಕಿಸಿಕೊಳ್ಳುವನು ;

ಅರೆದ ಚಂದನವನ್ನು ಪೂಸಿಕೊಳ್ಳುವನು. ಆದರೂ ಏನೇನು ಶಿಶಿರೋಪ
ಚಾರ ಮಾಡಿಕೊಂಡರೂ ಅವನ ತಾಪ ಆರಲಿಲ್ಲ.

ಆಗ ತನ್ನ ಈ ಅವಸ್ಥೆಯನ್ನು ಅರಿತರೂ ಅರಿಯದಂತೆ ಅದರ
ಕಾರಣವನ್ನು ಕೇಳಿದ ತನ್ನ ಆಪ್ತನಾದ ಸುದರ್ಶನನಿಗೆ ಚಂಡಶಾಸನನು
ಹೀಗೆಂದು ಹೇಳಿಕೊಂಡನು :

"ಗೆಳೆಯಾ! ನನ್ನ ಅವಸ್ಥೆಯನ್ನು ಹೇಳಲು ಬಾರದು, ಹೇಳದಿದ್ದರೆ
ತೀರದು. ನಿನಗಲ್ಲದೆ ಬೇರೆ ಯಾರಿಗೆ ಹೇಳಲಿ? ನನಗೆ ಪರಮಮಿತ್ರನಾದ
ಈ ವಸುಷೇಣನ ಸತಿಯ ರೂಪು ನನ್ನನ್ನು ಸೋಲಿಸಿತು. ಮನಸ್ಸಿಗೆ
ಭ್ರಮೆ ಹತ್ತಿದೆ, ಸುತ್ತಿಸಿ ಸುತ್ತಿಸಿ ಬಿಟ್ಟಂತೆ ಕಣ್ಣು ಏನನ್ನೂ ಕಾಣದಾಗಿದೆ.
ಮನ್ಮಥನು ಹತ್ತಿಸಿದ ಬೆಂಕಿ ನನ್ನನ್ನು ಸುಡುತ್ತಿದೆ. ಪ್ರಾಣವನ್ನು
ಉಳಿಸಿಕೊಳ್ಳುವುದು ಹೇಗೋ, ನಾನು ಕಾಣೆ. ಹೇಳು, ಗೆಳೆಯ;
ನಾನು ಬದುಕುವ ದಾರಿ ಹೇಗೆ? ಅವಳನ್ನು ಪಡೆದಲ್ಲದೆ ನನ್ನ ಹೃದಯದ
ಶಲ್ಯ ಹೋಗದು. ನಿಜ, ಅವಳಿಗೆ ಗಂಡನಿದ್ದಾನೆ. ಆದರೆ ನಾನು
ಅವಳನ್ನು ಪಡೆಯುವುದಕ್ಕೆ ಅದು ಅಡ್ಡಿಯಾಗಬಾರದು. ಅವನು ಇದ್ದರೆ
ನನಗೇನು?"

ಹೀಗೆ ತನ್ನ ಹೃದಯದ ಬಾಗಿಲನ್ನು ನೆಟ್ಟನೆ ತೆರೆದಿಕ್ಕಿ, ಯಾವ ತರದ
ಸಂಕೋಚವೂ ಇಲ್ಲದೆ ಬಾಯಿಬಿಟ್ಟು ಹೇಳಿಕೊಂಡ ತನ್ನ ಸ್ವಾಮಿಯ
ಸ್ವೈರಾಲಾಪವನ್ನು ಕೇಳಿ ಸುದರ್ಶನನು ಹೇಳಿದನು:

"ಮೇರೆ ತಪ್ಪಿದ ಮೇಲೆ ಯಾರಿಗೆ ತಾನೆ ಸೈರಣೆ ತಪ್ಪದೆ ಇರುತ್ತದೆ?
ಹರಿಯುವ ಮನಸ್ಸಿಗೆ ಹಗ್ಗವಿಲ್ಲ, ನೋಡುವ ಕಣ್ಣಿಗೆ ನಿಂತ ನೆಲೆಯಿಲ್ಲ.
ಅವಳಿಗೆ ಪತಿಯಿರಬಹುದು, ಅವಳ ಬಂಧುಗಳೂ ಆಪ್ತರೂ ಆಗದೆನ್ನ
ಬಹುದು, ಅವಳೇ ಒಪ್ಪದಿರಬಹುದು, ಇದು ಧರ್ಮವಲ್ಲವೆನ್ನಬಹುದು,
ಅವಳು ಪರಸ್ತ್ರೀಯೆನ್ನಬಹುದು, ಇದು ಯೋಗ್ಯವಲ್ಲ ಎನ್ನಬಹುದು;
ಆದರೂ ಕಾಮುಕರಿಗೆ ಅದೆಲ್ಲಾ ಕಟ್ಟಿಕೊಂಡು ಏನು? ಅದು ಏನೇ
ಆಗಬಹುದಾದರೂ ಆ ಕಾಮಿನಿಯಲ್ಲಿ ನಮ್ಮ ಮನೋರಥಸಿದ್ಧಿಗೆ ಅವಕಾಶ
ಉಂಟು. ಅದಕ್ಕೆ ಕಾರಣವೇನೆಂದರೆ: ಅವಳೇ ನನ್ನನ್ನು ಮೆಲ್ಲಗೆ

ಕೇಳಿದ್ದಾಳೆ: 'ನಿಮ್ಮ ಅರಸರು ಇಲ್ಲಿಗೆ ಏಕೆ ಬಂದಿದ್ದಾರೆ? ಇಲ್ಲಿ ಅವರಿಗೆ ಆಗಬೇಕಾದ್ದು ಏನಾದರೂ ಉಂಟೊ? ಅವರು ಪ್ರಯಾಣ ಮಾಡುವುದು ಯಾವಾಗ?' ಎಂಬುದಾಗಿ ಹೀಗೆಲ್ಲಾ, ತಾನು ತನ್ನ ಹೆತ್ತತಂದೆಯ ಮಿತ್ರನೊಂದಿಗೆ, ಒಡಹುಟ್ಟಿದ ಅಣ್ಣನ ಸ್ನೇಹಿತನೊಂದಿಗೆ ಆಡುವಂತೆ ನನ್ನೊಡನೆ ಮಾತಾಡಿದ್ದಾಳೆ. ಇದೇನು ಮನಸ್ಸಿನಲ್ಲಿ ಆಸೆಯಿಟ್ಟು ಕೇಳಿದ್ದೋ, ಅಥವಾ ಸುಮ್ಮನೆ ಉಪಚಾರಕ್ಕೆ ಹೇಳಿದ್ದೋ, ನೀನೇ ಯೋಚಿಸಿ ನೋಡು.''

''ಉಪಚಾರಕ್ಕೆ ಆಡಿದುದನ್ನು ಒಲವೆಂದು ಹೇಗೆ ಭಾವಿಸಲಾದೀತು, ಮಿತ್ರ? ಆ ವನಿತೆಯಾದರೋ ತನ್ನ ಗಂಡ ಇದ್ದಹಾಗೆಯೇ ನನಗೆ ಆಸೆಪಡುವವಳಲ್ಲ. ಆತನ ಕೋಮಲವಾದ ಶರೀರವನ್ನು ಸವಿದ ಅವಳ ಕಣ್ಣಿಗೆ ನನ್ನ ಈ ವೀರನ ಠೀವಿ ಶೋಭಿಸದು.'' ಎಂದು ಚಂಡಶಾಸನ ನೆಂದರೆ, ಅದಕ್ಕೆ ಸುದರ್ಶನ ಹೇಳಿದ:

''ದೊರೆಯೆ, ನಿನ್ನನ್ನು ಒಲ್ಲೆನೆನ್ನುವವರಾರು? ಈ ದಿವಸ, ದೇವ, ನೀನೂ ಆ ವಸುಷೇಣನೂ ಊಟಮಾಡಿ, ಚಂದನವನ್ನು ಕೈಕೊಳ್ಳುತ್ತ ಒಂದೇ ಹಂಸತೂಲಿಕಾತಲ್ಪದಲ್ಲಿ ಪರಸ್ಪರವಾಗಿ ಸುಖಸಂಭಾಷಣೆ ನಡಸು ತ್ತಿದ್ದಾಗ, ನಿನ್ನ ಸಮೀಪದಲ್ಲಿ ಕುಳಿತ ನನ್ನ ಕಣ್ಣಿಗೆ ಬೇರೇನೂ ಕೆಲಸ ವಿಲ್ಲದೆ ಬಿಡುವಾಗಿತ್ತು. ಆಗ ಆ ಸರೋಜನಯನೆ ವಿನೋದವಿಲಾಸಭಿನಯ ವನ್ನು ನಟಿಸುತ್ತ, ಮನಃಪೂರ್ವಕವಾಗಿ ನಿನ್ನ ಮಾತನ್ನು ಕೇಳಿ, ಮೈಮುಟ್ಟಿ ದರೆ ಏನು ಅಂತಃಸಂತೋಷವಾಗಬಹುದೋ ಅದನ್ನು ಅನುಭವಿಸುತ್ತ, ಗಂಡನನ್ನು ನೋಡುವ ನೆಪದಲ್ಲಿ ನಿನ್ನನ್ನು ನೋಡಿದಳು. ಆದರೆ ಅದನ್ನು ಅಲ್ಲಿ ಬೇರೆ ಯಾರೂ ಕಾಣಲಿಲ್ಲ, ಅಷ್ಟೆ.''

ಹೀಗೆ, ಆಕೆ 'ಹೊಸಬನು ನಡುವೆ ಬಂದು, ತನಗೆ ತನ್ನ ರಮಣನೊಡನೆ ಸುಖಾನುಭವ ಪಡೆವುದಕ್ಕೆ ಅಡ್ಡಿಯಾಯ್ತಲ್ಲಾ!' ಎಂದು ಸಿಡಿಮಿಡಿಗೊಳ್ಳುತ್ತಿದ್ದ ಆ ಭಾವವನ್ನು ಹೀಗೆ ಪಲ್ಲಟಮಾಡಿ ನುಡಿದು, ಆ ಸುದರ್ಶನನು ಚಂಡಶಾಸನನ ಮನವೆಂಬ ಪಿಶಾಚಕ್ಕೆ ತನ್ನ ವಚನ

ರಚನೆಗಳೆಂಬ ಧೂಪವನ್ನು ತೋರಿ, ಅವನ ವಿರಹವಿಕಾರವನ್ನು ಕೆರಳಿ
ಮತ್ತೆಯೂ ಹೇಳಿದನು :

"ನಿನ್ನಲ್ಲಿ ಆಕೆಯನ್ನು ಹೊಂದಿಸುವ ಉಪಾಯ ನನಗಿರಲಿ."

ಹೀಗೆ ಆ ಧೂರ್ತನು ಹೇಳಿಹೋಗಿ, ಅತ್ತ ತಾನು ಆಡುತ್ತಿದ್ದ
ವಿರಹದ ಬೆಂಕಿಯಲ್ಲಿ ಸಿಕ್ಕಿ ಬೆಂದು ಚಂಡಶಾಸನನು ಇತ್ತ ಬಾ
ತ್ತಿದ್ದನು.

೩

ಒಂದು ದಿನ ವಸುಷೇಣನು ಚಂಡಶಾಸನನನ್ನೂ ಕರೆದುಕೊಂ
ಬೇಟೆಗೆ ಹೋದನು. ಕೆಲವೇ ಆನೆ, ಕೆಲವೇ ಕುದುರೆ, ಕೆಲ
ಪದಾತಿ, ಕೆಲವೇ ರಥ, ಕೆಲವರೇ ಅಂತಃಪುರ ಸ್ತ್ರೀಯರು ಜೊತೆ
ಹೊರಟರು. ಪರಿಚಿತರಾದ ರಾಜಪುತ್ರರು ಕೆಲವರು ಪರಿವಾರವಾ
ಜೊತೆಗೆ ಸೇರಿದರು.

ಅಲ್ಲಿ ಬೇಟೆಗಾರರ ಬಾಣಗಳಿಗೆ ಗುರಿಯಾದ ಜಿಂಕೆಯೊಂದರ ಪಾಡನ
ಕಂಡು, ಚಂಡಶಾಸನನು ಒಳಗೇ ಹೀಗೆಂದುಕೊಂಡನು : ಈ ಜಿಂಕೆಗ
ನನಗೂ ಭೇದವೇನಿಲ್ಲ. ಇದು ಆಹಾರದ ಆಸೆಗೆ ಸಿಕ್ಕಿ ಈ ಬೇಟೆಯವ
ಬಾಣಗಳಿಗೆ ಗುರಿಯಾದಂತೆ, ನಾನು ಕೂಡ ಈ ಸುನಂದೆಗಾಗಿ ಮೋ
ಗೊಂಡು, ಶಂಬರಾರಿಯೆಂಬ ಶಬರನ ಪುಷ್ಪಬಾಣಗಳಿಗೆ ಈಡಾಗಿ ನರಳ
ತ್ತಿದ್ದೇನೆ!"

ಹೀಗೆಯೇ ಸ್ವಲ್ಪಹೊತ್ತು ಆ ಬೇಟೆಯ ವಿನೋದ ಆದಮೇಲ
ವಸುಷೇಣನು ತನ್ನ ಪರಿವಾರದವರಲ್ಲಿ ಕೆಲವರನ್ನು ಕರೆದು, "ನನ
ಊಟವನ್ನು ಇಲ್ಲಿಗೇ ಕಳುಹಿಸಿಬಿಡಲಿ. ಜೊತೆಗೆ ಅರಸಿ ತಾನೂ ಬರಲಿ."
ಎಂದು ಅರಮನೆಗೆ ಹೇಳಿಕಳಿಸಿದನು. ಅನಂತರ ಬೇರೆಯ ತೆರದ ಬೇಟೆ
ಸಿದ್ಧರಾಗಿ, ದೊರೆಗಳಿಬ್ಬರೂ ಎರಡು ರಥಗಳನ್ನು ಏರಿ, ಬೇರೆ ಬೇ
ದಿಕ್ಕುಗಳಿಗೆ ಹೋದರು.

ಚಂಡಶಾಸನನಿಗೆ ಮಾತ್ರ ಬೇಟೆ ಬೇಕಿರಲಿಲ್ಲ. ವಸುಷೇಣನ ರಾಣಿ ಬರುವ ದಾರಿಯ ಕಡೆಗೆ ತನ್ನ ರಥವನ್ನು ತಿರುಗಿಸಿ, ಅಲ್ಲೇ ಮರೆಯಾಗಿ ಕಾದುಕೊಂಡಿದ್ದನು. ಕೊಂಚ ಹೊತ್ತಿನಲ್ಲೆ ರಾಣಿ ತನ್ನ ಪಲ್ಲಕ್ಕಿಯಲ್ಲಿ ಬಂದಳು. ಅವಳ ಅಂಗರಕ್ಷಕರ ಪರಿವಾರ ವಿತವಾಗಿತ್ತು. ಕೆಲವರು ಚೇಟಿಯರು ಪಲ್ಲಕ್ಕಿಯ ಮುಂದೆ ಓಡಿಬಂದು ದಾರಿ ಬಿಡಿಸುತ್ತಿದ್ದರು. ಪಲ್ಲಕ್ಕಿಯ ಅಕ್ಕಪಕ್ಕದಲ್ಲಿ ಬರುತ್ತಿದ್ದ ಸಖಿಯರೊಡನೆ ರಾಣಿ ಸುಖಮುಖ ದಿಂದ ಸಂಭಾಷಿಸುತ್ತ ಬರುತ್ತಿದ್ದುದನ್ನು ಚಂಡಶಾಸನನು ಕಂಡನು.

ಕಂಡ ಕೂಡಲೆ ಅವನ ಕಣ್ಣು ಅವಳ ಕಡೆಗೆ ಓಡಿತು. ಕಣ್ಣನ್ನು ಮೀರಿಸಿ ಮನಸ್ಸು ಓಡಿತು. ಮನಸ್ಸಿನ ಜೊತೆಯಲ್ಲೇ ಮೈಯೂ ಹೋಯಿತು. ನೇರವಾಗಿ ನುಗ್ಗಿ, ಪಲ್ಲಕ್ಕಿಯೊಳಗಿದ್ದ ಕೈಯನ್ನು ಹಿಡಿದನು. ಸುನಂದೆಗೆ ಹಾವು ಹಿಡಿದಂತೆ ಆಯಿತು. ಬೆದರಿದಳು, ಕಿರಿಚಿಕೊಂಡಳು, ಕಳವಳಿಸಿದಳು, ಮತಿ ಕೆಟ್ಟಳು, ಮೈಮರೆತಳು. ಆದರೂ ಬೇಗನೆ ಚೇತರಿಸಿ ಕೊಂಡಳು. ಚಂಡಶಾಸನನು ಕಾಮುಕ್ಕೆ ಸೆರೆಯಾಗಿ, ವಿಶ್ವಾಸಘಾತದ ಕಾತರತೆಯಿಂದ ತನ್ನನ್ನು ಹಿಡಿದನೆಂಬುದನ್ನು ಗ್ರಹಿಸಿದಳು.

ಒಡನೆ "ನನ್ನ ಪತಿಯನ್ನು ವಂಚಿಸಿ, ಈ ಚಂಡಶಾಸನನು ನನ್ನನ್ನು ಕದ್ದೊಯ್ಯುತ್ತಿದ್ದಾನೆ. ನಿಮ್ಮ ಒಡೆಯನ ಪತ್ನಿಯನ್ನು ಅಪಹರಿಸಿಕೊಂಡು ಹೋಗುತ್ತಿದ್ದಾನೆ. ವೀರರಾದವರು ಅಡ್ಡಬನ್ನಿ. ಊರಿನ, ನಾಡಿನ ಜನಗಳೇ! ನನ್ನನ್ನು ನನ್ನ ಪತಿಯ ಬಳಿಗೆ ಒಯ್ಯಿರಿ. ಈ ಹೆಣ್ಣಿನ ಹುಯ್ಯಲನ್ನು ಕೇಳಿರಿ! ಹಾ ನೃಪಾ! ಹಾ ವಸುಷೇಣಾ!" ಎಂದು ಒರಲಿದಳು.

ಮತ್ತೆಯೂ "ಪರವಧುವಿಗೆ ಆಶಿಸಿ ಮೇಲೆಬಂದು ಕದ್ದ ಕಾತರನನ್ನು ಯಾರೂ ಕಾಣರಲ್ಲಾ! ಕೋಪದಿಂದ ಇವನನ್ನು ಕತ್ತರಿಸರಲ್ಲಾ! ಇವನನ್ನು ಭೂಮಿ ನುಂಗಬಾರದೇ! ದಿಕ್ಕುಗಳು ನೊಣೆಯಬಾರದೇ! ಬೆಟ್ಟಗಳು ತಿನ್ನ ಬಾರದೇ! ಅಯ್ಯೋ, ಬೆಂದೆ! ಅನಾಥೆಯಾದೆ! ನನಗಿನ್ನು ಯಾರು ದಿಕ್ಕು? ನನ್ನನ್ನು ಕಾಪಾಡುವವರು ಯಾರು? ನನಗೆ ಯಾರು ಶರಣು?" ಎಂದು ಹುಯ್ಯಲಿಡುತ್ತ, ಚರ್ಮ ಕಿತ್ತುಹೋಗುವಂತೆ ಬಸಿರನ್ನು ಮೋದಿಕೊಂಡಳು.

ಪುನಃ "ನಿನಗೆ ನನ್ನ ಪತಿಯ ಮೇಲೆ ಕೋಪವಿದ್ದರೆ, ಆತನನ್ನು ಮುಟ್ಟಿ ಮೂದಲಿಸಿ, ಕತ್ತಿ ಕಿತ್ತು ಎದುರಾಗು. ಆತನ ಕತ್ತಿ ನಿನ್ನ ಮೇಲೆ ನಿನ್ನ ಕತ್ತಿ ಆತನ ಮೇಲೆ ಪ್ರಯೋಗವಾಗಲಿ. ಅದು ಬಿಟ್ಟು, ಗಂಡನಿಲ್ಲ ದಿರುವ ಹೊತ್ತಿನಲ್ಲಿ, ಆತನ ಬೆನ್ನ ಹಿಂದೆ, ಆತನ ಹೆಣ್ಣನ್ನು ಕದಿಯುವುದು ಇದು ಕ್ರಮವೇ? ಅಯ್ಯೋ! ಹಾಳುಮನೆಗೆ ನಾಯಿ ನುಗ್ಗಿ, ತುಪ್ಪದ ಗಡಿಗೆ ಯನ್ನು ಎಳೆದುಕೊಂಡು ಓಡುವಂತೆ ನನ್ನನ್ನು ಕದ್ದೊಯ್ಯುವುದು ವೀರನಾದ ನಿನಗೆ ತರವೇ?" ಎಂದು ಗೋಳಾಡಿದಳು.

ಹೀಗೆ ಅನೇಕ ಪ್ರಕಾರವಾಗಿ ಆ ರಾಣಿ ಕಣ್ಣೀರು ಕರೆದರೂ, ಆ ಪಾಪಾತ್ಮನು ಕರಗದೆ, ಅವಳನ್ನು ರಥದಲ್ಲಿ ಎತ್ತಿ ಕೊಂಡೇ ಹೋದನು.

೪

ಹಾಗೆ ಹೋಗುತ್ತ, ಆ ಸುರಮ್ಯವೆಂಬ ದೇಶದ ಗಡಿಯ ಹತ್ತಿರ ಬಂದಾಗ; ಅಲ್ಲಿಗೆ ಕಾವಲಾಗಿ ವಸುಷೇಣನು ನೇಮಕಮಾಡಿದ್ದ ಸಿಂಹ ಚೂಡನೆಂಬ ಹೆಸರಾದ ಸಾಮಂತನು ತನ್ನ ಪಟ್ಟಣದ ಹೊರಗಡೆಯ ಉದ್ಯಾ ನದ ಪಕ್ಕದಲ್ಲಿದ್ದ ಗರುಡಿಯಲ್ಲಿ ಕತ್ತಿವರಸೆಯ ಲಾಘವಗಳನ್ನು ತೋರುತ್ತ ಗೋಷ್ಠಿಯಲ್ಲಿದ್ದನು.

ಸುನಂದಾದೇವಿಯ ಆಕ್ರಂದನ ಅವನ ಕಿವಿಗೆ ಕೇಳಿಸಿತು. ಆ ಕೂಡಲೆ ಅವನು ಏಕಾಕಿಯಾಗಿ ಕೈಯ ಗುರಾಣಿ, ಕಟ್ಟಿದ್ದ ಕಠಾರಿ, ಹಿಡಿದ ಹರಿತವಾದ ಕತ್ತಿಗಳೊಡನೆ ನಿರ್ಭೀತಿಯಿಂದ ಹೊರಕ್ಕೆ ನೆಗೆದು ಬಂದನು. ಅಲ್ಲಿ, ಹರಿಣಿ ಯನ್ನು ಹಿಡಿದೊಯ್ಯುವ ಹುಲಿಯಂತೆ ಆ ತರುಣಿಯನ್ನು ಎತ್ತಿಕೊಂಡು ಹೋಗುವ ಚಂಡಶಾಸನನನ್ನು ದೂರದಲ್ಲಿ ಕಂಡನು.

"ಓಹೋ! ಇದಿರಾಗು! ಇತ್ತ ಬಾ! ಕೈಲಾದರೆ, ಕಾದು ಬಾ! ರಥವನ್ನು ತಿರುಗಿಸು. ಆಯುಧವನ್ನು ಹಿಡಿದು ಬಾ! ಹೋಗದಿರು! ನಿನ್ನಂಥ ವೀರರು ಬೆನ್ನು ತೋರಿಸಬಾರದು ಸಿಂಹಚೂಡನಿಗೆ ಮಾರೊಡ್ಡಿ ನಿಂತವರು ಮತ್ತೆ ಜೀವದಾಸೆಯನ್ನು ಬಿಟ್ಟಂತೆಯೇ ಸರಿ! ಅವರು ಸತ್ತ ಶವಗಳಿಗೆ

ಸನೂನ! ಬಾ! ನನ್ನ ಬಾಹುಗಳೆಂಬ ಪರಿಘಗಳ ಬಲೆಯಲ್ಲಿ ಬಿದ್ದಮೇಲೆ, ಎಲ್ಲಿ ತಪ್ಪಿಸಿಕೊಂಡು ಓಡುವೆ!"

ಎಂದು ಜೆನ್ನಟ್ಟಿ ಮೂದಲಿಸುತ್ತಾ ಬಂದು, ತನ್ನ ರಥದ ಎದುರಿಗೆ ನಿಂತು, ಕುದುರೆಗಳನ್ನು ಹಿಂದಕ್ಕೆ ತಳ್ಳಿದ ಆ ಸಿಂಹಚೂಡನನ್ನು ಚಂಡಶಾಸನನು ಕಂಡನು. 'ತೇರನ್ನು ನಿಲ್ಲಿಸು. ನೀನು ಈ ಹೆಣ್ಣನ್ನು ತಪ್ಪಿಸಿಕೊಳ್ಳದಂತೆ ನೋಡುತ್ತಿರು.' ಎಂದು ತನ್ನ ಸಾರಥಿಯನ್ನು ಕಾವಲು ನಿಲ್ಲಿಸಿ, ಒರೆಗಳೆದ ಕತ್ತಿಯನ್ನು ಒಂದು ಕೈಯಲ್ಲೂ ಗುರಾಣಿಯನ್ನು ಒಂದು ಕೈಯಲ್ಲೂ ಹಿಡಿದು ಭೂಮಿಗೆ ಹಾರಿದನು. ಚಂಡಶಾಸನನು ಸಿಂಹಚೂಡನಿಗೆ ಹೇಳಿದನು: "ದೊಡ್ಡ ಆನೆ ಕೈಹಿಡಿದ ಕಬ್ಬನ್ನು ಕಪಿ ಎಳೆದುಕೊಳ್ಳಬಲ್ಲುದೆ? ನಾನು ಹಿಡಿದವಳನ್ನು ನೀನು ಬಿಡಿಸುವೆಯ? ಸಾಯದೆ ಹೋಗು. ನಿನ್ನ ಸ್ವಾಮಿಗೆ ಪತ್ನಿಯ ವಿಯೋಗ ಮಾತ್ರವಲ್ಲದೆ ಸಾಮಂತನ ನಷ್ಟವೂ ಏಕಾಗಬೇಕು!"

ಆ ಮಾತಿಗೆ ಸಿಂಹಚೂಡನು ಕಳಕಳಿಸಿ ನಕ್ಕು ಹೇಳಿದನು: "ವಸುಷೇಣ ನೃಪನ ಎದುರಿಗೆ ಸುನಂದಾದೇವಿಯೊಡನೆ ನಿನ್ನ ರಕ್ತ ಬಸಿಯುವ ತಲೆಯನ್ನು ಕಾಣಿಕೆಯಾಗಿ ಬಿಸುಟಹೊರತು, ಈ ಸಿಂಹಚೂಡನು ಹೋಗುವವನಲ್ಲ. ಪರಸ್ತ್ರೀಗೆ ಕಣ್ಣಿಟ್ಟು ಕದ್ದವನನ್ನು ಭೂಮಿ ಹೇಗೆ ತಾನೆ ಹೊತ್ತೀತು? ನೀನು ಇಂಥ ಅಕಾರ್ಯವನ್ನು ಮಾಡಿ, ಚಂಡಶಾಸನನೆಂಬ ಹೆಸರನ್ನು ನೀರಿನಲ್ಲಿ ಅದ್ದಿದೆಯಲ್ಲ, ಚಂಡಾಲಾ!"

ಎಂದರೆ, ಚಂಡಶಾಸನನೆಂದ: "ಅದೇನೆಂದು ನನಗೆ ನೀನು ಬುದ್ಧಿ ಹೇಳೀಯೇ! ಬಾ, ಈ ಖಡ್ಗದ ಬಾಯಿಂದ ನೀನು ಬದುಕಿದರೆ, ಆಮೇಲೆ ಬಾಯಿ ಬಿಡುವೆಯಂತೆ!"

ಹೀಗೆಂದು ಒಬ್ಬರನ್ನೊಬ್ಬರು ಮೂದಲಿಸಿ ನುಡಿದರು. ಇಬ್ಬರೂ ಒಬ್ಬರ ಮೇಲೆ ಒಬ್ಬರು ಹಾಯಲು ಸಿದ್ಧವಾದರು. ಆಗ, ಬೆಳೆದ ಆ ಕಾಡೇ ಯುದ್ಧದ ರಂಗವಾಯಿತು, ಇಬ್ಬರೂ ಕಾಳಗಕ್ಕೆ ನಿಂತರು, ದಿಗ್ದೇವತೆಗಳೆ ನೋಡುವ ಪ್ರೇಕ್ಷಕರಾದರು, ಸುನಂದೆಯ ಚಿತ್ತವೆಂಬುದೇ ಕಾಳಗಕ್ಕೆ ಅಧ್ಯಕ್ಷೆನಾಗಬೇಕಾದ ಅರಸಾಯಿತು.

ಆಗ, ಸಿಂಹಚೂಡನ ಒಡನೆ ಬಂದ ನೋಟಕರು ತಮ್ಮೊಳಗೇ ಹೀಗೆಂದುಕೊಂಡರು: "ಕೃತಜ್ಞನೆಂದರೆ ಈ ನಮ್ಮ ಸಿಂಹಚೂಡನೇ! ಕೃತಘ್ನನೆಂದರೆ ಈ ಚಂಡಶಾಸನನೇ! ಅತಿ ಬಲಶಾಲಿಗಳಾದ ಇವರು ಗೆಲ್ಲುವುದೂ ಸೋಲುವುದೂ ಅರಸನಾದ ವಸುಷೇಣನ ಪುಣ್ಯ!''

ಇತ್ತ ಸುನಂದೆ ತನ್ನ ಮನಸ್ಸಿನಲ್ಲೇ ತಾನು "ಈ ಚಂಡ ಶಾಸನನನ್ನು ಸಿಂಹಚೂಡನು ಹೊಡೆದಿಕ್ಕಿದರೆ, ನನಗೆ ಈ ಸೆರೆಯಿಂದ ಬಿಡುಗಡೆಯಾದರೆ, ನೆಲಕ್ಕೂ ಆಕಾಶಕ್ಕೂ ವಾಯುದೇವನಿಗೂ ನನ್ನನ್ನೇ ನಾನು ಬಲಿ ಕೊಟ್ಟುಕೊಳ್ಳುತ್ತೇನೆ'' ಎಂದು ಹರಕೆಯನ್ನು ಮಾಡಿ ಕೊಂಡು, ತೆರೆದ ರೆಪ್ಪೆ ಮುಚ್ಚದಂತೆ, ಉಸಿರು ಹಿಡಿದು, ಉತ್ಸುಕತೆಯಿಂದ ನೋಡಿದಳು

ಆ ಸಮಯದಲ್ಲಿ ಸಿಂಹಚೂಡನು "ಹೆದರದೆ ನಿಂತು ನೋಡು, ಅರಸಿ. ಈ ಹಗೆಯನ್ನು ಮೊದಲು ಯಮನ ಬಳಿಯಲ್ಲಿ ಒಪ್ಪಿಸಿ, ಅನಂತರ ನಿನ್ನನ್ನು ಜನಪತಿಯ ಸನ್ನಿಧಿಯಲ್ಲಿ ಒಪ್ಪಿಸುತ್ತೇನೆ.'' ಎಂದು ನಂಬುಗೆಯಿಂದ ನುಡಿದು, ಮುಂದೆ ಬಂದನು.

ಆದರಾ ಚಂಡಶಾಸನನು ಆ ವೀರನ ತಲೆಯನ್ನೂ ಮುಂಡವನ್ನೂ ಒಂದೇ ಏಟಿಗೆ ಹೊಡೆದು ಬೇರೆ ಮಾಡಿ, ಕೂಡಲೆ ರಥಕ್ಕೆ ಹಾಯ್ದು, ಸಾರಥಿ ರಥವೋಡಿಸುವ ಚಳಕದಿಂದ ಗಾಳಿಗೆ ಗರಿ ಮೂಡಿದ ಹಾಗೆ ಮುಹೂರ್ತ ಮಾತ್ರದಲ್ಲಿ ತನ್ನ ದುರ್ಗವನ್ನು ಸೇರಿ. ಒಳಗೆ ಪ್ರವೇಶಮಾಡಿದನು

೫

ಅಷ್ಟರಲ್ಲಿ ಈ ಕಡೆ "ದೊರೆ ತರಹೇಳಿ ಕಳಿಸಿದ ಭೋಜನವು ಆಗಲೇ ಬಾಳೆಯ ವನದಲ್ಲಿ ಬಂದಾಗಿದೆ. ಅರಸು ಏಕೆ ಬರಲಿಲ್ಲ? ಚಂಡಶಾಸನ ಎತ್ತ ಹೋದನೋ? ದೇವಿಯರೂ ಬರುತ್ತ ಎಲ್ಲೋ ತಡೆದರು. ಯಾರಾದರೂ ಅಂಗರಕ್ಷಕರು ಹೋಗಿ, ಅವರನ್ನು ಕರೆದುತನ್ನಿ." ಎಂದು ಮನೆವಾರ್ತೆ ಯವರು ಮಾತನಾಡಿಕೊಳ್ಳುವ ಹೊತ್ತಿಗೆ ಸರಿಯಾಗಿ, ವಸುಷೇಣನು ಆ ಉದ್ಯಾನಕ್ಕೆ ಬಂದನು

ರಥದಿಂದ ಇಳಿದು, "ದೇವಿ ಬಂದಳೆ? ಪಂಕ್ತಿಗೆ ಎಡೆಯಾಯಿತೆ? ಚಂಡಶಾಸನ ಬಂದನೆ?" ಎಂದು ಮನೆವಾರ್ತೆಯವರನ್ನು ಬೆಸಗೊಂಡನು.

ಆಗ ಸುನಂದೆಯ ಪರಿವಾರದ ಚೇಟಿಯರು ಕಣ್ಣಲ್ಲಿ ನೀರು ಸುರಿಸುತ್ತ ಕೆದರಿದ ಕೂದಲುಗಳನ್ನು ಸವರಿಸದೆ, ರೋದನಮಾಡುತ್ತ ಶೋಕರಸವೇ ಮೈತಾಳಿ ಬಂದಂತೆ ಬರುತ್ತಿದ್ದರು. ಅವರನ್ನು ದೂರದಿಂದಲೇ ಕಂಡು, ಇದೇನೋ ಎಂದು ಬೆಕ್ಕಸದಿಂದ ಬಿಟ್ಟಕಣ್ಣು ಬಿಟ್ಟಂತೆ ವಸುಷೇಣನು ಕುರಿತು ನೋಡುತ್ತಿರಬೇಕಾದರೆ; "ಹಾ ಹಾ ಸುನಂದೆ! ವಸುಷೇಣನ ರಾಜ್ಯಲಕ್ಷ್ಮೀ! ವಸುಷೇಣನ ಮಂಗಳಲಕ್ಷ್ಮೀ! ರಾಜಚಂಡಾಲನ ಆ ಬಾಹುರಾಹುವು ಬಂದು ನಿನ್ನನ್ನು ನುಂಗಿತೇ!" ಎಂದು ಗೋಳಾಡುತ್ತಾ, ಆ ಅಂತಃಪುರ ಸ್ತ್ರೀ ಜನವು ಬಂದು ದೊರೆಯ ಕಾಲುಗಳಿಗೆ ಬಿದ್ದು ಹೊರಳಾಡಿತು.

ಆಗ ಆ ಪರಿವಾರದಲ್ಲಿ ಒಬ್ಬಳು, ರಾಣಿಯ ರತ್ನದ ಪಾದುಕೆಗಳನ್ನು ಹಿಡಿಯುವವಳು ಹೇಳಿದಳು: "ಅರಸರು ಬರಹೇಳಿದ ಸ್ಥಳಕ್ಕೆ ದೇವಿಯರು ಬರುತ್ತಾ ಇರಬೇಕಾದರೆ, ಚಂಡಶಾಸನನು ಕಂಡು, ಎಳೆದು ಹಿಡಿದು, ಕೈಸೆರೆ ಹಿಡಿದು ಬಂದಿಕಾರನಂತೆ ಕೊಂಡುಹೋದನು. ಅಂಗರಕ್ಷಕರನ್ನು ಹೊಡೆದು, ಕಿರಿದು ದೂರ ಎಳೆದುಕೊಂಡುಹೋಗಿ ತಳ್ಳಿ, ಆ ನೀಚನು ದೇವಿಯರನ್ನು ಅಪಹಾರಮಾಡಿಕೊಂಡುಹೋದನು."

ಅದನ್ನು ಕೇಳಿ, ವಸುಷೇಣನಿಗೆ ಒಂದು ಕಡೆ ಕೋಪ ಉಕ್ಕಿತು, ಒಂದು ಕಡೆ ಪತ್ನೀವಿಯೋಗದ ಶೋಕ ಮಿಕ್ಕಿತು, ಇನ್ನೊಂದುಕಡೆ ಅವಮಾನದ ಅಗ್ನಿ ವ್ಯಾಪಿಸಿತು; ಹಾಗಾಗಿ, ಕಿಂಕರ್ತವ್ಯತಾಮೂಢನಾದ ಆ ದೊರೆಯು ತಾನು ಬದುಕುವ ಆಸೆಯನ್ನು ತೊರೆದುಬಿಟ್ಟನು. ಆಗ ಆತನ ಆಪ್ತರಾದ ಸಚಿವರು ತಮ್ಮ ಆಪ್ತವಚನಗಳೆಂಬ ಅಂಕುಶದಿಂದ ಅವನ ಮನಸ್ಸನ್ನು ಹಿಂದಿರುಗಿಸಿದರು. ಚಂದನ, ಕರ್ಪೂರ, ಸ್ಫಟಿಕದಂಥ ಪನ್ನೀರು, ಬಾಳೆಯೆಲೆಯ ಇರಿಚಿಲು, ತಂಪಾದ ಕಳಶದ ತಿಳಿನೀರು, ಇವುಗಳ ಶೀತಲತೆಯಿಂದ ಅವನನ್ನು ಆಪ್ತರು ಉಜ್ಜೀವನಗೊಳಿಸಿದರು.

ಹಾಗೆ ಎಚ್ಚರಹೊಂದಿದ ನೃಪಾಲನಿಗೆ ನರ್ಮಸಚಿವರು ಹೇಳಿದರು: "ಮದಿಸಿದ ಶತ್ರುಗಳು ನಿನ್ನ ಖಡ್ಗದ ತೀಕ್ಷ್ಣವಾದ ಧಾರೆಯ ನದೀನದಗಳಲ್ಲಿ

ಮುಳುಗುವ ಮೊದಲು, ಉದ್ಧತರ ದುರ್ಗವು ನಿನ್ನ ಕೋಪಪ್ರತಾಪದ ಕಾಡ
ಕಿಚ್ಚಿನ ನಾಲಗೆಗಳಲ್ಲಿ ಮುಳುಗುವ ಮೊದಲು, ಭೀರುವಿನಂತೆ ವೃಥಾ ಶೋಕ
ಸಮುದ್ರದಲ್ಲಿ ಮುಳುಗುವುದು ನಿನ್ನಂಥ ವೀರನಿಗೆ ತಕ್ಕದ್ದೇ ?"

ಆ ಪ್ರತಿಬೋಧನ ವಚನವು ಅರಸನ ಕೋಪವನ್ನು ಮತ್ತೆ ಎತ್ತಿ
ನಿಲ್ಲಿಸಿತು. ಆ ದೊರೆ ಹೇಳಿದನು : "ಯುದ್ಧದಲ್ಲಿ ಹೆಂಡಿರೂ ಭಂಡಾರವೂ
ನಾಶವಾಗಿಹೋದರೆ, ಅದು ವಿಧಿಯ ವಶ. ಮಹಾವೀರನಿಗೆ ಅದು ಸುಖದ
ಸಂಗತಿ. ಆದರೆ, ಹೆಂಡತಿಯನ್ನು ಅಪಹರಿಸಿರುವಾಗ, ಮತ್ತೆ ಪುರಪ್ರವೇಶ
ಮಾಡುವುದು ತಕ್ಕದ್ದಲ್ಲ. ಪ್ರಾಣಪ್ರಿಯಳಿಲ್ಲದೆ ನಿಃಪ್ರಾಣವಾದ ಈ ದೇಹಕ್ಕೆ
ಏನೂ ಬೇಡವಾಗಿದೆ. ಶತ್ರುವಿನ ಪ್ರಾಣವಾಯುವಿನಿಂದ ಈ ನನ್ನ ಕತ್ತಿ
ಯೆಂಬ ಸರ್ಪಕ್ಕೆ ಊಟಮಾಡಿಸಿ, ಆಮೇಲೆ ನನಗೆ ಊಟ."

ಆಗ ಮುಂದೆ ಮಾಡಬೇಕಾದ ಕಾರ್ಯವನ್ನು ನಿಷ್ಕರ್ಷಿಸಲು ಆಪ್ತರೂ
ಸಚಿವರೂ ಚಮೂಪತಿಗಳೂ ಬಂದರೆ, ದೊರೆ ಹೇಳಿದನು : "ಇನ್ನು
ಆಲೋಚನೆ ಏನು ಬಂತು ? ಕಿಚ್ಚೆದ್ದಿರುವಾಗ, ಮಾರಿ ಮನೆ ಹೊಕ್ಕಿರುವಾಗ,
ನೀವು ಹೇಳುವುದೇನು ? ನಾನು ಕೇಳುವುದೇನು ? ಬೆರಗೇನು, ಬೆಂಬಲ
ವೇನು, ಮಾತುಕತೆಯೇನು ?" ಎಂದು ಹಿಂದು ಮುಂದು ನೋಡದೆ,
ಮುಂದೆ ನಿಂತಿದ್ದ ತನ್ನ ರಥವನ್ನು ಏರಿ, ಸನ್ನದ್ಧನಾದನು. ಅದೇ ಗಳಿಗೆ
ಯಲ್ಲೇ ರಾಜನ ಚತುರಂಗ ಸೈನ್ಯವೂ ಸಿದ್ಧವಾಯಿತು.

ವಸುಷೇಣನು ಸಾಮಂತಚೂಡಾಮಣಿಯಾದ ಸಿಂಹಚೂಡನ
ಮಾಣಿಕ್ಯಪುರಕ್ಕೆ ಬಂದನು. ಆ ವೇಳೆಯಲ್ಲಿ, ಸಿಂಹಚೂಡನ ಕಡೆಯವರು,
ಅರಸನು ಇಕ್ಕಿದ ಉಪ್ಪಿನ ಋಣವನ್ನು ಯುದ್ಧಭೂಮಿಯಲ್ಲಿ ತೀರಿಸಲು ತನ್ನ
ತಲೆಯನ್ನು ಅರ್ಪಿಸಿದ ಸಿಂಹಚೂಡನ ಶಿರೋಂಬುಜವನ್ನು ಒಂದು ಚಿನ್ನದ
ತಟ್ಟೆಯಲ್ಲಿ ಇರಿಸಿಕೊಂಡು ಬಂದು, ಒಪ್ಪಿಸಿದರು.

"ಸತ್ತರೆ ಹೀಗೆ ಸಾಯಬೇಕು. ಇದು ಬಿಟ್ಟು, ಒಡೆಯನ ಸೇವೆಗೆ
ಆಗದೆ, ವ್ಯರ್ಥವಾಗಿ ಬದುಕಿದ್ದು ಏನು ಪ್ರಯೋಜನ ?" ಎಂದು ಇತರ
ಸಾಮಂತರನ್ನು ಹಂಗಿಸುವ ಹಾಗಿದ್ದ ಆ ತಲೆಯನ್ನು ಮುಂದಿಟ್ಟು,
ಚಂಡಶಾಸನನು ಸುನಂದಾದೇವಿಯನ್ನು ಅಪಹರಿಸಿಕೊಂಡು ಹೋದ

ವಾರ್ತೆಯನ್ನು ತಿಳಿಸಿ, ಹೀಗೆಂದರು : "ದೊರೆಯೆ! ಶತ್ರು ಇನ್ನೂ ಜೀವಂತನಾಗಿದ್ದಾನೆ ಎಂದ ಮೇಲೆ, ನಮ್ಮ ಅರಸನು ಕಾಳಗದಲ್ಲಿ ತೋರಿಸಿದ ಪರಾಕ್ರಮವನ್ನು ಸುಮ್ಮನೆ ಹೊಗಳಿ ವರ್ಣಿಸಿ ಏನು ಪ್ರಯೋಜನ? ಇನ್ನು ತಡಮಾಡುವುದು ಬೇಡ. ಬೇಗನೆಯೇ ಆ ಚಂಡಶಾಸನನು ಹೋಗಿ ಸಿಂಹಚೂಡನ ಜೊತೆಗೆ ಸೇರಲಿ."

ಆಗ ಅರಸನು ತನ್ನ ಸೇವೆಯಲ್ಲಿ ತಲೆಯನ್ನು ಕಳೆದುಕೊಂಡ ಆ ಸಿಂಹಚೂಡನನ್ನು ಕುರಿತು ಯಥೋಚಿತವಾದ ಕರುಣೆಯ ಮಾತುಗಳನ್ನು ಆಡುತ್ತಿರುವ ಹೊತ್ತಿಗೆ, ಸೂರ್ಯನು ಪಶ್ಚಿಮ ಸಮುದ್ರದಲ್ಲಿ ಇಳಿದನು.

೭

ಅತ್ತ ಚಂಡಶಾಸನನ ರಾಜಧಾನಿಯಲ್ಲಿ—

"ಪರಸ್ತ್ರೀಯನ್ನು ತಂದನೋ! ಹೆಸರು ಹಾಳಾಗುವುದಕ್ಕೆ ಹೆಮ್ಮಾರಿಯನ್ನು ತಂದನೋ! ನಮ್ಮ ದುರ್ಗಕ್ಕೆ ಇವಳನ್ನು 'ಏತಕ್ಕೆ ತಂದನೋ! ಸಹಜವಾಗಿಯೇ ವೀರನಾದ ವಸುಷೇಣನು, ತನ್ನ ಹೆಂಡತಿಯನ್ನು ಕಳೆದುಕೊಂಡದ್ದರಿಂದ, ವಿಹ್ವಲನಾಗಿ ಸಮಸ್ತ ಸೇನೆಯೊಡನೆ ಇಲ್ಲಿಗೆ ಧಾಳಿ ಬಂದು, ಈ ದುರ್ಗವನ್ನು ಸುಟ್ಟುರಿಸದಿರನು. ಏನು ಮಾಡೋಣ? ಎಲ್ಲಿ ಇರೋಣ? ಯಾವ ಕಡೆ ಓಡೋಣ?" ಎಂದು ಪೌರರು ಕುದಿದು, ಅದಿರಿ, ಅಳ್ಳಾಡಿ ತಳ್ಳಂಕಗೊಂಡರು

ವಸುಷೇಣನ ಸೇನೆ ಬಂದು, ದುರ್ಗವನ್ನು ನುಂಗುವಂತೆ, ದುರ್ಗವನ್ನು ನೊಣೆಯುವಂತೆ, ನೆಲ ಮುರಿದುಬೀಳುವಂತೆ ಕಿಕ್ಕಿರಿದು ನಿಂತು, ದುರ್ಗಕ್ಕೆ ಏಣಿ ಹಾಕಿಕೊಂಡು, ತೊಲೆಯೆತ್ತಿ ನಿಲ್ಲಿಸಿಕೊಂಡು, ಸೇತು ಹಾಕಿ ದಾಟಿಕೊಂಡು, ಲಗ್ಗೆಹತ್ತಿತು. ಭೇರಿ ತಂಬಟೆ ಢಕ್ಕೆ ಮೃದಂಗ ಮುಂತಾದುವುಗಳ ಕೋಳಾಹಳದ ನಡುವೆ, ಬೆಲ್ಲಕ್ಕೆ ಇರುವೆ ಮುತ್ತುವಂತೆ ಮುತ್ತಿ ಮುಸುರಿ ಹತ್ತಿದರು. ಆಗ ದುರ್ಗದೊಳಗಿನ ಕಡುಗಲಿಗಳೂ ಯುದ್ಧವು ಅನಿವಾರ್ಯವೆಂದು ಸಿದ್ಧರಾದರು. ಚಂಡಶಾಸನನೂ ಕಾಳಗಕ್ಕೆ ಸಿದ್ಧನಾದನು.

ಅವನನ್ನು ಕಂಡು ವಸುಷೇಣನ ಕಣ್ಣು ಉರಿ ಕಾರಿತು, ಅವ
ಹುಬ್ಬಿನಿಂದ ಹೊಗೆ ಹೊರಟಿತು. ಸಿಂಹಾಸನದಿಂದ ದುಮುಕಿ
ಕೊಂತವನ್ನೂ ಗುರಾಣಿಯನ್ನೂ ಹಿಡಿದು ನುಗ್ಗಿದನು. ಒಂದು ಹಗಲೆಲ್ಲಾ
ಎಡೆಬಿಡದೆ ಇಬ್ಬರೂ ಕಾದಾಡಿದರು. ಸಂಜೆಯಾಯಿತು, ಕತ್ತಲೆ ಕವಿಯಿತು
ಆಪ್ತರು ಬಂದು ಅಡ್ಡ ನಿಂತರು. ಎರಡೂ ಕಡೆ ಅಪಹಾರತೂರ್ಯಗಳ
ಮೊಳಗಿದುವು. ದೊರೆಗಳಿಬ್ಬರೂ ತಮ್ಮ ತಮ್ಮ ಪಾಳಯಗಳಿಗೆ ಹಿಂದಿರು
ತಮ್ಮ ತಮ್ಮ ಗೂಡಾರಗಳನ್ನು ಪ್ರವೇಶಿಸಿದರು.

ಇತ್ತ ಚಂಡಶಾಸನನು ತನ್ನ ಪಾಳಯದಲ್ಲಿ ತಾನು ಸುನಂದೆಯನ್ನು
ಸೆರೆಯಿಟ್ಟಿದ್ದ ಮಣಿಮಾಡಕ್ಕೆ ಬಂದು, ಸುನಂದೆಯನ್ನು ನೋಡಿದನು
ನಿಟ್ಟುಸಿರುಬಿಡುತ್ತ ಕಣ್ಣಲ್ಲಿ ನೀರು ತುಂಬಿಕೊಂಡು, ಮುಖದ ಕಳೆ ಇಳಿದ
ಹೋಗಿ, ಆ ರಾಣಿ ಸೆರಗಿನಿಂದ ಮುಖ ಮುಚ್ಚಿಕೊಂಡಿದ್ದಳು. ವಿಧಿಯೆಂಬ
ಮದಗಜವು ಆ ದೊರೆಯ ಅರಮನೆಯೆಂಬ ಸರೋವರದಿಂದ ಎಳೆದುತಂದ
ನಡುಗಾಡಿನಲ್ಲಿ ಬಿಸುಟುಹೋದ ತಾವರೆ ಬಳ್ಳಿಯ ಹಾಗೆ ಆ ಸುನಂದ
ಕೊರಗುತ್ತಿದ್ದಳು.

ಅವಳ ಕೊರಗಿಗೆ ಚಂಡಶಾಸನನೇನೂ ಕರಗಲಿಲ್ಲ. ತನ್ನೊಡನೆ ಬಂದ
ಪರಿಜನವನ್ನು ಅಲ್ಲೇ ಬಾಗಿಲ ಹತ್ತಿರದಲ್ಲೇ ಪರಿಹರಿಸಿ, ಕೃತಕವಾದ
ವಿನಯೋಪಚಾರದಿಂದ ಸುನಂದೆಯನ್ನು ಮಾತನಾಡಿಸಿದನು: "ಒಳ್ಳೆಯ
ಮಾತಿನಿಂದ ನಿನ್ನ ಒಪ್ಪಿಗೆಯನ್ನು ಪಡೆಯದೆ, ಕೇವಲ ಉತ್ಸುಕತೆಯಿಂದ
ನಿನ್ನನ್ನು ಎತ್ತಿತಂದ ಈ ಸಲುಗೆಯನ್ನು ಮನ್ನಿಸು. ಕಾಮಿಗೆ ಕಣ್ಣು
ಕಾಣದು, ಎಂಬ ಮಾತು ನಿಜ. ನಾನು ನಿನ್ನ ಗಂಡುದೊತ್ತು. ನನ್ನ
ಸಮಸ್ತ ರಾಣಿವಾಸವೂ ಪರಿಚಾರಕ ಮೊದಲಾದವರೆಲ್ಲರೂ ನಿನ್ನ ಊಳಿಗ
ದವರು. ಇಲ್ಲಿಗೆ ನೀನು ವಲ್ಲಭೆಯಾಗಿ ನಿಲ್ಲು."

ಅವನ ಮಾತು ಕಿವಿಗೆ ಬಿದ್ದ ಒಡನೆಯೆ, ತುಪ್ಪದ ಆಹುತಿಯಿಂದ
ಅಗ್ನಿಯ ಜ್ವಾಲೆ ಮೇಲೆ ನೆಗೆಯುವಂತೆ, ಸುನಂದೆಯ ರೋಷ ಉಕ್ಕಿತು.
ಹೇಳಿದಳು: "ಪರದೇಸಿಯಾದ ತಬ್ಬಲಿಯನ್ನು, ಬದುಕಿನಲ್ಲಿ ಎಂದೂ
ಯಾವ ಭೋಗೋಪಭೋಗಗಳನ್ನೂ ಕಾಣದವಳನ್ನು ಮಾತನಾಡಿಸುವಂತೆ

ನಿನ್ನೊಂದು ಸಂಪತ್ತಿಯನ್ನು ಕುರಿತು ನನ್ನ ಮುಂದೆ ಏಕೆ ಕೂಗಿಕೊಳ್ಳುತ್ತೀಯೆ? ನಡತೆಕೆಟ್ಟವನೆ! ನಾಳೆ ನಿನ್ನ ತಲೆ ಇದೇ ಕಾರಾಗೃಹದ ದ್ವಾರದಲ್ಲಿ ಬಿದ್ದು ಮೆರೆಯುವಾಗ, ಆಗ ನೀನು ನನಗೆ ಮಾಡುವ ಸತ್ಕಾರಗಳನ್ನು ಬಾಯಿ ತುಂಬ ಹೇಳುವೆಯಂತೆ!''

ಹೀಗೆಂದು ನಿಷ್ಠುರವಾಗಿ ಎಷ್ಟು ಬೈದು ಛೀಗುಟ್ಟಿದರೂ, ಆ ಸುನಂದೆಯ ನುಡಿಗೆ ಆ ಚಂಡಶಾಸನನು ಏನೂ ಅಸಹ್ಯಪಡದೆ, ಏನೂ ಕೋಪಿಸದೆ, ಏನೂ ನಾಚದೆ, ಮನಸ್ಸು ಏನೂ ಬದಲಾಗದೆ, ಮತ್ತೆಯೂ ಹೀಗೆಂದನು: "ಸ್ನೇಹವನ್ನು ಕೆಡಿಸಿಕೊಂಡು ಹಗೆಯಾದೆನು. ನಾನು ಹಗೆಯಾವೆನೆಂದರೆ, ವಸುಷೇಣನು ನನ್ನ ಕೈಯಲ್ಲಿ ಸತ್ತಹಾಗೆಯೇ. ಇನ್ನು ಅವನ ಆಸೆಯನ್ನು ಬಿಡು. ಅವನಿಗಾಗಿ ಕೊರಗಿ ನವೆಯಬೇಡ. ಈ ಹಠ ತರವಲ್ಲ. ತಾನು ಸತ್ತು ಸತ್ಫಲವನ್ನು ತೋರುವ ಬಾಳೆಯಂತಾಗಿ ಏನು ಪ್ರಯೋಜನ? ಪಾತಿವ್ರತ್ಯದಿಂದ ಬತ್ತಿ ಬಾಳನ್ನು ಹಾಳುಮಾಡಿಕೊಳ್ಳಬೇಡ. ನಾನು ನೀಡುವ ಸೌಖ್ಯ ಶ್ರೀ ವಿಳಾಸಗಳನ್ನು ಒಪ್ಪಿಕೊಂಡು ನೆಮ್ಮದಿಯಿಂದ ಇರು."

ಆಗ ಸುನಂದೆ, 'ಇವನೊಡನೆ ಮಾತುಬೆಳಸಿ ಏನು ಪ್ರಯೋಜನ?' ಎಂದುಕೊಂಡು, ಹೀಗೆಂದಳು: "ಮಾವಿನ ಕೊಂಬೆಯಲ್ಲಿ ನಲಿದು ನರ್ತಿಸುವ ಕೋಗಿಲೆ ತನ್ನ ಸ್ನೇಹವನ್ನು ಬಿಟ್ಟು ಬೇವಿನ ಕೊಂಬೆಯಲ್ಲಿ ನಲಿಯುವುದೇ? ಪ್ರಿಯನು ಇನ್ನೂ ಬದುಕಿರುವಂತೆಯೇ ಅಪ್ರಿಯರಾದವರಿಗೆ ಸಂಭಾವನೆ ಮಾಡುವರೇ ಸತಿಯರು? ವೀರನಾದವನ ತೋಳಿನ ಕತ್ತಿಗೆ ಸಾಣೆಯಂತಹ ನನ್ನ ಕೋಮಲವಾದ ಭುಜವನ್ನು ಕ್ಷೌರಿಕನ ಕೈಯ ಕತ್ತಿಗೆ ಸೋಕಿಸಬೇನು? ಈ ನನ್ನ ದೇಹಕ್ಕೂ ಈ ನನ್ನ ಜೀವಕ್ಕೂ ವಸುಷೇಣನೊಬ್ಬನೇ ಒಡೆಯನು. ಇಂಥ ಪಾತಿವ್ರತ್ಯವನ್ನು ಕೆಡಿಸಿ ಹೆಸರನ್ನು ಹಾಳುಮಾಡಿಕೊಳ್ಳಲು ನನಗೇನು ಹುಚ್ಚೆ?"

ಸುನಂದೆ ಹೀಗೆನ್ನಲು, ಆ ಕುಟಿಲನು ತನ್ನ ಇಷ್ಟಾರ್ಥವನ್ನು ಆಕೆಯಲ್ಲಿ ಈಡೇರಿಸಿಕೊಳ್ಳಲು ಏನೂ ಅವಕಾಶವನ್ನು ಕಾಣದೆ, ಮುನಿದು, ಮತ್ತೆ ಹೀಗೆಂದನು: "ನೀನು ಸತ್ತರೂ ನಿನ್ನನ್ನು ನಾನು ಬಿಡುವುದಿಲ್ಲ. ನಾನು

ಹೇಗೂ ಸಾಯುವೆನಲ್ಲದೆ, ನಾನು ಉಳಿಯುವುದಿಲ್ಲ. ನೀನು ಒಪ್ಪಿದರೇನು? ಒಪ್ಪದೇ ಇದ್ದರೇನು? ನಾನು ನಿನ್ನನ್ನಲ್ಲದೆ ಬೇರೆಯವರನ್ನು ಬಯಸಲಾರದವನಾಗಿದ್ದೇನೆ. ಸೆರೆಯಲ್ಲಿದ್ದರೂ ನನ್ನ ಮನೆಯಲ್ಲಿ ನೀನು ಇರುವೆ ಎಂಬ ಆಸೆ ಇದ್ದರೆ, ನನಗೆ ಅದೇ ಸಾಕು. ಯುದ್ಧದಲ್ಲಿ ಏನಾಗುವುದೋ ಆಗಲಿ!''

ಎಂಬುದಾಗಿ ತನ್ನ ಮನಸ್ಸಿನ ಕೆಟ್ಟ ಆಸೆಯನ್ನು ಬಿಡಿಸಿ ಹೇಳಿ, ಅರುಣಿಕೆಯೆಂಬವಳನ್ನು ಕರೆದು, "ಎಲೆ ಪರಿಚಿತೆ! ನೀನು ಇಲ್ಲಿಯೇ ಇದ್ದು ಇವಳ ದುಃಖವನ್ನು ಆರಿಸು, ಇವಳಿಗೆ ಭೀತಿಯನ್ನು ತೋರಿಸು, ಇವಳಿಗೆ ಕೊರಗಾಗದಂತೆ ಸಮಾಧಾನ ಹೇಳು. ಗಂಡನ ಹಂಬಲವನ್ನು ಬಿಟ್ಟು, ಇವಳು ನನ್ನಲ್ಲಿ ಆಸೆಯಿಡುವಂತೆ ಮಾಡು.'' ಎಂದು ಅವಳನ್ನು ಅಲ್ಲಿ ಕಾವಲಿಗೆ ಇರಿಸಿ ಹೋದನು.

ಬೆಳಗಾಯಿತು. ವಸುಷೇಣನ ವಿರಹ ಪರಿತಾಪ ತೀರಲಿಲ್ಲ. ಏನು ಮಾಡಿದರೂ ಆ ಹೆಣ್ಣನ್ನು ಒಡಂಬಡಿಸಲು ಆಗಲಿಲ್ಲ. ಆಗ ಆ ಕಪಟಿ ಒಂದು ಕಪಟೋಪಾಯವನ್ನು ಕುರಿತನು. "ಗಂಡನು ಬದುಕಿರುವ ಕಾರಣದಿಂದ, ಪುನಃ ಅವನನ್ನು ಪಡೆಯುವೆನೆಂಬ ಆಸೆಯಿಂದ, ಇವಳು ನನ್ನನ್ನು ಒಲ್ಲಳು. ಇವಳಿಗೆ ತಕ್ಕ ಮರುಳು ಮಾಡುತ್ತೇನೆ.'' ಎಂದು ಇಂದ್ರಜಾಲಿಕನಿಗೆ ಆಜ್ಞೆ ಮಾಡಿದನು. "ಶತ್ರುವಿನ ಸೈನ್ಯವು ಕೆಟ್ಟಿತು. ವಸುಷೇಣ ನೃಪೇಂದ್ರನು ಸತ್ತನು'' ಎಂಬ ಸುದ್ದಿಯನ್ನು ಹಬ್ಬಿಸಿದನು. ಆ ಸುದ್ದಿಯನ್ನು ನಂಬಿ. ಪಟ್ಟಣದ ಜನರೆಲ್ಲ "ನಮ್ಮ ಅರಸನು ರಾತ್ರಿಯ ಕಾಳಗದಲ್ಲಿ ಶತ್ರುಗಳ ಪಾಳಯಕ್ಕೆ ನುಗ್ಗಿ, ಶತ್ರುವಿನ ಹಸಿಯ ತಲೆಯನ್ನು ಕೈಗೆ ಮಾಡಿಕೊಂಡನು!'' ಎಂದು ಕೋಟೆಯೊಳಗೆ ಕೋಟಿತೆರದಿಂದ ನಾಟಕನಲಿದು ಬೊಬ್ಬಿರಿದರು.

ಆ ಕಳಕಳದ ಮಧ್ಯೆ, ಚಂಡಶಾಸನನು ಸುನಂದಾದೇವಿ ಇದ್ದ ಸೆರೆಮನೆಗೆ ತಾನೇ ಬಂದು "ಹೇ ಸುನಂದೆ! ವಸುಷೇಣನೇ ನನಗೆ ಪತಿಯೆಂದು ಕೂಗಾಡುತ್ತಿದ್ದೆಯಲ್ಲವೆ? ಈಗ ಅದೇ ಕೂಗನ್ನು ಈ ರಕ್ತ ಬಸಿವ ತಲೆಗೆ

ಕೂಗಿಕೋ!" ಎಂದು ಆ ಮಾಯಾವಿ ವಸುಷೇಣನ ಮಾಯದ ಶಿರವನ್ನು ಅವಳ ಮುಂದೆ ಎಸೆದನು.

ಸುನಂದೆ ಆ ಎದುರಿಗೆ ಬಿದ್ದ ತಲೆಯನ್ನು ನೋಡಿದಳು. ತಲೆಯ ಮೇಲಿನ ಮಣಿಕಿರೀಟವನ್ನೂ ಕಿವಿಯ ಕಡಕುಗಳನ್ನೂ ಕೊರಳಿನ ಮುತ್ತಿನ ಕಂಠಿಕೆಯನ್ನೂ ಕಂಡಳು. ಕಂಡೊಡನೆಯೇ, ಹೃದಯದೊಳಗಿನ ತನ್ನ ವಲ್ಲಭನನ್ನು ಈಕ್ಷಿಸುವಂತೆ ಅವಳ ಹೂವಿನಂದದ ಕಣ್ಣು ಮುಚ್ಚಿತು, ಕೈಗಳೆರಡೂ ಅವನನ್ನು ಮುಟ್ಟಿ ನೋಡುವಂತೆ ಎದೆಯಮಧ್ಯದಲ್ಲಿ ಮುಗಿದುವು, ಧ್ವನಿಯನ್ನು ಕಿವಿಗೊಟ್ಟು ಕೇಳುವಂತೆ ತಲೆ ಕುಸಿಯಿತು, ಹೃದಯ ಶೂನ್ಯವಾದದ್ದನ್ನು ಕಂಡು ಹುಡುಕಿಕೊಂಡು ಹೋಗುವಂತೆ ಅವಳ ಜೀವ ಅವಳ ದೇಹವನ್ನು ತೊರೆದು ಹೊರಟುಹೋಯಿತು. ಗಂಡನು ಇನ್ನೂ ಇರಬೇಕಾದರೇ ಇವಳ ದೇಹ ಇನ್ನೊಬ್ಬನ ಕಣ್ಣಿಗೂ ಬಗೆಗೂ ಒಪ್ಪಿತು, ಇಂಥ ದೇಹವನ್ನು ಸುಟ್ಟರು, ಎಂದು ಕೋಪಿಸಿಕೊಂಡು ಬಿಟ್ಟು ಹೋದಂತೆ, ಅವಳ ಜೀವ ಹೊರಟುಹೋಯಿತು.

ಆಗ ಚಂಡಶಾಸನನು ತಾನು ಮಾಡಿದ ಕಪಟದಿಂದಾದ ವಿಪರೀತವನ್ನು ಕಂಡು, "ಹೋ! ಮನ್ಮಥನಿಗೆ ದಾಯಾದಿಯಾಗಿ ಈ ವಿಧಿ ಇದನ್ನು ಮಾಡಿದನೇ! ಏನಾದರೂ ಉಪಾಯದಿಂದ ಇವಳನ್ನು ಪಡೆಯುವೆನೆಂದು ನಾನು ಮಾಡಿದ್ದು ಹೀಗೆ ಮರಣದಲ್ಲಿ ಮುಗಿಯಿತಲ್ಲಾ! ಹೋ! ನಾನು ಬೆಂದೆ! ನಾನು ಉರಿದೆ! ನಾನು ನಂದಿದೆ!" ಎಂದು ತಾಪವನ್ನು ತಡೆಯಲಾರದೆ ಬಂದು, ಅವಳ ಮೈಯನ್ನು ಮುಟ್ಟಿದ ಗಳಿಗೆಯಲ್ಲಿಯೇ ಅತಿಯಾದ ಶೋಕದಿಂದ ಮೂರ್ಛೆಗೆ ಸಂದನು.

ಆಗ ಅಲ್ಲಿಯೇ ಇದ್ದ ಅವನ ಚಾಮರದವರೂ ಅಡಿಕೆಯ ಚೀಲವನ್ನು ಹಿಡಿದವರೂ ಬೀಸಣಿಗೆಯಿಂದ ಬೀಸಿ, ಚಂದನದ ಜಲವನ್ನು ಚಿಮುಕಿಸಿ, ಅವನನ್ನು ಎತ್ತಿ ಮಲಗಿಸಿ, ಉಪಚರಿಸಿದರು.

ಚಂಡಶಾಸನನ ಮೂರ್ಛೆ ತಿಳಿಯಿತು. ಎದ್ದನು. ತನ್ನನ್ನು ತಾನು ನಿಂದಿಸಿಕೊಂಡನು "ಹೇ ಸುನಂದೆ! ಕೋಪಗೊಂಡು ನೀನು ನನ್ನನ್ನು ಬಯ್ಯುವುದೂ ಒಂದು ಚೆನ್ನಾಗಿತ್ತು! ಈಗ ಈ ಮೌನವೇಕೆ? ಸಾವಿನೊಡನೆ

ಈ ಸರಸವೇಕೆ? ಈ ಜನ್ಮದಲ್ಲಿ ನಿನ್ನನ್ನು ನಾನು ಪಡೆಯದೇ ಹೋದರೂ ಮುಂದಿನ ಜನ್ಮದಲ್ಲಾದರೂ ನಿನ್ನನ್ನು ಹೊಂದುವೆನು. ಈಗ ಹೊಗೆಯ ಉಪ್ಪರಿಗೆ ಮನೆಯಲ್ಲಿ, ಚಿಗುರಿನ ಬಣ್ಣದ ಬೆಂಕಿಯ ಹಾಸಿಗೆಯ ನಿನ್ನೊಡನೆ ಮೈಗೆ ಮೈಗೂಡುವೆನು.'' ಎಂದು ಹಂಬಲಿಸಿ, "ನನ ಇನ್ನು ಅರಮನೆಯೇಕೆ? ಓಲಗಸಾಲೆಯೇಕೆ? ನಾನಿನ್ನು ಈ ಸುನಂ ಯನ್ನು ಅರ್ಧಾಸನದಲ್ಲಿ ಕುಳ್ಳಿರಿಸಿಕೊಂಡು ಸಹಗಮನ ಮಾಡಿಕೊಳ್ಳುವೆನು ಎಂದು ನಿಶ್ಚೈಸಿ ನುಡಿದನು.

ತನ್ನ ಅರಸನ ನಿಶ್ಚಯವನ್ನು ಅರಿತು, ಅಂತಃಪುರಸ್ತ್ರೀಯರು ಎಂದು ಕೊಂಡರು: "ಕಂಡವರು ನಗುವರು ಎಂಬ ನಾಚಿಕೆಯಿಲ್ಲದೆ, ನಮ್ಮನ್ನು ಒಲ್ಲದೆ, ಪರವನಿತೆಗೆ ಒಲಿದು, ಅವಳು ಸತ್ತರೆ ಅವಳಿಗಾಗಿ ತನ್ನ ಪ್ರಾಣವನ್ನು ಒಪ್ಪಿಸುತ್ತಿದ್ದಾನೆ. ನೋಡಕ್ಕ: ಮಾವಿನ ಮರವನ್ನು ಮಲ್ಲಿಗೆಬಳ್ಳಿಗಳ ಪ್ರೀತಿಸಿದುವೆಂದರೆ, ಮಾವು ವಸಂತಶ್ರೀಯನ್ನು ತಾನು ಪ್ರೀತಿಸಿತು-ಎಂ ಹಾಗೆ ಆಯಿತು. ನಮ್ಮ ಅರಸ ಏನು ಮಾಡಿದರೂ, ನಾವು ಅವನ ನೆರಳ ಗಳು. ಇನ್ನು ನಮಗೆ ಬದುಕುವ ಆಸೆಯೇಕೆ?'' ಎಂದು ಅವರೆಲ್ಲರೂ ತಾವೂ ಸಹಗಮನಕ್ಕೆ ಸಿದ್ಧರಾದರು.

ಪರಿವಾರವೆಲ್ಲ ನೆರೆಯಿತು. ರಾಣಿವಾಸವೆಲ್ಲ ಸೇರಿತು. ತಾನು ಒಲಿದವಳನ್ನು ಚಂಡಶಾಸನನು ಓಲಗಶಾಲೆಗೆ ತರಿಸಿದನು. ಅವಳ ಶರೀರವನ್ನು ವಿಶೇಷವಾದ ವಿಭೂಷಣಗಳಿಂದ ಅಲಂಕಾರಗೊಳಿಸಿ ವಿಮಾನ ಯಾನದಲ್ಲಿ ಕರೆದೊಯ್ದರು. ಊರೆಲ್ಲ ಆಶ್ಚರ್ಯಪಟ್ಟಿತು, ಊರೆಲ್ಲ ಕಣ್ಣೀರಿಟ್ಟಿತು.

೭

ಅಷ್ಟರಲ್ಲಿ ಈ ಕಡೆ, ವಸುಷೇಣನು ಲಗ್ಗೆಮಾಡಲು ಆನೆಗಳನ್ನು ಸಿದ್ಧಮಾಡಿ, ಕುದುರೆಗಳನ್ನು ಸಜ್ಜುಗೊಳಿಸಿ, ಭಟರು ಆಯುಧಗಳಿಂದ ಸನ್ನದ್ಧರಾಗುವಂತೆ ಏರ್ಪಡಿಸಿ, ರಾಜವಾಸದಿಂದ ಹೊರಗೆ ಬಂದನು.

ಕೋಟೆಯಲ್ಲಿ ಕಾಮಿನಿಯರ, ವೀರರ ಉದ್ರೇಕದ ಶೋಕದ ಕಳಕಳ ಕಿವಿಗೆ ತಾಗಿತು.

ಅದೇನೆಂದು ಕೇಳಬೇಕೆಂಬ ಹೊತ್ತಿಗೆ ಒಬ್ಬ ಚಾರನು ಬಂದು, ಕೋಟೆಯೊಳಗೆ ನಡೆದುದನ್ನು ಹೇಳಿದನು. ವಸುಷೇಣನು ಗ್ರಹ ಹೊಡೆದವನಂತೆ ಸ್ತಂಭೀಭೂತನಾದನು. ಸ್ವಲ್ಪಹೊತ್ತಿನಲ್ಲೇ ಹೇಗೋ ಚೇತರಿಸಿಕೊಂಡು ಹೀಗೆ ಗೋಳಾಡಿದನು :

"ಮಾನಿನಿ! ನಾನು ಸತ್ತೆನೆಂದು ಸುಳ್ಳು ಹೇಳಿದರೆ, ಕೂಡಲೆ ನೀನು ಪ್ರಾಣಬಿಟ್ಟೆ. ಆದರೆ, ಈಗ, ನಿನ್ನ ಸಾವನ್ನು ಕಂಡಮೇಲೂ ನನ್ನ ಜೀವ ನನ್ನ ದೇಹದಲ್ಲಿ ಇನ್ನೂ ಇದೆ. ನನ್ನಂಥ ನಿರ್ಲಜ್ಜರೂ ದೀನರೂ ಕೃಪಣರೂ ಕೃತಘ್ನರೂ ಬೇರೆ ಯಾರುಂಟು ?"

ಅನಂತರ ಪಕ್ಕದಲ್ಲಿದ್ದ ತನ್ನ ಇಷ್ಟ ಸಾಮಂತನನ್ನು ಕುರಿತು ಹೇಳಿದನು : "ಪ್ರಿಯೆಯಾದ ಸುನಂದೆ ಹೋದ ಬಳಿಕ, ನನ್ನ ಬಾಳು ಕಣ್ಣುಗುಡ್ಡೆ ಹೋದ ಕಣ್ಣಿನಂತಾಗಿದೆ. ಸುಗಂಧ ಹೋದ ಒಣಕಲು ಹೂವಿನಂತಾಗಿದೆ, ತುಂಬಿದ್ದ ನೀರೆಲ್ಲ ಹೋದ ಹೊಟ್ಟುಗೆರೆಯ ಹಾಗಾಗಿದೆ. ಹೀಗೆ ಬರಿದಾಗಿ ಬಾಳುಹೆಣವಾಗಿ ಇದ್ದರೇನು ? ಬಿದ್ದರೇನು ? ಅದೂ ಅಲ್ಲದೆ—ಇದರಲ್ಲಿ ಗೆದ್ದುಕೊಳ್ಳಬೇಕಾಗಿದ್ದ ಧನ ಈ ವಲ್ಲಭೆ ಆಗಿದ್ದಳು. ಈಗ ಆ ಪ್ರಾಣೇಶ್ವರೀರತ್ನವಿಲ್ಲದ ಈ ದುರ್ಗಕ್ಕೆ ಲಗ್ಗೆ ಹಾಕಿ ಏನು ಪ್ರಯೋಜನ ? ಇನ್ನು ನಮಗೆ ಗೆಲುವಾದರೇನು ? ಆಗದಿದ್ದರೆ ತಾನೆ ಏನು ?"

ಎಂಬುದಾಗಿ ಬೇಸರಗೊಂಡು, ವಸುಷೇಣನು ಯುದ್ಧವನ್ನು ನಿಲ್ಲಿಸಿದನು. ಬರೆಬಿದ್ದ ಜೂಜುಗಾರನ ಹಾಗೆ, ಲಗ್ಗೆ ಮಾಡಲೊಲ್ಲದೆ, ತನ್ನ ಸೈನ್ಯವನ್ನು ಹಿಂದಿರುಗುವಂತೆ ಆಜ್ಞೆ ಮಾಡಿದನು. ಪಾಳೆಯ ತೆಗೆಯಿತು.

ದುಃಖಿತನಾದವನ ಮನಸ್ಸಿಗೆ ಸರ್ವವೂ ಅಸಹ್ಯ, ಎಂಬ ಮಾತು ವಸುಷೇಣನ ಮಟ್ಟಿಗೆ ದಿಟವಾಯಿತು. ಏನೊಂದರಲ್ಲಿಯೂ ಸಂತೋಷವಿಲ್ಲದೆ ಅಸ್ತಂಗತವಾದ ಪ್ರಭೆಯಂತೆ ತನ್ನ ನಾಡಿಗೆ ಹಿಂದಿರುಗಿದನು.

ಮಗನನ್ನು ತನ್ನ ಸ್ಥಾನದಲ್ಲಿ ರಾಜನನ್ನಾಗಿ ನಿಲ್ಲಿಸಿದನು. ಪ್ರಿಯ ಪತ್ನಿಯನ್ನು ಕಳೆದುಕೊಂಡದ್ದರಿಂದ ಎದೆಯಲ್ಲಿ ಬಲವಾಗಿ ನಾಟಿದ ಶೂಲವನ್ನು ಹೋಗಿಸಿಕೊಳ್ಳುವುದಕ್ಕಾಗಿ, ವಸುಷೇಣನು ತಪಸ್ಸಿಗೆ ಹೋದನು.

ಉನ್ಮಾದಯಂತಿ

"ನೀನು 'ಕಲ್ಲಿನ ಕಾಮಣ್ಣ' ಎಂದು ಹೇಳಿದ್ದು ಬರಿಯ ಈ ವಿಗ್ರಹಕ್ಕೆ ಮಾತ್ರ ಅನ್ವಯವಾಗತಕ್ಕದ್ದಲ್ಲ, ಅದು ಕಾಮನ ನಿಜವಾದ ಗುಣದ ವರ್ಣನೆಯೂ ಹೌದು. ಕಲ್ಲಿನಂತೆ ಕಠಿನ ಕಾಮನ—ಹೃದಯ, ಕಲ್ಲಿನಂತೆ ಕಠಿನ ಕಾಮನ—ಹಿಡಿತ. ಹೌದು, ಮನ್ಮಥನ ಕೈಗೆ ಸಿಕ್ಕಿಕೊಂಡವರಿಗೆ ಭೀತಿಯಿರುವುದಿಲ್ಲ, ಲಜ್ಜೆಯಿರುವುದಿಲ್ಲ. ಅದು ಕೊನೆಯಲ್ಲಿ ಅವರಿಗೂ ಅವರ ಗೋಚರಕ್ಕೆ ಗುರಿಯಾದವರಿಗೂ ಸಾವಿನಲ್ಲಿ ಮುಕ್ತಾಯವಾಗುತ್ತದೆ. ಆದರೂ, ಕಾಮನ ಹಿಡಿತದಿಂದ ಸಕಾಲದಲ್ಲಿ ತಪ್ಪಿಸಿಕೊಂಡು, ಮತ್ತೆ ಚೇತರಿಸಿಕೊಂಡವರೂ ಇಲ್ಲವೆಂದಲ್ಲ. ಅಂಥವನೊಬ್ಬನ ಕಥೆ, ಬೌದ್ಧ ಸಾಹಿತ್ಯದಲ್ಲಿ ಒಂದು ಕಡೆ ಬರುತ್ತದೆ. ಇಂಥ ಕತೆಗಳು ಅತಿ ವಿರಳ. ಕೇಳು."

೧

ಅರಿಷ್ಟಪುರ ಎಂಬ ನಗರಕ್ಕೆ ದೊರೆ, ಶಿಬಿ ಎಂಬವನು. ಅವನ ಪಟ್ಟದ ರಾಣಿಯ ಮಗನಿಗೂ ಶಿಬಿ ಎಂದೇ ಹೆಸರು. ಶಿಬಿರಾಜನ ಸೇನಾಧಿಪತಿಗೆ ಒಬ್ಬ ಹುಡುಗ; ಅವನ ಹೆಸರು ಅಹಿಪಾರಕ.

ಶಿಬಿಕುಮಾರನೂ ಅಹಿಪಾರಕನೂ ಸಮವಯಸ್ಕರು, ಚಿಕ್ಕಂದಿನಲ್ಲಿ ಒಡನಾಡಿಗಳು. ಹದಿನಾರನೇ ವಯಸ್ಸಿನ ವೇಳೆಗೆ ಅವರಿಬ್ಬರೂ ಒಟ್ಟಿಗೆ ತಕ್ಷಶಿಲೆಗೆ ಹೋಗಿ, ಗುರುವಿನ ಬಳಿಯಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿಕೊಂಡು, ಮತ್ತೆ ಅರಿಷ್ಟಪುರಕ್ಕೆ ಹಿಂದಿರುಗಿದರು. ದೊರೆ ಶಿಬಿಕುಮಾರನಿಗೆ ರಾಜ್ಯಾಭಿಷೇಕ ಮಾಡಿದನು; ಕುಮಾರನು ಅಹಿಪಾರಕನನ್ನು ಸೇನಾಧಿಪತಿಯಾಗಿ ನೇಮಿಸಿಕೊಂಡು, ಧರ್ಮದಿಂದ ರಾಜ್ಯವಾಳುತ್ತಿದ್ದನು.

ಅದೇ ನಗರದಲ್ಲಿ ಕಿರೀಟವತ್ಸನೆಂಬ ನಗರಶ್ರೇಷ್ಠಿಯಿದ್ದನು. ಅವನ ಎಂಬತ್ತುಕೋಟಿ ಉಳ್ಳವನು. ಅವನಿಗೆ ಒಬ್ಬಳು ಮಗಳು. ಸುಂದರಿ, ಸುಗುಣಿ, ಸರ್ವಲಕ್ಷಣ ಸಂಪನ್ನೆ. ಅವಳಿಗೆ ನಾಮಕರಣದ ದಿವಸ ಉನ್ಮಾದಯಂತಿ ಎಂದು ಹೆಸರಿಟ್ಟರು. ಅವಳಿಗೆ ಹದಿನಾರು ವರ್ಷ ತುಂಬಿ ದಾಗ, 'ಈಕೆ ಮರ್ತ್ಯ ಕನ್ಯೆಯಲ್ಲ, ದೇವತಾಸ್ವರೂಪಳು' ಎಂದು ಹೇಳು ವಂತಿತ್ತು. ಲೌಕಿಕರಾದವರು ಅವಳನ್ನು ಕಂಡು, ಯಾವುದೋ ಮಾದಕ ವಸ್ತುವನ್ನು ಸೇವಿಸಿದವರಂತೆ ಮತಿಹೀನರಾಗಿ, ಆಕೆಯ ರೂಪಕ್ಕೆ ಪರವಶ ರಾಗಿಬಿಡುತ್ತಿದ್ದರು.

ಅದನ್ನು ಕಂಡು, ಒಮ್ಮೆ ಕಿರೀಟವತ್ಸನು ದೊರೆಯ ಬಳಿಗೆ ಬಂದು, "ಪ್ರಭುವೆ, ನನ್ನ ಮನೆಯಲ್ಲಿ ಒಂದು ಕನ್ಯಾಸಂಪದವಿದೆ. ಆಕೆ ರಾಜನಿಗೆ ಅರ್ಹಳಾದವಳು. ಸ್ತ್ರೀಲಕ್ಷಣಗಳನ್ನು ಬಲ್ಲವರನ್ನು ಕಳುಹಿಸೋಣವಾಗಲಿ. ಅವರು ಬಂದು, ಅವಳ ಶುಭಲಕ್ಷಣಗಳನ್ನು ಪರಿಶೀಲಿಸಿದನಂತರ, ಅರಸರ ಚಿತ್ತ ಹೇಗೋ ಹಾಗೆ ಮಾಡಬಹುದು."

ಅರಸನು ಆ ಶ್ರೇಷ್ಠಿಯ ಮಾತಿಗೆ ಒಪ್ಪಿ, ಲಕ್ಷಣಗಳನ್ನು ಬಲ್ಲ ಬ್ರಾಹ್ಮಣರನ್ನು ಅವನ ಮನೆಗೆ ಕಳುಹಿಸಿದನು. ಅಲ್ಲಿ ಅವರನ್ನು ಮಹಾ ಗೌರವದಿಂದ ಎದುರುಗೊಂಡು, ಸತ್ಕಾರಮಾಡಿ, ಅವರಿಗೆ ಪಾಯಸವನ್ನು ಸಮರ್ಪಿಸಿದ್ದಾಯಿತು.

ಅವರು ಆ ಪಾಯಸವನ್ನು ಸೇವಿಸುತ್ತಿರುವ ವೇಳೆಗೆ ಸರಿಯಾಗಿ, ಉನ್ಮಾದಯಂತಿ ಉಚಿತವಾದ ವೇಷಭೂಷಣಗಳನ್ನು ಅಲಂಕರಿಸಿಕೊಂಡು, ಅಲ್ಲಿಗೆ ಬಂದಳು. ಅವಳನ್ನು ಕಂಡ ಗಳಿಗೆಯಲ್ಲೆ ಆ ಬ್ರಾಹ್ಮಣರು ಬುದ್ಧಿ ಕೆಟ್ಟವರಾದರು, ಹೆಂಡ ಕುಡಿದಂತಾದರು, ತಾವು ಊಟ ಮಾಡುವುದನ್ನು ಮರೆತರು. ಕೆಲವರು ತುತ್ತನ್ನೆತ್ತಿ ಬಾಯಿಗೆ ಹಾಕಿಕೊಳ್ಳುವುದರ ಬದಲು ತಲೆಯ ಮೇಲೆ ಇರಿಸಿಕೊಂಡರು, ಕೆಲವರು ಸೆರಗಿನಲ್ಲಿ ಕಟ್ಟಿಕೊಂಡರು, ಕೆಲವರು ಗೋಡೆಯ ಮೇಲೆ ಎಸೆದರು. ಉನ್ಮಾದಯಂತಿಯನ್ನು ಕಂಡು ಅವರೆಲ್ಲರೂ ಉನ್ಮತ್ತರೇ ಆದರು.

ಆವರ ಆ ಹುಚ್ಚಾಟವನ್ನು ಕಂಡು ಉನ್ಮಾದಯಂತಿಗೆ ಅಸಹ್ಯ ವಾಯಿತು. "ಬುದ್ಧಿ ಇಲ್ಲದ ಇವರು ನನ್ನ ಶುಭಲಕ್ಷಣಗಳನ್ನು ಅರ್ಥಮಾಡಿಕೊಳ್ಳುವರಲ್ಲವೆ? ಯಾರಲ್ಲಿ? ಇವರನ್ನು ಕತ್ತು ಹಿಡಿದು ಆಚೆಗೆ ತಳ್ಳಿ ಕಳೆಯಿರಿ" ಎಂದು ಆಜ್ಞೆ ಮಾಡಿದಳು.

ಆ ಬ್ರಾಹ್ಮಣರಿಗೆಲ್ಲ ಅವಳ ಮೇಲೆ ಅತಿಯಾಗಿ ಕೋಪ ಬಂತು. ನೇರವಾಗಿ ಅರಮನೆಗೆ ಬಂದರು. ದೊರೆಗೆ ಹೇಳಿದರು: "ಸ್ವಾಮಿ, ಅವಳು ಖಂಡಿತವಾಗಿಯೂ ತಮಗೆ ಅನುರೂಪಳಾದವಳಲ್ಲ. ಅವಳು ಶುದ್ಧ ತಾಟಕಿ."

"ಸರಿ. ನನಗೆ ಅವಳು ಅನುರೂಪಳಲ್ಲವೆಂದು ತಿಳಿದವರು ಹೇಳು ತ್ತಿರುವಾಗ, ನಾನೇಕೆ ಅವಳನ್ನು ಕರೆಕಳುಹಿಸಲಿ?" ಎಂದು ದೊರೆ, ಉನ್ಮಾದಯಂತಿಯನ್ನು ಕರೆಸದೆ, ಸುಮ್ಮನಿದ್ದುಬಿಟ್ಟನು.

ಅರಮನೆಯಲ್ಲಿ ಹೀಗಾಯಿತು, ಎಂದು ಉನ್ಮಾದಯಂತಿಗೆ ತಿಳಿಯಿತು. "ನನ್ನನ್ನು ತಾಟಕಿಯೆಂದು ಕರೆದರೆ, ಈ ದೊರೆ ಅದನ್ನು ನಂಬಿಬಿಟ್ಟ ನಲ್ಲವೆ! ಇರಲಿ. ಇದಕ್ಕೆ ತಕ್ಕದ್ದನ್ನು ನಾನು ಮಾಡುತ್ತೇನೆ. ದೊರೆ ಯನ್ನು ಎಲ್ಲಿಯಾದರೂ ಕಂಡಾಗ, ನನ್ನ ತಾಟಕಿತನವನ್ನು ತೋರಿಸು ತ್ತೇನೆ!" ಎಂದು ಮನಸ್ಸಿನಲ್ಲಿ ಸೇಡನ್ನು ಕಟ್ಟಿಕೊಂಡಳು.

ಕಿರೀಟವತ್ಸನು ಆ ಬಳಿಕ ಅವಳನ್ನು ಅಹಿಪಾರಕನಿಗೆ ಕೊಟ್ಟು ಮದುವೆ ಮಾಡಿದನು. ಉನ್ಮಾದಯಂತಿ ತನ್ನ ಪತಿಗೆ ಮನಃಪ್ರಿಯೆ ಯಾದಳು, ಇಷ್ಟಸತಿಯಾದಳು.

೨

ಒಂದು ಸಲ ಕಾರ್ತಿಕ ಮಾಸದ ಹುಣ್ಣಿಮೆಯ ಹಬ್ಬ ಬಂತು. ಊರನ್ನೆಲ್ಲ ಶೃಂಗಾರ ಮಾಡಿದರು.

ಅಹಿಪಾರಕ, ತಾನು ಎಂದಿನಂತೆ ಅರಮನೆಯ ಸೇವೆಗೆ ಹೊರಡುವ ಹೊತ್ತಿನಲ್ಲಿ ತನ್ನವಳಿಗೆ ಹೇಳಿದ: "ಪ್ರಿಯೆ, ಉನ್ಮಾದಯಂತಿ! ಈ ದಿವಸ

ಕಾರ್ತಿಕದ ಪರ್ವ, ರಾಜನು ಮೆರವಣಿಗೆಯಲ್ಲಿ ಹೊರಟು, ಈ ಮನೆಯ ಮುಂದೆಯೂ ಹಾದುಹೋಗುತ್ತಾನೆ. ನೀನು ಅವನ ಕಣ್ಣಿಗೆ ಕಾಣಿಸಿ ಕೊಳ್ಳದಂತೆ ಎಚ್ಚರದಿಂದಿರಬೇಕು. ಏಕೆಂದರೆ, ನಿನ್ನನ್ನು ಅವನು ಕಂಡರೆ, ಅವನಿಗೆ ಬುದ್ಧಿಭ್ರಂಶವಾದರೂ ಆಗಬಹುದು.''

"ನಿಮಗೇನೂ ಚಿಂತೆ ಬೇಡ. ನಾನು ನೋಡಿಕೊಳ್ಳುತ್ತೇನೆ'' ಎಂದಳು, ಉನ್ಮಾದಯಂತಿ.

ಅಹಿಪಾರಕನು ಹೊರಟುಹೋದ ಕೂಡಲೆ, ಅಲಂಕಾರಕ್ಕೆ ತೊಡಗಿದಳು. ತನ್ನ ದೂತಿಯನ್ನು ಕರೆದು, "ಅರಸನ ಸವಾರಿ ಮನೆಯ ಮುಂದೆ ಬಂದಾಗ, ನನಗೆ ಬಂದು ತಿಳಿಸು." ಎಂದು ಆಜ್ಞೆಮಾಡಿದಳು.

ಸಂಜೆಯಾಯಿತು. ಪೂರ್ಣಚಂದ್ರನ ಉದಯವಾಯಿತು. ನಗರದ ಮೂಲೆಮೂಲೆಗಳಲ್ಲೂ ದೀವಟಿಗೆಗಳು ದೇದೀಪ್ಯಮಾನವಾಗಿ ಉರಿದುವು. ಅರಿಷ್ಟಪುರವು ಇಂದ್ರನ ಅಮರಾವತಿಗೆ ಸಮಾನವಾಗಿ ಕಂಗೊಳಿಸಿತು.

ದೊರೆ, ಆ ಹೊತ್ತಿಗೆ ಸರ್ವಾಲಂಕಾರಭೂಷಿತನಾಗಿ, ಜಾತ್ಯಶ್ವಗಳನ್ನು ಹೂಡಿದ ಚಿನ್ನದ ರಥವನ್ನು ಏರಿ, ಪರಿವಾರದವರ ಗಡಣದೊಂದಿಗೆ ನಗರದ ಪ್ರದಕ್ಷಿಣೆ ಮಾಡುತ್ತ, ಮೊದಲು ಅಹಿಪಾರಕನ ಮನೆಯ ಬಾಗಿಲಿಗೆ ಬಂದನು.

ಉನ್ಮಾದಯಂತಿ ನೇಮಕ ಮಾಡಿದ್ದ ದೂತಿ ಓಡಿಹೋಗಿ, ದೊರೆ ಮನೆಯ ಮುಂದೆ ಬಂದನೆಂದು ವರದಿ ಮಾಡಿದಳು.

ಉನ್ಮಾದಯಂತಿ ಆ ದೂತಿಯ ಕೈಯಲ್ಲಿ ಒಂದು ಬುಟ್ಟಿಯ ತುಂಬ ಹೂಗಳನ್ನು ಎತ್ತಿಸಿಕೊಂಡುಹೋಗಿ, ಉಪ್ಪರಿಗೆಯ ಮೇಲೆ ಕಿಟಕಿಯ ಬಳಿ ನಿಂತು, ರಾಜನ ಮೇಲೆ ಹೂಗಳನ್ನು ಕೆದರಿದಳು.

ದೊರೆ ಹೂವಿನ ಮಳೆಯಲ್ಲಿ ನೆನೆದು, ತಲೆಯೆತ್ತಿ ನೋಡಿದನು. ಅಪ್ಸರಸೆಯಂತೆ ನಿಂತ ಉನ್ಮಾದಯಂತಿಯನ್ನು ದೃಷ್ಟಿಸಿದನು. ದೊರೆಗೆ ರಾಗದಿಂದ ಹುಚ್ಚು ಹಿಡಿದಂತಾಯಿತು, ಮನಸ್ಸು ಅತಂತ್ರವಾಯಿತು, ತಾನು ನಿಂತದ್ದು ಅಹಿಪಾರಕನ ಮನೆಯ ಮುಂದೆ ಎಂಬುದು ಅವನಿಗೆ ಅರಿವಾಗಲಿಲ್ಲ.

ಶಿಬಿರಾಜನು ಸಾರಥಿಯನ್ನು ಕೇಳಿದನು: "ಹೇ ಸುನಂದ! ಯಾರ ಮನೆ ಇದು? ಈ ಹೊಂಬಣ್ಣದ ಮನೆ ಯಾರದು? ಆಕಾಶಪ್ರಾಂತದ ಉಲ್ಕೆಯಂತೆ, ಪರ್ವತ ಶಿಖರದ ಸೂರ್ಯರಶ್ಮಿಯಂತೆ ಕಂಗೊಳಿಸುವ ಅವಳು ಯಾರು? ಈ ಮನೆಯವರ ಮಗಳೋ, ಮಡದಿಯೋ, ಸೊಸೆಯೊ? ಹೇಳು, ಸುನಂದ: ಇವಳು ವಿವಾಹಿತೆಯೋ? ಅಥವಾ ಅವಿವಾಹಿತೆಯೊ?"

ಸುನಂದ ಹೇಳಿದ: "ಈ ಮನೆಯು ಯಾರದು ಎಂಬುದೂ ಈ ಸ್ತ್ರೀ ಯಾರು ಎಂಬುದೂ ನನಗೆ ಗೊತ್ತು. ಇವಳ ತಾಯಿತಂದೆಯರ ಮನೆಯವರನ್ನೂ ನಾನು ಬಲ್ಲೆ. ಇವಳ ಕೈಹಿಡಿದಾತನು ಹಗಲೂ ರಾತ್ರಿ ಶ್ರದ್ಧೆಯಿಂದ ತಮ್ಮ ಊಳಿಗ ಮಾಡುತ್ತಿದ್ದಾನೆ. ಆತ ಮಹಾ ಸಮರ್ಥ, ಮಹಾ ವಿವೇಕಿ, ಮಹಾ ಧನಾಢ್ಯ; ಆತನ ಹೆಂಡತಿ ಇವಳು. ಈಕೆಯೇ ಉನ್ಮಾದಯಂತಿ, ಅಹಿಪಾರಕನ ಪತ್ನಿ."

ಅದನ್ನು ಕೇಳಿ, ದೊರೆ ನಿಟ್ಟುಸಿರುಬಿಟ್ಟ: "ಓ! ಎಂಥ ಅನ್ವರ್ಥವಾದ ನಾಮಕರಣ ಮಾಡಿದ್ದಾರೆ ಇವಳಿಗೆ! ಉನ್ಮಾದಯಂತಿಯ ದೃಷ್ಟಿಗೆ ಗುರಿಯಾಗಿ, ನಾನು ಇದೋ ಉನ್ಮಾದಕ್ಕೇ ಗುರಿಯಾಗಿದ್ದೇನೆ!"

ದೊರೆ ಹೀಗೆ ಕಳವಳಗೊಂಡು ಉದ್ವೇಗಕ್ಕೆ ಸಿಕ್ಕಿದನೆಂಬುದನ್ನು ಕಂಡು, ಉನ್ಮಾದಯಂತಿ ಕಿಟಕಿಯನ್ನು ಮುಚ್ಚಿ, ತನ್ನ ಅಂತರ್ಗೃಹಕ್ಕೆ ಹೊರಟುಹೋದಳು.

ಅವಳನ್ನು ದೃಷ್ಟಿಸಿದ ಕ್ಷಣದಿಂದ ದೊರೆಗೆ ನಗರಪ್ರದಕ್ಷಿಣೆಯಲ್ಲಿ ಮನಸ್ಸು ಇಳಿಮುಖವಾಯಿತು. ಸಾರಥಿಯನ್ನು ಕುರಿತು ಹೇಳಿದನು: "ಪ್ರಿಯ ಸುನಂದ! ರಥವನ್ನು ನಿಲ್ಲಿಸು. ಈ ಹಬ್ಬ ನಮ್ಮಂಥವರಿಗಲ್ಲ. ಅಹಿಪಾರಕನಂಥವರು ಇಂಥ ಹಬ್ಬವನ್ನು ಆಚರಿಸಲು ಅರ್ಹರು. ಅಷ್ಟು ಮಾತ್ರವಲ್ಲ, ಈಗ ರಾಜನಾಗಿ ನಾನು ಕುಳಿತಿರುವ ಈ ಸಿಂಹಾಸನಕ್ಕೂ ನಿಜವಾಗಿ ಅವನೇ ಅರ್ಹನಾದವನು" ಎಂದು ರಥವನ್ನು ಹಿಂದಿರುಗಿಸಹೇಳಿ, ಅರಮನೆಗೆ ಹೋಗಿ, ಅಂತಃಪುರವನ್ನು ಸೇರಿದನು.

ಅಲ್ಲಿ ತನ್ನ ರಾಜಶಯ್ಯೆಯ ಮೇಲೆ ಹೊರಳುತ್ತಾ ಹಂಬಲಿಸಿದನು: "ಜಿಂಕೆಯಂತೆ ಕಣ್ಣು. ಚಂದ್ರನಂತೆ ಕಾಂತಿ. ಬೆಳುದಿಂಗಳಿನಲ್ಲಿ ಎರಡು ಚಂದ್ರರ ಉದಯವೋ ಎಂಬ ಭ್ರಮೆ. ಕಡೆಗಣ್ಣಿನ ನೋಟದಿಂದ ನನ್ನನ್ನು ಅವಳು ಕಟ್ಟಿ ಕೆಡವಿದಳು. ಕಿಂಪುರುಷ ಕನ್ಯಕೆಯಂತೆ ಅವಳ ವಿಲಾಸ ನನ್ನನ್ನು ವಶಮಾಡಿಕೊಂಡುಬಿಟ್ಟಿತು. ಏಕವಸ್ತ್ರದಲ್ಲಿ ಸುವ್ಯಕ್ತಳಾದ ಅವಳ ಸುರೂಪಕ್ಕೆ ನಾನು ಸಂಪೂರ್ಣವಾಗಿ ಸೋತೆ. ಆ ಉದ್ದವಾಗಿ ಅಲೆಯಲೆಯಾದ ಕಪ್ಪು ಕೂದಲೋ! ಆ ಕೆಂಪಾದ ಕೈಯ ಉಗುರುಗಳೋ! ಚಂದನವನ್ನು ಪೂಸಿದ ಆ ತೋಳುಗಳೋ! ತಳಿರಿನ ಆ ಬೆರಳುಗಳೋ! ಕೃಶಾಂಗಿಯಾದ ಅವಳು, ರಾಜಶ್ರೇಷ್ಠಿಯಾದ ಕಿರೀಟವತ್ಸನ ಮಗಳು, ಎಂದು ತನ್ನ ನಳಿತೋಳುಗಳನ್ನು ನನ್ನ ಕೊರಳ ಸುತ್ತ ಬಳಸಿಯಾಳು? ಎಂದು ಅವಳ ಹಾರದ ಸುವರ್ಣಾಭರಣ ನನ್ನ ವಕ್ಷಸ್ಥಳದಲ್ಲಿ ನಲಿದೀತು? ನನ್ನ ತುಟಿ ಅವಳ ತುಟಿಯ ಸವಿಯನ್ನು ಎಂದು ಕಂಡೀತು? ಅವಳನ್ನು ಉಪ್ಪರಿಗೆಯ ಮೇಲೆ ಕಂಡ ಆ ಗಳಿಗೆಯಲ್ಲೇ ನನ್ನ ವಿಚಾರ ಓಡಿಹೋಯಿತು. ಕಿವಿಯೋಲೆಗಳ ಕಾಂತಿಯ ಮಧ್ಯೆ ಉನ್ಮಾದಯಂತಿಯ ಮುಖಮಂಡಲವನ್ನು ಕಂಡು ನಾನು ವಿವೇಕಶೂನ್ಯನಾಗಿದ್ದೇನೆ. ಓ, ಶಕ್ರ! ಸಹಸ್ರಲೋಚನ! ನಾನು ಒಂದು ರಾತ್ರಿಯೋ ಎರಡು ರಾತ್ರಿಯೋ ಅಹಿಪಾರಕನ ಸ್ಥಾನದಲ್ಲಿ ಇರಲು ಸಾಧ್ಯವಾದರೆ, ಉನ್ಮಾದಯಂತಿ ನನ್ನವಳಾಗುವುದು ಲಭ್ಯವಾದರೆ, ಅಹಿಪಾರಕನಿಗೆ ಇಲ್ಲಿನ ಅರಸುತನವನ್ನು ಸಂತೋಷದಿಂದ ಒಪ್ಪಿಸಿಬಿಡುತ್ತೇನೆ."

೩

ದೊರೆಯ ಜಾಡ್ಯವನ್ನು ಗಮನಿಸಿದ ಆಪ್ತ ಸಾಮಂತರು ಅಹಿಪಾರಕನ ಹತ್ತಿರ ಬಂದರು. "ದೊರೆ ನಗರದ ಪ್ರದಕ್ಷಿಣಕ್ಕಾಗಿ ಹೊರಟು, ನಿನ್ನ ಮನೆಯ ಮುಂದೆ ಬಂದಾಗ ನಿಂತು, ಮುಂದೆಹೋಗದೆ ಅರಮನೆಗೆ ಹಿಂದಿರುಗಿದನು." ಎಂದು ತಿಳಿಸಿದರು.

ಕೂಡಲೇ ಅಹಿಪಾರಕನು ತನ್ನ ಮನೆಗೆ ಹೋದನು. "ನೀನು ಏನಾದರೂ ದೊರೆಯ ಕಣ್ಣಿಗೆ ಕಾಣಿಸಿಕೊಂಡೆಯ ?" ಎಂದು ಉನ್ಮಾದಯಂತಿಯನ್ನು ಪ್ರಶ್ನಿಸಿದನು.

"ಅದೇನೋ ಕಾಣೆ. ಯಾವನೋ ಒಬ್ಬ, ದೊಳ್ಳುಹೊಟ್ಟೆಯವನು, ಉಬ್ಬುಹಲ್ಲಿನವನು, ರಥದಲ್ಲಿ ಬರುತ್ತಾ ಅದನ್ನು ಇಲ್ಲಿ ನಿಲ್ಲಿಸಿದ. ಅವನೇನು ರಾಜನೋ ರಾಜಕುಮಾರನೋ, ನಾ ಕಾಣೆ. ಯಾರೋ ಪ್ರಭು, ಎಂದರು. ಅದಕ್ಕಾಗಿ ಕಿಟಕಿಯ ಹತ್ತಿರ ಬಂದು, ಇಷ್ಟು ಹೂವು ಹಾಕಿದೆ. ಆತನು ಯಾರೆಂದು ತಿಳಿಯುವುದರೊಳಗೆ ರಥ ಹಿಂದಿರುಗಿಹೋಯಿತು." ಎಂದಳು, ಉನ್ಮಾದಯಂತಿ.

ಅದನ್ನು ಕೇಳಿ, ಅಹಿಪಾರಕ ಹೇಳಿದ: "ನೀನು ನನ್ನನ್ನು ಹಾಳು ಮಾಡಿದೆ!"

ಮಾರನೆಯ ಬೆಳಗ್ಗೆ, ಅಷ್ಟು ಹೊತ್ತಿಗೇ ಎದ್ದು, ಅಹಿಪಾರಕನು ರಾಜನು ಮಲಗುವ ಮನೆಯ ಬಾಗಿಲಿಗೆ ಹೋದನು. ಒಳಗೆ ದೊರೆ "ಉನ್ಮಾದಯಂತೀ! ಉನ್ಮಾದಯಂತೀ!" ಎಂದು ಕನವರಿಸುತ್ತಿದ್ದುದು ಕೇಳಿಸಿತು.

"ಓಹೋ! ಉನ್ಮಾದಯಂತಿಯಲ್ಲಿ ಈತನಿಗೆ ರಾಗೋನ್ಮಾದವುಂಟಾಗಿದೆ! ಅವಳು ಲಭಿಸದಿದ್ದರೆ, ಇವನು ಉಳಿಯುವಂತಿಲ್ಲ. ದೊರೆ ಉಳಿಯುವಂತೆ ಮಾಡಬೇಕಾದ್ದು ನನ್ನ ಕರ್ತವ್ಯ. ಆದರೆ ಮಾತ್ರ ಈ ಕರ್ತವ್ಯದ ನಿರ್ವಹಣೆಯಲ್ಲಿ ನನಗಾಗಲಿ ದೊರೆಗಾಗಲಿ ಪಾಪ ಸಂಭವಿಸಬಾರದು.'' ಎಂದುಕೊಂಡ, ಅಹಿಪಾರಕ.

ನೇರವಾಗಿ ಮನೆಗೆ ಹೋದ, ಅಹಿಪಾರಕ. ಧೀರನಾದವನೊಬ್ಬ ದಾಸನನ್ನು ಕರೆದು, ಅವನಿಗೆ ಹೇಳಿದ: "ಅಯ್ಯಾ! ಇದೋ ಇಂಥ ಕಡೆ ಒಂದು ಮರದ ಪೊಟರೆಯಿದೆ. ಯಾರಿಗೂ ಏನೂ ತಿಳಿಸದೆ, ನೀನು ಈ ಸಂಜೆ ಅಲ್ಲಿಗೆ ಹೋಗಿ ಅಡಗಿಕೋ. ಆ ಪೊಟರೆಯೊಳಗೆ ಒಂದು ವೃಕ್ಷದೇವತೆಯಿದೆಯೆಂದು ಪ್ರತೀತಿ. ನಾನು ಅಲ್ಲಿಗೆ ಬರುತ್ತೇನೆ, ಹಣ್ಣುಕಾಯಿ ಒಪ್ಪಿಸುತ್ತೇನೆ: 'ಓ ದೇವತೆಯೇ! ನಮ್ಮ ದೊರೆ, ನೆನ್ನೆ ಹಬ್ಬದ ದಿವಸ, ನಗರ

ಪ್ರದಕ್ಷಿಣೆಯನ್ನು ಪೂರೈಸದೆ, ಹೊರಟಂತೆಯೇ ಹಿಂದಿರುಗಿ ಬಂದು, ಒಬ್ಬನೇ ಏಕಾಂತದಲ್ಲಿ ಕಳವಳದಿಂದ ನಿದ್ರೆಯಿಲ್ಲದೆ ಕನವರಿಸುತ್ತಿದ್ದಾನೆ. ಇದು ಏಕೋ ನಮಗೆ ತಿಳಿಯದು. ಈ ದೊರೆ ಅನೇಕ ದೇವತಾಕಾರ್ಯಗಳನ್ನು ಮಾಡಿ, ವರ್ಷೇ ವರ್ಷೇ ಯಜ್ಞಯಾಗಾದಿಗಳಿಗಾಗಿ ಸಾವಿರಾರು ಹೊನ್ನು ವೆಚ್ಚಮಾಡಿದ್ದಾನೆ. ಈ ದೊರೆಗೆ ಈ ಬುದ್ಧಿಭ್ರಮಣೆ ಏಕೆ ಎಂಬುದನ್ನು ತಿಳಿಸಿ, ಇವನಿಗೆ ಜೀವದಾನಮಾಡು.' ಎಂದು ಕೇಳಿಕೊಳ್ಳುತ್ತೇನೆ. ಆಗ ನೀನು, ಮರೆಯದೆ ಹೀಗೆ ಹೇಳಬೇಕು: "ಓ ಸೇನಾಪತಿಯೇ! ನಿಮ್ಮ ದೊರೆಗೆ ಏನೂ ಕಾಯಿಲೆಯಿಲ್ಲ. ಆದರೆ ನಿನ್ನ ಪತ್ನಿಯಾದ ಉನ್ಮಾದಯಂತಿಯಲ್ಲಿ ಅವನ ಮನಸ್ಸು ಆಸಕ್ತವಾಗಿ, ಹುಚ್ಚು ಹಿಡಿದಂತಾಗಿದ್ದಾನೆ. ಅವಳನ್ನು ಪಡೆದರೆ, ಅವನು ಜೀವಿಸುವನು; ಇಲ್ಲದೇಹೋದರೆ ಜೀವ ಬಿಡುವನು.' ಹೀಗೆಂದು ತಪ್ಪದೆ ನೀನು ಒಪ್ಪಿಸಬೇಕು."

ಹೀಗೆಂದು ಅಹಿಪಾರಕನು ಅವನಿಗೆ ಕಲಿಸಿಕೊಟ್ಟು, ಅವನನ್ನು ಕಳಿಸಿದನು.

ಸಂಜೆಗೆ ಆ ಸೇವಕನು ಹೋಗಿ, ತನ್ನ ಸ್ವಾಮಿ ಹೇಳಿದ್ದ ಪೊಟರೆಯಲ್ಲಿ ಅವಿತುಕೊಂಡನು. ಸಂಜೆಗೆ ಅಹಿಪಾರಕನೂ ಅಲ್ಲಿಗೆ ಬಂದನು. ಪೂಜೆ ಮಾಡಿದನು, ಪ್ರಾರ್ಥನೆ ಮಾಡಿದನು, ಪ್ರಶ್ನೆ ಕೇಳಿದನು. ಸೇವಕನು ತನಗೆ ಕಲಿಸಿದ್ದನ್ನು ಚಾಚು ತಪ್ಪದೆ ಒಪ್ಪಿಸಿದನು.

ಸೇನಾಪತಿಯು ಮಂತ್ರಿಗಳ ಹತ್ತಿರ ಬಂದು, ಪೊಟರೆಯ ವೃಕ್ಷ ದೇವತೆ ಹೀಗೆ ಹೀಗೆ ಹೇಳಿತು ಎಂದು ತಿಳಿಸಿದನು. ಅವರನ್ನೂ ಕರೆದು ಕೊಂಡು ಅರಮನೆಗೆ ಹೋಗಿ, ರಾಜನ ಶಯ್ಯಾಗೃಹದ ಬಾಗಿಲಿನಲ್ಲಿ ನಿಂತು, ತಟ್ಟಿದನು.

ರಾಜನಿಗೆ ಎಚ್ಚರವಾಯಿತು. "ಯಾರು?" ಎಂದು ಕೇಳಿದನು.

"ನಾನು, ತಮ್ಮ ಸೇನಾಪತಿ: ಅಹಿಪಾರಕ."

ಅಹಿಪಾರಕನು ಶಯ್ಯಾಗೃಹದ ಬಾಗಿಲುಗಳನ್ನು ತೆರೆದು, ಒಳಗೆ ಪ್ರವೇಶಿಸಿ, ಅರಸನಿಗೆ ವಂದನೆಮಾಡಿ, ಹೇಳಿದನು: "ದೊರೆಯೇ! ವೃಕ್ಷ ದೇವತೆಯೊಂದಕ್ಕೆ ಪೂಜೆ ಮಾಡುತ್ತಿರುವಾಗ ಈ ಬೆಳಗ್ಗೆ ಆ ದೇವತೆ ಹೀಗೆ

ತಿಳಿಸಿತು: ‘ ಶಿಬಿರಾಜನಿಗೆ ಉನ್ಮಾದಯಂತಿಯ ಉನ್ಮಾದ ಹಿಡಿದಿದೆ. ಅವಳನ್ನು ಪಡೆದರೆ, ಅವನು ಬದುಕುವನು; ಪಡೆಯದಿದ್ದರೆ, ಸಾಯುವನು.” ಉನ್ಮಾದಯಂತಿಯನ್ನು ನೀನು ಸ್ವೀಕರಿಸು. ನಿನ್ನ ಮನೋರಥ ಪೂರ್ಣವಾಗಲಿ.”

ದೊರೆ ಲಜ್ಜೆಯ ಕಡಲಿನಲ್ಲಿ ಮುಳುಗಿಹೋಗಿ ಕೇಳಿದನು: “ ಓ ಅಹಿಪಾರಕ! ಉನ್ಮಾದಯಂತಿಯ ಮೇಲಿನ ಉನ್ಮಾದದಿಂದ ನಾನು ಬಾಯಿಗೆ ಬಂದಂತೆ ಮಾತಾಡುತ್ತಿರುವೆನೆಂಬುದನ್ನು ವೃಕ್ಷದೇವತೆಗಳೂ ತಿಳಿದಿರುವುವೇನು ? ”

“ ಹೌದು, ದೊರೆಯೆ. ಅವುಗಳಿಗೂ ಗೊತ್ತಾಗಿದೆ.”

“ ನನ್ನ ಗುಟ್ಟು ಜಗತ್ತಿಗೇ ರಟ್ಟಾಗಿದೆ, ಹಾಗಾದರೆ! ” ಎಂದು ಶಿಬಿರಾಜನು ತಲೆ ತಗ್ಗಿಸಿದನು.

ಅನಂತರ ಆ ದೊರೆಗೂ ಅವನ ಸೇನಾಪತಿಗೂ ಈ ಕೆಳಗೆ ಕಾಣುವಂತೆ ಮಾತುಕತೆ ನಡೆಯಿತು:

೪

“ ಇಂಥ ಅಕಾರ್ಯವನ್ನು ಮಾಡಿದ ನನಗೆ ಏನು ಉತ್ತಮಗತಿ ಆದೀತು? ಲೋಕಕ್ಕೆಲ್ಲ ನನ್ನ ಮಹಾಪಾಪ ಪ್ರಕಟವಾಗುತ್ತದೆ. ಅಲ್ಲದೆ, ಉನ್ಮಾದಯಂತಿಯನ್ನು ಕಳೆದುಕೊಂಡದ್ದರಿಂದ ನಿನಗೆ ಘೋರವಾದ ವ್ಯಸನ ಪ್ರಾಪ್ತವಾಗುತ್ತದೆಯಲ್ಲಾ! ”

“ ನಿನ್ನ ಹೊರತು, ನನ್ನ ಹೊರತು, ಈ ಕಾರ್ಯ ಯಾರಿಗೂ ತಿಳಿಯುವಂತಿಲ್ಲ, ದೊರೆಯೆ. ಉನ್ಮಾದಯಂತಿಯನ್ನು ನಾನು ನಿನಗೆ ಒಪ್ಪಿಸುತ್ತೇನೆ. ನಿನ್ನ ಉಪಯೋಗವಾದ ಮೇಲೆ, ಅವಳನ್ನು ಕಳುಹಿಸಿಕೊಡಬಹುದು.”

“ ಪಾಪ ಮಾಡುವವನು, ‘ ನಾನು ಮಾಡುವ ಪಾಪ ಯಾವ ಮರ್ತ್ಯರ ಕಣ್ಣಿಗೂ ಗೋಚರವಾಗುವುದಿಲ್ಲ’ ಎಂದುಕೊಂಡಿರುತ್ತಾನೆ. ಆದರೆ ದಿವ್ಯದರ್ಶನವುಳ್ಳವರ ಕಣ್ಣಿಗೆ ಅದೆಲ್ಲ ಗೋಚರವಾಗದಿರುವುದಿಲ್ಲ. ಅಹಿಪಾರಕ,

ಉನ್ಮಾದಯಂತಿಯಲ್ಲಿ ನಿನಗೆ ಪ್ರೀತಿಯಿಲ್ಲ ಎಂದು ನೀನು ಹೇಳಿದರೂ ಅದನ್ನು ನಂಬುವವರು ಯಾರು? ಉನ್ಮಾದಯಂತಿಯನ್ನು ಕಾಣದೆ ನೀನ ಎಷ್ಟು ದುಃಖಪಡಬೇಕಾದೀತು?"

"ಉನ್ಮಾದಯಂತಿ ನನ್ನ ಪ್ರಾಣಪ್ರಿಯೆ. ಅವಳು ನನ್ನ ಧರ್ಮ ಪತ್ನಿ. ಆದರೆ, ಸಿಂಹವು ತನ್ನ ಗುಹೆಗೆ ತಾನು ಹೋಗುವಂತೆ, ನೀನು ಅವ ಬಳಿಗೆ ಹೋಗಬಹುದು, ಅರಸೆ."

"ವಿವೇಕಿಯಾದವನು, ತನ್ನ ಐಹಿಕಸುಖಗಳಿಗಾಗಿ ತನ್ನ ಪರವನ್ನು ಎಂದಿಗೂ ಬಲಿಗೊಡುವುದಿಲ್ಲ. ಇದು ಬುದ್ಧಿಯಿದ್ದವರು ಯಾರೂ ಮಾಡುವ ಕೆಲಸವಲ್ಲ."

"ದೊರೆಯೆ! ನಮಗೆ ತಾಯಿ, ತಂದೆ, ಪತಿ, ಸ್ವಾಮಿ, ಎಲ್ಲವೂ ನೀನೆ ನಾನೂ ನನ್ನ ಹೆಂಡತಿ ಮಕ್ಕಳೂ ನಿನ್ನ ದಾಸರು, ನಿನ್ನ ಸೇವಕರು. ನಾವು ನಿನ್ನ ಸ್ವತ್ತು. ನಮ್ಮನ್ನು ನೀನು ಬೇಕಾದಂತೆ ಬಳಸಬಹುದು."

"ಯಾವಾತನು 'ನಾನು ಸ್ವಾಮಿ, ನಾನು ಪ್ರಭು' ಎಂದು ತನ್ನ ಸುತ್ತುಮುತ್ತಿನವರಿಗೆ ಪೀಡೆ ಕೊಡುವನೋ ಅಂಥವನ ಆಯುಷ್ಯ ಅರ್ಥ ವಾಗುತ್ತದೆ. ದೇವತೆಗಳಿಗೆ ಅವನ ಮೇಲೆ ಕೋಪಬರುತ್ತದೆ."

"ಜನರು ತಮಗೆ ಅಗತ್ಯವೆಂದು ಬಯಸಿದ್ದನ್ನು ತಾವಾಗಿಯೇ ಒಬ್ಬರು ದಾನ ಮಾಡಿದರೆ, ಅದರಿಂದ ದಾನಕೊಟ್ಟವರಿಗೂ ದಾನ ಕೊಂಡವರಿಗೂ ಸುಖಸಂತೋಷವುಂಟು."

"ಅಹಿಪಾರಕ! 'ಉನ್ಮಾದಯಂತಿಯಲ್ಲಿ ನನಗೆ ಪ್ರೀತಿಯಿಲ್ಲ' ವೆಂದು ನೀನು ಹೇಳಿದರೆ ಯಾರು ನಂಬಿಯಾರು? ಉನ್ಮಾದಯಂತಿಯನ್ನು ಕಳೆದುಕೊಂಡರೆ ನಿನ್ನ ದುಃಖವು ಸಹಿಸಲಾರದ್ದಾಗುತ್ತದೆ."

"ಹೌದು, ದೊರೆಯೆ. ಉನ್ಮಾದಯಂತಿ ನನ್ನ ಜೀವರತ್ನ, ನನ್ನ ಪ್ರಿಯಪತ್ನಿ. ಆದರೂ, ನಾನು ಅವಳನ್ನು ನಿನಗೆ ಒಪ್ಪಿಸುತ್ತೇನೆ. ನಿನ್ನ ಉಪಯೋಗ ಮುಗಿದ ಮೇಲೆ, ಅವಳನ್ನು ಕಳುಹಿಸಿಕೊಡಬಹುದು."

"ತನ್ನ ನೋವನ್ನು ನೀಗಿಕೊಳ್ಳುವುದಕ್ಕಾಗಿ ಇತರರಿಗೆ ನೋವು ಕೊಡುವವನು, ತನ್ನ ಸಂತೋಷದ ಲಾಭಕ್ಕಾಗಿ ಇತರರ ಸಂತೋಷವನ್ನು

ನೀಗಲಾಡಿಸುವವನು, ಎಂದಿಗೂ ಧರ್ಮವೆಂಬುದನ್ನು ಕಾಣ. ಧರ್ಮವನ್ನು ತಿಳಿದವನು ಇತರರಿಗೆ ಸಂತೋಷವಾಗಲೆಂದು ತನಗೆ ನೋವಾದರೂ ಅದನ್ನು ಅನುಭವಿಸುವನು."

"ಉನ್ಮಾದಯಂತಿ ನನ್ನ ಕಣ್ಮಣಿ, ನನ್ನ ಪ್ರಾಣವಲ್ಲಭೆ. ಇಂಥ ಸುವಸ್ತುವನ್ನು ನಾನು ನಿನಗೆ ನೀಡುತ್ತೇನೆ. ಇಂಥ ದಾನ ಎಂದಿಗೂ ವ್ಯರ್ಥವಾಗದು. ಸ್ವೀಕರಿಸು, ದೊರೆಯೆ."

"ಈ ಕಾಮದಿಂದ ನಾನು ಸತ್ತರೂ ಸತ್ತೇನು. ಆದರೆ ಮಾತ್ರ, ಧರ್ಮವನ್ನು ಅತಿಕ್ರಮಿಸುವುದು ನನ್ನಿಂದ ಆಗದು."

"ಅರಸೆ! ಉನ್ಮಾದಯಂತಿ ನನ್ನ ಹೆಂಡತಿಯೆಂಬ ಕಾರಣದಿಂದ ಅವಳನ್ನು ಒಪ್ಪಿಸಿಕೊಳ್ಳಲು ನೀನು ಹಿಂದೆಗೆಯುವುದಾದರೆ, ಇದೋ, ಸರ್ವಲೋಕದ ಎದುರಿಗೆ ನಾನು ಅವಳ ವಿವಾಹವನ್ನು ವಿಚ್ಛೇದಗೊಳಿಸುತ್ತೇನೆ. ನೀನು ಅವಳನ್ನು ದಾಸಿಯನ್ನಾಗಿ ಸ್ವೀಕರಿಸಿ. ಸುಖದಿಂದಿರು."

"ಏನೆಂದೆ, ಅಹಿಪಾರಕ! ನಿರ್ದೋಷಿಯಾದ ಅವಳ ದಾಂಪತ್ಯವನ್ನು ಒಡೆದು, ಅನ್ಯೋನ್ಯವಾಗಿರುವ ನಿನ್ನ ಸಂಸಾರವನ್ನು ಮುರಿದು, ಎರಡು ಸುಖಜೀವಿಗಳಿಗೆ ನಾನು ದುಃಖವನ್ನು ತಂದು ಒಡ್ಡಲೆ ?"

"ನಿನಗೇನೂ ಚಿಂತೆ ಬೇಡ, ದೊರೆಯೆ. ಇದರಿಂದ ಏನು ದೋಷ ಬಂದರೂ, ಏನು ನಿಂದೆ ಬಂದರೂ, ಏನು ಅಪವಾದ ಬಂದರೂ, ಅದೆಲ್ಲ ನನ್ನ ತಲೆಯ ಮೇಲೆ ಇರಲಿ. ನೀನು ನಿಶ್ಚಿಂತೆಯಿಂದ ಉನ್ಮಾದಯಂತಿಯನ್ನು ಪಡೆದು ಸುಖದಿಂದಿರು."

"ಯಾವಾತನು ನಿಂದಾಪ್ರಶಂಸೆಗಳಿಗೆ ಲೆಕ್ಕಿಸುವುದಿಲ್ಲವೋ, ಯಾವನು ಕೀರ್ತಿ ಅಕೀರ್ತಿಗಳಿಗೆ ಗಮನ ಕೊಡುವುದಿಲ್ಲವೋ, ಅಂತಹವನನ್ನು ಲಕ್ಷ್ಮಿ ತೊರೆದು ತಳ್ಳಿಹೋಗುವಳು."

"ಇದರಿಂದ ಏನು ಸುಖ ದುಃಖ ಬಂದರೂ ನನಗೆ ಅದು ಸಮನೇ. ಭೂಮಿ ಸರ್ವವನ್ನೂ ಸಹಿಸುವಂತೆ, ನಾನು ಇದನ್ನು ಸಹಿಸುತ್ತೇನೆ. ನೀನು ಅವಳನ್ನು ಸ್ವೀಕರಿಸು ಪ್ರಭುವೆ."

"ನಾನು ಮಾಡುವ ಅಕಾರ್ಯದಿಂದ ಇನ್ನೊಬ್ಬನಿಗೆ ದುಃಖವಾಗುವುದ
ಬೇಡ. ಯಾರ ಮನಸ್ಸಿಗೂ ಏನೂ ನೋವಾಗದಂತೆ, ನನ್ನ ಕೃತ್ಯಗ
ತಾಪವನ್ನು ನಾನೇ ಅನುಭವಿಸುತ್ತೇನೆ."

"ಉಪಕಾರ ಮಾಡಿದ್ದರಿಂದ ಪುಣ್ಯ ಸಂಪಾದನೆಯಾಗುತ್ತದೆ. ನನ
ಪುಣ್ಯ ಸಂಪಾದನೆಗೆ ನೀನು ಅಡ್ಡಿಯಾಗಬೇಡ. ದೊರೆಗಳು ಪುರೋಹಿತರಿ
ದಕ್ಷಿಣೆಗಳನ್ನು ನೀಡುವಂತೆ ಉನ್ಮಾದಯಂತಿಯನ್ನು ನಿನಗೆ ನಾನಾಗಿಯೆ
ನೀಡುತ್ತಿದ್ದೇನೆ."

"ನನಗೆ ಉಪಕಾರ ಮಾಡಬೇಕೆಂದು ನಿನ್ನ ಇಷ್ಟ. ನೀನೂ ನಿನ
ಪತ್ನಿಯೂ ನನಗೆ ಹಿತಚಿಂತಕರು. ಆದರೂ, ಇಂಥ ಕಾರ್ಯವನ್ನು ನಾನ
ಮಾಡಿದರೆ, ದೇವತೆಗಳೂ ಬ್ರಾಹ್ಮಣರೂ ನನಗೆ ಎಂದಿಗೂ ಪ್ರಸನ್ನರಾ
ಲಾರರು."

"ನಾನಾಗಿಯೇ ನನ್ನ ಪತ್ನಿಯನ್ನು ಕಳಿಸಿಕೊಡುವಾಗ ನಗರದ
ರಾಗಲಿ ಹಳ್ಳಿಗರಾಗಲಿ ಯಾರೂ ನಿನ್ನನ್ನು ಏನೂ ನಿಂದಿಸಲಾರರು. ನಿರ್ಭೀ
ಯಿಂದ ನೀನು ಅವಳನ್ನು ಪಡೆದು ಆದ ಮೇಲೆ, ಮತ್ತೆ ನನ್ನ ಮನೆ
ಕಳಿಸಿಕೊಡು."

"ನನ್ನ ವಿಷಯದಲ್ಲಿ ನಿನಗೆ ತುಂಬ ದಯೆಯಿದೆ. ನೀನೂ ನಿನ್
ಪತ್ನಿಯೂ ನನಗೆ ಮಿತ್ರರು. ಸತ್ಪುರುಷರ ಸತ್ಕಾರ್ಯವನ್ನು ಎಲ್ಲರ
ಕೀರ್ತಿಸುವರು. ಸಮುದ್ರವು ಹೇಗೆ ಮರ್ಯಾದೆಯನ್ನು ಮೀರದೋ, ಹಾ
ಧರ್ಮವನ್ನು ನಾವೂ ಮೀರಬಾರದು."

"ಸ್ವಾಮಿಯೇ, ನಿನ್ನಿಂದ ನಮಗೆ ಅನೇಕ ತೆರನಾದ ಅನುಗ್ರಹ
ವಾಗಿದೆ. ನಾವು ಕೊಟ್ಟ ಒಂದು ನಿನ್ನ ಕಡೆಯಿಂದ ಹತ್ತಾಗಿ ನಮಗ
ಲಭಿಸಿದೆ. ಉನ್ಮಾದಯಂತಿಯನ್ನು ನಾನು ಕೊಟ್ಟ ದಾನವೆಂದು ನೀನ
ಪರಿಗ್ರಹಿಸು."

"ನನ್ನ ಮೆಚ್ಚಿನ ಸೇನಾಪತಿಯೆ? ನೀನು ಚಿಕ್ಕಂದಿನಿಂದಲೂ
ಧರ್ಮವನ್ನು ದಾಟಿಹೋದವನಲ್ಲ. ಹಗಲೂ ರಾತ್ರೆ ನನ್ನ ಕಲ್ಯಾಣಕ್ಕಾಗಿ
ನಿನ್ನಂತೆ ದುಡಿದಿರುವವರು ಬೇರೊಬ್ಬರಿಲ್ಲ."

"ನನ್ನ ಮೆಚ್ಚಿನ ದೊರೆಯೆ! ನೀನು ವಿಖ್ಯಾತನಾದವನು, ಪ್ರಬುದ್ಧನಾದವನು, ಧರ್ಮವನ್ನು ತಿಳಿದವನು, ಧರ್ಮದಲ್ಲಿ ನಡೆಯುವವನು. ಹೀಗೆಯೇ ಧರ್ಮದಿಂದ ರಕ್ಷಿತನಾಗಿ, ಬಹುಕಾಲ ಬಾಳು. ಬಹುಕಾಲ ಬಾಳಿ, ನನ್ನನ್ನೂ ಧರ್ಮದಲ್ಲಿ ನಡಸು."

ಆಗ ಶಿಬಿಗಳ ರಾಜನು ಹೇಳಿದನು:

"ಕೇಳು, ಅಹಿಪಾರಕ. ಸತ್ಪುರುಷರಾದವರು ಎಂತಹ ಧರ್ಮವನ್ನು ಆಚರಿಸುವರೆಂಬುದನ್ನು ಹೇಳುತ್ತೇನೆ, ಕೇಳು: ಧರ್ಮದಲ್ಲಿ ರಮಿಸುವ ದೊರೆಗೆ ಇಹಪರ ಎರಡರಲ್ಲೂ ಸುಖವುಂಟು. ಮಿತ್ರರಿಗೆ ದ್ರೋಹ ಮಾಡದಿರುವುದೂ ಪಾಪದಿಂದ ದೂರವಿರುವುದೂ ಸುಖವೆಂದು ತಿಳಿದವರು ಹೇಳುತ್ತಾರೆ. ಧರ್ಮವನ್ನು ಹಿಡಿದು ನಡೆಯುವ ರಾಜನ ಮೃದುವಾದ ಆಳಿಕೆಯ ಆಶ್ರಯದಲ್ಲಿ ಪ್ರಜೆಗಳು, ನಡುಮಧ್ಯಾಹ್ನದಲ್ಲಿ ಎಲೆಗಳು ತುಂಬಿದ ಮರದ ನೆರಳಿನಲ್ಲಿ ಹೇಗೋ ಹಾಗೆ, ತಂಪಾಗಿ ಬದುಕುವರು. ನನ್ನ ಮನಸ್ಸು ಪಾಪದ ಕಡೆಗೆ ಎಳೆದರೂ, ನಾನು ಪಾಪ ಮಾಡತಕ್ಕವನಲ್ಲ. ಒಂದು ದೃಷ್ಟಾಂತ ಹೇಳುತ್ತೇನೆ, ಕೇಳು, ಅಹಿಪಾರಕ: ಗೋವುಗಳ ಸಮೂಹವನ್ನು ನಡೆಸಿಕೊಂಡು ಹೋಗುವ ಗೂಳಿಯು ತಪ್ಪು ದಾರಿ ಹಿಡಿದುಹೋದರೆ, ಅದನ್ನು ನಂಬಿ ಹಿಂಬಾಲಿಸುವ ಹಿಂಡು ಅಷ್ಟೂ ಹಾಳಾಗುವುದು; ಆದರೆ, ದಾರಿಯನ್ನು ತಿಳಿದುಹೋಗುವ ಗೂಳಿಯ ಹೆಜ್ಜೆಯಲ್ಲಿ ನಡೆಯುವ ಹಸುಗಳು ಸುಖವಾಗಿ ಕ್ಷೇಮವನ್ನು ಪಡೆಯುವುವು. ನಾನು ಅಧರ್ಮವಾದ ಕರ್ಮವನ್ನು ಮಾಡುವುದೂ ಬೇಡ, ಅದರಿಂದ ಬರುವುದು ಐಹಿಕ ಭೋಗವಾಗಲಿ ಸ್ವರ್ಗೀಯ ಸಂಪದವಾಗಲಿ ಅದೂ ನನಗೆ ಬೇಡ. ಶಿಬಿಗಳ ಕುಲದಲ್ಲಿ ಹುಟ್ಟಿದ ನಾನು ನ್ಯಾಯಪರನಾದ ನೇತಾರನು; ನನಗೆ ಅನ್ಯಾಯದ ವರ್ತನೆ ಸಲ್ಲದು. ನಾನು ಧರ್ಮ ಹೇಗೋ ಹಾಗೆ ನಡೆಯುವವನೇ ಹೊರತು, ನನ್ನ ಇಚ್ಛೆ ಹೇಗೆಂದರೆ ಹಾಗೆ ಹುಚ್ಚುಹುಚ್ಚಾಗಿ ಆಡುವವನಲ್ಲ."

ಅರಸನ ಮಾತನ್ನು ಅನುಮೋದಿಸಿ ಅಹಿಪಾರಕನು ಹೇಳಿದನು:

"ನಿನ್ನ ಈ ಮಂಗಳಕರವಾದ ರಾಜ್ಯಭಾರ ನಿತ್ಯವಾಗಿರಲಿ, ದೊರೆಯೆ. ನಿನ್ನ ರಾಜ್ಯವನ್ನು ನೀನು ಉತ್ತಮಗತಿಗೆ ನಡಸು. ಧರ್ಮವನ್ನು ಹಿಡಿದು

ಆಚರಿಸುವುದರಲ್ಲಿ ಪರಾಯಣನಾದ ನೀನು ನಮಗೆ ರಾಜನಾಗಿರುವುದ ನಮ್ಮ ಸೌಭಾಗ್ಯ. ತಾಯಿತಂದೆಯರಲ್ಲಿ, ಹೆಂಡತಿ ಮಕ್ಕಳಲ್ಲಿ, ಮಿತ್ರರಲ್ಲಿ ಪರಿವಾರದವರಲ್ಲಿ, ಸಂಚಾರ ಕಾಲದಲ್ಲಿ, ಯುದ್ಧ ಸಮಯದಲ್ಲಿ, ನಗರದಲ್ಲಿ ಗ್ರಾಮದಲ್ಲಿ, ಶ್ರಮಣರಲ್ಲಿ, ಬ್ರಾಹ್ಮಣರಲ್ಲಿ, ಪಶುಗಳಲ್ಲಿ, ಪಕ್ಷಿಗಳಲ್ಲಿ ಎಲ್ಲರಲ್ಲಿಯೂ ಎಲ್ಲ ಕಡೆಯೂ ಎಲ್ಲ ವೇಳೆಯಲ್ಲಿಯೂ ಧರ್ಮವನ್ನು ಬಿಡ ಆಚರಿಸು, ದೊರೆಯೆ. ಧರ್ಮವನ್ನು ಬಿಡದೆ ಹಿಡಿದು ಆಚರಿಸಿದ ಪೂರ್ವ ರಾಜರುಗಳು ಇಲ್ಲಿ ಚೆನ್ನಾಗಿ ಬದುಕಿದ ಮೇಲೆ ಸತ್ತು ಸುಗತಿಗೆ ಹೋದರು ಅಪ್ರಮಾದದಿಂದ ಧರ್ಮದ ದಾರಿಯಲ್ಲಿ ನಡೆದವರಿಗೆ ತುಂಬ ಶ್ರೇಯಸ್ಸು ದೊರೆಯೆ. ಅಪ್ರಮತ್ತರಾಗಿ ಧರ್ಮವನ್ನು ನಡಸಿದ್ದರಿಂದಲೇ ದೇವತೆಗಳ ದೇವತ್ವವನ್ನು ಪಡೆದರು, ಇಂದ್ರನು ಇಂದ್ರಪದವಿಯನ್ನು ಪಡೆದನು."

ಸೇನಾಪತಿಯಾದ ಅಹಿಪಾರಕನು ಹೀಗೆ ಧರ್ಮವನ್ನು ಕುರಿತ ಕೊಂಡಾಡಿದನು. ಅದರಿಂದ ಅನುಕೂಲವಾದ ಮನಸ್ಸುಳ್ಳವನಾಗಿ ಶಿಬ ರಾಜನು ಉನ್ಮಾದಯಂತಿಯ ಮೇಲೆ ತನಗೆ ಉಂಟಾಗಿದ್ದ ಮೋಹವನ್ನು ನೀಗಿಕೊಂಡನು.

ಚಿನ್ನದ ಕತ್ತೆ

"ಅಂತೂ ನಿಮ್ಮವರೂ ಒಳ್ಳೇ ರುಚಿರುಚಿಯಾಗಿ ಕತೆ ಕಟ್ಟುತ್ತಾರಯ್ಯ ನೋಡು: ಇನ್ನುಮೇಲೆ ನೀನು ದಿನವೂ ಇಂತಹದು ಒಂದೆರಡು ಕತೆ ಹೇಳು; ನಾನೂ ಇಂತಹದು ಒಂದೆರಡು ಹೇಳುತ್ತೇನೆ. ತಮಾಷೆಯಾಗಿ ಹೊತ್ತು ಹೋಗುತ್ತೆ."

"ಅಣ್ಣಯ್ಯ! ಇದುವರೆಗೆ ನಾನು ಹೇಳಿದ ಎರಡೂ ಕತೆಗಳು ತಮಾಷೆಗಾಗಿ ಹೊತ್ತು ಕಳೆಯಲು ಕಟ್ಟಿದ ಕತೆಗಳಲ್ಲ. ಜೈನರೂ ಬೌದ್ಧರೂ ತಮ್ಮ ಸಾಹಿತ್ಯದಲ್ಲಿ ಏನು ಹೇಳಿದರೂ, ಅದರಲ್ಲಿ ಧರ್ಮದ ಒಂದು ಕಿರಣ ವನ್ನು ಆವೇಶ ಮಾಡಿಸಿರುತ್ತಾರೆ. ಬರಿಯ ಈ ಕತೆ ಮಾತ್ರ ಕೇಳಿಕೊಂಡರೆ ಸಾಲದು, ಈ ಕತೆಯನ್ನು ತನ್ನಲ್ಲಿ ಹಿಡಿದಿಟ್ಟುಕೊಂಡಿರ.ವ ಅದರ ಸುತ್ತಿನ ಕತೆಯನ್ನೂ ಕೇಳಬೇಕು. ಆಗ ಹೊತ್ತು ಕಳೆದದ್ದು, ಸುಮ್ಮನೆ ತಮಾಷೆ ಗಾಗಿ ಮಾತ್ರವಲ್ಲದೆ, ಸಾರ್ಥಕವಾಗಿಯೂ ಆಗುತ್ತದೆ."

"ಈ ಮಾತು, ನೀನು ಹೇಳಿದ ಕತೆಗಳಿಗೆ ಮಾತ್ರವಲ್ಲ, ಅಪ್ಪ; ನಾನು ಹೇಳಿದೆನಲ್ಲಾ, ಆ ಕತೆಗಳಿಗೂ ಅನ್ವಯವಾಗುತ್ತದೆ. ಈ ಕ್ಯುಪಿಡ್ ಮತ್ತು ಸೈಕೆಯರ ಕತೆ, ಆ ಛಾರಿಟೆಯ ಕತೆ, ಇವು ಯಾವ ಪುಸ್ತಕದಲ್ಲಿ ಸಿಕ್ಕುತ್ತದೋ, ಅದು ಕೂಡ ಕತೆಯ ನೆಪದಲ್ಲಿ ಧರ್ಮದ ಸ್ವರೂಪವನ್ನು ರಮ್ಯವಾಗಿ ಚಿತ್ರಿಸುವ ಒಂದು ಧರ್ಮಗ್ರಂಥ. ಇದನ್ನು ಬರೆದವನು ಕೂಡ, ನಿಮ್ಮ ಜೈನರು, ಬೌದ್ಧರು ಎಂದೆಯಲ್ಲಾ, ಹಾಗೆಯೇ ಒಬ್ಬ ವಿರಕ್ತ. ಅವನು ಬದುಕಿದ್ದದ್ದು, ಕ್ರಿ. ಶ. ಎರಡನೆಯ ಶತಮಾನದಲ್ಲಿ. ಅವನ ಹೆಸರು **ಅಪ್ಯೂಲಿಯಸ್.** ಇವನು ಒಸೈರಿಸ್ ಎಂಬ ದೇವತೆಯ ಭಕ್ತ. ಅವನು ಬರೆದದ್ದು ಈ ಕತೆ. ಈ ಕತೆಗೆ ಹೆಸರು—**'ಚಿನ್ನದ ಕತ್ತೆ'** ಎಂದು.

"'ಚಿನ್ನದ ಕತ್ತೆ' ಎಂದರೆ?"

"'ಚಿನ್ನದ ಕತ್ತೆ' ಎನ್ನುವುದು ಆ ಪುಸ್ತಕಕ್ಕೆ, ಜನಪ್ರಿಯವಾದ ಹೆಸರು. 'ಲೂಸಿಯಸ್ ಎಂಬವನ ಪರಾವರ್ತನೆಗಳು' ಎಂಬುದು ಆ ಪುಸ್ತಕದ ಪೂರ್ಣವಾದ ಹೆಸರು. ಎಂದರೆ, ಲೂಸಿಯಸ್ ಎಂಬವನು ಪ್ರವೇಶ ಮಾಡಬಾರದ ವಿದ್ಯೆಗಳಿಗೆ ಪ್ರವೇಶಮಾಡಿ, ದಾರಿತಪ್ಪಿ, ಮನುಷ್ಯನಾಗಿದ್ದವನು ಕತ್ತೆಯಾಗಿಬಿಡುತ್ತಾನೆ."

"ಪ್ರವೇಶ ಮಾಡಬಾರದ ವಿದ್ಯೆ, ಎಂದರೆ?"

"ನಮ್ಮಲ್ಲಿ ವಾಮಾಚಾರ ಎನ್ನುತ್ತಾರಲ್ಲ, ಅಂಥದು ಮಂತ್ರ ಮಾಟ ಇತ್ಯಾದಿ. ಈ ಲೂಸಿಯಸ್ ಎಂಬವನು, ಒಸ್ಸೈರಿಸ್ ದೇವತೆಯ ಭಕ್ತನಾಗಿದ್ದವನು, ಒಂದು ಸಲ ಮಂತ್ರ ಮಾಟ ಕಲಿಯಬೇಕೆಂದು ಉದ್ದೇಶಿಸುತ್ತಾನೆ ತನ್ನ ಉದ್ದೇಶವನ್ನು ಈಡೇರಿಸಿಕೊಳ್ಳುವುದಕ್ಕಾಗಿ, ಮಂತ್ರ ಮಾಟ ಬಲ್ಲವಳೊಬ್ಬಳ ಮನೆಯ ದಾಸಿಯನ್ನು ಆಶ್ರಯಿಸುತ್ತಾನೆ. ಒಂದು ದಿನ ರಾತ್ರಿ, ಆ ದಾಸಿ ತನಗೆ ಕೊಟ್ಟ ಒಂದು ಲೇಪನವನ್ನು ಮೈಗೆ ಬಳಿದುಕೊಳ್ಳುತ್ತಾನೆ. ಆದರೆ ಅದು ತಿಳಿವಳಿಕೆಯಿಲ್ಲದ ಲೇಪನವಾಗಿಬಿಟ್ಟು, ಹಕ್ಕಿಯಾಗಬೇಕೆಂದು ಬಯಸಿದ್ದ ಅವನು ಕತ್ತೆಯಾಗಿಬಿಡುತ್ತಾನೆ. ಅಲ್ಲಿಂದ ಪ್ರಾರಂಭವಾಗುತ್ತದೆ, ಅವನ ವಿಚಿತ್ರ ಕಥೆ. ಮನುಷ್ಯನಾಗಿದ್ದವನೇನೋ ಮಂತ್ರದ ಮುಲಾಮು ಬಳಿದುಕೊಂಡು ಕತ್ತೆಯಾದ, ಸರಿ; ಆದರೆ, ಕತ್ತೆಯಾಗಿದ್ದವನು ಮತ್ತೆ ಮನುಷ್ಯನಾಗಬೇಕಾಗಿದ್ದರೆ, ಗುಲಾಬಿಹೂಗಳನ್ನು ತಿನ್ನುವುದು ಅದಕ್ಕೆ ಪರಿಹಾರ. ಆದರೆ ಅದು ಗುಲಾಬಿಹೂಗಳು ಬಿಡುವ ಋತುವಲ್ಲ. ಆದ್ದರಿಂದ, ಲೂಸಿಯಸ್ ಹನ್ನೆರಡು ತಿಂಗಳು ಕಾಲ, ಹಾಗೇ ಕತ್ತೆಯ ರೂಪದಲ್ಲಿ ಇರಬೇಕಾಗುತ್ತದೆ. ಆದರೂ, ಆ ರೂಪದೊಳಗೆ ಅವನ ಮನುಷ್ಯನ ಬುದ್ಧಿಗುಣ ಏನೂ ಮಾಸಿರುವುದಿಲ್ಲ. 'ಇದು ಕತ್ತೆ, ಇದಕ್ಕೇನು ತಿಳಿಯುತ್ತದೆ?' ಎಂದುಕೊಂಡು ಆ ಕತ್ತೆ ಹೋದಲ್ಲೆಲ್ಲ ಜನರು ನಿಸ್ಸಂಕೋಚದಿಂದ ತಮ್ಮ ಸಹಜಗುಣವನ್ನು ಪ್ರದರ್ಶಿಸುತ್ತಾರೆ. ಇದರಿಂದ ಮನುಷ್ಯವರ್ಗದ ಗುಣಾವಗುಣಗಳನ್ನು ಪರಿಶೀಲನೆ ಮಾಡುವ ಒಂದು ಅಪೂರ್ವವಾದ ಅವಕಾಶ ಅವನಿಗೆ ಒದಗುತ್ತದೆ. ಹೀಗೇ ಒಂದು ವರ್ಷ ಆದಮೇಲೆ, ಒಂದು ಸಲ, ಆ ಕತ್ತೆ ಒಸ್ಸೈರಿಸ್ ದೇವತೆಯ ಮೆರೆವಣಿಗೆ

ಆಗುತ್ತಿದ್ದ ಕಡೆಗೆ ಬರುತ್ತದೆ. ಆ ವೇಳೆಗೆ ಕತ್ತೆಗೆ ಬುದ್ಧಿ ಬಂದು, ತಾನು ನಿಜವಾದ ದೈವಭಕ್ತಿಯನ್ನು ತಪ್ಪಿಸಿ ಮಂತ್ರಮಾಟಗಳಿಗೆ ಮನಸ್ಸು ಕೊಟ್ಟದ್ದು ತಪ್ಪು, ಎಂದು ಪಶ್ಚಾತ್ತಾಪ ಪ್ರಾರಂಭವಾಗುತ್ತದೆ. ಅದರ ಪಶ್ಚಾತ್ತಾಪದಿಂದ, ಒಸೈರಿಸ್ ದೇವತೆಯ ಅನುಗ್ರಹದಿಂದ, ಅದೇ ಕಾಲದಲ್ಲಿ ಗುಲಾಬಿಪುಷ್ಪಗಳ ಋತು ಒದಗಿಬಂದದ್ದರಿಂದ, ಕತ್ತೆಯ ರೂಪದ ಲೂಸಿಯಸ್ ಒಸೈರಿಸ್ ದೇವತೆಯ ಪ್ರಸಾದದ ಗುಲಾಬಿಹೂಗಳನ್ನು ತಿಂದು, ಮತ್ತೆ ಮನುಷ್ಯನಾಗುತ್ತಾನೆ. ಹೀಗೆ, ಮನುಷ್ಯನಾಗಿದ್ದವನು ದಾರಿ ತಪ್ಪಿ ಕತ್ತೆಯಾಗಿ, ಮತ್ತೆ ದಾರಿಗೆ ಬಂದು ಮನುಷ್ಯನಾದ ಕತೆಯೇ ಈ 'ಚಿನ್ನದ ಕತ್ತೆ'ಯ ಕತೆ."

"ಓ! ಹಾಗಾದರೆ ಇದೂ ಒಂದು ಧಾರ್ಮಿಕ ಕಾವ್ಯವೇ ಎನ್ನು!'

"ಹೌದು. ಅಪ್ಯೂಲಿಯಸ್ ಇದರಲ್ಲಿ ಒಂದು ಮೂರು ಧಾರ್ಮಿಕ ಭಾವನೆಗಳನ್ನು ಎತ್ತಿಹಿಡಿದಿದ್ದಾನೆ. ಅದರಲ್ಲಿ ಮೊದಲನೆಯದು: ಜನರೆಲ್ಲರೂ ದೇವರ ಮಕ್ಕಳು ಎಂಬುದನ್ನು ಒಪ್ಪಿದರೂ, ಆ ಮಕ್ಕಳೆಲ್ಲರೂ ದೇವರ ದೃಷ್ಟಿಯಲ್ಲಿ ಒಂದೇ ಸಮನಲ್ಲ. ಹುಟ್ಟಿನಿಂದ ಉತ್ತಮರು, ಅಧಮರು ಎಂದು ಉಂಟು; ಐಶ್ವರ್ಯದಿಂದ ಉಳ್ಳವರು, ಇಲ್ಲದವರು ಎಂದು ಉಂಟು. ಉತ್ತಮರೂ ಉಳ್ಳವರೂ ಅದೃಷ್ಟವಂತರು, ಅಧಮರೂ ಇಲ್ಲದವರೂ ನತದೃಷ್ಟರು. ಎರಡನೆಯದು: ನತದೃಷ್ಟರ ಜೊತೆಗೆ ಅದೃಷ್ಟವಂತರು ಸೇರಬಾರದು, ಸೇರಿದರೆ ಅವರ ಅದೃಷ್ಟವೂ ಹೀನವಾಗುತ್ತದೆ. ಮತ್ತೆ, ಮೂರನೆಯದು, ಎಲ್ಲಕ್ಕಿಂತ ಮುಖ್ಯವಾದದ್ದು - ಮಂತ್ರ ಮಾಟಗಳಿಗೆ ಮನಸ್ಸು ಕೊಡತಕ್ಕದ್ದಲ್ಲ. ಈ ಮೂರನ್ನು ಈ ಕತೆಯಲ್ಲಿ ಅಪ್ಯೂಲಿಯಸ್ ಅನೇಕ ಉದಾಹರಣೆಗಳಿಂದ ಸಮರ್ಥಿಸುತ್ತಾ ಸ್ಥಾಪಿಸುತ್ತಾನೆ."

"ಸಾಕಪ್ಪಾ, ಗೊತ್ತಾಯಿತು. ಒಟ್ಟಿನಲ್ಲಿ ನೀನು ಹೇಳುವುದು ಇಷ್ಟು: ಇದು ಪಾಶ್ಚಾತ್ಯ ದೇಶದವರ ಕತೆಯಾದರೂ, ಇದು ಮನರಂಜನೆಯನ್ನು ಉಂಟುಮಾಡಿದರೂ, ಇದರಲ್ಲಿ ಒಂದು ಘನವಾದ ಉದ್ದೇಶ ಅಡಗಿದೆ ಎನ್ನುತ್ತೀಯೆ. ಒಳ್ಳೆಯದು, ಒಪ್ಪಿದೆ. ಈಗ ನನ್ನದೊಂದು ಪ್ರಾರ್ಥನೆ. ಅದು ಏನೆಂದರೆ: ಈ 'ಚಿನ್ನದ ಕತ್ತೆ'ಯನ್ನು ಕುರಿತು ಆಡುವ ಮಾತನ್ನು

ನಿಲ್ಲಿಸಿ, ಆ 'ಚಿನ್ನದ ಕತ್ತೆ'ಯ ಕತೆಯನ್ನೇ ಕೊಂಚ ಹೇಳು, ನೋಡುವ."

"ಅದು ಕೊಂಚದಲ್ಲಿ ಕಿವಿಚಿ ಹೇಳುವಂಥದಲ್ಲವಲ್ಲ!"

"ಹಾಗಾದರೆ, ಸಾವಧಾನವಾಗಿಯೇ ವಿಸ್ತಾರದಿಂದ ಹೇಳು."

"ಅಗತ್ಯ ಆಗಬಹುದು. ಆದರೆ ಅಚ್ಚಿನಲ್ಲಿ ಸುಮಾರು ಮುನ್ನೂರು ಪುಟ ಆಗುವ ಕತೆಯಲ್ಲಿ ಈ ಎರಡು ಖಂಡವನ್ನು ತಂದು ತಿಳಿಸುವುದಕ್ಕೇ ಇಷ್ಟು ವೇಳೆಯಾಯಿತಲ್ಲ. ಇನ್ನು ಉಳಿದದ್ದು ಎಷ್ಟು ಹೊತ್ತು ಹಿಡಿಯುತ್ತದೊ? ಮೊದಲು ಸ್ನಾನ ಮುಗಿಸೋಣ, ಆಮೇಲೆ ಊಟ ಕತ್ತರಿಸೋಣ. ಒಂದು ಸಣ್ಣದು ಅನ್ನ ಸೊಕ್ಕಿನ ನಿದ್ರೆ ತೀರಿದ ಮೇಲೆ ಈ 'ಚಿನ್ನದ ಕತ್ತೆ'ಯ ಕಥೆ ಬಿತ್ತರಿಸೋಣ. ಆಗಬಹುದಾ?"

"ಆಗಲಪ್ಪಾ, ಹಾಗೇ ಆಗಲಿ. ತಥಾಸ್ತು."

ಕೂತಲ್ಲೇ ಕತೆ

"ಯಾರು ಅದು ನೀರು ಮನೇಲಿ?"

"ಅಕ್ಕಯ್ಯ ಎಣ್ಣೆನೀರು ಹಾಕಿಕೊಳ್ಳುತಾ ಇದ್ದಾಳೆ."

"ಇನ್ನೇನು ಆಗತಾ ಬಂತೊ?"

"ಈಗತಾನೆ ಇಳಿದಿದ್ದಾಳೆ!"

"ಸರಿ, ಹಿಂದುಗಡೆ ಜಗಲಿ ಮೇಲೆ ಇರತೇನೆ. ಆಗೋತ್ಲು ಬಂದು ಹೇಳು. ನಮ್ಮ ಸ್ನಾನ ಆಗೋವರಿಗೂ ಇನ್ನು ಯಾರೂ ಇಳಿಯಬೇಡಿ, ಅಷ್ಟೆ."

"ಛೀ, ಇವಕ್ಕೆ ಯಾಕಯ್ಯ ಗದರಿಸಿಕೊಂಡು ಮಾತಾಡ್ತಿ? ಬಾ, ಕೂತಿರೋಣ. ನಿನ್ನ ಕೇಳಬೇಕಾದ್ದು ಒಂದೆರಡು ವಿಷಯ ಇದೆ."

"ನಾನು ಮಾತನಾಡಿದ್ದು ಗದರಿಸಿದ ಹಾಗಿತ್ತೆ? ಹುಂ, ನನ್ನ ಹಾಳು ಗಂಟಲೇ ಹಾಗೆ. ಹೋಗಲಿ, ಬಾ. ನಮಗೇನು? ಕೂತಲ್ಲೇ ಕತೆ, ನಿಂತಲ್ಲೇ ನಾಟಕ ಹುಂ, ಎಸೆ, ಪ್ರಶ್ನೇನ!"

"ಮೊದಲನೇದು: ಈ ದಿನಸ ಕತೆ ಆರಂಭಮಾಡುವಾಗ, ಅದೇನೋ ವೀನಸ್ ಜೊತೆಗೆ ಇನ್ನು ಯಾರೋ ಇಬ್ಬರು ಸ್ಪರ್ಧೆಗೆ ನಿಂತಾಗ, ಅದು ಯಾರೋ ಪ್ಯಾರಿಸ್ ಅನ್ನೋವನು ಅವಳ ಪರವಾಗಿ ಏನೋ ತೀರ್ಪು ಕೊಟ್ಟ ಅಂತ ಹೇಳಿದೆಯಲ್ಲ.* ಆದರದು ಪೂರ್ವಕಥೆ ಏನು?"

"ಅದಾ? ಕೇಳು."

೧

ಟ್ರಾಯ್ ಎಂಬುದು ಒಂದು ಹಳೆಯ ಕಾಲದ ನಗರ. ಈಗ ಈ ಪೂರ್ವಕಥೆಯನ್ನು ನಾನು ಹೇಳುವ ಕಾಲಕ್ಕೆ ಪ್ರಯಾಮ್ ಎಂಬವನು

---

* ಪುಟ ೧೯ ನೋಡಿ.

ಅಲ್ಲಿಗೆ ದೊರೆ, ಅವನ ಹೆಂಡತಿ ಹೆಕ್ಯೂಬಾ ಎಂಬವಳು. ಅವರಿಗೆ ಅನೇಕ ಜನ ಮಕ್ಕಳು. ಅವರಲ್ಲಿ ಹೆಕ್ಟರ್ ಎಂಬವನೊಬ್ಬ ಮಹಾ ಗುಣಶಾಲಿ, ಪ್ಯಾರಿಸ್ ಎಂಬವನು ಮತ್ತೊಬ್ಬ ಮಹಾ ಸ್ಫುರದ್ರೂಪಿ.

ಯಾಕಪ್ಪಾ, ಹಾಗೆ ಕಣ್ಣುಬಿಡುತ್ತಿ? ಪರದೇಶದ ಹೆಸರುಗಳು ಹೆಚ್ಚಾಯಿತೇನು ? ಸದ್ಯಕ್ಕೆ ಇಷ್ಟು ಸಾಕು. ಬಿಡು.

ಈ ಪ್ಯಾರಿಸ್ ಎಂದೆನಲ್ಲಾ, ಇವನು ಹುಟ್ಟುವುದಕ್ಕೆ ಮುಂಚೆ, ಅವನ ತಾಯಿ ಗರ್ಭವತಿಯಾಗಿದ್ದಾಗ, ತಾನೊಂದು ಬೆಂಕಿಯ ಕೊಳ್ಳಿಯನ್ನು ಪ್ರಸವಿಸಿದಂತೆ ಕನಸು ಕಂಡಳು. ಅದರ ಅರ್ಥ ಏನಿರಬಹುದೆಂದು ಆ ದೇಶದ ಜೋಯಿಸರನ್ನು ಕೇಳಿದಳು. ಅವರು ಹೇಳಿದರು : "ನಿನ್ನ ಗರ್ಭ ದಲ್ಲಿರುವ ಮಗುವಿನಿಂದ ಈ ನಗರಕ್ಕೆ ಬೆಂಕಿ ಬಿದ್ದ ಹಾಗೆ ಸರ್ವನಾಶ ವಾಗುತ್ತದೆ" ಎಂದು.

ಪ್ರಯಾಮ್ ಮತ್ತು ಹೆಕ್ಯೂಬಾ ಇವರಿಗೆ ಹಲವು ಮಕ್ಕಳು ಇದ್ದರೆಂದು ಹೇಳಿದೆನಲ್ಲ. ಇದೂ ಅಲ್ಲದೆ ಅವರಿಗೆ ತಮ್ಮ ಟ್ರಾಯ್ ನಗರ ಉಳಿದು ಉದ್ಧಾರವಾಗಬೇಕೆಂದು ಇಷ್ಟ. ಆದ್ದರಿಂದ ಆ ಮಗು ಹುಟ್ಟಿದೊಡನೆಯೇ ನಗರದ ಹಿತಕ್ಕೋಸ್ಕರ, ಅದನ್ನು ತೊರೆದು ತೀರಿಸಿಬಿಡಬೇಕೆಂದು ಆ ಗಂಡ ಹೆಂಡತಿ ನಿರ್ಧಾರ ಮಾಡಿಕೊಂಡರು.

ಟ್ರಾಯ್ ನಗರದ ಆಚೆ ಇಡಾ ಎಂಬುದೊಂದು ಪರ್ವತ. ಮಗು ಹುಟ್ಟಿದ ಕೂಡಲೆ, ಅದನ್ನು ಒಬ್ಬ ಅರಮನೆಯ ಗುಲಾಮನ ಕೈಯಲ್ಲಿಟ್ಟು, "ಈ ಮಗುವನ್ನು ಇಡಾ ಪರ್ವತದ ಮೇಲಿನ ಕಾಡಿನಲ್ಲಿ ಬಿಟ್ಟು ಬಾ. ಅಲ್ಲಿ ಯಾವುದಾದರೂ ಕಾಡುಪ್ರಾಣಿಯ ಬಾಯಿಗೆ ಸಿಕ್ಕಿ ಇದರ ಕತೆ ಮುಗಿದೀತು" ಎಂದು ಆಜ್ಞೆಮಾಡಿದರು.

ಆದರೆ ದೈವದ ಇಚ್ಛೆ ಬೇರೆಯಾಗಿತ್ತು. ಆ ಮಗು ಹಾಗೆ ಕ್ರೂರ ಮೃಗಗಳ ಬಾಯಿಗೆ ಬಿದ್ದು ಮರಣಹೊಂದಲಿಲ್ಲ. ಯಾವುದೋ ಹೆಣ್ಣು ಕರಡಿ ಬಂದು, ಆ ಮಗುವಿಗೆ ಎದೆಹಾಲು ಕುಡಿಸಿ, ಅದು ಬದುಕಿಕೊಂಡಿತು. ಕೆಲವು ದಿವಸ ಆದಮೇಲೆ, ಅಲ್ಲಿಗೆ ಬಂದವರು ಯಾರೋ ಕಾಡುಕುರುಬನು, ಆ ತಬ್ಬಲಿಮಗುವನ್ನು ತಾವು ಎತ್ತಿಕೊಂಡು ಅದಕ್ಕೆ ಆಶ್ರಯಕೊಟ್ಟರು.

ಆ ಮಗುವೇ ಪ್ಯಾರಿಸ್ ಎಂಬ ಹೆಸರಿನಿಂದ ಆ ಕಾಡುಕುರುಬರ ಜೊತೆಯಲ್ಲಿ ತಾನೂ ಅವರ ಬಳಗವೇ ಎಂದು ನಂಬಿ ಬೆಳೆದನು. ತಾನು ರಾಜನ ಮಗನೆಂದು ಅವನು ಹೇಗೆ ತಿಳಿಯಬೇಕು? ಅವರೊಡನೆ ಆಟ, ಅವರೊಡನೆ ಊಟ, ಅವರೊಡನೆ ವಾಸ. ಆದರೂ ಅವರೆಲ್ಲರಿಗಿಂತ ಮೋಹನಾಕಾರನಾಗಿ ಎಲ್ಲರಿಗಿಂತ ಬಲಶಾಲಿಯಾಗಿ ಬೆಳೆದನು. ಅದುವರೆಗೆ ಅಲ್ಲಿ ಎರಗಿಬಂದು, ಅವರ ಕುರಿಗಳನ್ನು ಕೊಳ್ಳೆಹೊಡೆದುಕೊಂಡುಹೋಗುತ್ತಿದ್ದ ದರೋಡೆ ಗಳ್ಳರನ್ನು ತೀವ್ರವಾಗಿ ದಂಡಿಸಿ, ಅವರ ಉಪದ್ರವವನ್ನು ಹೋಗಲಾಡಿಸಿದನು. ಅವನನ್ನು ತಮ್ಮ ಪಾಲಿನ ಸಂರಕ್ಷಕನೆಂದು ಅಲ್ಲಿಯವರೆಲ್ಲ ಬಹುಮಾನಿಸಿದರು.

ವಯಸ್ಸು ಒದಗಿ, ಯೌವನ ಪ್ರಾಪ್ತವಾದಾಗ, ಅದೇ ಪರ್ವತದಲ್ಲಿ ವಾಸಿಸುತ್ತಿದ್ದ ಈನೋನೇ ಎಂಬವಳು ಕಿನ್ನರ ಕನ್ಯೆಯೊಬ್ಬಳು ಅವನ ರೂಪಿಗೆ ಮರುಳಾಗಿ, ಅವನನ್ನು ಮದುವೆಯಾದಳು. ಪ್ಯಾರಿಸ್ ಅವಳೊಡನೆ ಕೆಲವು ಕಾಲ ಸಂಸಾರ ಮಾಡಿಕೊಂಡಿದ್ದ.

ಹೀಗೇ ಇರಬೇಕಾದರೆ, ಒಂದು ದಿವಸ ಪ್ಯಾರಿಸ್ ತನ್ನ ಕುರಿಗಳ ಮಂದೆಯನ್ನು ಅಟ್ಟಿಕೊಂಡು ಇಡಾಪರ್ವತದ ಉಚ್ಚಶ್ರೇಣಿಯೊಂದಕ್ಕೆ ಏರಿ ಹೋದನು.

ಅಲ್ಲಿ, ಮರಗಳ ತಂಪಾದ ನೆರಳಿನಲ್ಲಿ, ಅವನು ವಿಶ್ರಮಿಸಿಕೊಂಡಿದ್ದಾಗ ಇದ್ದಕ್ಕಿದ್ದಹಾಗೆ ಯಾರೋ ಮೂವರು ಗಂಭೀರ ಆಕಾರದ ಪರಮಸುಂದರಿಯರು ಕಣ್ಣಿಗೆ ಗೋಚರವಾದರು. ಅವರನ್ನು ಕಣ್ಣುತುಂಬ ನೋಡುವ ಮೊದಲೇ, ಅವರ ಹೆಸರು ಪರಿಚಯವಾಗುವುದಕ್ಕೆ ಮುಂಚೆಯೇ "ಇವರು ಮನುಷ್ಯಸ್ತ್ರೀಯರಲ್ಲ, ಇವರು ದೇವತೆಗಳಿರಬೇಕು" ಎಂದು ಪ್ಯಾರಿಸ್ಸಿಗೆ ಎನ್ನಿಸಿತು.

ಅಷ್ಟರೊಳಗೆ ಮತ್ತೊಂದು ಗಂಭೀರಾಕಾರದ ಪುರುಷವ್ಯಕ್ತಿ ಆಕಾಶದಿಂದ ತನ್ನ ಕಡೆಗೆ ಇಳಿದುಬಂದುದನ್ನು ಪ್ಯಾರಿಸ್ ಕಂಡನು. ಅವನ ಕಾಲುಗಳ ಬಳಿಯ ರೆಕ್ಕೆಯನ್ನೂ ಅವನ ಕೈಯಲ್ಲಿದ್ದ ದೂತದಂಡವನ್ನೂ

ನೋಡಿದ ಕೂಡಲೇ, ಅವನೇ ದೇವತೆಗಳ ದೂತನಾದ ಹರ್ಮಿಸ್ ಎಂದು ಹೇಳಬಹುದಾಗಿತ್ತು.

ಹಿಂದೆ, ಕಥೆಯಲ್ಲಿ, ಮರ್ಕ್ಯುರಿ ಎಂದು ಕೇಳಲಿಲ್ಲವೆ; ಅವನಿಗೇ ಹರ್ಮಿಸ್ ಎಂದೂ ಹೆಸರು.

ಏಕಕಾಲದಲ್ಲಿ ನಾಲ್ಕು ದೇವರೂಪಗಳನ್ನು ಕಂಡು ಅವಾಕ್ಕಾಗಿ, ದಿಗ್ಭ್ರಮೆಯಿಂದ, ನಿಶ್ಚೇಷ್ಟನಾಗಿ, ಬಿಟ್ಟ ಕಣ್ಣು ಮುಚ್ಚದೆ, ಎದೆಯ ದುಡಿತವನ್ನು ಶಾಂತಗೊಳಿಸುತ್ತ ಪ್ಯಾರಿಸ್ ಸುಮ್ಮನೆ ನಿಂತನು.

ಆಗ ಅವನನ್ನು ಕುರಿತು ಮರ್ಕ್ಯುರಿ ಹೇಳಿದನು: ''ಹೆದರಬೇಡ, ಪ್ಯಾರಿಸ್. ನಿನ್ನ ಮುಂದೆ ಬಂದಿರುವ ಈ ದೇವಿಯರು ನಿನಗೆ ಅನುಗ್ರಹ ಮಾಡಬೇಕೆಂದು ಬಂದಿದ್ದಾರೆ. ಜ್ಯೂಸ್ ದೇವತೆಯು ನಿನಗೆ ವಿಧಿಸಿರುವ ಕರ್ತವ್ಯವನ್ನು ನಡಸಿ, ದೇವತೆಗಳ ಪ್ರೀತಿಗೆ ಪಾತ್ರನಾಗು.'' ಎಂದನು.

ಸಂಗತಿ ಏನಾಗಿತ್ತು ಎಂದರೆ: ಒಮ್ಮೆ ಜ್ಯೂಸ್ ದೇವತೆಯ ರಾಜಭವನದಲ್ಲಿ ಒಂದು ಸಂತೋಷಕೂಟ ನಡೆದಾಗ, ಯಾರು ಯಾರೋ ಅತಿಥಿಗಳಿಗೆಲ್ಲ ಆಮಂತ್ರಣ ಕಳಿಸಿದ್ದರೂ ಈರೀಸ್ ಎಂಬ ದೇವತೆಯನ್ನು ಮಾತ್ರ ಅದು ಹೇಗೋ ಮರೆತುಬಿಟ್ಟರು. ಆ ಈರೀಸ್ ದೇವತೆಗೋ, ಮೊದಲೇ ಅನ್ಯೋನ್ಯವಾಗಿದ್ದವರ ಮಧ್ಯೆ ಪುರುಳೆ ಹಚ್ಚಿಡುವ ಸ್ವಭಾವ. ಅಂಥದರಲ್ಲಿ ತನ್ನನ್ನು ಅಲಕ್ಷ್ಯಮಾಡಿದರೆ, ಕೇಳಬೇಕೆ? ''ನನ್ನನ್ನು ಕಡೆಗಣಿಸಿದರಲ್ಲ! ಇರಲಿ, ಇವರಿಗೆ ಕೊಡುತ್ತೇನೆ!'' ಎಂದುಕೊಂಡು, ಒಂದು ಚೇಷ್ಟೆ ಮಾಡಿದಳು. ಸಂತೋಷಕೂಟದಲ್ಲಿ ಎಲ್ಲರೂ ಬೇಕಾದ ಹಾಗೆ ಕುಡಿದು ಕುಣಿದಾಡುತ್ತಿರುವಾಗ, ಅಲ್ಲಿಗೆ ಒಂದು ಅದ್ಭುತವಾದ ಚಿನ್ನದ ಸೇಬನ್ನು ತಂದು ಉರುಳಿಬಿಟ್ಟಳು. ಆ ಸೇಬಿನ ಮೇಲೆ 'ಇದು ಪರಮಸುಂದರಿಯಾದವಳಿಗೆ' ಎಂದು ಬರೆದಿತ್ತು. ಒಂದೊಂದು ಹೆಣ್ಣುದೇವತೆಯೂ ''ಇದು ತನಗೇ!'' ಎಂದು ಹೇಳಿಕೊಳ್ಳತೊಡಗಿದರು. ''ಪರಮಸುಂದರಿ ಯಾರು?'' ಎಂದು ಅಲ್ಲಿ ಇದ್ದವರನ್ನೆಲ್ಲಾ ಒಬ್ಬೊಬ್ಬರನ್ನಾಗಿ ಕಳೆದ ಮೇಲೆ, ಉಳಿದವರು ಮೂವರು ದೇವಿಯರು: ಒಬ್ಬಳು ವೀನಸ್, ಒಬ್ಬಳು ಜೂನೋ, ಒಬ್ಬಳು ಮಿನರ್ವಾ. ಆ ಮೂವರಲ್ಲಿ 'ಪರಮಸುಂದರಿ'ಯಾರೆಂದು ಅಲ್ಲಿಯವರು

ಯಾರೂ ತೀರ್ಮಾನಿಸಲಾರದೆ ಹೋದರು. ಎಂದರೆ, ಯಾರೊಬ್ಬರ ಹೆಸರು ಹೇಳಿದರೂ ಉಳಿದ ಇಬ್ಬರೊಡನೆ ಮನಸ್ತಾಪವಾಗುತ್ತದೆ, ನಮಗೆ ಏಕೆ ಈ ಕೋಟಲೆ, ಎಂದು ಸುಮ್ಮನೆ ಇದ್ದರು. ಜ್ಯೂಸ್ ದೇವತೆಯಾದರೂ ಕೂಡ, ಅವನ ಚಿತ್ತದಲ್ಲಿ ಏನು ಸಂಕಲ್ಪವಿತ್ತೋ, ತಾನೇ ತೀರ್ಪು ಕೊಡದೆ, "ಇಡಾ ಪರ್ವತದ ಶಿಖರದಲ್ಲಿ ಕುರಿ ಕಾಯುತ್ತಿರುವ ಪ್ಯಾರಿಸ್ಸಿನ ಬಳಿಗೆ ಹೋಗಿ. ಅವನು ನಿಮ್ಮಲ್ಲಿ ಪರಮಸುಂದರಿಯಾದವಳನ್ನು ಆಯಲು ಸಮರ್ಥನಾದವನು" ಎಂದು ಹೇಳಿಕಳಿಸಿದನು. ಅದರಂತೆ ಅವರು ಮೂವರೂ ಬಂದಿದ್ದರು. ಜ್ಯೂಸ್ ದೇವತೆಯ ಆಜ್ಞೆಯನ್ನು ತಿಳಿಸಲು ಮರ್ಕ್ಯೂರಿ ಬಂದಿದ್ದನು.

ಮರ್ಕ್ಯುರಿ ಹೇಳಿದ: "ಇದು ಜ್ಯೂಸ್ ದೇವತೆಯ ಆಜ್ಞೆ: ನೀನು ಯಾವ ಸಂಕೋಚವೂ ಇಲ್ಲದೆ, ಯಾರ ದಾಕ್ಷಿಣ್ಯಕ್ಕೂ ಒಳಗಾಗದೆ, ಈ ಮೂವರಲ್ಲಿ ಯಾರು ಪರಮಸಂದರಿಯೋ ಹೇಳು. ಇದರಿಂದ ಯಾರಿಗಾದರೂ ಅಸಮಾಧಾನವಾಗುವುದಾದರೆ, ದೇವಾಧಿದೇವನಾದ ಜ್ಯೂಸ್ ತಾನೇ ನಿನ್ನನ್ನು ರಕ್ಷಿಸುವನು."

ಹೀಗೆಂದು ಹೇಳಿ, ಮರ್ಕ್ಯೂರಿ, ಈರೀಸ್ ದೇವತೆ ಎಸೆದುಹೋದ ಚಿನ್ನದ ಸೇಬನ್ನು ಪ್ಯಾರಿಸ್ಸಿನ ಕೈಯಲ್ಲಿಟ್ಟು, "ಇದು ಪರಮಸಂದರಿಯಾದವಳಿಗೆ!" ಎಂದನು.

ಆಗ, "ಈ ಕುರುಬನಿಗೆ ನಮ್ಮ ಸೌಂದರ್ಯಕ್ಕೆ ತಕ್ಕ ಬೆಲೆಕಟ್ಟುವ ಬುದ್ಧಿಯಿರುವುದೋ ಇಲ್ಲವೋ? ಇವನನ್ನು ಯಾವುದಾದರೂ ಆಸೆ ತೋರಿ ವಶಪಡಿಸಿಕೊಳ್ಳಬೇಕು" ಎಂದು ಆ ಮೂವರೂ ಎಂದುಕೊಂಡರು.

ಮೊದಲು ಜೂನೋ ಹೇಳಿದಳು: "ನಾನು ಒಲಿಂಪಸ್‌ದೇವಲೋಕದ ರಾಣಿ, ಜ್ಯೂಸ್ ಮಹಾದೇವತೆಯ ಧರ್ಮಪತ್ನಿ. ನನ್ನನ್ನು ಆಯ್ದು, ಆ ಸೇಬನ್ನು ನನಗೆ ಕೊಡು. ಈ ಲೋಕದಲ್ಲಿ ನಿನ್ನ ಸಮನಿನ್ನಿಲ್ಲ ಎನ್ನುವಂತೆ ಅಪಾರವಾದ ಐಹಿಕ ಭೋಗಭಾಗ್ಯಗಳನ್ನು ನಿನಗೆ ದಾನ ಮಾಡುತ್ತೇನೆ."

ಬಳಿಕ ಮಿನರ್ವಾ ಹೇಳಿದಳು: "ನಾನು ಜ್ಯೂಸ್ ಮಹಾದೇವತೆ ನಡುನೆತ್ತಿಯಿಂದ ಹುಟ್ಟಿದ ಮಗಳು. ಈ ಶೀರ್ಷಕ, ಕವಚ, ಶೂಲಗ ಸಮೇತವಾಗಿ ಈಗ ನಾನಿರುವಂತೆಯೇ ಹುಟ್ಟಿದವಳು ನಾನು. ನನ್ನನ ಆರಿಸು, ಪ್ಯಾರಿಸ್. ಆರಿಸಿದರೆ, ನಿನ್ನ ಸಮ ವೀರನಿಲ್ಲ, ನಿನ್ನ ಸ ವಿವೇಕಿಯಿಲ್ಲ, ನಿನ್ನ ಸಮ ಮೇಧಾವಿಯಿಲ್ಲ, ಎಂಬ ಕೀರ್ತಿಯನ ಕೊಡಿಸುತ್ತೇನೆ."

ಕಡೆಗೆ ಹೇಳಿದಳು, ವೀನಸ್: "ನಾನು ಸ್ವಯಂಭೂ, ಯಾ ನೆರವೂ ಇಲ್ಲದೆ ನನ್ನಿಂದ ನಾನಾಗಿ ಸಮುದ್ರದ ನೊರೆಯಿಂದ ಜನಿಸಿದವಳ ನನ್ನನ್ನು ಆರಿಸು, ಪ್ಯಾರಿಸ್. ಕೀರ್ತಿಗಿಂತ ಮೇಲಾದ್ದನ್ನೂ, ಐಶ್ವರ್ಯಕ್ಕಿಂ ಅತಿಶಯವಾದ್ದನ್ನೂ ನಾನು ನಿನಗೆ ನೀಡುತ್ತೇನೆ. ನನ್ನ ಕೃಪೆಗೆ ಪಾತ್ರ ನಾದವನಿಗೆ ಪ್ರೇಮ ಸೂರೆಬೀಳುತ್ತದೆ. ನೀನು ಮಾತ್ರ ನನಗೆ ಆ ಸೇಬಿ ಹಣ್ಣನ್ನು ಒಪ್ಪಿಸು—ಇಹಲೋಕದಲ್ಲೆಲ್ಲಾ ಅತ್ಯಂತ ಸುಂದರಿಯಾದವಳ ನಿನ್ನ ಪತ್ನಿಯಾಗುವಂತೆ ನಾನು ಏರ್ಪಡಿಸಿಕೊಡುತ್ತೇನೆ."

ಬಂದವರು ಮೂವರೂ ಒಬ್ಬರಿಗಿಂತ ಒಬ್ಬರು ಒಂದೊಂದು ವಿಧದ ಸುಂದರಿಯರು ನಿಜ. ಆದರೂ, ಅವರು ಆಡಿದ ಮಾತುಗಳನ್ನೂ ಅವರ ತೋರಿದ ಆಸೆಗಳನ್ನೂ ನೋಡಿ, ತೂಗಿ, ಪ್ಯಾರಿಸ್ಸಿನ ಮನಸ್ಸು ಬಹು ಬೇ ಇತ್ಯರ್ಥಕ್ಕೆ ಬಂದು ನಿಂತಿತು.

ವೀನಸ್ಸಿನ ಮಾತು ಮುಗಿಯುವುದಕ್ಕೂ ಅವನು ಅವಳ ಕೈಯಲ್ಲಿ ಸೇಬನ್ನು ಇಡುವುದಕ್ಕೂ ಸರಿಹೋಯಿತು. ವೀನಸ್ ಉಳಿದಿಬ್ಬರನ್ನು ಕಡೆಗಣ್ಣಿನಿಂದ ಕದ್ದುನೋಡುತ್ತಾ ಸೇಬನ್ನು ಸಂಗ್ರಹಿಸಿಕೊಂಡು, "ಇಷ್ಟ ರಲ್ಲಿಯೇ ನನ್ನ ವಾಗ್ದಾನವನ್ನು ನಾನು ನಿನಗೆ ನಡೆಸಿಕೊಡುವೆನು" ಎಂದ ಪ್ಯಾರಿಸ್ಸಿಗೆ ಭಾಷೆಕೊಟ್ಟು ಹೋದಳು.

ಅದೇ ಗಳಿಗೆಯಲ್ಲಿಯೇ ಜೂನೋ ಮತ್ತು ಮಿನರ್ವಾ ಇಬ್ಬರೂ ತಮಗ ಅನ್ಯಾಯವಾಯಿತೆಂದು, ತಮಗೆ ಅವಮಾನವಾಯಿತೆಂದು, ಪ್ಯಾರಿಸ್ಸಿನ ವಂಶದ ಮೇಲೆಯೇ ಮುನಿಸು ಹೊತ್ತರು. ಅಂದಿನಿಂದ ಟ್ರಾಯ್ ನಗರ

ಮೇಲೆ ದ್ವೇಷವನ್ನು ಸಾರಿದರು. ಗಂಟುಹಾಕಿದ ಹುಬ್ಬು ಇನ್ನೂ ಗಂಟು ಹಾಕಿಕೊಂಡಿರುವಾಗಲೇ, ಅಲ್ಲಿಂದ ಮಾಯವಾದರು.

ಪ್ಯಾರಿಸ್, ಯಾವುದೋ ಹಿತವಾದ ಕನಸು ಕಂಡು ಎಚ್ಚರ ಗೊಂಡವನಂತೆ ಕಣ್ಣು ಕಣ್ಣು ಬಿಟ್ಟ. ಯಾರೋ ಮೂವರು ದೇವಿಯರು ಬಂದಹಾಗಿತ್ತು, ಆದರೆ ಅವರು ಬಂದುಹೋದುದಕ್ಕೆ ಯಾವುದೂ ಚಿಹ್ನೆ ಯಿರಲಿಲ್ಲ. ಕೆಲವುಕಾಲ ಆದ ಮೇಲೆ, ಅದೆಲ್ಲ ಕನಸೇ ಇರಬೇಕೆಂದು ಭಾವಿಸಿದ. ಎಷ್ಟು ದಿನ ಕಾದುನೋಡಿದರೂ, ತನ್ನ ಪತ್ನಿಯಾದ ಈನೋನೆಗಿಂತ ಸುಂದರಿಯಾದವಳು ಯಾರೂ ತನ್ನ ಪಾಲಿಗೆ ಬರಲಿಲ್ಲವೆಂದು ಕಂಡು, ವೀನಸ್ಸಿನ ವರವನ್ನೂ ಮರೆತುಬಿಟ್ಟನು.

ಮನುಷ್ಯರು ಯಾರು ಏನೇ ಮರೆತರೂ, ಅವರನ್ನು ನಡೆಸುವ ದೈವ ಮಾತ್ರ ಏನನ್ನೂ ಮರೆಯುವುದಿಲ್ಲ.

ಒಮ್ಮೆ, ಪ್ಯಾರಿಸ್ಸಿಗೆ ಏನೋ ಪ್ರೇರಣೆ ಬಂತು. ಇಡಾ ಪರ್ವತವನ್ನು ಇಳಿದು, ನೇರವಾಗಿ ಟ್ರಾಯ್‌ನಗರಕ್ಕೆ ಹೋದ. ಅಲ್ಲಿ ರಾಜನಾದ ಪ್ರಯಾಮಿನ ನೇತೃತ್ವದಲ್ಲಿ ಆಟಪಾಟಗಳ ಸ್ಪರ್ಧೆ ನಡೆಯುತ್ತಿತ್ತು. ಪ್ಯಾರಿಸ್ ತಾನೂ ಸ್ಪರ್ಧಿಯಾಗಿ ಅಲ್ಲಿಗೆ ಬಂದ. ಒಂದಾದ ಮೇಲೆ ಒಂದ ರಂತೆ ಪಾರಿತೋಷಕಗಳನ್ನು ಪಡೆದ. ದೊರೆಯ ಮಕ್ಕಳೆಲ್ಲರನ್ನೂ ಮೀರಿಸಿದ. ಅವರು ತನ್ನ ಅಣ್ಣಂದಿರೆಂದು ಇವನಿಗೂ ತಿಳಿಯದು, ಇವನು ತಮ್ಮ ತಮ್ಮನೆಂದು ಅವರಿಗೂ ತಿಳಿಯದು.

ಆದರೆ, ಅವನ ಅಕ್ಕಂದಿರಲ್ಲಿ ಒಬ್ಬಳು, ಕಸ್ಸಾಂಡ್ರಾ ಎಂಬವಳಿಗೆ ಅಪರೋಕ್ಷಜ್ಞಾನವಿತ್ತು. ಅವಳಿಗೆ ಪ್ಯಾರಿಸ್ಸಿನ ಗುರುತು ತಿಳಿಯಿತು. ಆದರೆ, ತಾಯಿತಂದೆಗೆ ತಮ್ಮ ನಷ್ಟವಾಗಿದ್ದ ಮಗ ಮತ್ತೆ ದೊರಕಿದನೆಂಬ ಅಪೂರ್ವ ಸಂತೋಷದ ಆಧಿಕ್ಯದ ಮಧ್ಯೆ ಅವನನ್ನು ಕುರಿತು ಜೋಯಿಸರು ಹೇಳಿದ್ದು ಅಷ್ಟಾಗಿ ಮನಸ್ಸನ್ನು ಬಾಧಿಸಲಿಲ್ಲ. ಪರಮ ಸಂತೋಷದಿಂದ ಅವನನ್ನು ಅರಮನೆಗೆ ಕರೆದುಕೊಂಡುಹೋದರು. ಪ್ಯಾರಿಸ್ ಮತ್ತೆ ತಾನು ರಾಜಕುಮಾರನಾಗಿ ತನ್ನ ಜನ್ಮಸ್ಥಾನದಲ್ಲಿ ನೆಲೆನಿಂತನು.

ಈ ಮಧ್ಯೆ ಏನಾಗಿತ್ತು........ಎಂದರೆ........

"ಅದು ಬೇರೆ ಇನ್ನೊಂದು ಕತೆ. ಹೇಳಲೋ, ಇಲ್ಲವೇ ಬೇಸ
ವಾಯಿತೊ?"

"ಬೇಸರವೆಲ್ಲಿ ಬಂತಯ್ಯ? ಸ್ವಾರಸ್ಯವಾಗಿದೆ, ಹೇಳು."

ಈ ಮಧ್ಯೆ ಏನಾಗಿತ್ತು....ಅಥವಾ, ಇದಕ್ಕೆ ಹಿಂದೆ ಏನಾಗಿತ್ತು
ಎಂದರೆ—

ಈ ಪ್ರಯಾಮಿನ ತಂದೆ ಲಾಓಮೆಡನ್ ಅಂತ, ಟ್ರಾಯ್‌ನಗರದ
ದೊರೆ, ವಕ್ರಬುದ್ಧಿ ಎಂವರೆ, ಹೇಳಿ ಮಾಡಿಸಿದ ವಕ್ರಬುದ್ಧಿ. ಅವನ
ಮನುಷ್ಯರಿಗೆ ನಾಮ, ದೇವತೆಗಳಿಗೆ ಟೋಪಿ ಹಾಕುವುದರಲ್ಲಿ ಬುದ್ಧಿವಂತ
ಅವನು ತನ್ನ ಟ್ರಾಯ್‌ನಗರದ ಕೋಟೆ ಗೋಡೆಗಳನ್ನು ಕಟ್ಟಿಸಿದ್ದು ಹೇಗೆ
ಗೊತ್ತೆ? ಆ ದಿವಸದಲ್ಲಿ, ಜ್ಯೂಸ್ ದೇವತೆಗೆ ಅಪಾಲೋ ಮತ್ತು ನೆಪ್
ಚ್ಯೂನ್ ದೇವತೆಗಳ ಮೇಲೆ ಆಗ್ರಹವುಂಟಾಗಿ, "ನೀವು ಒಂದು ವರ್ಷಕಾಲ
ಒಲಿಂಪಸ್ ದೇವರಾಜ್ಯದಿಂದ ಭೂಮಿಗೆ ಹೋಗಿದ್ದು, ಅಲ್ಲಿ ಯಾರಿಗಾದರೂ
ಸೇವೆ ಮಾಡಿ ಬನ್ನಿ" ಎಂದು ಶಾಪಕೊಟ್ಟುಬಿಟ್ಟಿದ್ದನು. ಆ ಶಾಪವನ್ನು
ಕಳೆಯುವುದಕ್ಕಾಗಿ ಬಂದು, ನೆಪ್‌ಚ್ಯೂನ್ ಟ್ರಾಯ್‌ನಗರದ ಸುತ್ತ ಕೋಟೆ
ಗೋಡೆ ಕಟ್ಟಿದ, ಅಪಾಲೋ ಅರಮನೆಯ ಕುರಿಗಳನ್ನು ಮೇಯಿಸಿ
ಬರುತ್ತಿದ್ದ.

ಒಂದು ವರ್ಷ ಮುಗಿಯಿತು. ಮುಗಿದ ಮೇಲೆ ಅವರಿಗೆ ಸಂಭಾವನೆ
ಮಾಡುವುದು ಹಾಗಿರಲಿ, ಒಳ್ಳೆಯ ಮಾತನಾಡುವುದೂ ಬೇಡ, ಅವರನ್ನು
ಬೈದು, ಗದರಿಸಿ, ಅಂದು ಆಡಿ, ಅಟ್ಟಿಬಿಟ್ಟ. ಅವರು ಕೂಡ ಅರಸನ
ಮೇಲೆ ದ್ವೇಷವನ್ನು ಸಾಧಿಸಬೇಕೆಂದು ಮನಸ್ಸು ಮಾಡಿಕೊಂಡು. ತಮ್ಮ
ಸ್ವಸ್ಥಾನನಾದ ಒಲಿಂಪಸ್ ಸ್ವರ್ಗಕ್ಕೆ ಹಿಂದಿರುಗಿದರು.

ಅಪಾಲೋ ಅದನ್ನು ಅಷ್ಟಾಗಿ ಮನಸ್ಸಿಗೆ ಹಚ್ಚಿಕೊಂಡನೋ ಇಲ್ಲವೋ,
ನೆಪ್‌ಚ್ಯೂನ್ ಅಂತೂ ಅರಸನ ಅಪರಾಧವನ್ನು ಮರೆಯಲೇ ಇಲ್ಲ
ಒಲಿಂಪಸ್ಸಿಗೆ ಬಂದ ಕೂಡಲೇ, ಟ್ರಾಯ್‌ನಗರದ ಮೇಲೆ ಒಂದು ರೆಕ್ಕೆಯ
ಘಟಸರ್ಪವನ್ನು ಹಾವಳಿ ಮಾಡುವಂತೆ ಕಳುಹಿಸಿಕೊಟ್ಟ. ಆ ಘಟಸರ್ಪದ
ಹಾವಳಿಗೆ ಏನು ಪರಿಹಾರವೆಂದು ದೊರೆ ದೇವಾಲಯದಲ್ಲಿ ಪ್ರಶ್ನೆ ಕೇಳಿದಾಗ

ದೇವವಾಣಿ ಹೇಳಿತು: "ಅರಸನ ಮಗಳಾದ ಹೆಸಿಯೋನೆಯನ್ನು ಘಟಸರ್ಪಕ್ಕೆ ಬಲಿ ಕೊಟ್ಟರೆ, ಅದರ ಹಾವಳಿ ನಿಲ್ಲುತ್ತದೆ."

ಅರಸ ಏನು ಮಾಡಿಯಾನು? ಮಗಳನ್ನು ಘಟಸರ್ಪಕ್ಕೆ ಬಲಿಯಾಗಿ ಅರ್ಪಿಸಿ, ಅವಳನ್ನು ಊರಹೊರಗಿನ ಒಂದು ಬಂಡೆಗೆ ಸಂಕೋಲೆಗಳಿಂದ ಬಿಗಿಯಾಗಿ ಬಿಗಿಸಿದ.

ಆದರೆ, ಆ ಹುಡುಗಿಯ ಅದೃಷ್ಟ, ಅಷ್ಟುಹೊತ್ತಿಗೆ ಹೆರ್ಕ್ಯುಲೀಸ್ ಎಂಬ ವೀರ ಆ ಮಾರ್ಗವಾಗಿ ಬಂದ. (ಅವನ ಕತೆ ಬೇರೆ ಯಾವಾಗಲಾದರೂ ಹೇಳುತ್ತೇನೆ. ಅವನೊಬ್ಬ ಜಗದ್ವೀರ, ನಮ್ಮ ಭೀಮನ ಹಾಗೆ.) ಅವನ ಹತ್ತಿರ ಆ ದೊರೆ ಕೈಮುಗಿದು ಬೇಡಿಕೊಂಡ: "ನನ್ನ ಮಗಳನ್ನು ದಯಮಾಡಿ ಉಳಿಸಿಕೊಡು. ಉಳಿಸಿಕೊಟ್ಟರೆ, ನಿನಗೆ ಎರಡು ದಿವ್ಯಾಶ್ವಗಳನ್ನು ಕೊಡುತ್ತೇನೆ. ಅವುಗಳನ್ನು ಜ್ಯೂಸ್ ದೇವತೆಯು ತಾನೇ ನಮ್ಮ ತಾತನಿಗೆ ಕೊಟ್ಟನು."

ಹೆರ್ಕ್ಯುಲಿಸ್ ಆರ್ತತ್ರಾಣಪರಾಯಣ, ನೀವು ಹೇಳೋ ಹಾಗೆ. ಆ ಹುಡುಗಿಯ ಮೇಲಿನ ಕನಿಕರದಿಂದ ಆ ಘಟಸರ್ಪವನ್ನು ಸಂಹಾರ ಮಾಡಿದ. ಆದರೆ, ಆ ದೊರೆ ಮತ್ತೆಯೂ ತನ್ನ ಮಾತನ್ನು ಉಳಿಸಿಕೊಳ್ಳಲಿಲ್ಲ. ಹಿಂದೆ ಅಪಾಲೋವಿಗೂ ನೆಪ್‌ಚ್ಯೂನಿಗೂ ಮಾಡಿದಂತೆ ಇವನಿಗೂ ಅವಮಾನ ಮಾಡಿದ, ಅಪಚಾರ ಮಾಡಿದ. ಆಡಿದ ಮಾತಿನಂತೆ ನಡೆದುಕೊಳ್ಳಲಿಲ್ಲ. ಹೆರ್ಕ್ಯುಲಿಸ್ಸಿಗೆ ಅಸಾಧ್ಯವಾದ ಕೋಪ ಬಂದಿತಾದರೂ, ಅವನು ಆಗ್ಗೆ ಅದನ್ನು ಅಡಗಿಸಿಕೊಂಡ. ಅಗತ್ಯದ ಕೆಲಸ ಬೇರೆ ಇದ್ದದ್ದರಿಂದ, ತತ್ಕಾಲಕ್ಕೆ ಸುಮ್ಮನಾಗಿ ಹೋದ.

ಆದರೆ, ಕೆಲವು ವರ್ಷಗಳ ಅನಂತರ ಟ್ರಾಯ್‌ನಗರಕ್ಕೆ ಹಿಂದಿರುಗಿದ. ಪ್ರತೀಕಾರಕ್ಕೆ ತೊಡಗಿದ. ನಗರಕ್ಕೆ ಮುತ್ತಿಗೆ ಹಾಕಿ, ವಚನಭ್ರಷ್ಟನಾದ ಆ ದೊರೆಯನ್ನು ಕೊಂದ. ಅವನ ಮಗಳಾದ ಹೆಸಿಯೋನೆಯನ್ನು ಸೆರೆ ಹಿಡಿದು ತನ್ನ ಅನುಯಾಯಿ ಒಬ್ಬನ ಪಾಲುಮಾಡಿದ. ಕಡೆಗೆ, ತನ್ನ ಕೋಪವಿಳಿದ ಮೇಲೆ, ಅವಳ ಪ್ರಾರ್ಥನೆಯ ಮೇರೆ ಅವಳ ತಮ್ಮನಾದ ಪ್ರಯಾಮನಿಗೆ ಟ್ರಾಯನಗರದ ದೊರೆತನವನ್ನು ಕೊಟ್ಟುಹೋದ.

ಇದೆಲ್ಲಾ ಏಕೆ ಹೇಳುವುದಕ್ಕೆ ಬಂದೆ ಎಂದರೆ—

ಈಗ ಪ್ಯಾರಿಸ್ ತಮ್ಮ ಅರಮನೆಗೆ ಬಂದ ಮೇಲೆ, ಪ್ರಯಾಮ್ ದೊರೆ, ಆ ದಿನಸ ಅಪಹೃತಳಾದ ತನ್ನ ಅಕ್ಕ ಹೆಸಿಯೋನೆಯನ್ನು ಮತ್ತೆ ಪಡೆದುಕೊಂಡು ತರುವುದಕ್ಕೋಸ್ಕರವಾಗಿ ದೊಡ್ಡದೊಂದು ನೌಕಾಬಲವನ್ನು ಸಿದ್ಧಪಡಿಸಿ, ಅದನ್ನು ಪ್ಯಾರಿಸ್ಸಿನ ಕೈಕೆಳಗೆ ಕಳಿಸಬೇಕೆಂದು ಹವಣಿಸಿದನು. ದೊರೆಯ ಉದ್ದೇಶವನ್ನು ಉಳಿದವರೆಲ್ಲರೂ ಅನುಮೋದಿಸಿದರೂ, ಕಸ್ಸಾಂಡ್ರ ಒಬ್ಬಳು ಮಾತ್ರ ಅದನ್ನು ಪ್ರತಿಭಟಿಸಿದಳು. ಅವಳಿಗೆ ಅಪರೋಕ್ಷಜ್ಞಾನ ವಿದ್ದಿತೆಂದು ಹಿಂದೆಯೇ ಹೇಳಿದೆನಲ್ಲವೆ! ಆದರೆ ಮಾತ್ರ, ಅನ್ಯಾಯ: ಅವಳಿಗೆ ಆ ಅಪರೋಕ್ಷಜ್ಞಾನದ ದಿವ್ಯಶಕ್ತಿಯನ್ನು ದಾನಮಾಡಿದ ಅಪಾಲೋ ದೇವತೆ ಅದರ ಜೊತೆಯಲ್ಲಿಯೇ ಒಂದು ಶಾಪವನ್ನೂ ಕೂಡಿಸಿಕೊಟ್ಟಿದ್ದ. ಅದು ಏನೆಂದರೆ—'ನೀನು ಮುಂದೆ ಆಗುವುದನ್ನೇ ನಿಜವಾಗಿಯೂ ನುಡಿದರೂ ಯಾರೂ ನಿನ್ನ ಮಾತನ್ನು ನಂಬದಿರಲಿ!' ಅದೇ ಅದರ ಪರಿಣಾಮವಾಗಿ, "ಈ ಸೇನಾಪ್ರಯಾಣ ಬೇಡ. ಇದರಿಂದ ನಮಗೂ ಗ್ರೀಕರಿಗೂ ಕಲಹ ವಾಗುತ್ತದೆ. ಇದರಿಂದ ಟ್ರಾಯ್ ನಾಶವಾಗುತ್ತದೆ" ಎಂದು ಕಸ್ಸಾಂಡ್ರ ಎಷ್ಟು ಹೇಳಿದರೂ, ಯಾರಿಗೂ ಅವಳ ಮಾತಿನಲ್ಲಿ ನಂಬಿಕೆ ಹುಟ್ಟಲಿಲ್ಲ.

ಪ್ಯಾರಿಸ್ಸೇನೋ ತಂದೆಯ ಇಚ್ಛೆಯನ್ನು ಪೂರೈಸಬೇಕೆಂದೇ ನೌಕಾ ಸಮೇತನಾಗಿ ತೆರಳಿದ, ಕೃತಕೃತ್ಯನಾಗುವೆನೆಂದೇ ಭರವಸೆಯಿಂದ ಹೊರಟ. ಆದರೂ, ದೈವದ ಇಚ್ಛೆಯ ಮುಂದೆ ಯಾರದು ಏನು ನಡೆಯುತ್ತದೆ, ಹೇಳು ಗ್ರೀಸ್‌ದೇಶದ ಮೇಲೆ ದಂಡೆತ್ತಿ ಹೊರಟವನು ಪ್ಯಾರಿಸ್ ದಾರಿಯಲ್ಲಿ ಸ್ಪಾರ್ಟಾ ದೇಶದ ಕಡೆ ತಿರುಗಿದ.

ಅಲ್ಲಿನ ದೊರೆ ಮೆನೀಲಾಸ್. ಅವನ ಹೆಂಡತಿ ಹೆಲೆನ್, ಲೋಕೋತ್ತರವಾದ ರೂಪವುಳ್ಳವಳು ಎಂದು ವಿಖ್ಯಾತಳಾದವಳು. ಅವಳು ತಮ್ಮ ಮನೆಗೆ ಬಂದ ಆ ಸ್ಫುರದ್ರೂಪಿಯಾದ ಅತಿಥಿಯನ್ನು ಕಂಡ ಕೂಡಲೆ, ವೀನಸ್ ದೇವತೆಯ ಪ್ರಭಾವದಿಂದ, ತನ್ನ ಹೃದಯವನ್ನು ಅವನಿಗೆ ಮಾರಿಕೊಂಡಳು. ತನ್ನ ಪತಿವ್ರತೆಯ ಕರ್ತವ್ಯವೇನೆಂಬುದನ್ನು ಮರೆತಳು. ಅವಳನ್ನು ಕಂಡ ಗಳಿಗೆಯಲ್ಲಿಯೇ, ಅದೇ ವೀನಸ್ಸಿನ ಪ್ರಭಾವದಿಂದ, ಅವ

ನಾದರೂ ತನ್ನ ಪತ್ನಿಯಾದ ಈನೋನೆಯನ್ನು ಸಂಪೂರ್ಣವಾಗಿ ಮರೆತು, ಅವನ ಮನಸ್ಸು ಅವಳಲ್ಲಿ ಆಸಕ್ತವಾಯಿತು ಅಷ್ಟೇ ಅಲ್ಲ, ತನ್ನ ಹೆಂಡತಿಯನ್ನು ಮರೆತದ್ದರ ಜೊತೆಗೆ, ತನ್ನ ತಂದೆಯ ಆಜ್ಞೆಯನ್ನೂ ಮರೆತ, ತಾನು ನೌಕಾಬಲವನ್ನು ಕರೆತಂದದ್ದು ಏಕೆಂಬುದನ್ನೂ ಮರೆತ. ಮರೆತು, ಹೆಲೆನಳ ಮುಖಾವಲೋಕನದಲ್ಲಿ ಮೂರುಹೊತ್ತೂ ಮುಳುಗಿನಿಂತ.

ಮುಂದೆ ಒಂದು ಸಲ, ಆತಿಥೇಯನಾದ ಮೆನೆಲಾಸ್ ಮನೆಗೆ ಬಂದ ಅತಿಥಿಯನ್ನು ನಂಬಿ, ತಾನು ಬೇರೆ ಯಾವುದೋ ಪ್ರಕರಣದಲ್ಲಿ ಮನೆಯಿಂದ ಆಚೆಗೆ ಹೋಗಿರುವ ಹೊತ್ತಿನಲ್ಲಿ, ಪ್ಯಾರಿಸ್ ಅವನ ಮನೆಯಲ್ಲಿದ್ದ ಅನರ್ಘವಾದ ಅನೇಕ ವಸ್ತುಗಳನ್ನು ಸೂರೆಮಾಡಿಕೊಂಡದ್ದರ ಜೊತೆಗೆ, ಮೆನೆಲಾಸನ ಧರ್ಮಪತ್ನಿಯಾದ ಹೆಲೆನಳನ್ನೂ ಅಪಹರಿಸಿಕೊಂಡು, ತನ್ನ ಹಡಗುಗಳನ್ನೇರಿಸಿಕೊಂಡು ಟ್ರಾಯ್ ಕಡೆಗೆ ಓಡಿಹೋದನು.

ಪಾಪ, ಹೆಲೆನ್, ವೀನಸ್ಸಿನ ಪ್ರಭಾವದಿಂದ ಬುದ್ಧಿಗೆ ಏನೋ ಮಂಕು ಕವಿದು, ತನ್ನ ಚಿಕ್ಕ ಹೆಣ್ಣುಮಗುವನ್ನು ಕೂಡ ತೊರೆದು, ಪ್ಯಾರಿಸ್ಸಿನ ಹಿಂದೆ ಓಡಿಹೋದಳು.

ಹೀಗೆ ವೀನಸ್ ದೇವತೆ ತಾನು ಆ ದಿವಸ ಇಡಾ ಪರ್ವತದ ಮೇಲೆ ಪ್ಯಾರಿಸ್ಸಿಗೆ ಕೊಟ್ಟಿದ್ದ ವಾಗ್ದಾನವನ್ನೇನೋ ನಡಸಿಕೊಟ್ಟಳು. ಆದರೆ, ಅದರಿಂದ ಆಗುವ ಪರಿಣಾಮಗಳು ಏನು ಘೋರವಾಗುವುವೆಂದು ಯೋಚಿಸಿದಳೋ ಇಲ್ಲವೋ!

"ಅದರ ಪರಿಣಾಮ, ಅಂತಹ ಘೋರವಾದದ್ದು, ಏನಾಯಿತು?"

"ಏನಾಯಿತೆ? ಮೆನೆಲಾಸ್ ಹಿಂದಿರುಗಿ ಬಂದನನೇ, ತನಗಾದ ದ್ರೋಹವನ್ನು ತಿಳಿದ. ಟ್ರಾಯ್ ನಗರದವರ ಮೇಲೆ ದಂಡೆತ್ತಿಹೋಗುವುದೆಂದು ನಿಶ್ಚಯಿಸಿದ. ಅವನಿಗೆ ಗ್ರೀಸ್ ದೇಶದ ರಾಜರುಗಳೆಲ್ಲ ತಮ್ಮ ಸೇನೆಗಳ ಸಮೇತವಾಗಿ ಸಹಾಯಕ್ಕೆ ಬಂದರು. ಹತ್ತು ವರುಷಗಳು ಸಿದ್ಧತೆ ಮಾಡಿಕೊಂಡರು. ಹತ್ತು ವರುಷಗಳು ಟ್ರಾಯ್ ನಗರಕ್ಕೆ ಮುತ್ತಿಗೆ ಹಾಕಿ ಕಾದಾಡಿದರು. ಎರಡೂ ಕಡೆ ಮಹಾನಾಶವಾಯಿತು. ಈ ಮಹಾಕಾಳಗದ

ಕಥೆಯನ್ನು **ಹೋಮರ್** ಎಂಬ ಕವಿ ತನ್ನ **ಇಲಿಯಡ್** ಎಂಬ ಮಹಾ ಕಾವ್ಯದಲ್ಲಿ ಹಾಡಿದ್ದಾನೆ.''

"ಆಯಿತು. ಪ್ಯಾರಿಸ್ ಮೆನೆಲಾಸರ ಕತೆ ಏನಾಯಿತು,ಕೊನೆಗೆ ?''

"ಆಗುವುದೇನು ? ಎಲ್ಲಾ ಸರ್ವನಾಶವಾದ ಮೇಲೆ, ಹೆರ್ಕ್ಯುಲಿಸ್ ಮಹಾವೀರನು ಹೊಡೆದ ಮಾರಕವಾದ ವಿಷದ ಬಾಣವೊಂದು ಬಂದು ನಾಟಿ, ಪ್ಯಾರಿಸ್ ನೆಲಕ್ಕೆ ಉರುಳಿದನು, ಆ ವೇಳೆಗೆ, ಪುನಃ ವೀನಸ್ಸಿನ ಪ್ರೇರಣೆಯಿಂದ, ಹೆಲೆನಳಿಗೆ ತಾನು ತೊರೆದು ಬಂದ ಗಂಡನ, ಮಗುವಿನ ಜ್ಞಾಪಕವಾಯಿತು. ಇತ್ತ, ಟ್ರಾಯ್ ನಗರದಲ್ಲಿ ಎಲ್ಲರೂ ತನ್ನನ್ನು ಛೀಗುಟ್ಟುತ್ತಿದ್ದರೂ, ತನ್ನ ಪರವಾಗಿ ಎರಡು ಒಳ್ಳೆಯ ಮಾತನಾಡುತ್ತಿದ್ದ ರಾಜ ಪ್ರಯಾಮ್, ರಾಜಕುಮಾರ ಹೆಕ್ಟರ್ ಮುಂತಾದವರು ಮಡಿದಿದ್ದರು. ಆ ಸಂದರ್ಭದಲ್ಲಿ ಅವಳಿಗಿದ್ದದ್ದು ಒಂದೇ ದಾರಿ. ಮೆನೆಲಾಸನ ಬಳಿ ಕ್ಷಮಾ ಭಿಕ್ಷೆ ಬೇಡಿದಳು. ಮತ್ತೆ ಗಂಡನೊಡನೆ ಕೂಡಿಕೊಂಡು, ಕಳೆದುಕೊಂಡಿದ್ದ ಸೌಭಾಗ್ಯವನ್ನು ಸಂಪಾದಿಸಿದಳು.''

" ಪ್ಯಾರಿಸ್ ?''

" ಪ್ಯಾರಿಸ್, ಪಾಪ! ವೀನಸ್ ನಂಬಿಸಿದಳು, ನಡಸಿದಳು, ಕೈಬಿಟ್ಟಳು! ಇತ್ತ ಹೆಲೆನ್ ತನ್ನನ್ನು ತೊರೆದುಹೋದಳು, ಅತ್ತ ಹೆರ್ಕ್ಯುಲಿಸನ ಬಾಣ ತನ್ನನ್ನು ಮರಣದ ಕಡೆಗೆ ಎಳೆದೊಯ್ಯುತ್ತಿತ್ತು. ಟ್ರಾಯ್ ನಗರದಲ್ಲಾದರೋ ಸೀನೇ ಎನ್ನುವವರಿಲ್ಲ. ಆಗ ಅವನಿಗೆ ಇಡಾ ಪರ್ವತದಲ್ಲಿ ತಾನು ತೊರೆದು ಬಂದ ಪತ್ನಿಯಾದ ಈನೋನೆಯ ಜ್ಞಾಪಕ ಬಂತು. ಹಾಗೂ ಹೀಗೂ ಕಾಲೆಳೆದುಕೊಂಡು, ಅಲ್ಲಿಗೆ ಹೋಗಿ ಅವಳನ್ನು ಹುಡುಕಿ ಕರೆದ. ಅವನು ಅವಳನ್ನು ಮರೆತು ಕಾಣದೆ ಇಪ್ಪತ್ತು ವರ್ಷಗಳಾಗಿತ್ತು. ಅವಳು ಕೂಡಲೆ ಪ್ರಸನ್ನಳಾಗಲಿಲ್ಲ. 'ಇದುವರೆಗೆ ಯಾವ ಹಾದರಿಯ ಹಾಸಿಗೆಯಲ್ಲಿದ್ದೆಯೋ ಅಲ್ಲಿಗೇ ಹೋಗು!' ಎಂದು ಮುಖ ತಿರುಗಿಸಿಕೊಂಡು ಹೊರಟುಹೋದಳು. ಈನೋನೆ ಪರ್ವತವಾಸಿನಿಯಾದ ಕಿನ್ನರಿಯಾದ್ದರಿಂದ ಅವಳಿಗೆ ಗಿಡಮೂಲಿಕೆಗಳು ಗೊತ್ತು, ಅದರಿಂದ ತನ್ನ ಬಾಣದ ವಿಷವನ್ನು ಹೋಗಲಾಡಿಸಬಹುದು ಎಂದು ಆಶಿಸಿಕೊಂಡಿದ್ದ

ಪ್ಯಾರಿಸ್ಸಿನ ಬಯಕೆ ಬಯಲಾಯಿತು. ಒಬ್ಬನೇ ನರಳಿ ನರಳಿ, ಆ ನಿರ್ಜನ ಪ್ರಾಂತದಲ್ಲಿ ಪ್ರಾಣವೊಪ್ಪಿಸಿದನು. ಅವನ ಚಿಕ್ಕಂದಿನಲ್ಲಿ ಅವನೊಡನೆ ಆಡಿ ಬೆಳೆದ ಕಾಡುಜನ ಅವನ ಮೃತದೇಹವನ್ನು ಕಂಡರು, ಗೋಳಾಡಿದರು, ಅವನ ತಲೆಗೂದಲನ್ನು ನೇವರಿಸಿದರು, ಅವನ ಕಣ್ಣು ಮುಚ್ಚಿದರು, ಅವನ ಕೈಗೆ ಮುತ್ತಿಟ್ಟರು. ಅವನಿಂದ ಟ್ರಾಯ್ ನಗರಕ್ಕೆ ಸರ್ವನಾಶ ಸಂಭವಿಸಿ ತೆಂಬುದನ್ನು ಆ ಗಳಿಗೆಯಲ್ಲಿ ಮರೆತರು, ತಮ್ಮೊಡನೆ ತಮ್ಮಂತೆ ಕುರುಬ ನಾಗಿದ್ದ ಆ ರಾಜಕುಮಾರನಿಗೆ ಒಂದು ಘನವಾದ ಚಿತೆಯನ್ನು ಸಿದ್ಧ ಮಾಡಿದರು. ಸಂಜೆಯ ಹೊತ್ತಿಗೆ, ಸೂರ್ಯ ಮುಳುಗುವ ವೇಳೆಯಲ್ಲಿ, ಎಲ್ಲರೂ ಸುತ್ತ ನಿಂತು, ಅವನ ಹೆಸರು ಹೇಳಿಕೊಂಡು ಅವನನ್ನು ಬೆಂಕಿಗೆ ಕೊಟ್ಟರು.''

''ಮತ್ತೆ ಈನೋನೆಯ ಗತಿ?''

'' ಬೆಳಗಿನ ಜಾವದ ವೇಳೆಗೆ, ದೇಹವೆಲ್ಲ ದಗ್ಧವಾದ ಮೇಲೆ, ಈನೋನೆ ತಾನಾಗಿಯೇ ಅಲ್ಲಿಗೆ ಬಂದಳು. ಹಿಂದಿನ ದಿವಸ ಪ್ಯಾರಿಸ್ಸನ್ನು ನಿರಾಕರಿಸಿ ಹೋದ ಮೇಲೆ ಅವಳಿಗೆ ಪಶ್ಚಾತ್ತಾಪ ಪ್ರಾರಂಭವಾಗಿತ್ತು. ಗಂಡನ ಕ್ಷಮೆಯನ್ನು ಕೇಳಬೇಕೆಂದು ಅವಳು ಬರುವ ವೇಳೆಗೆ, ಅನ್ಯಾಯ!– ಪ್ಯಾರಿಸ್ಸಿನ ದೇಹ ಬೂದಿಯಾಗಿತ್ತು. ಪತಿಪ್ರಾಣೆಯಾದ ಈನೋನೆ ಆ ವಿಯೋಗದ ಸಂಕಟವನ್ನು ಸಹಿಸಲಾರದೆ, ಗಂಡನ ಹೆಸರನ್ನು ಘೋರವಾದ ಧ್ವನಿಯಿಂದ ಕಿರಿಚಿಕೊಂಡು ಧಗಧಗ ಉರಿಯುತ್ತಿದ್ದ ಆ ಬೆಂಕಿಗೆ ಹಾರಿ, ತಾನೂ ಗಂಡನ ಜೊತೆಗೇ ಸುಟ್ಟು ಬೂದಿಯಾದಳು."

" ಪರವಾ ಇಲ್ಲ, ಕಣಯ್ಯ ವೀನಸ್ಸಿನ ಹಾವಳಿ ಕೊಂಚವೇ ಆಯಿತು ಎಂದು ಹೇಳಬೇಕು."

" ಹೇಳಬೇಕು ಅಂತೀಯೇನು? ಅವಳ ಹಾವಳಿ—ಇನ್ನೊಂದು ಹೇಳುತೇನೆ, ಕೇಳು."

೨

ವೀನಸ್ಸಿನ ಮಗ ಕ್ಯುಪಿಡ್ ಎಂದು ಹೇಳಲಿಲ್ಲವೆ. ಆ ಕ್ಯುಪಿಡ್ಡಿ ಈ ತಾಯಿ ಬತ್ತಳಿಕೆ ತುಂಬ ಬಾಣ ಕೊಟ್ಟಿದ್ದಳು. ಅವುಗಳಲ್ಲಿ ಕೆಲ ಚಿನ್ನದ ಮೊನೆಯವು. ಅವು ಯಾರಿಗೆ ತಗುಲಿದರೆ ಅವರಲ್ಲಿ ಪ್ರೇವ ಉದ್ರೇಕವಾಗುತ್ತಿತ್ತು.

ಒಂದು ಸಲ ವೀನಸ್ ತನ್ನ ಮಗನ ಜೊತೆಯಲ್ಲಿ ಆಟವಾಡುತ್ತಿದ್ದಾಗ ಆ ಚಿನ್ನದ ತುದಿಯ ಬಾಣವೊಂದರಿಂದ ಅಕಸ್ಮಾತ್ ತನ್ನ ಎದೆಗೆ ಮೃದುವಾ ತಿವಿದುಕೊಂಡಳು. ಗಾಯ ಆಯಿತೋ ಇಲ್ಲವೋ ಎಂದು ಅವಳಿಗೆ ತಿಳಿಯದಷ್ಟು ಸೂಕ್ಷ್ಮವಾಗಿತ್ತು ಆ ತಿವಿತ. ಆದರೂ ಅದೇ ಹೊತ್ತಿನಲ್ಲಿ ವೀನಸ್, ಭೂಲೋಕದಲ್ಲಿದ್ದ ಅಡೋನಿಸ್ ಎಂಬ ಸುಂದರಾಕಾರನನ್ನು ದೃಷ್ಟಿಸುತ್ತಿದ್ದಳಾದ ಕಾರಣ, ಆ ಬಾಣ ಚುಚ್ಚಿದ ಗಳಿಗೆಯಲ್ಲೆ ಅವ ಮನಸ್ಸು ಅವನಲ್ಲಿ ಆಸಕ್ತವಾಯಿತು. ಎಷ್ಟುಮಟ್ಟಿಗೆ ಆಸಕ್ತವಾಯಿತೆಂದರೆ- ಅವನು ಮಾನವ, ತಾನು ದೇವತೆ ಎಂಬುದನ್ನೂ ಮರೆತು, ಒಲಿಂಪಸ್ ದೇವಲೋಕದಿಂದ ಭೂಮಿಗೆ ಇಳಿದುಬಂದಳು. ಎಡೆಬಿಡದೆ ಆ ಆಡೋನಿಸನ ಬೆನ್ನು ಹತ್ತಿದಳು.

ಒಲಿಂಪಸಿನಲ್ಲಿರುವಾಗ ಅವಳು ಬಳಿದುಕೊಳ್ಳುತ್ತಿದ್ದ ಬಣ್ಣವೇನು ಪೂಸಿಕೊಳ್ಳುತ್ತಿದ್ದ ಗಂಧವೇನು, ಉಟ್ಟುಕೊಳ್ಳುತ್ತಿದ್ದ ವಸ್ತ್ರಗಳೇನು ತೊಟ್ಟುಕೊಳ್ಳುತ್ತಿದ್ದ ಆಭರಣಗಳೇನು, ಮಾಡಿಕೊಳ್ಳುತ್ತಿದ್ದ ಅಲಂಕಾ ಗಳೇನು, ಸುತ್ತ ಕರೆದುಕೊಳ್ಳುತ್ತಿದ್ದ ಪರಿವಾರಗಳೇನು! ಈಗ ಅವೆಲ್ಲವನ್ನೂ ತೊರೆದಳು. ತನ್ನ ಪ್ರಿಯನಾದ ಅಡೋನಿಸ್ ಬೇಟೆಗೆ ಹೊರಟರೆ, ತಾನೂ ಬೇಡಿತಿಯಂತೆ ಬಟ್ಟೆ ಹಾಕಿಕೊಂಡು, ಅವನ ಹಿಂದೆಯೇ ಬೇಟೆಗೆ ಹೋಗುವಳು. ಅವನು ಬೇಟೆಯಾಡಿ ಆಯಾಸದಿಂದ ವಿಶ್ರಮಿಸಿಕೊಳ್ಳಲು ಬಂದರೆ, ತನ್ನ ಚೆಂದುಟಿಯ ಮುತ್ತುಗಳನ್ನೇ ಅವನಿಗೆ ಕೊಟ್ಟು, ಅವನ ಹಸಿವುದಾಹಗಳನ್ನು ಅಡಗಿಸುವಳು. ಒಮ್ಮೊಮ್ಮೆ ಅವನ ವಿನೋದ ಕ್ಕೋಸ್ಕರವಾಗಿ, ತನಗೆ ಸಂಬಂಧಿಸಿದ ಕತೆಗಳನ್ನು ಹೇಳಿ ಅವನನ್ನು ಸಂತೋಷಪಡಿಸುವಳು.

ಅವಳು ಅಡೋನಿಸಿಗೆ ಹೇಳಿದ ಅನೇಕ ಕತೆಗಳಲ್ಲಿ ಇದು ಒಂದು :

ವೀನಸ್ ಹೇಳಿದ ಕತೆ

ಹಿಂದೆ ಅಟ್ಲಾಂಟಾ ಎಂಬವಳು ಹುಡುಗಿ ಇದ್ದಳು. ಅವಳ ರೂಪ ನೋಡಿದವರಿಗೆ ಮೋಹವನ್ನುಂಟುಮಾಡುತ್ತಿತ್ತು. ಓಡುವುದರಲ್ಲಿ ಬಹಳ ಚುರುಕಾದವಳೆಂದು ಎಲ್ಲೆಲ್ಲೂ ಅವಳದೇ ಪ್ರಸಿದ್ಧಿ.

ಅವಳು ಒಂದುಸಲ, ತನ್ನ ಭವಿಷ್ಯವನ್ನು ಕುರಿತು ಪ್ರಶ್ನೆ ಕೇಳಿದಾಗ, ದೇವವಾಣಿ ಹೀಗೆಂದು ಉತ್ತರ ಕೊಟ್ಟಿತಂತೆ: "ನೀನು ಮದುವೆಯಾಗ ಬೇಡ. ಆದರೆ, ಅದರಿಂದ ನಿನ್ನ ಜೀವಕ್ಕೆ ಅಪಾಯ." ಅದೇ ಕಾರಣ ದಿಂದ, ತನಗೆ ಮದುವೆಯಾಗಿ ಯೋಗ್ಯನಾದ ಸಂಗಾತಿಯನ್ನು ಪಡೆಯ ಬೇಕೆಂದು ಇಚ್ಛೆಯಿದ್ದರೂ ಅವಳಿಗೆ ಮದುವೆ ಮಾಡಿಕೊಳ್ಳುವ ಧೈರ್ಯ ವಾಗಲಿಲ್ಲ. ಎಷ್ಟೋ ಜನ ಅವಳನ್ನು ಮೋಹಿಸಿ ಮದುವೆಯಾಗುವೆವೆಂದು ತಾವಾಗಿಯೇ ಬಂದು ಬೇಡಿದರೂ, ಏನಾದರೂ ನೆಪ ಹೇಳಿ, ಅವಳು ತಪ್ಪಿಸಿ ಕೊಳ್ಳುತ್ತಿದ್ದಳು.

ಕಡೆಗೆ, ಬರುತ್ತ ಬರುತ್ತ ಅವರ ಒತ್ತಾಯ ಹೆಚ್ಚಾಗುತ್ತ ಬರಲು, ಅವಳು ಒಂದು ಉಪಾಯ ಹೂಡಿದಳು: "ಓಡುವ ಪಂದ್ಯದಲ್ಲಿ ಯಾರು ನನ್ನನ್ನು ಮೀರಿಸಿ ಸೋಲಿಸುವರೋ ಅವರನ್ನು ಮಾತ್ರ ನಾನು ಮದುವೆ ಯಾಗತಕ್ಕವಳು" ಎಂದು. ಅದರ ಜೊತೆಗೆ ಒಂದು ಕೊಕ್ಕೆ ಸೇರಿಸಿದಳು. ಅದು ಏನೆಂದರೆ: "ನೀವು ಗೆದ್ದರೆ, ನಾನು ಗೆದ್ದವನ ಪತ್ನಿಯಾಗುವೆನು. ಅಥವಾ ನೀವು ಸೋತರೆ, ಸೋತವನು ತನ್ನ ತಲೆಯನ್ನು ಒಪ್ಪಿಸಿಬಿಡ ಬೇಕು!"

ಎಷ್ಟೋ ಜನ, ಪಾಪ, ಅವಳನ್ನು ಪಡೆಯಬೇಕೆಂಬ ಆಸೆಯಿಂದ, ತಾವು ಗೆಲ್ಲಬಲ್ಲೆವೆಂಬ ನೆಚ್ಚಿನಿಂದ ಬಂದು, ತಲೆ ಒಪ್ಪಿಸಿದರು.

ಆಗಿನ ಕಾಲದಲ್ಲಿ ಒಬ್ಬ ಯುವಕ: ಹಿಪ್ಪೊಮಿನೀಸ್ ಎಂದು ಅವನ ಹೆಸರು. "ಒಬ್ಬ ಹೆಂಗಸಿಗಾಗಿ ಯಾವನಾದರೂ ತನ್ನ ತಲೆ ದಂಡಕೊಡುವು ದೆಂದರೆ, ಇದು ತೀರ ಹುಚ್ಚುತನ!" ಎಂದು ಇತರರಿಗೆ ಹೇಳುತ್ತಿದ್ದವನು

ಒಂದು ಸಲ ಆ ಪಂದ್ಯ ನಡೆಯುತ್ತಿದ್ದ ಸ್ಥಳಕ್ಕೆ ಬಂದು, ಅಲ್ಲಿ ಅಟ್ಲಾಂಟ
ರಮಣಿಯನ್ನು ಕಂಡನು! ಓಡುವುದಕ್ಕೆ ಸಿದ್ಧಳಾಗಿ, ಅಡ್ಡಿಯನಾಗಬಹುದಾ
ಅಧಿಕ ವಸ್ತ್ರಗಳನ್ನೆಲ್ಲ ಹೊರೆಗಳೆದಿದ್ದ ಅವಳ ರೂಪರಾಶಿಯನ್ನು ನೋಡಿ
ಹಿಪ್ಪೊಮೀನಿಸ್ ಬುದ್ಧಿಕೆಟ್ಟವನಾದನು. ತನ್ನ ತಲೆ ಹೋದರೂ ಸರಿಯೆ
ಅವಳನ್ನು ಪಡೆಯಲು ಪ್ರಯತ್ನಿಸಿಯೇ ನೋಡಬೇಕು, ಎಂದ
ಕೊಂಡನು.

ಅಟ್ಲಾಂಟಾ ಆಗ ನಡೆದ ಪಂದ್ಯದಲ್ಲಿ ಗೆದ್ದು ಸುದಾರಿಸಿಕೊಳ್ಳು
ದಕ್ಕಿಲ್ಲ; ಅಷ್ಟರೊಳಗೆ ಹಿಪ್ಪೊಮೀನಿಸ್ ಬಂದು, ತಾನು ಅವಳೊಡನೆ ಓ
ಗೆಲ್ಲುವೆನೆಂದು ಪಣ ತೊಟ್ಟು ನಿಂತನು.

ಅಟ್ಲಾಂಟಾ ಅವನನ್ನು ಕಣ್ಣೆತ್ತಿ ನೋಡಿದಳು. ತನ್ನಷ್ಟೇ ಎತ್ತರ
ತನ್ನಷ್ಟೇ ಸುಂದರ, ತನಗೆ ಹೊಂದುವ ವಯಸ್ಸು. ನೋಡಿದೊಡನೆಯೇ
ಅವಳ ಹೃದಯ ಅನನದಾಯಿತು. ಅವನನ್ನು ವೃಥಾ ಅಪಾಯದಿಂದ
ರಕ್ಷಿಸಬೇಕೆಂದು ಅಟ್ಲಾಂಟಾ ಅವನು ಪಂದ್ಯಕ್ಕೆ ನಿಲ್ಲದಂತೆ ಏನೇನೋ ಹೇಳಿ
ನೋಡಿದಳು. ಆದರೆ ಅವನ ಛಲ ಮಾತ್ರ ಸಡಿಲವಾಗಲಿಲ್ಲ. ಅಟ್ಲಾಂಟಾ
ವ್ಯಸನದಿಂದ ನಿಟ್ಟುಸಿರು ಬಿಟ್ಟು, "ಹಾಗಾದರೆ, ಸಿದ್ಧನಾಗು. ಓಡೋಣ
ಓಡುವ ಮುಂಚೆ ನಿನ್ನ ಇಷ್ಟದೇವತೆಯನ್ನು ಪ್ರಾರ್ಥನೆ ಮಾಡಿಕೊ"
ಎಂದಳು.

ಆ ಹೊತ್ತಿನಲ್ಲಿ ಹಿಪ್ಪೊಮೀನಿಸಿಗೆ ಇಷ್ಟವಾದ ದೇವತೆ ಒಬ್ಬಳೇ
ಅವಳು ವೀನಸ್. ತನ್ನ ಕಾರ್ಯದಲ್ಲಿ ತನಗೆ ಜಯವನ್ನು ಕರುಣಿಸ
ಬೇಕೆಂದು ವೀನಸ್ಸಿಗೆ ಅವನು ಮೊರೆಯಿಟ್ಟನು. ಯಾವುದೋ ಅನುಕೂಲ
ವಾದ ಮಂದಮಾರುತ ಆ ಮೊರೆಯನ್ನು ಒಲಿಂಪಸ್ ದೇವಲೋಕಕ್ಕೆ ಎತ್ತಿ
ಕೊಂಡೊಯ್ದು, ಅದನ್ನು ವೀನಸ್ಸಿನ ಕಿವಿಗೆ ಮುಟ್ಟಿಸಿತು.

ಭಕ್ತನ ಮೊರೆಯನ್ನು ಕೇಳಿದ ಕೂಡಲೇ ವೀನಸ್ ಒಲಿಂಪಸ್ಸಿನಿಂದ
ಭೂಮಿಗೆ ಇಳಿದು ಬಂದಳು. ಬರುವಾಗ ಮಾರ್ಗದಲ್ಲಿ ಸಿಕ್ಕಿದ ಸೈಪ್ರೆಸ್
ದ್ವೀಪದಲ್ಲಿ ಬೆಳೆದಿದ್ದ ಒಂದು ಆಶ್ಚರ್ಯವೃಕ್ಷದಿಂದ ಮೂರು ಚಿನ್ನದ ಸೇಬಿನ
ಹಣ್ಣುಗಳನ್ನು ಕಿತ್ತು ತಂದಳು.

ಇನ್ನೇನು ಪಂದ್ಯ ಪ್ರಾರಂಭವಾಗಬೇಕು ; ಅಷ್ಟರಲ್ಲಿ ವೀನಸ್ ಬಂದು ಆ ಮೂರು ಹಣ್ಣುಗಳನ್ನೂ ಹಿಪ್ಪೊಮೀನಿಸಿನ ಕೈಯಲ್ಲಿ ಇರಿಸಿ, “ಇದನ್ನು ಹೀಗೆ ಹೀಗೆ ಮಾಡು” ಎಂದು ಅವನ ಕಿವಿಯಲ್ಲಿ ಅದೃಶ್ಯಳಾಗಿದ್ದುಕೊಂಡೇ ಹೇಳಿ ಹೋದಳು. ಹಿಪ್ಪೋಮೀನಿಸನ ಮೈಯಲ್ಲಿ ರೋಮಾಂಚವಾಯಿತು.

ತುತ್ತೂರಿ ಊದಿದರು. ಪಂದ್ಯಕ್ಕೆ ನಿಂತವರಿಬ್ಬರೂ ಓಡಿದರು. ಹಿಪ್ಪೊಮೀನಿಸನ ಹೆಜ್ಜೆಯೇ ಮುಂದಾದಂತೆ ತೋರಿತು. ಆದರೆ, ಹಿಂದೆಯೇ ಬಂದಳು ಅಟ್ಲಾಂಟಾ. ಮನಸ್ಸಿಲ್ಲದ ಮನಸ್ಸಿನಿಂದ ಅವನನ್ನು ಮೀರಿಹೋದಳು. ಸೋತರೆ ಅವನ ಗತಿ ಏನಾಗುವುದೆಂಬುದನ್ನು ನೆನೆದು ಅವಳ ಕಣ್ಣು ತೇವವಾಯಿತು.

ಆ ಹೊತ್ತಿಗೆ ಸರಿಯಾಗಿ ಹಿಪ್ಪೊಮೀನಿಸ್ ವೀನಸ್ ಕೊಟ್ಟ ಸೇಬುಗಳಲ್ಲಿ ಒಂದನ್ನು ಅವಳ ದಾರಿಗೆ ಅಡ್ಡವಾಗಿ ಉರುಳಿಬಿಟ್ಟ. ಆ ಹೊನ್ನಿನ ಚೆಂಡು ಅವಳ ಕಣ್ಣುಗಳನ್ನು ಆಕರ್ಷಿಸಿತು. ಅವಳಿಗೋ ಓಡಬೇಕೆಂದು ಆಸೆ, ಆದರೆ ಅದನ್ನು ಬಿಟ್ಟುಹೋಗಲು ಇಚ್ಛೆಯಿಲ್ಲ. ಕಡೆಗೂ ಅದನ್ನು ಪಡೆಯುವ ಆಸೆಯೇ ಮೇಲುಗೈಯಾಯಿತು.

ಅವಳು ಅಡ್ಡ ಓಡಿ, ಬಗ್ಗಿ, ಆ ಸೇಬನ್ನು ಎತ್ತಿಕೊಳ್ಳುವ ವೇಳೆಗೆ ಹಿಪ್ಪೊಮೀನಿಸ್ ಮುಂದೆ ಮುಂದೆ ಹೋಗಿದ್ದ. ಅದುವರೆಗೆ ಎಷ್ಟೋ ಯುವಕರು ವಧೆಯಾಗಿದ್ದುದನ್ನು ಕಂಡು ಕಂಡು ಸಂಕಟಪಟ್ಟಿದ್ದವರು ಅವನ ಗೆಲವಿನ ಸೂಚನೆಯನ್ನು ಕಂಡು ಹಿಗ್ಗಿದರು.

ಆದರೆ ಆ ಹಿಗ್ಗು ಕ್ಷಣಕಾಲ ಮಾತ್ರ. ಅಟ್ಲಾಂಟಾ ಮತ್ತೆ ಅವನನ್ನು ಮೀರಿಸಿ ಮುಂದೆ ಓಡಿದಳು. ಅವನು ಮೊದಲಿನಂತೆ ಇನ್ನೊಂದು ಚಿನ್ನದ ಸೇಬನ್ನು ಇನ್ನೊಮ್ಮೆ ದಾರಿಗೆ ಅಡ್ಡಲಾಗಿ ಎಸೆದ. ಇನ್ನೊಮ್ಮೆ ಅಟ್ಲಾಂಟಾ ತನ್ನ ವೇಗವನ್ನು ಮಿತಮಾಡಿಕೊಂಡು, ಬಗ್ಗಿ, ಮಿಂಚಿನಂತೆ ಅದನ್ನು ಎತ್ತಿಕೊಂಡು, ಮತ್ತೆ ಓಡಿಬಂದು, ಹಿಪ್ಪೊಮೀನಿಸನ ಮುಂದೆ ಹರಿದಳು.

ಹಿಪ್ಪೊಮೀನಿಸ್, ಗೆಲ್ಲುವ ಕಂಬಕ್ಕೆ ಇನ್ನು ಕೊಂಚ ದೂರವಿರುವ ಹಾಗೆಯೇ ತನ್ನ ಕೈಯಲ್ಲಿದ್ದ ಕೊನೆಯ ಸೇಬನ್ನು ಮೂರನೆಯ ಬಾರಿ ಅವಳ ದಾರಿಗೆ ಅಡ್ಡಲಾಗಿ ಉರುಳಿಸಿದ. ಅದನ್ನು ಆಯ್ದುಕೊಳ್ಳುವ ವೇಳೆಯಲ್ಲಿ

ಅವನು ಓಡಿ ಗೆದ್ದುಬಿಟ್ಟರೆ, ಅದರ ಪರಿಣಾಮವೇನಾಗುವುದೆಂದು ಅಟ್ಲಾಂಟಾ ಬಲ್ಲಳು. ಆದರೂ ಸುವರ್ಣ ಅವಳನ್ನು ಅತ್ತ ಎಳೆಯಿತು. ಅವಳು ಅದನ್ನೂ ಬಿಡದೆ ಎತ್ತಿಕೊಂಡು, ಮತ್ತೆ ಮುಂದುವರಿದಳು.

ಆಗಲೂ ಅವಳೇ ಗೆದ್ದುಬಿಡುತ್ತಿದ್ದಳೋ ಏನೋ! ಆದರೆ ಅಷ್ಟರಲ್ಲೆ ವೀನಸ್ ದೇವತೆಯ ಕೈವಾಡ ಅವಳಿಗೆ ಅಡ್ಡಿಯಾಗಿ ಬಂತು. ವೀನಸ್ ತನ್ನ ಇಚ್ಛಾಮಾತ್ರದಿಂದ ಆ ಮೂರು ಸೇಬಿನಹಣ್ಣುಗಳೂ ತುಂಬ ಭಾರ ವಾಗುವಂತೆ ತನ್ನ ದಿವ್ಯಶಕ್ತಿಯನ್ನು ಪ್ರಯೋಗಿಸಿದಳು. ಆ ಭಾರದಿಂದಾಗಿ ಆ ಹೆಣ್ಣಿನ ಓಟ ನಿಧಾನವಾಯಿತು. ಅದರಿಂದಲೇ ಹಿಪ್ಪೊಮೀನಿಸ್ ಮುಂದೆ ಓಡಿ, ಗೆಲ್ಲುವುದು ಸಾಧ್ಯವಾಯಿತು.

ಪ್ರೇಕ್ಷಕರೆಲ್ಲರೂ ಸಂತೋಷ ಉತ್ಸಾಹಗಳಿಂದ ಜಯಜಯಕಾರ ಮಾಡಿ ವಿಜೃಂಭಿಸಿದರು. ಅಂದಿನಿಂದ ಮುಂದೆ ವ್ಯರ್ಥವಾದ ಯುವಕವಧೆ ನಿಂತಿತೆಂದು ಹರ್ಷಿಸಿದರು, ಆ ಸಂಭ್ರಮದ ನಡುವೆ ಹಿಪ್ಪೊಮೀನಿಸ್ ಅಟ್ಲಾಂಟಾ ರಮಣಿಯ ಕೈಯನ್ನು ಹಿಡಿದು, ಅವಳನ್ನು ತನ್ನ ಪತ್ನಿಯನ್ನಾಗಿ ಪಡೆದನು

ವೀನಸ್ ಹೇಳಿದ ಕತೆ ಮುಗಿಯಿತು

ಈ ಕತೆಯನ್ನು ಇಲ್ಲಿಯವರೆಗೆ ಹೇಳಿ, ವೀನಸ್ ಎಂದಳು: " ನೋಡಿದೆಯಾ, ಅಡೋನಿಸ್: ಇಷ್ಟೆಲ್ಲಾ ಉಪಕಾರ ಮಾಡಿ, ಅನುಗ್ರಹ ಮಾಡಿ, ಆ ಗಂಡಿಗೆ ಆ ಹೆಣ್ಣನ್ನು ಹೊಂದಿಸಿಕೊಟ್ಟೆನಲ್ಲ, ಕಾರ್ಯವಾದ ಮೇಲೆ ಅವನಿಗೆ ಏನಾದರೂ ಕೃತಜ್ಞತೆ ಎಂಬುದಿತ್ತೆ ಎಂದು ಕೇಳುವೆಯ? ಊಹುಂ, ಸುತರಾಂ ಇಲ್ಲ. ಅವರಾಯಿತು, ಅವರ ಪ್ರೀತಿಯಾಯಿತು. ಒಂದು ಧೂಪವೆ? ಒಂದು ದೀಪವೆ? ಒಂದು ನೈವೇದ್ಯವೆ? ಅದರ ಸ್ಮರಣೆ ಕೂಡ ಇಲ್ಲ. ಆಗ ನನಗೆನ್ನಿಸಿತು: ಈ ಅವಮಾನಕ್ಕೆ ಪ್ರತೀಕಾರವನ್ನು ಕೈಕೊಳ್ಳ ದಿದ್ದರೆ, ನಾನು ವೀನಸ್ ದೇವತೆಯಾಗಿ ಏನು ಪ್ರಯೋಜನ, ಎಂದು. ಏನು ಪ್ರತೀಕಾರ ಮಾಡಿದೆ, ಗೊತ್ತೆ? ಅವರಿಬ್ಬರೂ ತಮ್ಮ ಸುತ್ತಿನ ಜಗತ್ತನ್ನೇ ಮರೆತು ಒಬ್ಬರಲ್ಲಿ ಒಬ್ಬರು ಬೆರೆತುಹೋಗುತ್ತಿರುವಾಗ, ದಾರಿ

ಯಲ್ಲಿ ಒಂದು ಪುರಾತನವಾದ ದೇವಸ್ಥಾನದ ಬಳಿಗೆ ಬಂದರು. ಅದೇ ವೇಳೆಯಲ್ಲಿ ನಾನು ನನ್ನ ಶಕ್ತಿಯಿಂದ ಹಿಪ್ಪೊಮೀನಿಸನ ಹೃದಯದಲ್ಲಿ ರಾಗೋದ್ರೇಕವನ್ನು ಉಂಟುಮಾಡಿದೆ. ಅದರ ಪರಿಣಾಮವಾಗಿ ಅವನು ಆ ಪವಿತ್ರವಾದ ದೇವಮಂದಿರದಲ್ಲಿಯೇ ತನ್ನ ಅಟ್ಲಾಂಟಾವಿನೊಡನೆ ಸಂಗಮಿಸಿದನು. ಪವಿತ್ರವಾದ ಸ್ಥಾನದಲ್ಲಿ ಅಂತ ಅಪಚಾರವನ್ನು ಮಾಡಿದರೆ, ದೈವ ನೋಡಿಕೊಂಡು ಸುಮ್ಮನಿರುತ್ತದೆಯೆ? ಆ ಕೂಡಲೆ ಮಿಂಚಿನ ವೇಗದಿಂದ, ಸಿಡಿಲಿನ ಆಘಾತದಿಂದ ದೈವದ ದಂಡ ಅವರ ಮೇಲೆ ಎರಗಿತು. ಮನುಷ್ಯರಾಗಿದ್ದವರು ಇಬ್ಬರೂ ಆ ಕ್ಷಣವೇ ತಮ್ಮ ಪಾಶವೀ ವೃತ್ತಿಗೆ ಅನುರೂಪವಾದ ಸಿಂಹ ಸಿಂಹಿಯರ ಆಕಾರಗಳನ್ನು ತಾಳಿದರು."

ಹೀಗೆ ತನ್ನನ್ನು ಉಪೇಕ್ಷಿಸಿದವರಿಗೆ ತಾನು ಎಂತಹ ಶಿಕ್ಷೆಯನ್ನು ವಿಧಿಸಿದೆನೆಂದು ಹೇಳಿ ಕೇಕೆ ಹಾಕಿದ ಮೇಲೆ, ವೀನಸ್ ಮತ್ತೆ ಹೇಳಿದಳು: "ಅಡೋನಿಸ್! ನನ್ನದೊಂದು ಪ್ರಾರ್ಥನೆಯಿದೆ. ದಯಮಾಡಿ ಅದನ್ನು ನಡೆಸಿಕೊಡು. ನೀನು ಬೇಟೆಯಾಡಲು ಹೋದರೆ, ಮೊಲ ಜಿಂಕೆ ಮೊದಲಾದ ಸಾಧುಪ್ರಾಣಿಗಳನ್ನು ಮಾತ್ರ ಬೆನ್ನಟ್ಟಿಹೋಗು. ಹುಲಿ ಹಂದಿ ಸಿಂಹ ಮುಂತಾದವುಗಳ ಗೋಜಿಗೆ ಹೋಗದಿರು, ಕಂಡೆಯಾ!" ಎಂದು ಬೇಡಿಕೊಂಡಳು.

ಆದರೆ ಒಂದು ದಿನ, ಅವಳು ಯಾವುದೋ ಕಾರ್ಯಾರ್ಥವಾಗಿ ತನ್ನ ದೇವವಿಮಾನವನ್ನು ಏರಿಕೊಂಡು ಎಲ್ಲಿಗೋ ಹೋಗಿದ್ದ ಹೊತ್ತಿನಲ್ಲಿ, ಅಡೋನಿಸ್ ಎಂದಿನಂತೆ ನಿದ್ರೆಯಿಂದ ಎದ್ದವನು ಬೇಟೆಗೆ ಹೊರಟನು. ವೀನಸ್ ಮಾಡಿಕೊಂಡಿದ್ದ ಪ್ರಾರ್ಥನೆಯನ್ನು ಮರೆತು, ಒಂದು ಕಾಡು ಹಂದಿಯ ಜಾಡನ್ನು ಹಿಡಿದು ಹೋದನು. ಜೊತೆಗೆ ಬಂದ ಬೇಟೆಯ ನಾಯಿಗಳು ಪೊದೆಯಲ್ಲಿದ್ದ ಹಂದಿಯನ್ನು ಅಟ್ಟಿ ಹೊರಡಿಸಿದುವು. ಅದು ಹೊರಗೆ ಬಂದೊಡನೆ ಅಡೋನಿಸ್ ತನ್ನ ಈಟಿಯನ್ನು ಅದಕ್ಕೆ ಗುರಿಮಾಡಿ ಹೊಡೆದ. ಹಂದಿ ತನಗೆ ಆದ ಗಾಯದಿಂದ ಕ್ರೋಧಗೊಂಡು, ಅಡೋನಿಸನ ಕಡೆಗೆ ನುಗ್ಗಿ, ರೆಪ್ಪೆ ಹೊಯ್ಯುವುದರೊಳಗಾಗಿ ತನ್ನ ಕೋರೆದಾಡೆಯನ್ನು ಅವನ ಮೈಯಲ್ಲಿ ನಾಟಿಬಿಟ್ಟಿತು.

ಮೃತ್ಯುಮುಖನಾದ ಅಡೋನಿಸಿಸನ ನರಳುವ ಧ್ವನಿ ದೂರ ಎಲ್ಲೋ ಇಪ್ಪ ವೀನಸ್ಸಿಗೆ ವಿದಿತವಾಯಿತು. ಆ ಕೂಡಲೆ ಅವಳು ಅಲ್ಲಿಗೆ ಧಾವಿಸಿ ಬಂದು, ಆ ನಿಶ್ಚೇಷ್ಟಿತವಾದ ದೇಹವನ್ನು ಎತ್ತಿಕೊಂಡಳು. ಎಷ್ಟು ತಬ್ಬಿಕೊಂಡರೇನು, ಎಷ್ಟು ಮುತ್ತುಕೊಟ್ಟರೇನು, ಜೀವ ಹೋದ ಆ ಕಳೇಬರ ಮಣ್ಣುಮುದ್ದೆಗೆ ಸಮನಾಗಿತ್ತು. ದುಃಖಪರವಶಳಾಗಿ ವೀನಸ್ ತನ್ನ ಮೈ ಪರಚಿಕೊಂಡಳು, ಬಟ್ಟೆ ಹರಿದುಕೊಂಡಳು, ಆದರೂ ಅಡೋನಿಸನನ್ನು ಬದುಕಿಸಿಕೊಳ್ಳಲಾಗಲಿಲ್ಲ.

೩

"ಏನು? ಈ ಸ್ವರ್ಗದಲ್ಲಿದ್ದವಳು ಇವಳಿಗೆ ಅಲ್ಲಿ ಯಾರೂ ಮದುವೆ ಗಿದುವೆ ಆಗಿರಲಿಲ್ಲವೊ"

"ಆಗಿತ್ತಪ್ಪ, ಆಗಿತ್ತು. ಅದೊಂದು ಅಧ್ವಾನದ ಕತೆ. ಇದನ್ನ ನಮ್ಮ ಸಣ್ಣ ಕತೆಯ ಶ್ರೀನಿವಾಸರು ತಮ್ಮ 'ನವರಾತ್ರಿ' ಅನ್ನೋ ಪುಸ್ತಕದಲ್ಲಿ 'ಅಪರಂಜಿ – ಆರಿಗ' ಅಂತ ಒಂದು ಒಳ್ಳೇ ಕವನವಾಗಿ ಬರೆದಿದ್ದಾರೆ. ಅದನ್ನ ನೀನು ಓದಬೇಕು."

"ವೀನಸ್‌ಗೂ ಅಪರಂಜಿ – ಆರಿಗ ಅನ್ನೋವಕ್ಕೂ ಏನಯ್ಯ ಸಂಬಂಧ? ಇಮಾಂ ಸಾಬಿಗೂ ಗೋಕುಲಾಷ್ಟಮೀಗೂ ಗಂಟುಹಾಕಿದ ಹಾಗೆ!"

"ಅದು ಎರಡನೇದು ಹೇಗೋ ನನಗೆ ಗೊತ್ತಿಲ್ಲ. ಆದರೆ ಮೊದಲನೇದು ಗೊತ್ತು. ಹೇಳ್ತೀನೆ, ಕೇಳು: ಈ 'ವೀನಸ್' ಎಂದಿವೆಲ್ಲ, ಇವಳಿಗೇ ಇನ್ನೊಂದು ಹೆಸರು 'ಅಫ್ರೊಡೈಟಿ' ಅಂತ. ಮೊದಲನೇದು ರೋಮನ್ ಹೆಸರು, ಎರಡನೇದು ಗ್ರೀಕ್ ಹೆಸರು. ಈ 'ಅಫ್ರೊಡೈಟಿ'ನೇ ನಮ್ಮ ಕನ್ನಡದ ಕವಿತೆಯಲ್ಲಿ 'ಅಪರಂಜಿ'. ಅವಳ ಕತೆಯೊಳಗೆ 'ಏರೀಸ್' ಎಂದು ಒಬ್ಬ ಬರುತ್ತಾನೆ. ಅವನಿಗೆ 'ಮಾರ್ಸ್' ಎಂದು ಇನ್ನೊಂದು ಹೆಸರು. 'ಏರೀಸ್' ಎಂಬವನೇ ಇಲ್ಲಿ ಕನ್ನಡದಲ್ಲಿ ಆರಿಗ. 'ಅಪರಂಜಿ – ಆರಿಗ' ಆಮೇಲೆ ಕೊಡುತ್ತೇನೆ. ಈಗ ಈ ಅಫ್ರೊಡೈಟಿ ಅಥವಾ ವೀನಸ್ ಇವಳು ಆಡಿದ ಆಟ ಸ್ವಲ್ಪ ಕೇಳು."

ಜ್ಯೂಸ್ ದೇವತೆಯ ಫಾಲಪೀಠದಿಂದ ಸಹಜಕವಚ ಶೀರ್ಷಕ ಸಹಿತಳಾದ ಅಥೀನೀ ದೇವತೆಯ ಆವಿರ್ಭಾವವಾಯಿತೆಂದು ಹಿಂದೆ ಹೇಳಿದೆ ಸಲ್ಲವೆ. ಅದನ್ನು ನೋಡಿ, ಜ್ಯೂಸಿನ ಪತ್ನಿಯಾದ ಜೂನೋದೇವತೆಗೆ ಅಸಹನೆಯುಂಟಾಯಿತು. "ಧರ್ಮಪತ್ನಿಯಾದ ನನ್ನ ಸಹಕಾರವನ್ನು ಬಯಸದೆ ತನ್ನಿಂದ ತಾನೇ ಈತನು ಪ್ರಜೆಯನ್ನು ಉತ್ಪತ್ತಿಮಾಡಿಕೊಳ್ಳಬಲ್ಲ ನಾದರೆ, ನಾನೇನೂ ಸಾಮರ್ಥ್ಯದಲ್ಲಿ ಈತನಿಗಿಂತ ಕಡಿಮೆಯಾದವಳಲ್ಲ" ಎಂದು ಜೂನೋ ತಾನು ಕೂಡ ತನ್ನ ಇಚ್ಛಾಶಕ್ತಿಯಿಂದ ಒಂದು ಪುರುಷ ಶಿಶುವನ್ನು ಪಡೆದಳು. ಆ ಗಂಡುಮಗುವೇ ವಲ್ಕನ್ ಎಂಬ ಹೆಸರಿನಿಂದ ಪ್ರಸಿದ್ಧವಾಯಿತು. ಅದೇ ಮಗುವಿಗೆ 'ಹೆಫೇಸ್ಟಸ್' ಎಂದೂ ಇನ್ನೊಂದು ಹೆಸರು. ಇವನೇ "ಅಪರಂಜಿ ಆರಿಗ"ದಲ್ಲಿ 'ಹೇಪಚ್ಚ'ನಾಗಿದ್ದಾನೆ. ಈ ವಲ್ಕನ್ ಒಲಿಂಪಸಿನ ದೇವತೆಗಳಿಗೆ ಬೇಕಾದ ಕವಚಾದಿಗಳನ್ನೂ ರಥ ಮೊದಲಾದುವನ್ನೂ ಶಸ್ತ್ರಾಸ್ತ್ರಗಳನ್ನೂ ಮಾಡಿಕೊಡುವ ದೇವಶಿಲ್ಪಿ, ಕಮ್ಮಾರ; ನಮ್ಮಲ್ಲಿ ವಿಶ್ವಕರ್ಮ ಇರುವ ಹಾಗೆ.

ಈ ವಲ್ಕನ್ನಿಗೆ ದೇವತೆಗಳೆಲ್ಲಾ ಸೇರಿ ವೀನಸ್ಸನ್ನು ಪತ್ನಿಯಾಗಿ ಮಾಡಿಕೊಟ್ಟರು. ಆದರೆ ಆ ದಾಂಪತ್ಯ ಕುದುರಲಿಲ್ಲ. ಸರ್ವಸೃಷ್ಟಿಯಲ್ಲಿ ಪರಮಸುಂದರಿಯಾದ ವೀನಸ್ ಹೆಳವನಾದ ವಲ್ಕನ್ನಿನ ಜೊತೆಯಲ್ಲಿ ಗಂಡನ ಹೆಂಡತಿಯಾಗಿ ಮರ್ಯಾದೆಯಿಂದ ಬಾಳುವುದಕ್ಕೆ ಇಚ್ಛೆಪಡಲಿಲ್ಲ.

"ವಲ್ಕನ್ ಅದೇಕೆ ಹೆಳವ? ಅವನು ಹುಟ್ಟಿದ್ದೇ ಹಾಗೆಯೋ? ಅಥವಾ ಏನಾದರೂ ಅಪಘಾತವೋ? ಇಲ್ಲವೆ, ಜೂನೋ ದೇವತೆಯ ಸಾಮರ್ಥ್ಯಹೀನತೆಯೋ?"

"ಜೂನೋವಿನ ಸಾಮರ್ಥ್ಯಹೀನತೆಯೂ ಅಲ್ಲ, ಮಗು ಹಾಗೆ ಕುಂಟಾಗಿ ಹುಟ್ಟಿದ್ದೂ ಅಲ್ಲ ಅದು ಅಪಘಾತವೊಂದರ ಪರಿಣಾಮ."

"ಏನದು ಅಪಘಾತ?"

"ಒಂದು ಸಲ ಜ್ಯೂಸ್ ದೇವತೆಗೂ ಜೂನೋ ದೇವತೆಗೂ ಏನೋ ಮನಸ್ತಾಪವೆದ್ದು, ವಾಗ್ವಾದ ಸ್ವಲ್ಪ ವಿಪರೀತವಾಗಿಯೇ ಬೆಳೆಯುತ್ತಿದ್ದ ಹೊತ್ತಿನಲ್ಲಿ, ವಲ್ಕನ್ ತಾಯಿಯ ಪರವನ್ನು ವಹಿಸಿ ತಂದೆಯ ಎದುರಿಗೆ

ವಾದಿಸಿದನು. ಆಗ, ಜ್ಯೂಸ್, ಮೊದಲೇ ತನ್ನ ಸಹಾಯವಿಲ್ಲದೆ ಅವ
ಸೃಷ್ಟಿಯಾಯಿತಲ್ಲಾ ಎಂದು ಉರಿಯುತ್ತಿದ್ದವನು, ಕಾಲುಹಿಡಿದು ಎಳೆ
ವಲ್ಕನ್ನನ್ನು ಆಚೆಗೆ ಎಸೆದುಬಿಟ್ಟನು. ಆ ಬಿದ್ದ ಏಟಿಗೆ ಕಾಲು ಮುರಿದು
ಅಂದಿನಿಂದ ವಲ್ಕನ್ ಕುಂಟನಾದ."

"ಎಂದರೇನು, ದೇವತೆಗಳಿಗು ಕೂಡ ಈ ರೀತಿಯ ಗೃಹಕಲ
ತಪ್ಪಿದ್ದಲ್ಲ ಎನ್ನು, ನಮ್ಮ ದೇವತೆಗಳಿಗೆ ಆದ ಹಾಗೆಯೇ!"

"ತಪ್ಪಿದ್ದಲ್ಲ ಎನ್ನುತ್ತೀಯಾ! ಗ್ರೀಕ್ ದೇವತೆಗಳ ಸಂಸಾರದ ಕ
ನಮ್ಮವರದಕ್ಕಿಂತ ಹತ್ತುನೂರರಷ್ಟು ಪಾಡುಪಜೀತಿಯದು. ಉದಾಹರಣೆಗ
ಒಂದು ಪ್ರಕರಣ ಹೇಳುತ್ತೇನೆ, ಕೇಳು. ಜ್ಯೂಸ್ ಆಡುತ್ತಿದ್ದ ಒಂದೊಂದ
ಆಟವೂ ಕೂಡ ಜೂನೋ ದೇವತೆಯ ಮತ್ಸರದ ಬೆಂಕಿಗೆ ತುಪ್ಪವಾಗಿ,
ಗಾಳಿಯಾಗಿ, ಆಗುತ್ತಿತ್ತು.

ದೇವಾಧಿದೇವನ ಒಂದು ಆಟ

ಡಯಾನಾ ಎಂಬವಳು ಬೇಟೆಗಾರರ ಇಷ್ಟದೈವವಾದವಳು. ಈ ದೇವತೆ
ಆಗಾಗ್ಗೆ ಒಲಿಂಪಸ್ಸಿಂದ ಇಳಿದು ಬಂದು, ಭೂಲೋಕದ ಪರ್ವತಗಳಲ್ಲೂ
ವನಪ್ರಾಂತಗಳಲ್ಲೂ ಬೇಟೆಯಾಡುವಳು. ಆ ಹೊತ್ತಿನಲ್ಲಿ ಅಲ್ಲಲ್ಲಿನ ಅನೇಕ
ಕಿನ್ನರಿಯರು ಆ ದೇವತೆಯ ಪರಿವಾರದೊಡನೆ ತಾವೂ ಸೇರಿ
ಓಡಿಯಾಡುವರು.

ಹೀಗೆ ಬಂದು ಸೇರಿಕೊಳ್ಳುತ್ತಿದ್ದ ಕಿನ್ನರಿಯರಲ್ಲೆಲ್ಲಾ ಅತ್ಯಂತ ಸುಂದರಿ
ಯಾದವಳೊಬ್ಬಳು ಕಲ್ಲಿಸ್ಟೊ ಎಂಬವಳು. ಇವಳು ಶ್ರದ್ಧೆಯಿಂದ, ಭಕ್ತಿ
ಯಿಂದ, ಕೌಶಲದಿಂದ ಜೊತೆಗೆ ಬರುತ್ತಿದ್ದುದನ್ನು ಕಂಡು, ಡಯಾನಾ
ಅವಳನ್ನು ತನ್ನ ಆಪ್ತಸಖಿಯನ್ನಾಗಿ ಆರಿಸಿಕೊಂಡಳು.

ಒಂದು ದಿವಸ, ಡಯಾನಾ ಅತ್ತ ಒಲಿಂಪಸ್ಸಿಗೆ ಹೋಗಿದ್ದ ಹೊತ್ತಿನಲ್ಲಿ,
ಇತ್ತ ವನಪ್ರಾಂತದಲ್ಲಿ ಕಲ್ಲಿಸ್ಟೊ ಕಣ್ಣುಮುಚ್ಚಿ ನಿದ್ರೆಮಾಡುತ್ತಿದ್ದ ವೇಳೆಯಲ್ಲಿ
ಜ್ಯೂಸ್‌ದೇವತೆಯ ಕಣ್ಣು ಅವಳ ಮೇಲೆ ಬಿತ್ತು. ಒಂಟಿಯಾಗಿ,
ಅಸಹಾಯಳಾಗಿ, ಮೋಹಕಳಾಗಿ, ಮೈಮರೆತು ಮಲಗಿದ್ದವಳನ್ನು ಕಂಡು,

" ಜೂನೋವಿಗೆ ದ್ರೋಹವಾದರೂ ಚಿಂತೆಯಿಲ್ಲ. ಇಂತಹ ರಸಕವಳವನ್ನು ಸವಿಯದೇ ಬಿಡುವುದು ಸಮನಲ್ಲ" ಎಂದು ಜ್ಯೂಸನು ಮೇಲಿನಿಂದ ಇಳಿದುಬಂದನು.

ನಮ್ಮ ಅಹಲ್ಯೆಯ ಕತೆಯಲ್ಲಿ ಬರುತ್ತದೆ, ನೋಡು—ಇಂದ್ರ ತಾನು ಬರಬೇಕಾದರೆ ಅವಳ ಪತಿಯಾದ ಗೌತಮನ ವೇಷವನ್ನು ಧರಿಸಿಬಂದು ಅಹಲ್ಯೆಯನ್ನು ಕೆಡಿಸಿಹೋದನೆಂದು; ಅದರಂತೆಯೇ, ನಮ್ಮ ಇಂದ್ರನಿಗೆ ಸಮಾನನೆನ್ನಬಹುದಾದ ಜ್ಯೂಸ್ ತಾನು ತನ್ನ ನಿಜಸ್ವರೂಪದಲ್ಲಿ ಬಂದು ಕಾಣಿಸಿಕೊಳ್ಳದೆ, ಡಯಾನಾದೇವತೆಯ ಆಕಾರದಿಂದ ರೂಪದಿಂದ ಕಾಣಿಸಿ ಕೊಂಡು, ಮೈಮುಟ್ಟಿ ಕಲ್ಲಿಸ್ಟೋವನ್ನು ಎಚ್ಚರಗೊಳಿಸಿದನು.

ಕಲ್ಲಿಸ್ಟೋ, ಪಾಪ, ದೇವಾಧಿದೇವನೇ ಹೀಗೆ ತನ್ನನ್ನು ವಂಚಿಸು ತ್ತಿದ್ದಾನೆಂದು ಅರಿಯದೆ, ತುಂಬ ಸಂತೋಷದಿಂದ " ಬರಬೇಕು, ಬರಬೇಕು, ಒಡತಿ. ಒಲಿಂಪಸಿಗೆ ಜ್ಯೂಸ್ ದೊಡ್ಡದೇವತೆಯಿರಬಹುದಾದರೂ, ನನ್ನ ಪಾಲಿಗೆ ಡಯಾನಾ ಒಬ್ಬಳೇ ದೊಡ್ಡ ದೇವತೆ!" ಎಂದು ಸಂಭ್ರಮದಿಂದ ಆ ಕಪಟ ಡಯಾನಾವನ್ನು ಸ್ವಾಗತಿಸಿದಳು.

ತನ್ನನ್ನು ತನ್ನ ಎದುರಿನಲ್ಲಿಯೇ ಕೀಳುಮಾಡಿ ಮಾತಾಡಿದ್ದನ್ನು ಕೇಳಿ, ಜ್ಯೂಸಿಗೆ ಒಳಗೊಳಗೆಯೇ ನಗುಬಂತು. ತನ್ನ ಆಪ್ತಸಖಿಯಾದ ಕಲ್ಲಿಸ್ಟೊ ಆಡಿದ ಮಾತಿನಿಂದ ಡಯಾನಾ ಆದ ತನಗೆ ತುಂಬ ಸಂತೋಷವಾಯಿತೆಂದು ಹೇಳುತ್ತಾ, ಅವಳನ್ನು ಆಲಿಂಗಿಸಿ ಮುತ್ತಿಕ್ಕಿದನು.

ಆದರೆ ಆ ಮುತ್ತು ಕೊಟ್ಟದ್ದರಲ್ಲಿ ವ್ಯಕ್ತವಾದ ಆವೇಗವನ್ನು ಕಂಡು, " ಇದು ಡಯಾನಾ ಅಲ್ಲ. ಬೇರೆ ಯಾರದೋ ದೇವತೆಯ ಮೋಸವಿರ ಬೇಕು" ಎಂದು ಕಲ್ಲಿಸ್ಟೋವಿಗೆ ಎನ್ನಿಸಿತು. ತನ್ನನ್ನು ಬಿಗಿಹಿಡಿದಿದ್ದ ತೋಳುಗಳನ್ನು ಬಿಡಿಸಬೇಕೆಂದು ಎಷ್ಟೆಷ್ಟೋ ಹೆಣಗಿದರೂ, ಅವಳು ಕೃತ ಕೃತ್ಯಳಾಗಲಿಲ್ಲ. ಜ್ಯೂಸಿನ ಇಚ್ಛೆ ತೀರಿತು, ಕಲ್ಲಿಸ್ಟೋವಿನ ಕನ್ಯಾಭಾವ ನಷ್ಟವಾಯಿತು.

ಜ್ಯೂಸ್ ಅತ್ತ ಒಲಿಂಪಸಿಗೆ ಹೋದನು. ಇತ್ತ ಕಲ್ಲಿಸ್ಟೋ ಏಕಾಕಿ ಯಾಗಿ, ಸಮಾಧಾನ ಹೇಳುವವರು ಯಾರೂ ಇಲ್ಲದೆ, ರೋದನ ಮಾಡುತ್ತ

ಕಾಡೆಲ್ಲ ಅಲೆದಾಡಿದಳು. ಸ್ವಲ್ಪ ಕಾಲದ ಬಳಿಕ, ಡಯಾನಾ ಬಂದು ಎಂದಿನಂತೆ ಅವಳನ್ನು ತನ್ನ ಬಳಿಗೆ ಕರೆದುಕೊಂಡು ತಿರುಗಾಡಿದರೂ ಕಲ್ಲಿಸ್ಟೋವಿಗೆ ಏನೋ ಸಂಕೋಚ, ಏನೋ ಅವಮಾನ, ಏನೋ ದುಃಖ.

ಹೀಗೇ ಕೆಲವು ತಿಂಗಳು ಕಳೆದು, ಬೇಸಿಗೆಯಕಾಲ ಬಂತು. ಡಯಾನಾದೇವತೆಯು ತನ್ನ ಪರಿವಾರದೊಡನೆ ಜಲಕ್ರೀಡೆಗೆ ತೆರಳಿದಳು. ಶೀತಲವಾದ ನೀರನ್ನು ಕಂಡೊಡನೆಯೇ ಎಲ್ಲರೂ ಮಿಂಚಿನ ವೇಗದಿಂ ತಮ್ಮ ವಸ್ತ್ರಗಳನ್ನು ಕಳೆದು ಇಳಿದರೂ, ಕಲ್ಲಿಸ್ಟೋ ಒಬ್ಬಳು ಮಾತ್ರ ನಾಚಿಕೆಯಿಂದ ಮುಖ ಕೆಂಪಾಗಿ, ಏನೇನೋ ಕುಂಟನೆಪ ಹೇಳಿಕೊಂಡ ಹಾಗೆ ದಡದಲ್ಲಿಯೇ ತಡಮಾಡಿ ನಿಂತಿದ್ದಳು. ಆಗ, ಸಖಿಯರು ಕೆಲವರ ನೀರಿನಿಂದ ಮೇಲೆದ್ದುಬಂದು, ಬಲವಂತವಾಗಿ ಅವಳ ಬಟ್ಟೆಗಳನ್ನು ಬಿಚ್ಚಿ ಹಾಕಿದರೆ, ಕಲ್ಲಿಸ್ಟೋವಿಗೆ ಕೆಲವು ತಿಂಗಳುಗಳಾದದ್ದು ವ್ಯಕ್ತವಾಯಿತು ಡಯಾನಾದೇವತೆಗೆ ಅಧಿಕವಾದ ಕ್ರೋಧ ಬಂತು, ಅಂದಿನಿಂದ ಕಲ್ಲಿಸ್ಟೋ ವನ್ನು ತನ್ನ ಪರಿವಾರದಿಂದ ಅಟ್ಟಿಬಿಟ್ಟಳು.

ಜ್ಯೂಸ್‌ದೇವತೆ ಕಲ್ಲಿಸ್ಟೋ ಸಂಗಡ ಹೀಗೆ ಮಾಡಿದ ಎಂಬುದು ಆಗಲೇ ಜೂನೋದೇವತೆಗೆ ತಿಳಿದಿತ್ತು. ಭೂಮಿಯಲ್ಲಿ ಹೇಗೋ ಹಾಗೆ ಒಲಿಂಪಸಿನಲ್ಲಿಯೂ ಕಂಡವರ ಸುದ್ದಿಯನ್ನು ಕೇಳಿ ತಿಳಿದು ಆಡಿಕೊಳ್ಳುವುದು ಸರ್ವಸಾಮಾನ್ಯ. ಆದರೂ, ಕಲ್ಲಿಸ್ಟೋ ಡಯಾನಾ ದೇವತೆಯ ಆಪ್ತಸಖಿ ಯೆಂಬ ದಾಕ್ಷಿಣ್ಯದಿಂದ ಜೂನೋ ಸುಮ್ಮನಿದ್ದಳು. ಈಗ ಅಂಥ ಸ್ನೇಹದ ರಕ್ಷಣೆ ತಪ್ಪಿದ್ದನ್ನು ಕಂಡು, "ಇರಲಿ, ಇವಳಿಗೆ ಮಾಡುತ್ತೇನೆ!" ಎಂದು ಹಲ್ಲು ಮಸೆದಳು. ಆದರೆ ಆಗಲೇ ಅವಳ ತಂಟೆಗೆ ಹೋಗಲಿಲ್ಲ. ಸರಿಯಾದ ಸಮಯ ಬರಲಿ, ಎಂದು ಕಾಯುತ್ತಿದ್ದಳು.

ಕೆಲವು ತಿಂಗಳು ಕಳೆಯಿತು. ಕಲ್ಲಿಸ್ಟೋ ಒಂದು ಗಂಡುಮಗುವನ್ನು ಪ್ರಸವಿಸಿದಳು. ಅದನ್ನು ಅರ್ಕಾಸ್ ಎಂದು ಕರೆದಳು. ಆ ಮಗು ಹುಟ್ಟಿದ್ದನ್ನು ಕೇಳಿದಕೂಡಲೇ ಜೂನೋವಿನ ಎದೆಯಲ್ಲಿ ಸವತಿಮತ್ಸರದ ಬೆಂಕಿ ಭುಗಿಲನೆ ಎದ್ದು, ಅವಳು ಭೂಮಿಗೆ ಇಳಿದುಬಂದಳು. ಕಲ್ಲಿಸ್ಟೋ

ವಿನ ತಲೆಗೂದಲಿಗೆ ಕೈಹಾಕಿ ಹಿಡಿದು, ಅವಳನ್ನು ನೆಲದ ಮೇಲೆ ದರದರನೆ ಎಳೆದು, ಕಡೆಗೆ " ಕರಡಿಯಾಗಿಹೋಗು ! " ಎಂದು ಶಾಪ ಹಾಕಿದಳು.

ಕಲ್ಲಿಸ್ಟೋ, ಪಾಪ, ತನ್ನದೊಂದೂ ತಪ್ಪು ಇಲ್ಲದೇ ಹೋದರೂ, ಒಂದು ದೇವತೆಯ ಕಾಮ, ಇನ್ನೊಂದು ದೇವತೆಯ ಕ್ರೋಧ, ಇವು ಎರಡರ ನಡುವೆ ಸಿಕ್ಕಿಕೊಂಡು, ಕರಡಿಯಾಗಬೇಕಾಯಿತು. ಕೋಮಲವಾಗಿ ನುಣುಪಾಗಿದ್ದ ಆ ತೋಳುಗಳು ಕರಡಿಯ ಕೂದಲಿನಿಂದ ಮುಚ್ಚಿಹೋದುವು. ಮಾತನಾಡಬೇಕೆಂದು ಬಾಯಿ ತೆರೆದರೆ, ಕರಡಿಯ ಗುಟುರು ಮಾತ್ರ ಕೇಳಿದವರಿಗೆ ಭಯವಾಗುವಂತೆ ಗಂಟಲಿನಿಂದ ಈಚೆ ಬರುತ್ತಿತ್ತು. ಆದರೂ, ರೂಪ ಕರಡಿಯದಾದರೂ ಹೃದಯದ ದಿವ್ಯಗುಣ ಮಾತ್ರ ಮರೆಯಾಗಿರಲಿಲ್ಲ. ತನ್ನ ಭಯಂಕರಾಕಾರವನ್ನು ಕಂಡು ಮಗು ಏನು ಹೆದರುವುದೋ ಎಂದು ಕೊಂಡು, ಕಲ್ಲಿಸ್ಟೋ, ಯಾರ ಕಣ್ಣಿಗೂ ಬೀಳದಂತೆ ಕಾಡಿನಲ್ಲಿ ಮರೆಯಾಗಿ ಕಾಲಕಳೆಯುತ್ತಿದ್ದಳು.

ಹೀಗೇ ಅನೇಕ ವರ್ಷಗಳಾದುವು. ಮಗನಾದ ಅರ್ಕಾಸ್ ಬೆಳೆದು ಯುವಕನಾದನು. ಡಯಾನಾ ದೇವತೆಯ ಜೊತೆಯಲ್ಲಿ ಓಡಿಯಾಡಿದ ತಾಯಿಯ ಮಗನಾದ್ದರಿಂದ ಅವನಿಗೂ ಬೇಟೆಯಲ್ಲಿ ಅತಿಶಯವಾದ ಆಸಕ್ತಿ.

ಒಮ್ಮೆ ಹೀಗೇ ಬೇಟೆಯಾಡುತ್ತ ಹೋಗುತ್ತಿರುವಾಗ, ಅರ್ಕಾಸನ ಎದುರಿಗೆ ಕರಡಿಯಾಗಿದ್ದ ಅವನ ತಾಯಿ ಕಲ್ಲಿಸ್ಟೋ ಬಂದಳು. ಮಗನನ್ನು ಕಂಡು, ಭಯದಿಂದ ವಿಹ್ವಲಳಾಗಿ ನಡುಗುತ್ತ ನಿಂತಳು. ಎದುರಿಗೆ ಇರುವವನು ತನ್ನ ಮಗನೆಂದು ಆ ತಾಯಿಗೆ ಗೊತ್ತು. ಎದುರಿಗೆ ಇರುವವಳು ತನ್ನ ತಾಯಿ, ಜೂನೋದೇವತೆಯ ಶಾಪದಿಂದ ಕರಡಿಯಾಗಿದ್ದಾಳೆ, ಎಂಬುದು ಆ ಹುಡುಗನಿಗೆ ಹೇಗೆ ಗೊತ್ತಾಗಬೇಕು ?

ಆ ಸಂಕಟದ ಸಂದರ್ಭದಲ್ಲಿ, ಅರಿಯದೆ ಅನ್ಯಾಯದ ಮಾತೃಹತ್ಯೆ ನಡೆದುಹೋಗುತ್ತಿದ್ದ ಆ ಹೊತ್ತಿನಲ್ಲಿ, ಜ್ಯೂಸ್ ದೇವತೆಗೆ ಅದೇನು ಅಕಾರಣ ವಾದ ಮರುಕ ಉಕ್ಕಿಬಂತೋ — ಒಂದು ದೊಡ್ಡ ಬಿರುಗಾಳಿಯನ್ನು ಅವರ ಕಡೆಗೆ ಕಳಿಸಿದನು. ಆ ಬಿರುಗಾಳಿ ಅವರಿಬ್ಬರನ್ನೂ ಎತ್ತಿಕೊಂಡು ಊರ್ಧ್ವ

ಮುಖವಾಗಿ ತಂದು, ಜ್ಯೂಸ್ ದೇವತೆ ಆಜ್ಞೆಮಾಡಿದ್ದ ಮೇರೆಗೆ, ಅವರನ್ನು ನಕ್ಷತ್ರಗಳ ನಡುವೆ ಇರಿಸಿಹೋಯಿತು.

ಜೂನೋದೇವತೆಯ ಶಾಪದಿಂದ ಕರಡಿಯಾಗಿಹೋಗಿದ್ದ ಕಲ್ಲಿಸ್ಟೋ ಈಗ ಜ್ಯೂಸ್‌ದೇವತೆಯ ಪ್ರಸಾದದಿಂದ ತಾನೊಂದು ದಿವ್ಯ ನಕ್ಷತ್ರವಾದಳು! ಅವಳ ಸಂಗಡಲೇ ಅವಳ ಮಗನೂ ತಾನೊಂದು ನಕ್ಷತ್ರವಾದ!

ತನ್ನ ಸವತಿಗೆ ಉತ್ತಮಗತಿಯಾದುದನ್ನು ಕಂಡು ಜೂನೋ ಸಹಿಸುವುದಾಗಲಿಲ್ಲ. ಆದರೂ, ಇನ್ನೇನೂ ಕೇಡುಮಾಡುವಂತಿಲ್ಲ. ಸುಮ್ಮನಾದಳೆ? ಇಲ್ಲ. ಗ್ರೀಕರ ನಂಬಿಕೆಯ ಪ್ರಕಾರ, ನಕ್ಷತ್ರಗಳು ದಿನವೂ ಸಮುದ್ರದಿಂದ ಉದಯವಾಗಿ ಸಮುದ್ರದೊಳಗೆ ಅಸ್ತವಾಗುತ್ತವೆ. ಜೂನೋ ಆ ಸಮುದ್ರಕ್ಕೆ ಆಜ್ಞೆಮಾಡಿದಳು: 'ಉಳಿದ ಎಲ್ಲಾ ನಕ್ಷತ್ರಗಳಿಗೂ ಒಳಗೆ ಪ್ರವೇಶಿಸುವುದಕ್ಕೆ ಅವಕಾಶಕೊಟ್ಟರೂ, ಈ ಎರಡು ನಕ್ಷತ್ರಗಳಿಗೆ ಮಾತ್ರ ಎಂದಿಗೂ ಅವಕಾಶ ಕೊಡಬೇಡ' ಎಂದು.

ಅದರಂತೆ, ಈಗ ಆಕಾಶದಲ್ಲಿ ಉಳಿದ ಎಲ್ಲಾ ನಕ್ಷತ್ರಗಳೂ ತಮ್ಮ ಸ್ಥಾನವನ್ನು ಬದಲಾಯಿಸುತ್ತಾ ಹೋದರೂ — ಇಂಗ್ಲಿಷಿನಲ್ಲಿ 'Great Bear' 'Little Bear' ಎಂದು ಕರೆಯುತ್ತಾರಲ್ಲಾ — ಈ ಎರಡು ನಕ್ಷತ್ರ ಮಾತ್ರ ಸ್ಥಾನಚ್ಯುತಿಯಿಲ್ಲದೆ ಅಂದಿನಿಂದ ಇಂದಿಗೂ ಹಾಗೇ ಇವೆ.

ದೇವಾಧಿದೇವನ ಒಂದು ಆಟ ಮುಗಿಯಿತು.

"ಹುಂ! ಚೆನ್ನಾಗಿದೆ! ಆಮೇಲೆ? ವಲ್ಕನ್ ವೀನಸ್ ಇವರ ಸಂಸಾರ ಕುದುರಲಿಲ್ಲ. ಮುಂದೆ ಏನು ಕತೆ?"

ವೀನಸ್, ನಮ್ಮ ಲಕ್ಷ್ಮಿಯ ಹಾಗೆ, ಚಂಚಲೆ. ಮದುವೆಯಾದ ಗಂಡ ವಲ್ಕನ್ ಮನೆಯಲ್ಲಿದ್ದರೂ, ಆಕೆ ಬೇರೆ ಕೆಲವರನ್ನು ಬಯಸತೊಡಗಿದಳು. ಅಡೋನಿಸನ ಬೆನ್ನ ಹಿಂದೆ ವೀನಸ್ ಬಿದ್ದದ್ದು, ಆಗಲೇ ಹೇಳಿದನಲ್ಲವೆ. ಈಗ ಇನ್ನೊಬ್ಬನನ್ನು ಗಂಟುಹಾಕಿಕೊಂಡಳು. ಅವನೇ ಯುದ್ಧದೇವತೆಯಾದ ಮಾರ್ಸ್.

ನಮ್ಮಲ್ಲಿ ಭೂಲೋಕದಲ್ಲಿ, ಅವರಿವರ ಗೃಹಕೃತ್ಯಗಳನ್ನು ಕುರಿತು ಅವರಿವರ ಹತ್ತಿರ ಚರ್ಚೆಮಾಡುವುದು ಹೇಗೆ ರೂಢಿಯೋ, ದೇವಲೋಕದವರಿಗೂ ಅಂಥ ಚಾಳಿ ತಪ್ಪಿದ್ದಲ್ಲ. ಅದರ ಹಾಗೆಯೇ ಅವರ ಮಾತು ಇವರ ಹತ್ತಿರ, ಇವರ ಮಾತು ಅವರ ಹತ್ತಿರ ಆಡಿ ಪುರುಳೆ ಹಚ್ಚಿಡುವುದು ಕೂಡ ಅವರಿಗೇನೂ ಅಪರಿಚಿತವಾದದ್ದಲ್ಲ.

ನಮ್ಮಲ್ಲಿ ಒಬ್ಬ ನಾರದ ಇರುವ ಹಾಗೆ, ಅವರಲ್ಲಿ ಒಬ್ಬ ಅಪಾಲೋ. ಇವನು ಕೂಡ ತ್ರಿಲೋಕಸಂಚಾರಿಯೇ. ಅಲ್ಲಿನ ಮಾತು ಇಲ್ಲಿ, ಇಲ್ಲಿನ ಮಾತು ಅಲ್ಲಿ ತಂದು ಹರಡುವುದರಲ್ಲಿ ನಿಪುಣ. ಈ ಅಪಾಲೋ, ವೀನಸ್ಸಿಗೂ ಮಾರ್ಸಿಗೂ ಉಂಟಾಗಿ ಜರುಗುತ್ತಿದ್ದ ಪ್ರಣಯಪ್ರಸಂಗವನ್ನು ತಂದು ಮೆಲ್ಲಗೆ ವಲ್ಕನ್ನಿನ ಕಿವಿಯಲ್ಲಿ ಊದಿದ. ವಲ್ಕನ್, ಕಾಲು ಕುಂಟಾದರೇನು, ಹೆಂಡತಿ ಹೀಗೆ ಮಾಡುವಳೆಂದರೆ, ಕೋಪ ಬರದೇ ಇರುತ್ತದೆಯೇ? ಅಸಾಧ್ಯವಾಗಿ ಬಂತು. ಅಕಾರ್ಯದಲ್ಲಿ ಪ್ರವೃತ್ತರಾದ ಅವರಿಬ್ಬರಿಗೂ ಒಂದು ಮರೆಯಲಾರದ ಪಾಠ ಕಲಿಸುವೆನೆಂದು ನಿಶ್ಚಯಮಾಡಿಕೊಂಡ.

ವಲ್ಕನ್ ನಮ್ಮ ವಿಶ್ವಕರ್ಮನ ಹಾಗೆ ಎಂದು ಹೇಳಲಿಲ್ಲವೆ. ಲೋಹಗಳನ್ನು ಬೇಕಾದ ಹಾಗೆ ಬಳಸಬಲ್ಲ ಶಕ್ತಿ ಅವನ ತೋಳಿನದು. ಅಪಾಲೋ ತಂದು ಹೇಳಿದ ಸುದ್ದಿಯನ್ನು ಕೇಳಿದ ಮೇಲೆ, ಅವರಿಬ್ಬರನ್ನೂ ಶಿಕ್ಷಿಸಬೇಕೆಂದು ನಿಶ್ಚಯಿಸಿದ ಮೇಲೆ, ವಲ್ಕನ್, ಕಂಚಿನಿಂದ ಕಣ್ಣಿಗೆ ಕಾಣದಷ್ಟು ಸೂಕ್ಷ್ಮವಾದ ತಂತಿಗಳನ್ನು ಎಳೆದು ಅದರಿಂದ ಒಂದು ಬಲೆಯನ್ನು ತಯಾರಿಸಿದನು. ದೂರದಿಂದ ನೋಡಿದರೆ, ಅದು ಜೇಡರ ಬಲೆಯ ನೂಲಿನಂತೆ ಕಾಣುತ್ತಿದ್ದರೂ, ಆ ನೂಲು ಹುರಿಮಾಡಿದ ಉಕ್ಕಿನಂತೆ ಅಭೇದ್ಯವಾಗಿತ್ತು.

ಇಂಥ ಬಲೆಯನ್ನು ವಲ್ಕನ್, ತಾನು ವೀನಸ್ಸಿನೊಡನೆ ಮಲಗುತ್ತಿದ್ದ ಮಂಚದ ಮೇಲುಭಾಗದಲ್ಲಿ ಕಟ್ಟಿ, ಅದನ್ನು ಹೇಗೆ ಬೇಕಾದರೆ ಹಾಗೆ ಆಡಿಸುವ ಸೂತ್ರಗಳನ್ನು ಆ ಶಯ್ಯಾಗೃಹದ ಹೊರಗಡೆ ಗುಪ್ತವಾಗಿ ಒಂದು ಕಡೆ ಮರೆಮಾಡಿದನು.

ತಾವು ನಡಸುತ್ತಿದ್ದ ಈ ಸದೋಷಪ್ರಣಯವು ವಲ್ಕನ್ನನಿಗೆ ತಿಳಿದಿದೆ ಎಂದು ಅವರಿಬ್ಬರೂ ಅರಿಯರು. ಒಂದು ದಿನ ಎಂದಿನಂತೆ, ವಲ್ಕನ್ ತನ್ನ ಕಮ್ಮಾರಸಾಲೆಯಲ್ಲಿ ಕೆಲಸ ಮಾಡುತ್ತಿದ್ದಾಗ, ಮಾರ್ಸ್ ವೀನಸ್ಸಿನ ಮನೆಗೆ ಬಂದು, ಅವಳ ಶಯ್ಯಾಗೃಹವನ್ನು ಪ್ರವೇಶಿಸಿದನು. ಅಪಾಲೋ ಬಂದು ಹೇಳಿದ ಆ ದಿವಸದಿಂದ ವಲ್ಕನ್ನಿಗೆ ಮೈಯಲ್ಲಾ ಕಣ್ಣು ಎಂಬುದನ್ನು ಅವರು ತಿಳಿಯರು. ಆದರೆ, ವಲ್ಕನ್, ಅವರಿಗೆ ತನ್ನ ಮತ್ಸರದ ಸುಳಿವೇ ಗೊತ್ತಾಗ ದಂತೆ ಚೆನ್ನಾದ ನಟಿಸುತ್ತಿದ್ದ.

ಮಾರ್ಸ್ ವೀನಸ್ಸಿನ ಶಯ್ಯಾಗೃಹಕ್ಕೆ ಪ್ರವೇಶಿಸಿದ್ದನ್ನು ತಿಳಿದ ಕೂಡಲೇ ವಲ್ಕನ್ ಸದ್ದುಮಾಡದೆ ಮನೆಗೆ ಬಂದ. ಒಳಗೆ ಅವರಿಬ್ಬರೂ ವಸ್ತ್ರಕಳಚಿ, ಒಂದೇ ಮಂಚದಲ್ಲಿ ಒಂದಾಗಿ ಮಲಗಿದ್ದುದನ್ನು ಕಂಡಿಯಿಂದ ಕಂಡು, ವಲ್ಕನ್, ತಾನು ಮರೆಮಾಡಿದ್ದ ಬಲೆಯ ಸೂತ್ರಗಳನ್ನು ಹಿಡಿದು ಎಳೆದನು. ಒಳಗಡೆ, ಮಂಚದ ಮೇಲಿದ್ದ ಆ ಕಂಚಿನ ಬಲೆ ಕಳಚಿಕೊಂಡು ಅವರಿಬ್ಬರ ಮೇಲೂ ಬಿದ್ದು, ಮಂಚ ಸಹಿತವಾಗಿ ಅವರನ್ನು ಅವರು ಇದ್ದ ಬಂಧನದಲ್ಲಿಯೇ ಬಿಗಿಯಾಗಿ ಬಂಧಿಸಿ ಹಿಡಿಯಿತು. ಬಿಡಿಸಿಕೊಳ್ಳಲು ಇಬ್ಬರೂ ಎಷ್ಟೆಷ್ಟೋ ಒದ್ದಾಡಿದರು. ಆದರೆ ಆ ಬಲೆ ಅದು ಜಾಲಗಾರರ ಬಲೆಯಾಗಿರಲಿಲ್ಲ. ಸ್ವಯಂ ವಲ್ಕನ್ನನೇ ತನ್ನ ಮತ್ಸರದ ಬೆಂಕಿಯಲ್ಲಿ ಕಾಯಿಸಿ, ಕುಟ್ಟಿ, ಎಳೆದು ಮಾಡಿದ್ದ ಬಲೆಯದು.

ಹೀಗೆ ಅವರಿಬ್ಬರನ್ನೂ, ಅವರ ಅಪರಾಧವನ್ನು ಅವರೇ ಮಾತಿಲ್ಲದೆ ಒಪ್ಪಿಕೊಳ್ಳುವಂತಹ ಇಕ್ಕಟ್ಟಿನಲ್ಲಿ ಇರುಕಿಸಿ, ವಲ್ಕನ್ನನು ಹೋಗಿ, ದೇವ ಲೋಕದ ಎಲ್ಲ ದೇವತೆಗಳನ್ನೂ ಕೂಗಿ, ಅವರ ಸಮ್ಮುಖದಲ್ಲಿ ತನ್ನ ಶಯ್ಯಾ ಗೃಹದ ಬಾಗಿಲುಗಳನ್ನು ತೆರೆದು, ತನ್ನ ಹೆಂಡತಿಯಾದ ವೀನಸ್ಸಿನ ದುಶ್ಶೀಲ ವನ್ನು ಪ್ರಕಟಮಾಡಿದನು.

ದೇವತೆಗಳೆಲ್ಲರೂ ಆ ದೃಶ್ಯವನ್ನು ಕಂಡು, "ಚ್ಚ್! ಚ್ಚ್!" ಎಂದು ಲೊಚಗುಟ್ಟಿದರೂ, ಅವರಲ್ಲಿ ಪ್ರತಿಯೊಬ್ಬರಿಗೂ ಮನಸ್ಸಿನಲ್ಲಿ ಇದೇ ಎನ್ನಿಸುತ್ತಿತ್ತು : "ಮಾರ್ಸ್ ದಿಟವಾಗಿಯೂ ಪುಣ್ಯವಂತ!"

ಮನಸ್ಸಿನಲ್ಲಿ ಇದ್ದುದ್ದನ್ನು ಹಾಗೇ ಅಡಗಿಸಿಕೊಳ್ಳಲಾರದೆ, ಒಬ್ಬ ದೇವತೆ ಇನ್ನೊಬ್ಬನ ಕಿವಿಯಲ್ಲಿ ಹೀಗೆ ಪಿಸುಗುಟ್ಟಿದನು : " ಇಂಥ ಅಪರಾಧ ಮಾಡಿ ಸಿಕ್ಕಿಕೊಳ್ಳುವುದರಲ್ಲಿ ಅವಮಾನವೇನು ಬಂತು ? ನನಗೂ ಇಂಥ ಅವಕಾಶ ದೊರಕಿದರೆ, ಇದೇ ಅಪರಾಧಮಾಡಿ, ಇದೇ ಅವಮಾನವನ್ನು ಅದೇ ಒಂದು ಅನುಗ್ರಹವೆಂದು ಸಂತೋಷದಿಂದ ಅನುಭವಿಸಿಯೇನು ! "

ಅವರು ಆಡಿದ ಆ ಕಿವಿಮಾತು ಕಿವಿಯಿಂದ ಕಿವಿಗೆ ಹಬ್ಬಿ, ಕಡೆಗೆ ಅದು ಸ್ವರ್ಗದಲ್ಲಿ ಬೀದಿಮಾತಾಯಿತು. ಬಹಳ ವರುಷಗಳು ದೇವಲೋಕದಲ್ಲಿ ಮಾರ್ಸ್ ದೇವತೆಯ ಆ ಪುಣ್ಯವನ್ನೂ ವಲ್ಕನ್‌ದೇವತೆಯ ಆ ಮೂರ್ಖತನವನ್ನೂ ಜ್ಞಾಪಿಸಿಕೊಂಡು ಜ್ಞಾಪಿಸಿಕೊಂಡು ಎಲ್ಲರೂ ನಗುತ್ತಿದ್ದರು.

ನೋಡಿದೆಯ : ಇಂಥ ಭಂಡಹೆಂಗಸು, ಆ ವೀನಸ್.

೬

ಆದರೂ, ಒಂದೊಂದು ಸಲ, ವೀನಸ್, ತನ್ನನ್ನು ನಂಬಿ ಮೊರೆಯಿಟ್ಟವರಿಗೆ ಅನುಗ್ರಹ ಮಾಡಿದ್ದೂ ಉಂಟು. ಅಂಥದು ಒಂದು ನಿದರ್ಶನ ಜ್ಞಾಪಕವಾಗುತ್ತದೆ, ಕೇಳು :

ಸೈಪ್ರಸ್ ದ್ವೀಪದಲ್ಲಿ ಒಬ್ಬ ಕಲಾವಿದ. ಅವನ ಹೆಸರು – ಪಿಗ್ಮಾಲಿಯಾನ್. ಅವನಿಗೆ " ಹೆಂಗಸರೆಂದರೆ : ಕೆಲಸಕ್ಕೆಬಾರದ ಪ್ರಾಣಿಮಾತ್ರಗಳು " ಎಂದು ಏನೋ ಒಂದು ಅಸಡ್ಡೆ. ಆದರಿಂದಾಗಿ, ಹೆಣ್ಣಿನ ಕಡೆ ಮನಸ್ಸು ಹೋಗದೆ, ಅವನು ಬ್ರಹ್ಮಚಾರಿಯಾಗಿಯೇ ಇದ್ದುಬಿಟ್ಟ.

ಅವನಿಗೆ ವಿಗ್ರಹಗಳನ್ನು ಮಾಡುವುದರಲ್ಲಿ ತುಂಬ ಕೌಶಲ. ದಂತದಲ್ಲಿ, ಶಿಲೆಯಲ್ಲಿ, ವಜ್ರವೈಡೂರ್ಯಗಳಲ್ಲಿ ಸೊಗಸಾದ ಅನೇಕಾನೇಕ ಮೂರ್ತಿಗಳನ್ನು ಕೆತ್ತುವನು. ಆ ಮೂರ್ತಿಗಳಾದರೂ, ' ಇನ್ನೇನು ಜೀವ ಬಂದು ಎದ್ದು ಓಡಿಯಾಡುವುವೋ ! ' ಎಂಬಂತೆ ಚೈತನ್ಯದಿಂದ ತುಳುಕುತ್ತಿರುವುವು.

ಒಂದುಸಲ, ಅವನ ಕೈಗೆ ಅದೇನು ಪ್ರೇರಣೆ ಬಂದಿತೋ, ಹೆಂಗಸರೆಂದರೆ ಹೀಗಳೆಯುತ್ತಿದ್ದವನು ಒಂದು ಹೆಣ್ಣುಮೂರ್ತಿಯನ್ನು ಅಚ್ಚ ಬಿಳಿಯ

ದಂತದಲ್ಲಿ ಕಂಡರಿಸಿದನು. ಯಾವುದೋ ಅಪೂರ್ವವಾದ ದೈವೀವರ್ಚಸ್ಸು
ಆ ಸ್ತ್ರೀಭಾವವು ಆ ದಂತದಲ್ಲಿ ತನ್ನ ಕೈಕೆಲಸದಿಂದಾಗಿ ಪ್ರತ್ಯಕ್ಷವಾಗುತ್ತಿದ್ದ
ದನ್ನು ನೋಡುತ್ತ ಬಂದಹಾಗೆಲ್ಲಾ, ಪಿಗ್ಮಾಲಿಯಾನನಿಗೆ ಆ ಮೂರ್ತಿಯ
ಮೇಲೆಯೇ ಮನಸ್ಸು ನಟ್ಟುಹೋಯಿತು.

ಅದು ನಿರ್ಜೀವವಾದ ದಂತದ ಬೊಂಬೆಯೆಂಬುದನ್ನು ಮರೆತು, ಅದಕ್ಕೆ
ಗೆಲೇಟಿಯಾ ಎಂದು ನಾಮಕರಣ ಮಾಡಿದನು. ಅದು ಸಜೀವವಾದ
ಮೂರ್ತಿಯೋ ಎಂಬಂತೆ ಅದನ್ನು ಹೆಸರು ಹಿಡಿದು ಕರೆಯುವನು, ಕೋಮಲ
ವಾಗಿ ಅದರ ಮೈಯ ಮೇಲೆ ಕೈ ಆಡಿಸುವನು, ಪ್ರೀತಿಯಿಂದ ಲಲ್ಲೆಗರೆ
ಯುತ್ತ ಅದರ ತುಟಿಗಳಿಗೆ ತನ್ನ ತುಟಿಗಳನ್ನು ಒತ್ತುವನು.

ಆದರೆ ಅದು ನಿರ್ಜೀವವಸ್ತುವಾದ್ದರಿಂದ ಅವನ ಅನುರಾಗವನ್ನು
ಅದು ಪೂರೈಸಲಾರದೆ, ಆ ಅರಕೆಯಿಂದಲೇ ಪಿಗ್ಮಾಲಿಯಾನನಿಗೆ ಹುಚ್ಚು
ಹಿಡಿದಹಾಗಾಗಿಹೋಗಿತ್ತು.

ಸ್ತ್ರೀಯರಿಗೆ ಇಷ್ಟವಸ್ತುಗಳಾದ ಪುಷ್ಪಗಳನ್ನೂ ಪರಿಮಳಗಳನ್ನೂ
ತಂದು ಅದರ ಪಾದದಲ್ಲಿ ಅರ್ಪಿಸಿ, ಅದರ ಮೈಗೆ ಪೂಸಿ, ಅದರ ತುರುಬಿಗೆ
ಮುಡಿಸುವನು. ಬಳೆಗಳು, ಹಾರಗಳು, ಉಂಗುರಗಳು ಮುಂತಾದ ವಿವಿಧಾ
ಭರಣಗಳನ್ನು ತಂದು, ಆ ಜಾತರೂಪದ ವಿಗ್ರಹದ ಒಂದೊಂದು ಅಂಗಕ್ಕೂ
ಅಲಂಕಾರ ಮಾಡುವನು. ರಾತ್ರಿಯಾಯಿತೆಂದರೆ, ಬೆತ್ತಲೆ ನಿಂತ ಅದಕ್ಕೆ
ಚಳಿಯಾಗಬಹುದೆಂದು, ಹಾಸಿಗೆ ಹಾಸಿ, ಅದರಲ್ಲಿ ಅದನ್ನು ಮಲಗಿಸಿ,
ಅದಕ್ಕೆ ಕಂಬಳಿ ಹೊದಿಸುವನು. ಆದರೂ, ಏನೇ ಮಾಡಿದರೂ, ಕೊರೆಯುವ
ತಂಪಿನ ಆ ದಂತದ ವಿಗ್ರಹ ಅವನ ಪಾಲಿಗೆ ಶಿಲೆಯ ವಿಗ್ರಹದಂತೆಯೇ
ಇತ್ತು.

ಹೀಗೇ ಇರಬೇಕಾದರೆ, ಒಂದುಸಲ, ಸೈಪ್ರಸ್ ದ್ವೀಪದಲ್ಲಿ ವೀನಸ್
ದೇವತೆಯ ಜಾತ್ರೆಯ ಸಮಯ ಬಂತು. ಈ ವೀನಸ್ ಸಮುದ್ರದ ನೊರೆಯಿಂದ
ಜನಿಸಿಬಂದವಳು ಎಂದು ಹಿಂದೆ ಹೇಳಿದೆನಲ್ಲವೆ. ಹಾಗೆ ನೊರೆಯಿಂದ ಹುಟ್ಟಿ
ಬಂದವಳು, ಹುಟ್ಟಿದ ಮಗು ಯಾವ ವೇಷದಲ್ಲಿರುವುದೋ, ಅದೇ ವೇಷದಲ್ಲಿ,
ಮುತ್ತಿನ ಚಿಪ್ಪಿನ ಮೇಲೆ ನಿಂತು, ನೆಲದ ಕಡೆಗೆ ತೇಲಿಬಂದಳು. ಬೆತ್ತಲೆ

ರೂಪಿನಲ್ಲಿ ಬಂದ ಆ ದೇವತೆಯು ತನ್ನ ನೀಳವಾದ ತಲೆಗೂದಲಿನಿಂದ ನಾಚಿಕೆಯನ್ನು ಮುಚ್ಚಿಕೊಂಡು, ಹರಡಿದ ಕೈಗಳಿಂದ ಎದ್ದ ಎದೆಯನ್ನು ಮರೆಸಿಕೊಂತು ಬಂದಳು. ಇಂಥವಳು ದಡದ ಹತ್ತಿರ ಬರುವವೇಳೆಗೆ, ಕಾಲರಾಯನ ಮಕ್ಕಳು ದೇವಾಂಗವಸ್ತ್ರವನ್ನು ತಂದು, ಆಕೆಗೆ ಹೊದಿಸಿದರು. ಅಲ್ಲಿಂದಲೇ ಅವಳನ್ನು ದೇವಲೋಕಕ್ಕೆ ಒಯ್ದುದ್ದು. ಆಗಲೇ ದೇವದೇವನಾದ ಜ್ಯೂಸ್ ಅವಳನ್ನು ವಲ್ಕನ್ನನಿಗೆ ಕೊಟ್ಟು ಮದುವೆಮಾಡಿದ್ದು. ಈ ವೀನಸ್ ಜನ್ಮತಾಳಿದ್ದು ಸಿಥೇರಿಯಾಯೆಂಬ ಸ್ಥಳದಲ್ಲಿಯಾದರೂ, ಅವಳು ಮೊದಲು ನೆಲ ಮುಟ್ಟಿದ್ದು ಸೈಪ್ರೆಸ್ ಬಳಿ ಆದ್ದರಿಂದ, ಸೈಪ್ರೆಸ್ಸಿನಲ್ಲಿ ಅವಳ ಹುಟ್ಟಿದ ಹಬ್ಬವನ್ನು ವಿಜೃಂಭಣೆಯಿಂದ ನಡೆಸುತ್ತಿದ್ದರು.

ಆ ದಿವಸ ಆ ದೇವತೆಗೆ ಹರಕೆ ಸಲ್ಲಿಸುವುದಕ್ಕೆ, ಪ್ರಾರ್ಥನೆ ಮಾಡುವುದಕ್ಕೆ, ಪೂಜೆ ಒಪ್ಪಿಸುವುದಕ್ಕೆ, ಬೇಕಾದ್ದು ಬೇಡಿಕೊಳ್ಳುವುದಕ್ಕೆ ಭಕ್ತಾದಿಗಳು ಅನೇಕರು ಬಂದ ಹಾಗೆಯೇ ಪಿಗ್ಮಾಲಿಯಾನ್ ತಾನೂ ಬಂದನು. ಬಂದು, ದೇವತೆಯ ಬಲಿಪೀಠದ ಮೇಲೆ ತನ್ನ ಭಕ್ತಿಯ ಕಾಣಿಕೆಯನ್ನು ಇರಿಸಿ, ಮನವಾರೆ ಬೇಡಿದನು :

" ಓ, ದೇವತೆ! ವಿಶ್ವಜನನಿ! ಪ್ರೇಮಿಗಳನ್ನು ಕಂಡರೆ, ನಿನಗೆ ತುಂಬ ಪ್ರೀತಿಯಂತೆ! ನೀನು ಸರ್ವಸಮರ್ಥಳಂತೆ! ಈ ಎರಡೂ ಮಾತು ದಿಟವಾದರೆ, ನಿನ್ನನ್ನು ನಾನು ಪ್ರಾರ್ಥಿಸುವುದು ಇಷ್ಟೆ: ನಾನು ದಂತದಿಂದ ಸೃಷ್ಟಿಸಿದ ಈ ಗೆಲೇಟಿಯಾ ಉಸಿರಿನಿಂದ ಕೂಡಿ, ಎದ್ದುಬಂದು, ನನಗೆ ಪ್ರೇಯಸಿಯಾಗಿ, ನನ್ನ ಪತ್ನಿಯಾಗಿ ನನ್ನೊಡನೆ ಬಾಳಲಿ! "

ಹಿಂದೆ, ಹೆಂಗಸರನ್ನು ಕೆಲಸಕ್ಕೆ ಬಾರದ ಪ್ರಾಣಿಮಾತ್ರಗಳೆಂದು ನಿಕೃಷ್ಟವಾಗಿ ಕಂಡಿದ್ದೆನೆಂಬುದನ್ನೂ ಮರೆತು, ಪಿಗ್ಮಾಲಿಯಾನ್ ಹೀಗೆ ನಿಸ್ಸಂಕೋಚದಿಂದ ಮೊರೆಯಿಟ್ಟು, ದೇವಸ್ಥಾನದಿಂದ ಮನೆಗೆ ಬಂದನು.

ಅವನು ಬರುವ ವೇಳೆಗೆ, ವೀನಸ್ ಅವನ ಇಷ್ಟಾರ್ಥವನ್ನು ಇಚ್ಛೆಪಟ್ಟು ಸಲ್ಲಿಸಿದ್ದಳು.

ಪಿಗ್ಮಾಲಿಯಾನ್ ಮನೆಗೆ ಬಂದ ಕೂಡಲೇ, ಕಾತರದಿಂದ ತನ್ನ ವಿಗ್ರಹದ ಬಳಿಗೆ ಓಡಿ, ಎಂದಿನಂತೆ ತೋಳುಗಳಿಂದ ತಬ್ಬಿಕೊಂಡು, ಅದಕ್ಕೆ

ಮುತ್ತಿಕ್ಕಿದನು. ಆದರೆ, ಇದೇನು ಆಶ್ಚರ್ಯ! ಎಂದಿನಂತೆ ಕಲ್ಲಿನ ಕೊರೆ
ವಿಲ್ಲದೆ, ಆ ಮೂರ್ತಿಯ ತುಟಿಗಳಲ್ಲೂ ಮೈಯಲ್ಲೂ ಒಂದು ಅನಿರ್ವಚನೀಯ
ವಾದ ಕಾವು! ಗೆಲೇಟಿಯಾಳ ಮೈಯಲ್ಲಿ ರಕ್ತಸಂಚಾರವಾಗುತ್ತಿತ್ತು
ಮುಟ್ಟಿ ನೋಡಿದರೆ, ನಾಡಿ ಮಿಡಿಯುತ್ತಿತ್ತು; ಮೈಯಲ್ಲಿ ಕಾತರ ಕುದಿಯು
ತ್ತಿತ್ತು. ನಿಜವೇ: ನಿರ್ಜೀವವಾಗಿದ್ದ ವಸ್ತು ವೀನಸ್ಸಿನ ಅನುಗ್ರಹದಿಂದ
ಸಜೀವವಾಗಿತ್ತು. ಗೆಲೇಟಿಯಾ ಮೃದುವಾಗಿ ರೆಪ್ಪೆ ತೆರೆದು, ಕಣ್ಣುಬಿಟ್ಟಳು.
ಸುತ್ತಿನ ಸೃಷ್ಟಿಯ ಬೆಳಕನ್ನೂ ಬಣ್ಣವನ್ನೂ ಮೊದಲ ಬಾರಿಗೆ ದೃಷ್ಟಿಸಿದಳು.
ಮೊದಲಬಾರಿಗೆ ತನ್ನ ಪ್ರಿಯನನ್ನು ಕಣ್ಣುತುಂಬ ಕಂಡಳು.

ಅವರ ಮದುವೆಯ ಪ್ರಸ್ತಕ್ಕೆ ವೀನಸ್‌ದೇವತೆ ತಾನೇ ಬಂದು ನಿಂತು, ಆ ಮಂಗಳಸಮಯವನ್ನು ಇನ್ನಿಲ್ಲವೆಂಬಂತೆ ನಡೆಸಿಕೊಟ್ಟು, ಆಶೀರ್ವದಿಸಿ ಹೋದಳು.

ಹೊಸಿಲ ಮೇಲೆ

" ಆಯ್ತು. ನೀರುಮನೆ ಖಾಲಿಯಾಗಿದೆ. ಬರಬಹುದು."

" ಓ, ಬಂದೆವು....ಅಯ್ಯಾ, ನಾನು ಸ್ವಲ್ಪ, ಆ ಕೋಲರಿಡ್ಜಿನ ಏನ್ಷಂಟ್ ಮ್ಯಾರಿನರ್ ಇದ್ದಹಾಗೆ. ಒಂದು ನಿಮಿಷ ಹಾಗೇ ಈ ಹೊಸಲಿನ ಮೇಲೆ ನಿಂತುಕೊ. ಈವತ್ತಿನ ಕತೆಯೊಳಗೆ ಒಂದು ಚೂರು ಅವಶೇಷ ನಿಂತಿರೋದನ್ನ ಮುಗಿಸಿಬಿಡತೀನೆ."

" ಯಾವುದು ? ಅದೇ ಪ್ಲೂಟೋ – ಪರ್ಸಿಫನೆ ಕತೆ ತಾನೆ ?"

" ಭಲಾ ! ಏನಾತಿ ಜ್ಞಾಪಕಶಕ್ತಿ ಕಣಯ್ಯ ನಿನ್ನದು !"

ಈ ವೀನಸ್ ದೇವತೆಯು ಆಟ ಎಂದು ಹೇಳಿದೆನೇ. ಒಂದು ಸಲ ಅವಳು ಏನು ಮಾಡಿದಳು, ಗೊತ್ತೆ ? ಕ್ಯುಪಿಡ್ಡನ್ನು ಕರೆದು, " ಪಾತಾಳದಲ್ಲಿ ಪ್ಲೂಟೋ ಒಬ್ಬನೇ ಇದ್ದಾನೆ. ಒಂಟಿ ಬದುಕು ಬಹು ವ್ಯಸನದ ಬದುಕು. ಅವನಿಗೆ ಮದುವೆಯಾದರೆ, ಪಾತಾಳದಲ್ಲಿ ಸ್ವಲ್ಪ ಜೀವಕಳೆ ಬಂದೀತು. ಆದ್ದರಿಂದ ಅವನ ಹೃದಯದಲ್ಲಿ ಪ್ರೇಮಾನುರಾಗ ಹುಟ್ಟುವಂತೆ ಒಂದು ಬಾಣ ಹೊಡೆ." ಎಂದಳು. ತಾನಾಗಿಯೇ ಕಂಡವರ ಕಡೆಗೆ ಬಾಣ ಹೊಡೆ ಯುವ ಹುಡುಗ, ತಾಯಿ ಹೇಳಿಕೊಟ್ಟರೆ, ಬಿಟ್ಟಾನೇ ! ಹೊಡೆದ ! ಪ್ಲೂಟೋವಿನ ಹೃದಯದಲ್ಲಿ ಏನೋ ಆಸೆ ಉರಿದೆದ್ದಿತು. ಆ ಕೂಡಲೆ ತನ್ನ ಲೋಹದ ರಥವನ್ನು ಏರಿ, ಭೂಮಿಯನ್ನು ಭೇದಿಸಿಕೊಂಡು ಪಾತಾಳ ರಾಜನು ಮೇಲಕ್ಕೆ ಬಂದನು.

ಆ ವೇಳೆಯಲ್ಲಿ, ಒಂದಾನೊಂದು ಪರ್ವತಕಂದರದ ಹತ್ತಿರ ಪರ್ಸಿಫನೆ ಎಂಬ ದೇವಕನ್ಯೆ ಹೂಗಳನ್ನು ಆಯ್ದುಕೊಳ್ಳುತ್ತ ವಿಹರಿಸುತ್ತಿದ್ದಳು. ಅವಳು ಸಸ್ಯಗಳಿಗೆ ಅಧಿದೇವತೆಯಾದ ಸೀರೀಸಿನ ಮಗಳು. ತಾಯಿ ಎಲ್ಲೋ ದೂರದಲ್ಲಿ ಯಾವುದೋ ಬೆಳೆಗಳ ಯೋಗಕ್ಷೇಮವನ್ನು ವಿಚಾರಿಸು

ತ್ತಿದ್ದಳು. ಇತ್ತ ಮಗಳು ನಿರ್ವ್ಯೋಜನೆಯಿಂದ ಹೂಗಳನ್ನು ಆಯುತ್ತ ಮಡಿಲಿಗೆ ತುಂಬಿಕೊಳ್ಳುತ್ತಿದ್ದಳು. ಆಗ ತಾನೆ ಕ್ಯುಪಿಡ್ಡಿನ ಬಾಣದಿಂ ಏಟು ತಿಂದ ಪ್ಲೂಟೋ ಪರ್ಸಿಫನೆಯನ್ನು ನೋಡಿದ. ನೋಡಿದೊಡನೆಯೆ ಪರವಶನಾಗಿ, ಅವಳನ್ನು ಬರಸೆಳೆದು ತನ್ನ ರಥದಲ್ಲಿ ತುಂಬಿಕೊಂಡ ಪರ್ಸಿಫನೆ ಭೀತಿಯಿಂದ ಕಿರಿಚಿಕೊಂಡಳು. ಅವಳು ತುಂಬಿಕೊಂಡಿ ಹೂಗಳೆಲ್ಲ ಕೆಳಗೆ ಚೆಲ್ಲಿಹೋದುವು. ಪ್ಲೂಟೋ ಅದನ್ನು ಲಕ್ಷಿಸಲಿಲ್ಲ. ತನ್ನ ಕೈಯ ಈಟಿಯಿಂದ ನೆಲವನ್ನು ಗುದ್ದಿದ. ಭೂಮಿ ಪಾತಾಳದ ವರೆವಿಗೂ ಬಿರಿಯಿತು. ಪರ್ಸಿಫನೆಯನ್ನು ಎತ್ತಿಕೊಂಡು, ಪ್ಲೂಟೋ ಪಾತಾಳವನ್ನು ಪ್ರವೇಶಿಸಿದ.

ಪರ್ಸಿಫನೆ ಭೀತಿಯಿಂದ ಕಿರಿಚಿದ ಕೂಗು ತಾಯಿಯಾದ ಸೀರೀಸ್ ದೇವತೆಯ ಕಿವಿಗೆ ಬಿತ್ತು. ಆದರೆ ಆಕೆ ಬರುವುದರೊಳಗಾಗಿ, ಭೂಮಿ ಅವಳನ್ನು ನುಂಗಿಬಿಟ್ಟು, ಬಾಯಿ ಮುಚ್ಚಿಕೊಂಡಿತು. "ಪರ್ಸಿಫನೇ ಪರ್ಸಿಫನೇ!" ಎಂದು ತಾಯಿ ಕೂಗಿದಳು. ಯಾರೂ ಉತ್ತರ ಕೊಡಲಿಲ್ಲ ಪ್ಲೂಟೋ ಹಿಂದಿರುಗಿ ಬಂದುದನ್ನು ಸ್ವಾಗತಿಸುವ ಹಾಗೆ ಭೂಗರ್ಭದೊಳ ಗಿಂದ ಭೂಕಂಪಗಳು ಧ್ವನಿಮಾಡಿದುವು.

ಆ ಹಗಲೆಲ್ಲ, ಆ ರಾತ್ರಿಯೆಲ್ಲ, ಅನಂತರ ಎಷ್ಟೋ ಹಗಲುರಾತ್ರಿಗಳ ಆ ತಾಯಿ ಆ ಮಗಳನ್ನು ಅರಸುತ್ತಾ, ಹೆಸರು ಹಿಡಿದು ಅರುಚುತ್ತ, ಕಾಡು ಮೇಡೆನ್ನದೆ, ತಗ್ಗುತಿಟ್ಟೆನ್ನದೆ ಅಲೆದಾಡಿದಳು. ಚಂದ್ರನನ್ನು ಕೇಳಿದಳು, ಸೂರ್ಯನನ್ನು ಕೇಳಿದಳು, ನದಿಗಳನ್ನು ಕೇಳಿದಳು, ಬೆಟ್ಟಗಳನ್ನು ಕೇಳಿದಳು. ಆದರೆ ಯಾರೂ ಏನೂ ಉತ್ತರ ಹೇಳಲಿಲ್ಲ.

ಸಿಸಿಲಿ ದೇಶದ ಹತ್ತಿರ ಬಂದಾಗ, ಅವಳಿಗೆ ತನ್ನ ಮಗಳಿನದೊಂದು ಚಿಹ್ನ ಸಿಕ್ಕಿತು. ಅಲ್ಲಿನ ನದಿಯೊಂದರಲ್ಲಿ ಪರ್ಸಿಫನೆಯ ನಡುವಿನ ಪಟ್ಟಿ ತೇಲಿಹೋಗುತ್ತಿತ್ತು. ತನ್ನ ಮಗಳು ನದಿಯಪಾಲಾಗಿ ಹೋದಳೆಂದು ಹಂಬಲಿಸತೊಡಗಿದ ಆ ಸೀರೀಸ್ ದೇವತೆಯ ದುಃಖವನ್ನು ನೋಡಿ ಸಹಿಸ ಲಾರದೆ, ಆ ನದೀದೇವತೆ ಹೇಳಿದಳು: "ನನ್ನ ಬಳಿಯ ಚಿಲುಮೆಯೊಂದು ಭೂಗರ್ಭದಿಂದ ಮೇಲೆದ್ದುಬರುತ್ತದೆ. ಆ ಚಿಲುಮೆ ನಿನ್ನ ಪರ್ಸಿಫನೆಯನ್ನು

ಕಂಡಿದೆಯಂತೆ. ಅವಳು ಪಾತಾಳದಲ್ಲಿ ಪ್ಲೂಟೋವಿನ ರಾಣಿಯಾಗಿರುವಳಂತೆ. ಅವನು ಏನೇನು ವೈಭವಗಳನ್ನು ಒದಗಿಸಿದರೂ, ಅದರಿಂದ ಅವಳ ಜೀವಕ್ಕೆ ಸುಖವಿಲ್ಲವಂತೆ.''

ಸೀರೀಸ್ ನಿರಾಶೆಯಿಂದ ನಲುಗಿಹೋದಳು. ಪಾತಾಳವನ್ನು ಪ್ರವೇಶಿಸಿದ ಮಗಳನ್ನು ಮತ್ತೆ ಮೇಲುಭೂಮಿಗೆ ತರುವುದು ಹೇಗೆ? ಪಾತಾಳದಿಂದ ಪ್ಲೂಟೋ ಬರುವುದಕ್ಕೂ ಪಾತಾಳಕ್ಕೆ ಪರ್ಸಿಫನೆಯನ್ನು ಒಯ್ಯುವುದಕ್ಕೂ ಅವಕಾಶ ಕೊಟ್ಟ ಭೂಮಿಯ ಮೇಲೆ ಅವಳಿಗೆ ಅಸಾಧ್ಯವಾದ ಕ್ರೋಧವುಂಟಾಯಿತು. ಭೂಮಿಗೆ ಶಾಪ ಹಾಕಿದಳು. ಅದುವರೆಗೆ ಎಲ್ಲೆಲ್ಲಿ ನಗುನಗುತ್ತ ನಲಿಯುತ್ತ ನಲಿಸುತ್ತ ಓಡಿಯಾಡಿದಳೋ ಅಲ್ಲೆಲ್ಲ ಈಗ ಕಣ್ಣೀರು ಸುರಿಸುತ್ತ ತಿರುಗಿದಳು. ಅವಳ ಕಣ್ಣೀರು ಬಿದ್ದ ಕಡೆ ಭೂಮಿ ಬಂಜರಾಯಿತು, ಕ್ಷಾಮ ತಲೆದೋರಿತು. ಸಸ್ಯಶಾಲಿನಿಯಾಗಿದ್ದ ಭೂಮಿ ಒಣಗಿದ ಬರಿನೆಲವಾಯಿತು ಕ್ಷನಾದೇವಿ ಕ್ಷಾಮದೇವಿಯಾದಳು. ಜನರೆಲ್ಲ ಹೊಟ್ಟೆಗಿಲ್ಲದೆ ಹಾಹಾಕಾರ ಮಾಡತೊಡಗಿದರು. ದೇವತೆಗಳಿಗೆ ನಡೆಯಬೇಕಾಗಿದ್ದ ತರ್ಪಣಕಾರ್ಯಗಳಿಗೆ ಸೊನ್ನೆಬಿದ್ದಿತು. ದೇವತೆಗಳೆಲ್ಲ ಬಂದು ದೇವಾಧಿದೇವನಾದ ಜ್ಯೂಪಿಟರನ ಬಳಿ ಮೊರೆಯಿಟ್ಟರು. ಜ್ಯೂಪಿಟರ್ ತಾನೇ ಸ್ವಂತವಾಗಿ ಬಂದು ಸೀರೀಸ್ ದೇವತೆಯ ದುಃಖವನ್ನು ಶಮನ ಮಾಡಲು ಯತ್ನಿಸಿದ. ಮಗಳು ಹೋದ ದುಃಖವನ್ನು ಮರೆತುಬಿಡು, ಒಲಿಂಪಸ್ಸಿಗೆ ಬಾ, ಎಂದು ಇನ್ನಿಲ್ಲದೆ ಹಾಗೆ ಕರೆದ. ಅವನ ಮಾತಿಗೆ ಕೂಡ ಕಿವುಡಾಗಿ, ಸೀರೀಸ್ ತನ್ನ ಹಠವನ್ನು ಸಡಿಲಿಸಲಿಲ್ಲ.

"ನೋಡು, ಜ್ಯೂಪಿಟರ್. ನಾವಿಬ್ಬರೂ ಒಂದೇ ತಂದೆಯ ಮಕ್ಕಳು. ನನ್ನ ಮಗಳೆಂದರೆ, ನಿನ್ನ ಮಗಳೆಂದಂತೆಯೇ ಅಲ್ಲವೆ? ತಾಯಿಯಾದ ನನ್ನ ಕಣ್ಣೀರು ನಿನ್ನ ಹೃದಯವನ್ನು ಕಲಕದಿದ್ದರೆ, ತಂದೆಯಾದ ನಿನ್ನ ಅಭಿಮಾನವಾದರೂ ಕೆರಳಬೇಡವೆ. ನಿನ್ನ ಸೋದರಸೊಸೆಯನ್ನು ಪಾತಾಳರಾಜನು ಅಪಹರಿಸಿಕೊಂಡು ಹೋಗಿರುವುದು ನಿನಗೊಂದು ಭಂಗವಲ್ಲವೆ? ನನ್ನ ದುಃಖದ ನಿವಾರಣೆಗಾಗಿ, ನಿನ್ನ ಮಾನವನ್ನು ಉಳಿಸಿಕೊಳ್ಳು

ವುದಕ್ಕೋಸ್ಕರ, ನೀನು ಮಗಳನ್ನು ಹಿಂದಕ್ಕೆ ಕರೆಸುವುದಾದರೆ ಕರೆಸು
ಇಲ್ಲದಿದ್ದರೆ, ನನ್ನನ್ನು ನನ್ನ ಪಾಡಿಗೆ ಬಿಡು." ಎಂದಳು, ಸೀರೀಸ್.

ಜ್ಯೂಪಿಟರ್ ಕಟ್ಟಕಡೆಗೆ ಅವಳ ಮೊರೆಗೆ ತಾನು ಕಿವಿಕೊಡಲೇಬೇಕ
ಯಿತು. ಮರ್ಕ್ಯುರಿಗೆ ಹೇಳಿಕಳಿಸಿದನು: "ಪಾತಾಳಲೋಕಕ್ಕೆ ಹೋಗ
ಮರ್ಕ್ಯುರಿ. ಅಲ್ಲಿಂದ ಫರ್ಸಿಫನೆಯನ್ನು ತಂದು, ಈ ತಾಯಿಯ ತೋಳಿ
ಸೇರಿಸು. ಆದರೆ, ಒಂದೇ: ಅವಳು ಅಲ್ಲಿ ಏನನ್ನೂ ತಿಂದಿರಬಾರದಷ್ಟೆ
ಏಕೆಂದರೆ, ಅವಳು ಅಲ್ಲಿ ಏನಾದರೂ ತಿಂದಿದ್ದರೆ, ಆ ಋಣ ಅವಳನ
ಅಲ್ಲಿಗೆ ಕಟ್ಟಹಾಕಿರುತ್ತದೆ. ಹೋಗು, ಬೇಗ ಬಾ."

ಮರ್ಕ್ಯುರಿ ಪಾತಾಳಲೋಕಕ್ಕೆ ಹೋದನು. ಆದರೆ ಆ ವೇಳೆಗ
ಪ್ಲೂಟೋ ಪರ್ಸಿಫನೆಯನ್ನು ಹಿಡಿದಿಟ್ಟರಬೇಕೆಂಬ ಆಸೆಯಿಂದ, ಏನೋ
ಒಳ್ಳೆಯ ಮಾತುಗಳನ್ನಾಡಿ, ನಾಲ್ಕು ದಾಳಿಂಬರೆಯ ಬಿತ್ತ ತಿನ್ನಿಸಿಬಿಟ್ಟಿದ್ದ

ಮತ್ತೆ ಸೀರೀಸ್ ದೇವಲೋಕಕ್ಕೆ ಮೊರೆಯಿಟ್ಟಳು, ಭೂಮಿಯನ್
ಮತ್ತೆ ಶಪಿಸಿದಳು. ಭೂಮಿಯಲ್ಲಿ ಬೆಳೆಯಿಲ್ಲ, ಬೆಳೆಯಿಲ್ಲದೆ ಯಾಗಾ
ಗಳಿಲ್ಲ, ಯಾಗಗಳಿಲ್ಲದೆ ದೇವತೆಗಳಿಗೆ ತೃಪ್ತಿಯಿಲ್ಲ, ದೇವತೆಗಳಿಗೆ ತೃಪ್
ಯಿಲ್ಲದೆ ದೇವಾಧಿದೇವತೆಗೆ ನೆಮ್ಮದಿಯಿಲ್ಲ.

ಜ್ಯೂಪಿಟರ್ ದೇವತೆ ಆಗ ಒಂದು ಖಾಜಿ ನ್ಯಾಯ ಮಾಡಿದ
ಮಗಳು ಈ ತಾಯಿಗೂ ಬೇಕು, ಆ ಗಂಡನಿಗೂ ಬೇಕು. ನಾಲ
ದಾಳಿಂಬರೆ ಬಿತ್ತ ತಿಂದದ್ದರಿಂದ ಅವಳು ಅಲ್ಲಿನ ಋಣವನ್ನು ಅನುಬಂಧಿಸ
ಕೊಂಡಳು. ಆದ್ದರಿಂದ ಅರ್ಧ ವರ್ಷ ಪಾತಾಳದಲ್ಲಿರಲಿ, ಅರ್ಧ ವರ್
ತಾಯ ಬಳಿಯಿರಲಿ.

ಅಷ್ಟಾದರೂ ಅನುಗ್ರಹವಾಯಿತಲ್ಲಾ ಎಂದು ಸೀರೀಸ್ ದೇವತೆ
ಹಿಡಿಸಲಾರದ ಸಂತೋಷ. ಮಗಳು ಪಾತಾಳಲೋಕದಿಂದ ಬದುಕಿಬಂದಳಲ್ಲ
ಎಂದು ಹಿಗ್ಗು. ಸೀರೀಸಿನ ಮುಖದಲ್ಲಿ ಮತ್ತೆ ಗೆಲುವು ತಲೆದೋರಿತೋ
ನೆಲವೆಲ್ಲ ನಗತೊಡಗಿತು, ಬೆಳೆಯೆಲ್ಲ ತೂಗತೊಡಗಿತು. ಬೆಟ್ಟಗಳ ಮೇಲೆ
ಪೈರಪಚ್ಚೆ ಚಿಗುರಿತು. ಕಣಿವೆಗಳಲ್ಲೆಲ್ಲ ಹೂ ಸಮೃದ್ಧವಾಯಿತು. ಭೂಮಿ
ಸ್ವರ್ಗದಂತಾಯಿತು. ಒಲಿಂಪಸಿಗೆ ಹೊಸ ಜೀವಕಳೆ ಬಂತು.

ಆರ್ಧ ವರ್ಷ ಕಳೆಯಿತು. ಪರ್ಸಿಫನೆ ಪಾತಾಳರಾಜ್ಯಕ್ಕೆ ಹಿಂದಿರುಗಬೇಕು. ಸೀರೀಸ್ ತಾಯಿಯ ಮುಖ ದುಃಖದಿಂದ ಮ್ಲಾನವಾಯಿತು. ಅವಳ ದುಃಖದಲ್ಲಿ ಸಹಭಾಗಿಯಾಗುವಂತೆ ಭೂಮಿ ತನ್ನ ಹಬ್ಬದ ಹಸಿರು ಹೊಂಬಣ್ಣಗಳನ್ನು ಕಳಚಿಟ್ಟು, ತಾನೂ ದುಗುಡವನ್ನು ಧರಿಸಿತು. ಮತ್ತೆ ಪರ್ಸಿಫನೆ ಪಾತಾಳದಿಂದ ಬರುವುದನ್ನೇ ಹಂಬಲಿಸಿ ಎದುರುನೋಡುತ್ತ, ಸೀರೀಸ್ ಸಸ್ಯದೇವತೆಯೂ ಅವಳೊಡನೆ ಭೂಮಿಯೂ ಸೆಡೆತು ಸಂಕೋಚದಿಂದ ಮುದುರಿಕೊಂಡರು.

ಇದೇ, ವರ್ಷ ವರ್ಷವೂ, ಸುಗ್ಗಿ, ಮಾಗಿ........

"ಏನು, ಇನ್ನೂ ಮುಗಿದಿಲ್ಲ, ನಿಮ್ಮ ಕಥೆ? ಬಂದವರಿಗೇನು ಸ್ನಾನ ಮಾಡಿಸಿ, ಎಲೆ ಹಾಕಿಸುತ್ತೀರಾ? ಇಲ್ಲವೇ ನಿಮ್ಮ ಕತೇಲಿ ಬಂದವರ ಹಾಗೆಯೇ ಇವರಿಗೂ ಸುಮ್ಮನೆ ಒಣಗಿಸುತ್ತೀರಾ?"

"ಒಳ್ಳೇ, ಭರತವಾಕ್ಯದ ಹೊತ್ತಿಗೆ ಪರದೇದು ಹಗ್ಗ ಕಿತ್ತುಹೋದ ಹಾಗೆ,........ಮಹಾರಾಯಿತಿ, ಸ್ನಾನಕ್ಕೆ ಹೋಗತೇವೆ....ಬಾಯ್ಯ, ಬಾ."

ಓಂಕಾರ್ ಪವರ್ ಪ್ರೆಸ್, ಅರಳೇಪೇಟೆ, ಬೆಂಗಳೂರು-೨.

ಜಿ. ಪಿ. ರಾಜರತ್ನಂ ಅವರ ಪುಸ್ತಕಗಳು

(ನಮ್ಮ ಪ್ರಕಟನೆಗಳು)

೧. ಮಾತಿನ ಮಲ್ಲಿ ಒಂದೂಮುಕ್ಕಾಲು ರೂಪಾಯಿ.

ಸತಿಪತಿಯರಿಗೆ ಸಂಬಂಧಿಸಿದ ಶುಚಿಯಾದ ಶೃಂಗಾರವನ್ನು ಜೇನು ತುಪ್ಪದ ಮಳೆ ತೊಟ್ಟಿಕ್ಕಿದ ಹಾಗೆ ಚಿತ್ರಿಸುವ ಚೆಲುವಾದ ಕಥೆ. ಹಳೆಯ ಕಾಲದ ಬಣ್ಣಬಣ್ಣದ ಜೀವನವನ್ನು, ಹಳೆಯ ಕವಿಯೊಬ್ಬನು ಚಿತ್ರಿಸಿದ ನಾಯಕವನ್ನು ಕಾಣಬೇಕಾದರೆ, ಈ ಕಥೆ ಓದಬೇಕು.

೨. ಕರಿಯ ಕಂಬಳಿ ಒಂದೂಮುಕ್ಕಾಲು ರೂಪಾಯಿ.

ರಾಜರತ್ನಂ ಹಿಂದೆ ಬರೆದ ಕೆಲವು ಕತೆಗಳನ್ನು ಇಲ್ಲಿ ಪುನರ್ಮುದ್ರಣ ಮಾಡಿದೆ. ಅದರ ಜೊತೆಗೆ, ಪ್ರಸಿದ್ಧನಾದ ಫ್ರೆಂಚ್ ಭಾಷೆಯ **ವಾಲ್ಟೇರ್** ಎಂಬ ಮಹಾಕವಿಯಿಂದ ಆಯ್ದ ನಾಲ್ಕು ಲೋಕೋತ್ತರವಾದ ಕತೆಗಳ ಅನುವಾದವೂ ಇಲ್ಲಿ ಇವೆ. ವ್ಯಂಗ್ಯ ಹಾಸ್ಯದಲ್ಲಿ ಅಭಿರುಚಿಯಿರುವವರಿಗೆ ಈ ಸಂಕಲನವು ಖಂಡಿತ ಪ್ರಿಯವಾಗುತ್ತದೆ.

೩. ಕಲ್ಲಿನ ಕಾಮಣ್ಣ ಎರಡೂವರೆ ರೂಪಾಯಿ.

ಕಾಮ ಮತ್ತು ಪ್ರೇಮ—ಇವುಗಳ ಅಂತರವನ್ನೂ, ಇವುಗಳ ಅನಂತ ವಾದ ಮುಖಗಳಲ್ಲಿ ಒಂದೆರಡು ಮೂರನ್ನೂ ಈ ಪುಸ್ತಕ ಪರಿಚಯ ಮಾಡಿ ಕೊಡುತ್ತದೆ. ಹಾಗೆ ಮಾಡಿಕೊಡಬೇಕೆಂಬ ಉದ್ದೇಶದಿಂದ ಕೆಲವು ಪ್ರಸಿದ್ಧವಾದ ಉದಾಹರಣೆಗಳನ್ನು ನಮ್ಮ ದೇಶದ, ಇತರ ದೇಶದ ಸಾಹಿತ್ಯ ಗಳಿಂದ ಆಯ್ದು, ಈ ಸೊಗಸಾದ ಮಾಲೆಯನ್ನು ಮಾಡಲಾಗಿದೆ. ಸಾವಿರಾರು ವರ್ಷಗಳಿಂದ ಪ್ರಿಯವಾಗಿರುವ ಈ ಕತೆಗಳು ಸಾವಿರಾರು ಜನರಿಗೆ ಈಗಲೂ ಸಂತೋಷ ಕೊಡುವಂಥದು.

೪. ಹತ್ತು ಮಕ್ಕಳ ತಾಯಿ ಎರಡೂಕಾಲು ರೂಪಾಯಿ.

ಇದು ಕೆಣಕುವ ಪುಸ್ತಕವಲ್ಲ, ಕೆರಳಿಸುವ ಪುಸ್ತಕವಲ್ಲ; ಓದುವುದ ರಿಂದ ಮನಸ್ಸು ಪ್ರಸನ್ನವಾಗಬೇಕು ಎಂದು ಬಯಸುವವರು, ಈ ಪುಸ್ತಕವನ್ನು

ಎತ್ತಿಕೊಳ್ಳಬೇಕು. ಭಗವಂತನಾದ ಬುದ್ಧನ ಸಮಕಾಲೀನರಾಗಿದ್ದ ಹತ್ತಾರು ಮಹಾಪುರುಷರನ್ನು ಈ ಪುಸ್ತಕ ಪ್ರಸ್ತಾಪಿಸಿ, ಅವರು ನೆಯ್ದ ಒಂದು ಅದ್ಭುತವಾದ ಕಥೆಯ ಬಲೆಯನ್ನು ಈಗಿನ ಕಾಲಕ್ಕೆ ತಕ್ಕ ನಿರೂಪಣೆಯಲ್ಲಿ ಬೀಸುತ್ತದೆ.

೫. ರಾಮರಾಜ್ಯ ಒಂದೂಕಾಲು ರೂಪಾಯಿ.

ರಾಜರತ್ನಂ ಅವರು ಅನೇಕ ಸಭೆಗಳಲ್ಲಿ ಅನೇಕ ವಿಷಯಗಳನ್ನು ಕುರಿತು ಮಾತನಾಡಿದ್ದಾರೆ. ಮಾತನಾಡುವ ಮುಂಚೆ ವಿಷಯವನ್ನು ಚೆನ್ನಾಗಿ ವಿಚಾರದಿಂದ ಸಿದ್ಧಪಡಿಸಿಕೊಂಡದ್ದನ್ನು, ತಾವೇ ಸಂಗ್ರಹವಾಗಿ ಸೂತ್ರ ಬರೆದ ಹಾಗೆ ವರದಿ ಮಾಡಿದ್ದಾರೆ. ಅವರ ಭಾಷಣಗಳ ಸಾರವನ್ನು ಒಳಗೊಂಡ ಇಂತಹ ಹದಿನಾಲ್ಕು ಉಪನ್ಯಾಸ ಸಂಗ್ರಹಗಳು ಇಲ್ಲಿ ಇವೆ.

೬. ಪಂಚರಾತ್ರ ಪ್ರಪಂಚ ಒಂದೂಕಾಲು ರೂಪಾಯಿ.

ವ್ಯಾಸರ ಭಾರತ ಒಂದು ತೂಕ, ಭಾಸನ ಭಾರತ ಒಂದು ತೂಕ. ಭಾಸನು ಕಟ್ಟಿದ್ದ ಭಾರತಕಥೆಯಲ್ಲಿ ಆತನ 'ಪಂಚರಾತ್ರ'ದ ಸೊಗಸು ಸರ್ವಥಾ ಅಪೂರ್ವ. ಪಾಂಡವರಿಗೂ ಕೌರವರಿಗೂ ಯುದ್ಧವಾಗದೆ, ಅವರು ಅನ್ಯೋನ್ಯವಾಗಿ ಅರ್ಧರಾಜ್ಯ ಹಂಚಿಕೊಂಡು ಸುಖವಾಗಿ ಬಾಳಿದರೆಂಬುದು ಇಲ್ಲಿನ ಕಥೆ. ಈ ಕಥೆಯ ಕಟ್ಟಡವನ್ನೂ ನಡಿಗೆಯನ್ನೂ ಓಟವನ್ನೂ ಕುಣಿತವನ್ನೂ ಈ ಪುಸ್ತಕ ಮನದಟ್ಟಾಗುವಂತೆ ವಿವರಿಸುತ್ತದೆ.

೭. ಏಕಲವ್ಯಪಂಕ್ತಿ ಒಂದೂಕಾಲು ರೂಪಾಯಿ.

ವ್ಯಾಸರು ಮಹಾಭಾರತದಲ್ಲಿ ಕಾಣಿಸಿದ ಏಕಲವ್ಯನು ನಮ್ಮ ಕನ್ನಡದ ಕವಿಗಳ ಮಾನಸಸರೋವರದಲ್ಲಿ ಓಡಿಯಾಡಿ ಹೇಗೆ ಗರಿಗೊಂಡಿದ್ದಾನೆಂಬುದನ್ನು ಈ ಕೃತಿಯಲ್ಲಿ ಕಾಣಬಹುದು. ಒಂದು ಕಾವ್ಯದ ಜೊತೆಗೆ ನಾಲ್ಕು ನಾಟಕಗಳ ಸಾರ ಇಲ್ಲಿದೆ.

ಆನಂದ್ ಬ್ರದರ್ಸ್, ಪ್ರಕಾಶಕರು, ಬೆಂಗಳೂರು – ೨.

ರಾಜರತ್ನಂ ಪುಸ್ತಕಗಳು—ನಮ್ಮಲ್ಲಿ ದೊರಕುವವು.

೧. **ಗಂಡುಗೊಡಲಿ** ಅ

ಪರಶುರಾಮನ ವೀರವನ್ನು ಚಿತ್ರಿಸುವ ಬಿಸಿರಕ್ತದ ನಾಟಕ.

೨. **ಕಂಬ್ಳಿಸೇವೆ ಮತ್ತು ನರಕದ ನ್ಯಾಯ** ಹ

ಎರಡು ಪುಟ್ಟ ನಾಟಕ. ನಗುವಿನ ಹನಿಗಳ ಹಳ್ಳ.

೩. **ಶ್ರೀ ಕವಿರತ್ನ** ಒಂದೂವರೆ ರೂಪ

ಕವಿಚಕ್ರವರ್ತಿ ರನ್ನನ ಕೃತಿರತ್ನಗಳಿಗೆ ಸುಲಭದ ಕೈಪಿಡಿ.

೪. **ಚಿಕದೇವರಾಜಬಿನ್ನಪ** ಒಂದೂವರೆ ರೂಪ

ವಿಶಿಷ್ಟಾದ್ವೈತವನ್ನು ಮಕ್ಕಳಿಗೆ ಹೇಳಿದಂತೆ ಹೇಳಿರುವ ಗ್ರಂಥ.

೫. **ವಿಗಡ ವಿಕ್ರಮಚರಿತ** ಹದಿನಾಲ

ಮೈಸೂರಿನ ದಳವಾಯಿಯೊಬ್ಬನ ಉಗ್ರವಾದ ಕಥೆ.

೬. **ಹೊಸಗನ್ನಡ ಯಶೋಧರ ಚರಿತೆ** ಒಂದು ರೂಪಾ

ಕವಿಚಕ್ರವರ್ತಿ ಜನ್ನನ ಹಳಗನ್ನಡ ಕಾವ್ಯದ ಅನುವಾ
ಅಹಿಂಸೆಯ ಮಹಿಮೆಯನ್ನು ಚಿತ್ರಿಸುವ ಅಮೃತಕಥೆ.

೭. **ಚಿತ್ರಾಂಗದಾ ಚಿತ್ರಕೂಟ** ಒಂದೂಕಾಲು ರೂಪಾ

ಚಿತ್ರಾಂಗದೆಯ ನಾಲ್ಕು ಚಿತ್ರಗಳ ವಿಮರ್ಶೆ.

೮. **ಬುದ್ಧನ ವರ್ಣವಾದ** ಎರಡು ರೂಪಾ

ಜಾತೀಯತೆಯ ಜಾಡ್ಯಕ್ಕೆ ಇಲ್ಲಿ ದಿವ್ಯವಾದ ಔಷಧ ಇದೆ.